ಧಾರವಾಡ ಜಿಲ್ಲೆಯ ಚರ್ಚುಗಳು: ಸಾಂಸ್ಕೃತಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ
ಎಂ.ಫಿಲ್. ಆಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕ
ರಮೇಶ ಮಾ.ಮೊರಬ

ಮಾರ್ಗದರ್ಶಕರು
ರಮೇಶ ನಾಯಕ
ಸಹ ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೦

ಧಾರವಾಡ ಜಿಲ್ಲೆಯ ಚರ್ಚುಗಳು: ಸಾಂಸ್ಕೃತಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಎಂ.ಫಿಲ್. ಆಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕರು

ರಮೇಶ ಮಾ.ಮೊರಬ

ಮಾರ್ಗದರ್ಶಕರು

ರಮೇಶ ನಾಯಕ

ಸಹ ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಸಮಾಜವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೯-೨೦೧೦

ಸಂಶೋಧಕರ ಪ್ರಮಾಣ ಪತ್ರ

ಧಾರವಾಡ ಜಿಲ್ಲೆಯ ಚರ್ಚುಗಳು : ಸಾಂಸ್ಕೃತಿಕ ಅಧ್ಯಯನ ಎಂಬ ನಿಬಂಧವನ್ನು ರಮೇಶ ನಾಯಕ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್.ಪದವಿಗಾಗಿ ಸಮಾಜವಿಜ್ಞಾನಗಳ ನಿಕಾಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ವೆಂದು ಪ್ರಮಾಣೀಕರಿಸುತ್ತೇನೆ.

ರಮೇಶ ಮಾ. ಮೊರಬ
ಸಂಶೋಧಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ

ದಿನಾಂಕ : ೧೫-೦೬-೨೦೧೦

ಮಾರ್ಗದರ್ಶಕರ ದೃಢೀಕರಣ ಪತ್ರ

ಧಾರವಾಡ ಜಿಲ್ಲೆಯ ಚರ್ಚುಗಳು : ಸಾಂಸ್ಕೃತಿಕ ಅಧ್ಯಯನ ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯ ಚರಿತ್ರೆ ವಿಭಾಗದ ಎಂ.ಫಿಲ್.ಪದವಿಗಾಗಿ ರಮೇಶ ಮಾ.ಮೊರಬ ಅವರು ನನ್ನ ಮಾರ್ಗದರ್ಶನ ದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

Rnyk

ರಮೇಶ ನಾಯಕ
ಸಹ ಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ

ದಿನಾಂಕ : ೧೫|೦೬|೨೦೧೧

ಪರಿವಿಡಿ

ಅಧ್ಯಾಯ ೧

ಪ್ರಸ್ತಾವನೆ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಇದುವರೆಗೆ ನಡೆದ ಅಧ್ಯಯನದ ಸಮೀಕ್ಷೆ

೧.೪. ಅಧ್ಯಯನದ ವಿಧಾನ

[illegible]

[illegible]

[illegible]

[illegible]

[illegible]

[illegible]

೧

ಪ್ರಸ್ತಾವನೆ

ಪ್ರಪಂಚದ ಹಲವು ಧರ್ಮಗಳಲ್ಲಿ ಕ್ರೈಸ್ತ ಧರ್ಮವೂ ಒಂದು. ಕ್ರೈಸ್ತ ಧರ್ಮದ ಸ್ಥಾಪಕ ಯೇಸುಕ್ರಿಸ್ತ. ಯೇಸುವಿಗೆ ಹನ್ನೆರಡು ಜನ ಶಿಷ್ಯರಿದ್ದರು. ಇವರನ್ನು 'ಅಪೋಸಲ್ಸ್' ಎಂದು ಸಂಬೋಧಿಸುವರು. ಯೇಸುವಿನ ಮರಣದ ನಂತರ ಆತನ ಶಿಷ್ಯರು ಸುವಾರ್ತೆ(ಬೈಬಲ್)ಯಲ್ಲಿನ ಯೇಸುವಿನ ಹಿತೋಪದೇಶವನ್ನು ಜಗತ್ತಿನಾದ್ಯಂತ ಹರಡಿಸಬೇಕೆಂಬುದು ಕ್ರೈಸ್ತರ ಮಹತ್ವಕಾಂಕ್ಷೆಯಾಗಿತ್ತು. ಧರ್ಮ ಪ್ರಸಾರದ ಮಹತ್ತರವಾದ ಉದ್ದೇಶವನ್ನು ಇಟ್ಟುಕೊಂಡು ಯುರೋಪಿನಲ್ಲಿ ಸ್ಥಾಪನೆಯಾದ ಮಿಶನ್ -ಸೊಸೈಟಿಗಳು ತರಬೇತಿಯನ್ನು ಪಡೆದುಕೊಂಡು ಪ್ರಸಾರ ಕಾರ್ಯಕ್ಕಾಗಿ ಕಳುಹಿಸಿ ಕೊಡಲಾಯಿತು. ಇಂತಹ ಮಿಶನರಿಗಳು ಪ್ರಪಂಚದ ನಾನಾ ಭಾಗಗಳಿಗೆ ಧರ್ಮ ಪ್ರಸಾರಕ್ಕಾಗಿ ಹೋದರು. ಧರ್ಮ ಪ್ರಸಾರದ ಕಾರ್ಯಗಳು ಒಂದೆಡೆಗೆ ಸಾಗಬೇಕಾದರೆ ಅಲ್ಲಿ ಚರ್ಚುಗಳು(ಕ್ರೈಸ್ತಮಠ)ಗಳನ್ನು ಕೂಡ ಸ್ಥಾಪನೆ ಮಾಡಿದರು. ಇವು ಕ್ರೈಸ್ತ ಅನುಯಾಯಿಗಳನ್ನು ಒಂದೆಡೆ ಸೇರಿಸುವ ಕೇಂದ್ರಗಳಾದವು. ಚರ್ಚುಗಳಲ್ಲಿ ಕ್ರೈಸ್ತನ ಸುವಾರ್ತೆಗಳನ್ನು ಕುರಿತು ಬೋಧಿಸುವ ಕಾರ್ಯ ಮಾಡುತ್ತಿದ್ದರು. ಕ್ರಿಸ್ತನ ಸುವಾರ್ತೆಯಲ್ಲಿರುವ ಅಂಶಗಳನ್ನು ಪ್ರಪಂಚದಾದ್ಯಾಂತ ತಿಳಿಸುವುದು ಜೊತೆಗೆ ಕ್ರೈಸ್ತನ ಅನುಯಾಯಿಗಳನ್ನು ಒಂದುಗೂಡಿಸಬೇಕೆಂಬ ಉದ್ದೇಶ ಹೊಂದಿದ್ದರು.

ಕೆಲವರು ತರಬೇತಿಯನ್ನು ಪಡೆಯದೇ ಕ್ರೈಸ್ತಧರ್ಮದ ಪ್ರಚಾರ ಕಾರ್ಯದಲ್ಲಿ ತೊಡಗಿದ್ದು, ಪ್ರಚಾರ ಕಾರ್ಯವನ್ನು ಮಾಡುತ್ತಿದ್ದರು. ಹೀಗೆ ತರಬೇತಿಯನ್ನು ಪಡೆಯದೇ ಧರ್ಮಪ್ರಸಾರ ಕಾರ್ಯಕ್ಕಾಗಿ ಭಾರತಕ್ಕೆ ಬಂದ ಕಾಲವೆಂದರೆ ಕ್ರಿ.ಶ.೫೨ರಲ್ಲಿ ಶಾತವಾಹನ ಅರಸ ಗೌತಮ ಪುತ್ರ ಶಾತಕರ್ಣಿಯ ಕಾಲದಲ್ಲಿ ಬಂದನು. ಏಸುವಿನ ಹನ್ನೆರಡು ಶಿಷ್ಯರಲ್ಲಿ ಇವನು ಒಬ್ಬನಾಗಿದ್ದನು. ಆದರೆ ಇತನ ಬಗ್ಗೆ ವಿವರಣೆಗಳಲ್ಲಿ ಸ್ಪಷ್ಟ ಮಾಹಿತಿ ದೊರೆಯುವುದಿಲ್ಲ. ತದನಂತರ ವಿಜಯನಗರ ಕಾಲದಲ್ಲಿ 'ನಿಮ್ಮೆಪೆಜಿರ್' ಎಂಬ ಕ್ರೈಸ್ತಮಂತ್ರಿ ಇದ್ದನೆಂದು ತಿಳಿದುಬರುತ್ತದೆ. ವಿಜಯನಗರ ಕಾಲದಲ್ಲಿ ಪೋರ್ಚುಗೀಸರ ಆಗಮನದೊಂದಿಗೆ ಕ್ಯಾಥೋಲಿಕ ಕ್ರೈಸ್ತರೂ ಕಾಲಿಟ್ಟರು. ವಿಜಯನಗರ ಕಾಲದಲ್ಲಿ ಅರಸರ ಒಪ್ಪಿಗೆಯಿಂದ

ಚರ್ಚುಗಳನ್ನು ನಿರ್ಮಿಸಿದರು. ಮಿಷನರಿಗಳ ಮುಖ್ಯ ಉದ್ದೇಶ ಧರ್ಮಪ್ರಸಾರದ ಮೂಲಕ ಕ್ರಿಸ್ತನ ಅನುಯಾಯಿಗಳನ್ನು ಒಂದುಗೂಡಿಸಿ ಕ್ರೈಸ್ತರಲ್ಲದವರನ್ನು ಮತಾಂತರಗೊಳಿಸುವುದು ಇವರ ಉದ್ದೇಶವಾಗಿತ್ತು.

ಮಿಷನರಿಗಳು ಕ್ರೈಸ್ತ ಧರ್ಮದ ಪ್ರಸಾರ ಮಾಡುವುದರೊಂದಿಗೆ ಪ್ರತಿರಾಷ್ಟ್ರಗಳಲ್ಲಿಯೂ ಚರ್ಚು ನಿರ್ಮಿಸುವುದರ ಜೊತೆಗೆ, ಜನರಲ್ಲಿ ಇರುವ ಅಂಧಕಾರ, ಅಜ್ಞಾನ ಹೋಗಲಾಡಿಸುವಲ್ಲಿ ಮಹತ್ವದ ಪಾತ್ರವಹಿಸಿದರು. ಜನರಲ್ಲಿ ವೈಚಾರಿಕತೆ, ವೈಜ್ಞಾನಿಕತೆ, ಶಿಸ್ತು, ಶಿಕ್ಷಣ, ಕೈಗಾರಿಕೆ, ವೃತ್ತಿಪರತೆ, ವಿಶ್ವಶಾಂತಿ ಸ್ಥಾಪನೆ ಮಾಡಿದರು. ಸಮಾಜದಲ್ಲಿರುವ ಆರ್ಥಿಕ ಶೋಷಣೆಗಳಾದ ಜನರಿಗೆ ಆಶ್ರಯದಾತರಾಗಿ ಅವರ ಜೀವನಕ್ಕೆ ಆಶಾಕಿರಣರಾದರು.

ವಸಾಹತುಶಾಹಿಗಳ ಮೂಲಕ ಕ್ರೈಸ್ತರ ಆಗಮನವು ಭಾರತಕ್ಕೆ ಅನುಕ್ರಮವಾಗಿ ಹೆಚ್ಚುತ್ತಾ ಹೋಯಿತು. ಚರ್ಚುಗಳು ನಿರ್ಮಾಣವಾದವು. ಹಿಂದೂಗಳಲ್ಲಿ ದೇವಾಲಯಗಳು, ಮುಸ್ಲಿಂರಲ್ಲಿ ಮಸೀದಿಗಳಿರುವಂತೆ, ಜೈನರಲ್ಲಿ ಜಿನಾಲಯ, ಕ್ರೈಸ್ತರಲ್ಲಿ ಚರ್ಚುಗಳು ರಚನೆಯಾದವು. ಪ್ರತಿಯೊಂದು ಧರ್ಮವು ಒಂದೊಂದು ಕಟ್ಟಡಗಳನ್ನು ಹೊಂದಿರುವಂತೆಯೇ ಕ್ರೈಸ್ತರಲ್ಲಿಯೂ ತಮ್ಮದೇ ಆದ ಕಟ್ಟಡಗಳ ಹಿನ್ನೆಲೆಯಲ್ಲಿ ಚರ್ಚುಗಳ ರಚನೆಗಳು ನಡೆದುಬಂದವು. ಈ ಚರ್ಚುಗಳ ರಚನೆಯು ವಿದೇಶಿಗಳಲ್ಲಿ ಗಾಥಿಕ್ ಶೈಲಿ, ಕೊರಿಯಂಥಿನ್ ಬೋದಿಗೆಗಳು. ಹೀಗೆ ಬೇರೆ ಬೇರೆ ಶೈಲಿಗಳಿದ್ದರೆ ಭಾರತದಲ್ಲಿ ರಚನೆಯಾದ ಚರ್ಚುಗಳು ಭಿನ್ನ ವಿಭಿನ್ನ ರೀತಿಯಲ್ಲಿ ರಚನೆಯಾದವು. ಏಕೆಂದರೆ ಅದು ಕಾಲಕ್ರಮೇಣ ಸ್ಥಳೀಯ ಮಟ್ಟದ ಬದಲಾವಣೆಯಿಂದ ರಚನೆಯಾದವು. ಆಧುನಿಕ ಶೈಲಿಯಿಂದ ರಚನೆಯಾದ ಚರ್ಚುಗಳು ಅವು ಮೂಲ ಸ್ವರೂಪದ ಚರ್ಚುಗಳಿಗಿಂತ ಭಿನ್ನವಾಗಿರುವುದು ಕಂಡುಬರುತ್ತವೆ. ಚರ್ಚುಗಳು ಭಾರತೀಯ ಶೈಲಿಯಲ್ಲಿ ಗೃಹ ನಿರ್ಮಾಣ ಶೈಲಿ ಅಥವಾ ದೇವಾಲಯದ ಮಾದರಿಯಲ್ಲಿ ನಿರ್ಮಾಣವಾಗಿರುವುದನ್ನು ಕಾಣಬಹುದು. ಕಾರಣ ಅವುಗಳ ಕಾಲಾಂತರದಲ್ಲಿ ಬದಲಾವಣೆಯನ್ನು ಆಯಾ ಸ್ಥಳೀಯ ಜನರ ಮನೋಭಾವನೆಯ ಆಧಾರದ ಮೇಲೆ ಮಿಷನರಿಗಳು ಕಟ್ಟಡದ ರಚನೆಯಲ್ಲಿ ಬದಲಾವಣೆಗಳನ್ನು ತಂದರು ಎಂಬುದು ತಿಳಿದುಬರುವುದು.

ಚರ್ಚುಗಳು ಕ್ರೈಸ್ತರ ಪ್ರಾರ್ಥನಾ ಗೃಹಗಳಾಗಿದ್ದು, ಇಲ್ಲಿ ಪ್ರಾರ್ಥನೆಯ ಜೊತೆಗೆ ಸಭೆ, ಸಮಾರಂಭಗಳನ್ನು ನಡೆಸುವರು. ವಾರ್ಷಿಕೋತ್ಸವ, ಮನೋರಂಜನೆ, ಕ್ರಿಸ್‌ಮಸ್, ಪ್ರಮುಖ ಹಬ್ಬದ ಆಚರಣೆಗಳೂ ಸುವಾರ್ತೆಗಳನ್ನು ಬೋಧಿಸುವರು. ಚುರ್ಚುಗಳು ಕ್ರೈಸ್ತ ಧರ್ಮ ಹಾಗೂ ಕ್ರೈಸ್ತರೇತರ ಧರ್ಮದವರು ಕೂಡ ಚರ್ಚಿನ ಕಾರ್ಯಕ್ರಮಗಳಲ್ಲಿ, ಪ್ರಾರ್ಥನೆಯಲ್ಲಿ ಪಾಲ್ಗೊಳ್ಳಲು ಮುಕ್ತವಾದ ಅವಕಾಶವನ್ನು ನೀಡಿದ್ದವು.

ಯೇಸು ಕ್ರಿಸ್ತನನ್ನು ರಕ್ಷಕನೆಂದು ನಂಬುವ ಕ್ಯಾಥೊಲಿಕರು ಏಸುವಿನ ತಂದೆ ಜೋಸೆಪ್ , ತಾಯಿ ಮರಿಯಮ್ಮನನ್ನು ಹಾಗೂ ಉಳಿದ ಸಂತರನ್ನು ನಂಬುತ್ತಾರೆ. ಹಾಗೂ ಅವರನ್ನು ಗೌರವಿಸುತ್ತಾರೆ. ಕ್ರೈಸ್ತರು ಸಂತರ ಹೆಸರಿನಲ್ಲಿ ಚರ್ಚುಗಳನ್ನು ಸ್ಥಾಪಿಸಿ, ಸಂತರ ಹುಟ್ಟುಹಬ್ಬವನ್ನು ಸಂಭ್ರಮದಿಂದ ಆಚರಿಸುತ್ತಾರೆ. ಕರ್ನಾಟಕದ ಪ್ರಮುಖ ಚರ್ಚುಗಳಾದ ಸಂತ ಜೋಸೆಫ್‌ರ ಚರ್ಚು, ಮೈಸೂರಿನ ಸಂತ ಫಿಲೋಮಿನಾ ಚರ್ಚು, ಮಂಗಳೂರಿನ ಮಿಲಾಗ್ರಿಸ್, ರುಜಾರಿಯೋ, ಹೊನ್ನಾವರದ ಸಲ್ವಾದೊರ, ಹರಿಹರದ ಆರೋಗ್ಯ ಮಾತೆ. ಹೀಗೆ ಪ್ರಮುಖವಾದ ಚರ್ಚುಗಳನ್ನು ಉಲ್ಲೇಖಿಸಬಹುದು. ಸಂತರ ಹುಟ್ಟುಹಬ್ಬವನ್ನು ಮಾತ್ರ ಚರ್ಚಗಳಲ್ಲಿ ಆಚರಿಸುವುದಲ್ಲದೇ, ದೂರದ ಊರುಗಳಿಂದ ಈ ಹಬ್ಬಗಳಿಗೆ ಜನ ಬರುತ್ತಾರೆ. ಈ ಸಂತರಿಗೆ ಹರಕೆ ಹೇಳಿ ಕೊಂಡವರು ಬೆಳ್ಳಿ ಬಂಗಾರದ ಒಡವೆಗಳಿಂದ ಮಾಡಿಸಿದ ತೊಟ್ಟಿಲು, ಬಾಲ ವಿಗ್ರಹ, ಕಣ್ಣು, ಕಿವಿ, ಮೂಗು, ಕೈ, ಕಾಲುಗಳನ್ನು ದೇವರಿಗೆ ನೀಡುತ್ತಾರೆ. ಹೀಗೆ ಯಾವುದೇ ರೀತಿಯ ದೈಹಿಕ ತೊಂದರೆಗೆ ಒಳಗಾದ ಜನರು ಸಂತನಿಗೆ ಹರಕೆಯನ್ನು ಹೇಳಿಕೊಳ್ಳುವ ನಂಬಿಕೆಯನ್ನು ಕಾಣಬಹುದು.

ಕ್ಯಾಥೊಲಿಕರು ಸಂತರ ಹುಟ್ಟುಹಬ್ಬದ ಜೊತೆಗೆ ಕ್ರಿಸ್ ಮಸ್ ಹಬ್ಬವನ್ನು ಕೂಡ ವೈಭವದಿಂದ ಆಚರಿಸುತ್ತಾರೆ. ಮನೆ ಎದುರು ನಕ್ಷತ್ರಗಳು ತೂಗಿಬಿಡುತ್ತಾರೆ. ಕೆಲವರು ಮನೆಯಲ್ಲಿ ಯೇಸುವಿನ ಜನ್ಮದ ಸಂಕೇತವಾಗಿ ಸಣ್ಣಕೊಟ್ಟಿಗೆಯನ್ನು ನಿರ್ಮಿಸಿ ಅದರಲ್ಲಿ ಏಸು, ಮೇರಿ, ಜೋಸೆಫ್‌ರ ವಿಗ್ರಹವಿರಿಸಿ ಅಲಂಕಾರ ಮಾಡುತ್ತಾರೆ. ಕೆಲ ಮನೆಗಳಲ್ಲಿ ಕ್ರಿಸ್‌ಮಸ್ ಟ್ರೀಟ್ ಕೂಡಾ ಇರುತ್ತದೆ. ಶುಭಾಷಯಪತ್ರಗಳ ವಿನಿಮಯ ಮಾಡಿಕೊಳ್ಳುವುದು ಮಧ್ಯರಾತ್ರಿ ಚರ್ಚಿನಲ್ಲಿ ನಡೆಯುವ ಪೂಜೆಯಲ್ಲಿ ಭಾಗವಹಿಸುವುದು ಕ್ರಿಸಮಸ್ ಹಬ್ಬದ ವಿಶೇಷವಾಗಿದೆ.

ಹೊಸ ವರುಷವನ್ನು ಕೂಡ ಒಂದು ಪ್ರಮುಖವಾದ ಹಾಗೂ ವೈಭಯುತವಾದ ಹಬ್ಬವಾಗಿ ಆಚರಿಸುತ್ತಾರೆ. ಪ್ರತಿ ವರ್ಷದ ಜನವರಿ ತಿಂಗಳಿನ ಮೊದಲ ದಿನ ಚರ್ಚಿಗೆ ಹೋಗಿ ದೇವರಿಗೆ ಪ್ರಾರ್ಥನೆ ಸಲ್ಲಿಸಿ, ಬರಲಿರುವ ವರ್ಷವು ಶುಭವಾಗಲಿ ಎಂದು ಎಲ್ಲ ಕ್ರೈಸ್ತರು ಹಾರೈಸುತ್ತಾರೆ.

ಈಸ್ಟರ ಹಬ್ಬವನ್ನು ಭಾನುವಾರದಂದು ಸಂಭ್ರಮದಿಂದ ಆಚರಿಸುತ್ತಾರೆ. ಸೆಪ್ಟೆಂಬರ್ ತಿಂಗಳಿನಲ್ಲಿ ಬರುವ ಮೇರಿಯಮ್ಮನ ಹಬ್ಬವನ್ನು ಕಾಥೋಲಿಕರಿಗೆ ಮತ್ತೊಂದು ದೊಡ್ಡ ಹಬ್ಬ. ಇದನ್ನು ಸುಗ್ಗಿಹಬ್ಬವೆಂದು ಕೂಡ ಕರೆಯುವರು.

ಭಾರತ ದೇಶಕ್ಕೆ ಯುರೋಪಿಯನ್ನರು ಜಲಮಾರ್ಗದ ಮೂಲಕ ವ್ಯಾಪಾರದ ಉದ್ದೇಶವನ್ನಿಟ್ಟುಕೊಂಡು ಬಂದರು. ವಾಸ್ಕೋಡಿಗಾಮ ಎಂಬ ಪೋರ್ಚುಗೀಸ ನಾವಿಕನು ಕ್ರಿ.ಶ.೧೪೯೮ರಲ್ಲಿ ಕೇರಳದ ಕಲ್ಲಿಕೋಟೆಗೆ ಬಂದು ತಲುಪಿದನು. ಇದು ಚರ್ಚಿನ ಇತಿಹಾಸದಲ್ಲಿ ಮಾತ್ರವಲ್ಲದೆ ಭಾರತ ಮತ್ತು ಪಶ್ಚಿಮ ರಾಷ್ಟ್ರಗಳ ನಡುವಿನ ದೇಶಗಳ ಸಾಂಸ್ಕೃತಿಕ ಸಂಬಂಧಗಳ ಚರಿತ್ರೆಯಲ್ಲಿ ಅತ್ಯಂತ ಮಹತ್ವದ್ದಾಗಿದೆ. ಇದರಿಂದಾಗಿ ಯುರೋಪಿಯನ್ ರಾಷ್ಟ್ರಗಳಿಗೆ ಭಾರತವು ಆಕರ್ಷಣೆಯಾಯಿತು.

ಯುರೋಪಿನ ಕೆಲವು ರಾಷ್ಟ್ರಗಳು ಭಾರತದಲ್ಲಿ ಸಾಂಬಾರು ಪದಾರ್ಥಗಳು ಹೇರಳವಾಗಿದ್ದರಿಂದ ರಾಷ್ಟ್ರಗಳು ವಸಾಹತು ಸ್ಥಾಪಿಸುವ ಪ್ರಯತ್ನ ಮಾಡಿದವು. ಹೀಗೆ ಬಂದ ಪ್ರಮುಖ ಐರೋಪ್ಯರೆಂದರೆ ಪೋರ್ಚುಗೀಸರು, ಡಚ್ಚರು, ಫ್ರೆಂಚರು ಹಾಗೂ ಬ್ರಿಟೀಷರು. ಹೀಗೆ ಬಂದ ಇವರು ಕೇವಲ ವ್ಯಾಪಾರ ಮಾಡದೇ ತಮ್ಮೊಂದಿಗೆ ಪಾದ್ರಿಗಳನ್ನು ಕ್ರೈಸ್ತಧರ್ಮದ ಪ್ರಚಾರಕ್ಕಾಗಿ ಕರೆತಂದರು. ಬೇರೆ ದೇಶಕ್ಕೆ ಹೋಲಿಸಿದಾಗ ಭಾರತ ದೇಶಕ್ಕೆ ಬಂದ ಮಿಷನರಿಗಳ ಸಂಖ್ಯೆ ಹೆಚ್ಚಾಗಿತ್ತು.

ಭಾರತಕ್ಕೆ ಬಂದಿದ್ದ ಪೋರ್ಚುಗೀಸ್ ಕ್ರಿಶ್ಚಿಯನ್ನರು ಮೊದಲು ಗೋವಾ, ಕೊಚ್ಚಿನ್, ತುಲೆಕೊರಿನ್‌ಗಳನ್ನು ತಮ್ಮ ಕೇಂದ್ರವಾಗಿ ಮಾಡಿಕೊಂಡರು. ಕ್ರಿಶ್ಚಿಯನ್ ಮತ ಪ್ರಚಾರ ಮಾಡಿದರು. ಪೋರ್ಚುಗೀಸ್ ಮಿಷನರಿಗಳು ಸುವಾರ್ತೆಗಳನ್ನು ಮೊದಲು ಕರಾವಳಿಯ ಬೆಸ್ತರಿಗೆ ಉಪದೇಶಿಸಿದರು. ಹೀಗೆ ಭಾರತಕ್ಕೆ ಬಂದ ಮೊದಲ ಯಹೂದಿ ಮಿಶನರಿ ಎಂದರೆ ಫ್ರಾನ್ಸಿಸ್ ಕ್ಸೇವಿಯರ್(೧೫೦೬-೫೨). ಮಾಡುತ್ತಾ ಭಾರತಕ್ಕೆ ಬಂದ ಕ್ರೈಸ್ತರು ಧರ್ಮ ಪ್ರಚಾರದ ಕಾರ್ಯವನ್ನು ಭಾರತದ ಇತರ ರಾಜ್ಯಗಳನ್ನು ಪ್ರವೇಶಿಸಿದರು.

ತಿರುಚನಾಪಳ್ಳಿ ಬಳಿಯಿರುವ ಟ್ರಾಂಕ್ವಿಬಾರ ದಕ್ಷಿಣ ಭಾರತದಲ್ಲಿನ ಪ್ರೊಟಸ್ಟಂಟ್ ಕ್ರೈಸ್ತ ಮಿಶನರಿಗಳ ಧರ್ಮದ ಕೇಂದ್ರವಾಯಿತು. ೧೭೦೬ರಲ್ಲಿ ಭಾರತಕ್ಕೆ ಬಂದ ಮೊದಲ ಪ್ರೊಟಸ್ಟಂಟ್ ಮಿಶನರಿಗಳು ಈ ನಗರದಲ್ಲಿ ನೆಲಸಿದರು. ಇವರು ಜರ್ಮನಿಯ ಮಾರ್ಟಿನ ಲೂಥರಗೆ ಸೇರಿದ ಪಂಥದವರು. ಟ್ರಾಂಕ್ವಿಬಾರ ಪ್ರಸಿದ್ಧ ಮಿಶನರಿಗಳಲ್ಲಿ ಸಿ.ಎಫ್.ಶ್ವಾಟ್ಸ್‌ನು ಮುಖ್ಯನಾಗಿದ್ದರು. ಇವನು ಸುಮಾರು ಐವತ್ತು ವರ್ಷಗಳ ಕಾಲ ದಕ್ಷಿಣ ಭಾರತದ ಟ್ರಾಂಕ್ವಿಬಾರ, ತಿರುಚನಾಪಳ್ಳಿ ಮತ್ತು ತಾಂಜಾವೂರುಗಳಲ್ಲಿ ಕ್ರೈಸ್ತಧರ್ಮದ ಸುವಾರ್ತೆಗಳನ್ನು ಬೋಧಿಸಿದನು. ೧೮ನೇ ಶತಮಾನದ ಹೊತ್ತಿನಲ್ಲಿ ಭಾರತಕ್ಕೆ ಬಂದ ಪ್ರೊಟಸ್ಟೆಂಟ್ ಕ್ರೈಸ್ತ ಮಿಶನರಿಗಳು ಸಾವಿರಾರು ಚರ್ಚುಗಳೂ, ನೂರಾರು ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿದರು ಅವು ಇಂದಿಗೂ ಕಾರ್ಯನಿರ್ವಹಿಸುತ್ತಿವೆ.

ಪ್ರಾರಂಭದಲ್ಲಿ ವ್ಯಾಪಾರಕ್ಕಾಗಿ ಮಾತ್ರ ಬಂದಿದ್ದ ಬ್ರಿಟಿಷರು ೧೭೫೭ರಲ್ಲಿ ಸಾರ್ವಭೌಮರಾದರು. ಜೊತೆಗೆ ರಾಜಕೀಯದಲ್ಲೂ ಪ್ರಬಲರಾದರು. ಕ್ರೈಸ್ತ ಪಾದ್ರಿಯರು ಕರ್ನಾಟಕದ ಪ್ರಮುಖ ಪ್ರದೇಶಗಳಲ್ಲಿ ಮತ ಪ್ರಚಾರದ ಕಾರ್ಯವನ್ನು ನಡೆಸಿದರು. ಮಂಗಳೂರು, ಬೆಂಗಳೂರು, ಮೈಸೂರು, ಕೊಡಗು, ಕರಾವಳಿ ಪ್ರದೇಶಗಳಲ್ಲಿ ಪ್ರಚಾರ ನಡೆಸಿದರು.

೧೮ನೇ ಶತಮಾನದಲ್ಲಿ ಧಾರವಾಡವನ್ನು ರಾಜಮನೆತನಗಳಾದ ಮರಾಠರು, ಪಟವರ್ಧನರು, ಪೇಶ್ವೆಗಳು ಆಳ್ವಿಕೆ ನಡೆಸುತ್ತಿದ್ದರು. ಕರ್ನಾಟಕದಲ್ಲಿ ಧಾರವಾಡ ಜಿಲ್ಲೆಯನ್ನು ವಶಪಡಿಸಿಕೊಂಡರು. ಇದರಿಂದ ಇಲ್ಲಿಗೆ ಕ್ರೈಸ್ತಮಿಷನರಿಗಳ ಆಗಮನವಾಯಿತು. ೧೮೩೦ ಸುಮಾರಿಗೆ ಪ್ರೊಟಸ್ಟೆಂಟ್‌ರಾದ ಬಾಸೆಲ್ ಮಿಷನರು ಧಾರವಾಡವನ್ನು ಪ್ರವೇಶಿಸಿದರು. ಇದು ಮಹತ್ವದ ಅವಧಿಯಾಯಿತು. ಧರ್ಮ

ಪ್ರಸಾರಕ್ಕೆಂದು ಆಗಮಿಸಿದ ಕ್ರೈಸ್ತ ಮಿಶನರಿಗಳು ಧಾರವಾಡದಲ್ಲಿ ಶಿಕ್ಷಣ ಕೇಂದ್ರಗಳನ್ನು ತೆರೆದರು. ಮುದ್ರಣ ಯಂತ್ರವನ್ನು ಜಾರಿಗೆ ತಂದರು. ಸಾಹಿತ್ಯ ಕೃತಿಗಳನ್ನು ಬಿಡುಗಡೆಗೊಳಿಸಿದರು. ವೃತ್ತಿ ತರಬೇತಿ, ಕೈಗಾರಿಕೆಗಳನ್ನು ಸ್ಥಾಪಿಸಿದರು. ಆಸ್ಪತ್ರೆಗಳನ್ನು ತೆರೆದರು. ಇದರಿಂದ ಕಡಿಮೆ ದರದಲ್ಲಿ ಬಡವರಿಗೆ ಅಥವಾ ಉಚಿತ ಸೇವೆಯೂ ದೊರೆಯುವಂತೆ ಮಾಡಿದರು. ಧಾರವಾಡದಲ್ಲಿ ಮಿಷನರಿಗಳನ್ನು ಸ್ಥಾಪಿಸಿರುವ ವಿದ್ಯಾಕೇಂದ್ರಗಳು ಇನ್ನೂ ಚಾಲನೆಯಲ್ಲಿವೆ.

ಧಾರವಾಡ ಜಿಲ್ಲೆಯಲ್ಲಿ ಮಿಶನರಿಗಳ ಪಾತ್ರ ಅಮೋಘವಾದುದಾಗಿದೆ. ಮಿಶನರಿಗಳು ನೀಡಿದ ಶಿಕ್ಷಣವು ಶಿಸ್ತಿನಿಂದ ಕೂಡಿದ ಶಿಕ್ಷಣವಾಗಿದ್ದು ವಿದ್ಯಾರ್ಥಿಗಳಲ್ಲಿ ನೈತಿಕ ಸ್ಥೈರ್ಯ ತುಂಬುವಂತಹ ವಿದ್ಯಾಕೇಂದ್ರಗಳನ್ನು ಸ್ಥಾಪನೆ ಮಾಡಿದರು.

ಧಾರವಾಡಕ್ಕೆ ಬಂದ ಪ್ರಥಮ ಪ್ರೊಟಸ್ಟೆಂಟ್ ಮಿಷನರಿ ಎಂದರೆ ಸ್ಯಾಮುಯೆಲ್ ಹೆಬಿಕರ್ ಇಂಗ್ಲೀಷ್ ಶಾಲೆ, ಜೊತೆಗೆ ಕನ್ನಡ ಶಾಲೆಗಳನ್ನು ಸ್ಥಾಪಿಸಿದರು. ಜೊತೆಗೆ ಹೆಬಿಕ್ ಚರ್ಚನ್ನು ನಿರ್ಮಿಸಿದರು. ಇವರ ತದನಂತರ ಮೋಗ್ಲಿಂಗರೂ ಕೂಡ ಪುಸ್ತಕಗಳನ್ನು ಪ್ರಕಟಿಸಿದರು, ಪತ್ರಿಕೆಗೆ ಚಾಲನೆ ನೀಡಿದರು.

ಒಟ್ಟಾರೆಯಾಗಿ ಧಾರವಾಡ ಜಿಲ್ಲೆಗೆ ಆಗಮಿಸಿದ ಮಿಷನರಿಗಳು ಪ್ರಾಸಿಸ್ಟೆಂಟ್‌ರೆಂದು ಗುರುತಿಸಲಾಗಿದ. ಮಿಷನರಿಗಳಲ್ಲಿ ಅವರ ಸೇವೆಯನ್ನು ಕಾಲಾನುಕ್ರಮವಾಗಿ ಈ ಅಧ್ಯಯನದಲ್ಲಿ ಗುರುತಿಸಲಾಗಿದೆ. ಜೊತೆಗೆ ಕಾಲಾಂತರದಲ್ಲಿ ನಿರ್ಮಾಣವಾದ ಚರ್ಚುಗಳನ್ನು ಇಲ್ಲಿ ಗುರುತಿಸಲಾಗಿದೆ. ಮಿಷನರಿಗಳ ವಹಿಸಿದ ಪಾತ್ರ ಕೆಲವೆಡೆ ವಿಮರ್ಶಾತ್ಮಕವಾಗಿ ನೋಡುವ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ.

೧.೧. ಅಧ್ಯಯನದ ಉದ್ದೇಶ ಮತ್ತು ಸ್ವರೂಪ

ಪ್ರಸ್ತುತ ಅಧ್ಯಯನದ ಶೀರ್ಷಿಕೆ 'ಧಾರವಾಡ ಜಿಲ್ಲೆಯ ಚರ್ಚುಗಳು ಸಾಂಸ್ಕೃತಿಕ ಅಧ್ಯಯನ'ವಾಗಿದ್ದು, ಧಾರವಾಡ ಜಿಲ್ಲೆಯಲ್ಲಿರುವ ಚರ್ಚುಗಳ ರಚನೆ, ಶೈಲಿ, ಪಂಥ ಹಾಗೂ ಮಿಶನರಿಗಳು ಈ ಜಿಲ್ಲೆಯಲ್ಲ ಮಾಡಿದ ಸೇವೆಯನ್ನು ಪ್ರಸ್ತುತ ಅಧ್ಯಯನದ ಮೂಲಕ ಬೆಳಕಿಗೆ ತರುವುದು ಮುಖ್ಯ ಉದ್ದೇಶವಾಗಿದೆ. ಸ್ವಾತಂತ್ರ್ಯ ಸಿಗುವ ಒಂದು ಶತಮಾನ ಪೂರ್ವದಲ್ಲಿ ಆಗಮಿಸಿದ ಕ್ರೈಸ್ತ ಮಿಷನರಿಗಳು ಆಗಮಿಸಿದರು. ಧಾರವಾಡ ಜಿಲ್ಲೆಯಲ್ಲಿ ಮಾಡಿದ ಸೇವಾಕಾರ್ಯಗಳನ್ನು ಕುರಿತು ಹಾಗೂ ಧಾರವಾಡ ಜಿಲ್ಲೆಯಲ್ಲಿ ರಚನೆಯಾದ ಕ್ರೈಸ್ತರ ಚರ್ಚುಗಳ ಕುರಿತು ಅನೇಕ ಬಿಡಿ ಲೇಖನಗಳು, ಮಿಷನರಿಯ ಕುರಿತಾದ ಕೆಲವು ಸಂಪ್ರಬಂಧಗಳು ಇವೆ. ಆದರೆ ಚರ್ಚುಗಳಿಗೆ ಸಂಬಂಧಿಸಿದಂತೆ ಯಾವುದೇ ಸಮಗ್ರ ಮಾಹಿತಿಯನ್ನು ವಿವರಣಾತ್ಮಕವಾಗಿ ನೀಡಿಲ್ಲ. ಪ್ರಸ್ತುತ ಪ್ರಬಂಧದಲ್ಲಿ ವಿವರಣಾತ್ಮಕವಾದ ಹಾಗೂ ವಿಶ್ಲೇಷಣಾತ್ಮಕ ವಿವರಗಳನ್ನು ಇಟ್ಟುಕೊಂಡು ಅಧ್ಯಯನ ಪೂರೈಸಲಾಗಿದೆ.

"ಧಾರವಾಡ ಜಿಲ್ಲೆಯ ಚರ್ಚುಗಳು : ಸಾಂಸ್ಕೃತಿಕ ಅಧ್ಯಯನ" ಎಂಬ ವಿಷಯದಡಿಯಲ್ಲಿ ಪುರಾತತ್ವ ಕಾಲದಿಂದ ಧಾರವಾಡ ಇತಿಹಾಸವನ್ನು ಹಾಗೂ ಕ್ರೈಸ್ತಮಿಷನರಿಗಳ ಆಗಮನವನ್ನು ಜೊತೆಗೆ ಧಾರವಾಡ ಜಿಲ್ಲೆಗೆ ಮಿಷನರಿ ನೀಡಿದ ಸೇವೆಯನ್ನು ಕುರಿತು ಅಧ್ಯಯನ ಮಾಡುವ ಪ್ರಯತ್ನ ಇದಾಗಿದೆ. ಧಾರವಾಡ ಜಿಲ್ಲೆಯಲ್ಲಿ ಮೊದಲು ರಚನೆಯಾದ ಚರ್ಚುಗಳು ಹಾಗೂ ಸ್ವಾತಂತ್ರ್ಯದ ನಂತರದಲ್ಲಿ ರಚನೆಯಾದ ಚರ್ಚುಗಳ ಬದಲಾವಣೆಯನ್ನು ಈ ಅಧ್ಯಾಯದಲ್ಲಿ ತಿಳಿಯಬಹುದಾಗಿದೆ.

ಧಾರವಾಡ ಜಿಲ್ಲೆಯಲ್ಲಿ ಕ್ರೈಸ್ತಮಿಷನರಿಗಳು ಮಾಡಿದ ಸೇವಾ ಚಟುವಟಿಕೆಗಳಾದ ಶಿಕ್ಷಣ, ಮುದ್ರಣ, ಸಾಹಿತ್ಯ, ಕೈಗಾರಿಕೆ, ವೃತ್ತಿತರಬೇತಿ, ಆಸ್ಪತ್ರೆ, ಚರ್ಚುಗಳ ರಚನೆ ಹೀಗೆ ಮುಂತಾದ ರೀತಿಯಲ್ಲಿ ಧಾರವಾಡ ಜಿಲ್ಲೆಗೆ ಕ್ರೈಸ್ತ ಮಿಷನರಿಗಳು ನೀಡಿದ ಕೊಡುಗೆ ಹಾಗೂ ಚರ್ಚಗಳು ಹೇಗೆ ಸ್ಥಳೀಯ ಸಂಸ್ಕೃತಿಯನ್ನು ಮೇಳೈಸಿಕೊಂಡು ಹೊಸ ರೂಪ ಪಡೆದವು ಎಂಬುದನ್ನು ಈ ಪ್ರಸ್ತುತ ಅಧ್ಯಯನದಲ್ಲಿ ಕಾರ್ಯಗತಗೊಳಿಸುವ ಪ್ರಯತ್ನ ಮಾಡಲಾಗಿದೆ.

ಕ್ಷೇತ್ರ ಕಾರ್ಯದ ಮೂಲಕ ಸಂಗ್ರಹಿಸಿದ ಮಾಹಿತಿಯನ್ನು ಸಂಗ್ರಹಿಸಿ, ದಾಖಲಿಸಿ ಅವುಗಳನ್ನು ಪುನರ್ ಪರಿಶೀಲಿಸಿ, ಜೊತೆಗೆ ಹೊಸ ಮಾಹಿತಿಗಳನ್ನು ಸೇರ್ಪಡಿಸಲಾಗಿದೆ. ಕರ್ನಾಟಕ ಸಂಸ್ಕೃತಿಗೆ ಧಾರವಾಡ ಜಿಲ್ಲೆಯ ಚರ್ಚುಗಳು ನೀಡಿದ ಕೊಡುಗೆಯನ್ನು ವಿವರಿಸುವುದು ಈ ಸಂಶೋಧನೆಯ ಮುಖ್ಯ ಉದ್ದೇಶವಾಗಿದೆ.

೧.೨. ಅಧ್ಯಯನದ ವ್ಯಾಪ್ತಿ

ಯಾವುದೇ ಒಂದು ಸಂಶೋಧನೆಗೆ ಅಧ್ಯಯನದ ವ್ಯಾಪ್ತಿ ಬಹುಮುಖ್ಯ. ಒಂದು ನಿರ್ದಿಷ್ಟ ಹಾಗೂ ಉದ್ದೇಶಪೂರಿತ ಸಂಶೋಧನೆಯು ಯಶಸ್ವಿಯಾಗಲು ಇದು ಸಹಕಾರಿಯಾಗಿದೆ. ಪ್ರಸ್ತುತ ಅಧ್ಯಯನವನ್ನು "ಧಾರವಾಡ ಜಿಲ್ಲೆಯ ಚರ್ಚುಗಳು : ಸಾಂಸ್ಕೃತಿಕ ಅಧ್ಯಯನ" ಎಂಬ ಶೀರ್ಷಿಕೆಯಡಿಯಲ್ಲಿ ಒಂದು ನಿರ್ದಿಷ್ಟ ವ್ಯಾಪ್ತಿಗೆ ಒಳಪಡಿಸಲಾಗಿದೆ. ಈ ಕಾಲಾವಧಿಯು ಧಾರವಾಡ ಪ್ರದೇಶಕ್ಕೆ ಕ್ರೈಸ್ತ ಮಿಶನರಿಗಳು ಆಗಮಿಸಿದ ಕಾಲಾವಧಿಯಿಂದ ಸ್ವಾತಂತ್ರ್ಯಾವಧಿಯವರೆಗಿನ ಕಾಲವನ್ನು ಒಳಗೊಂಡಿದ್ದು, ಸಾಂದರ್ಭಿಕವಾಗಿ ಇತ್ತೀಚಿನ ಮಾಹಿತಿಗಳನ್ನು ಆಧಾರಿಸಿ ಅಧ್ಯಯನಕ್ಕೆ ಸೇರ್ಪಡಿಸಲಾಗಿದೆ.

ಧಾರವಾಡದ ಜಿಲ್ಲೆಯು ಇಂದು ೪೨೬೦ ಚ.ಕಿ.ಮೀ ವಿಸ್ತೀರ್ಣವನ್ನು ಹೊಂದಿದ್ದು, ಇದು ೫ ತಾಲೂಕುಗಳನ್ನು ಒಳಗೊಂಡಿದೆ. ಅವುಗಳೆಂದರೆ ಧಾರವಾಡ, ಹುಬ್ಬಳ್ಳಿ, ಕಲಘಟಗಿ, ಕುಂದಗೋಳ, ಮತ್ತು ನವಲಗುಂದ ಈ ಐದು ತಾಲೂಕುಗಳಲ್ಲಿ ವಿಸ್ತರಿಸಿಕೊಂಡಿರುವ ಚರ್ಚುಗಳನ್ನು ಅಧ್ಯಯನ ವ್ಯಾಪ್ತಿಗೆ ಅಳವಡಿಸಿಕೊಳ್ಳಲಾಗಿದೆ.

[illegible]

೧.೩. ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಪ್ರಸ್ತುತ ಅಧ್ಯಯನಕ್ಕೆ ಆಯ್ದುಕೊಂಡಿರುವ "ಧಾರವಾಡ ಜಿಲ್ಲೆಯ ಚರ್ಚುಗಳು : ಸಾಂಸ್ಕೃತಿಕ ಅಧ್ಯಯನ" ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಧಾರವಾಡ ಜಿಲ್ಲೆಯಲ್ಲಿ ಇರುವ ಚರ್ಚುಗಳು, ಸೇವೆಗೈದ ಮಿಷನರಿಗಳ ಬಗೆಗೆ ಪ್ರಕಟವಾದ ಲೇಖನ, ಕಿರು ಪ್ರಬಂಧಗಳು, ಪ್ರಕಟಿತ ಪುಸ್ತಕಗಳು ಸಂದರ್ಶನಗಳ ಮೂಲಕ ಸಂಗ್ರಹಿಸಿದ ಮಾಹಿತಿ, ಅಪ್ರಕಟಿತ ವಿವರಗಳು, ವಾರ್ಷಿಕೋತ್ಸವ ಸಮಾರಂಭದ ಪತ್ರಿಕಾ ಪ್ರಕಟಣೆಗಳಲ್ಲಿ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದ ವಿವರಗಳು ಪ್ರಕಟವಾಗಿವೆ.

ಗ್ಯಾಜೆಟಿಯರ್

ಸೂರ್ಯನಾಥ ಕಾಮತ್ ಅವರು ಸಂಪಾದಿಸಿರುವ ಧಾರವಾಡ ಜಿಲ್ಲೆಯ ಗ್ಯಾಜೆಟಿಯರ್ (೧೯೫೫) ಎಂಬ ಗ್ರಂಥದಲ್ಲಿ ಇತಿಹಾಸ ಎಂಬ ಶೀರ್ಷಿಕೆ ಅಡಿಯಲ್ಲಿ ಧಾರವಾಡ ಪ್ರದೇಶದ ಹಿನ್ನೆಲೆ ಕುರಿತು ವಿವರಗಳಿವೆ. ಜೊತೆಗೆ ಈ ಪ್ರದೇಶದಲ್ಲಿ ಕ್ರೈಸ್ತರ ಆಗಮನ, ಚರ್ಚುಗಳ ಸ್ಥಾಪನೆ ಕುರಿತು ಸಂಕ್ಷಿಪ್ತ ವಿವರಣೆ ನೀಡಿದ್ದಾರೆ.

೨೦೦೭ರಲ್ಲಿ ರು.ಮ.ಷಡಕ್ಷರಯ್ಯ ಅವರು ಬರೆದು ಪ್ರಕಟಿಸಿದ 'ಧಾರವಾಡ ಜಿಲ್ಲೆಯ ಐತಿಹಾಸಿಕ ಸ್ಮಾರಕಗಳು ಮತ್ತು ಶಿಲ್ಪಗಳು ಎಂಬ ಪುಸ್ತಕದಲ್ಲಿ ಹೆಬಿಕ ಚರ್ಚು, ಬಾಸಿಲ್ ಮಿಷನ್ ಚರ್ಚು, ಹಾಗೂ ಇನ್ನು ಕೆಲವು ಚರ್ಚುಗಳ ಬಗೆಗೆ ಸಂಕ್ಷಿಪ್ತ ವಿವರಗಳಿವೆ.

ಶ್ರೀ.ನ.ಹ.ಕಟಗೇರಿ ಅವರಿ ೨೦೦೭ರಲ್ಲಿ ರಚಿಸಿದ ಗತಕಾಲದ ಧಾರವಾಡ ಎಂಬ ಕೃತಿಯನ್ನು ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲಿ ಧಾರವಾಡ ಈ ಕೃತಿಯಲ್ಲಿ ಪ್ರಸ್ತುತ ಅಧ್ಯಯನದ ಹೆಬಿಕ ಚರ್ಚು ಹಾಗೂ ಮಿಷನರಿಯಾದ ಹೆಬಿಕದ ಉಲ್ಲೇಖದ ಕುರಿತು ವಿವರಗಳಿವೆ.

ಬರಗೂರ ರಾಮಚಂದ್ರಪ್ಪ ಸಂಪಾದಿಸಿರುವ ಕರ್ನಾಟಕ ಸಂಗಾತಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ೨೦೦೨ರಲ್ಲಿ ಪ್ರಕಟಣೆಯಾದ ಚರ್ಚ ವಾಸ್ತುಶಿಲ್ಪ ಶಿರ್ಷಿಕೆಯಲ್ಲಿ ಧಾರವಾಡದ ಅಲ್ ಸ್ಟೆಂಟ್ ಚರ್ಚ್‌ನ ಅಧ್ಯಯನ ಕೈಗೊಂಡಿದ್ದಾರೆ. ಜೊತೆಗೆ ವಸಾಹತುಶಾಹಿಯ ವಾಸ್ತುಶಿಲ್ಪದ ಉಲ್ಲೇಖಸಿದ್ದಾರೆ.

ಎಂ.ಜಿ.ನಾಗರಾಜ ಮತ್ತು ಡಾ.ಪಿ.ವಿ.ಕೃಷ್ಣಮೂರ್ತಿ ಸಂಪಾದಿಸಿದ ಇತಿಹಾಸ ದರ್ಶನ ಸಂಪುಟ-೧೭ರಲ್ಲಿ ಪ್ರಸ್ತುತ ಅಧ್ಯಾಯ ಧಾರವಾಡ ಪ್ರದೇಶ ಹಾಗೂ ಸೇವೆಗೈದ ಮೋಗ್ಲಿಂಗ್ ಮಿಷನರಿ ಕುರಿತ ಅಧ್ಯಯನ ಕೈಗೊಂಡಿದ್ದಾರೆ.

ಪ್ರೊ.ಬಿ.ಷೇಕ್ ಅಲಿ ರಚಿಸಿದ ಕರ್ನಾಟಕ ಚರಿತ್ರೆ ಸಂಪುಟ-೬, ಕನ್ನಡ ವಿಶ್ವವಿದ್ಯಾಲಯ ಹಂಪಿ ಚರ್ಚ್ ವಾಸ್ತುಶಿಲ್ಪ ಎಂಬ ಶೀರ್ಷಿಕೆಯಲ್ಲಿ ಧಾರವಾಡದ ಅಲ್ ಸ್ಟೆಂಟ್ ಚರ್ಚ್ ಬಗ್ಗೆ ಅಧ್ಯಯನ ಕೈಗೊಂಡಿದ್ದಾರೆ.

ಡಾ. ಎಂ.ಎಂ.ಕಲಬುರ್ಗಿ ಅವರ ಧಾರವಾಡ ತಾಲೂಕಿನ ಶಾಸನಗಳು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಎನ್ನುವ ಗ್ರಂಥದಲ್ಲಿ ಧಾರಾವಾಡ ಪ್ರದೇಶದ ಕುರಿತು ಅಧ್ಯಯನ ಕೈಗೊಂಡಿದ್ದಾರೆ. ರಾಜಮನೆತನಗಳ ಕುರಿತು ಶಾಸನಗಳಲ್ಲಿ ತಿಳಿಸಿದ್ದಾರೆ.

ಆರ್.ಆರ್. ದಿವಾಕರ ಅವರು ಕರ್ನಾಟಕ ಪರಂಪರೆ ಸಂಪುಟ ೨, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, ೨೦೦೬, ಕರ್ನಾಟಕದಲ್ಲಿ ಕ್ರೈಸ್ತಧರ್ಮ ಎಂಬ ಶೀರ್ಷಿಕೆಯಡಿ ಧಾರವಾಡ-ಹುಬ್ಬಳ್ಳಿ ಕ್ರೈಸ್ತ ಮಿಷನರಿ ಪ್ರಸ್ತುತ ಅಧ್ಯಯನದ ಬಗ್ಗೆ ಮಾಹಿತಿಯನ್ನು ನೀಡುತ್ತದೆ.

ಎಚ್ಚೆಸ್ಕೆ ಅವರ 'ಅವಲೋಕನ' ಕರ್ನಾಟಕದ ಪರಂಪರೆಯ ಸಮೀಕ್ಷೆ, ವಿಶ್ವಕನ್ನಡ ಸಮ್ಮೇಳನ, ೧೯೮೫ ರಲ್ಲಿ ಪ್ರಕಟಿಸಿದ ಕರ್ನಾಟಕದಲ್ಲಿ ಕ್ರೈಸ್ತಧರ್ಮ ಎಂಬ ಶೀರ್ಷಿಕೆಯಲ್ಲಿ ಪ್ರಸ್ತುತ ಅಧ್ಯಯನದ ಧಾರವಾಡ ಪ್ರದೇಶದ ಚರ್ಚುಗಳ ಅಧ್ಯಯನ ಕೈಗೊಂಡಿದ್ದಾರೆ.

ಜಯವಂತ ಎಮ್. ಜೋಗೊಳ ಸಂಪಾದಿಸಿದ ಕರ್ನಾಟಕದಲ್ಲಿ ಬಾಸೆಲ್ ಮಿಶನ್, ೧೯೮೬-೮೭ ಧಾರವಾಡ ಇವರು ಪ್ರಸ್ತುತ ಅಧ್ಯಯನದ ಕ್ಷೇತ್ರವಾದ ಧಾರವಾಡ ಹಾಗೂ ಅಲ್ಲಿ ಸೇವೆಗೈದ ಕ್ರೈಸ್ತಮಿಷನರಿಗಳ ಬಗ್ಗೆ ಅಧ್ಯಯನ ಕೈಗೊಂಡಿದ್ದಾರೆ.

ಡಾ.ಕೆ.ಎಂ.ಮ್ಯಾಥ್ಯೂ ರೆ.ಎಫ್.ಕಿಟೆಲ್ ಒಂದು ಸಮಗ್ರ ಅಧ್ಯಯನ ೧೯೯೪ ಈ ಕೃತಿಯು ಧಾರವಾಡದಲ್ಲಿ ಸೇವೆಗೈದ ಮಿಷನರಿ ಹಾಗೂ ಧಾರವಾಡ ಪ್ರಸ್ತುತ ಅಧ್ಯಯನವನ್ನು ಕೈಗೊಂಡಿದ್ದಾರೆ.

೧.೪. ಅಧ್ಯಯನದ ವಿಧಾನ

ಇದುವರೆಗೆ ನಡೆದಿರುವ ಅಧ್ಯಯನಗಳನ್ನು ಗಮನದಲ್ಲಿಟ್ಟುಕೊಂಡು "ಧಾರವಾಡ ಜಿಲ್ಲೆ ಚರ್ಚುಗಳು ಸಾಂಸ್ಕೃತಿಕ ಅಧ್ಯಯನ" ಎಂಬ ಪ್ರಸ್ತುತ ಅಧ್ಯಯನ ಬೇಕಾಗುವ ಮಾಹಿತಿಯನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿ ಕ್ರೊಡೀಕರಿಸುವ ಆಕರಗಳ ದಾಖಲೀಕರಣ ಛಾಯಚಿತ್ರ ಮಾಡಿಕೊಳ್ಳಲಾಗಿದೆ. ಅದರೊಂದಿಗೆ ಮೌಖಿಕ ಪರಂಪರೆ, ಸ್ಥಳೀಯ ಚರಿತ್ರೆ ಮುಂತಾದವುಗಳಿಗೆ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ನಂತರದಲ್ಲಿ ಸಂಗ್ರಹಿಸಿದ ಮಾಹಿತಿಗಳ ಆಕರಗಳನ್ನು ಬಳಸಿಕೊಂಡು ವಿಷಯಾನುಸಾರ ವಿಶ್ಲೇಷಿಸಿ ಸಂಯೋಜಿಸಿ ಅಂತರಶಿಸ್ತೀಯ ಅಧ್ಯಯನಗಳ ಮೂಲಕ ಧಾರವಾಡ ಜಿಲ್ಲೆಯ ಚರ್ಚುಗಳ ಸಾಂಸ್ಕೃತಿಕ ಅಧ್ಯಯನದ ಪೂರ್ಣ ಚರಿತ್ರೆಯನ್ನು ನಿರೂಪಿಸಲಾಗಿದೆ.

ಪ್ರಸ್ತುತ ಧಾರವಾಡ ಜಿಲ್ಲೆಯ ಚರ್ಚುಗಳು ಸಾಂಸ್ಕೃತಿಕ ಅಧ್ಯಯನ ಎಂಬ ಶೀರ್ಷಿಕೆಯ ಈ ನಿಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ಆರು ಅಧ್ಯಾಯಗಳಾಗಿ ವಿಭಾಗಿಸಿಕೊಳ್ಳಲಾಗಿದೆ. ಈ ಆರು ಅಧ್ಯಾಯಗಳನ್ನು ಒಳಗೊಂಡ ವಿಷಯ ಮತ್ತು ಅದರ ತಾತ್ವಿಕ ಸ್ವರೂಪ ಹೀಗಿದೆ. ಪ್ರಸ್ತಾವನೆ,

ಅಧ್ಯಯನದ ಉದ್ದೇಶ ಇದುವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆ, ವ್ಯಾಪ್ತಿ ವಿಧಾನಗಳನ್ನು ಮೊದಲನೆಯ ಅಧ್ಯಾಯದಲ್ಲಿ ಸ್ಪಷ್ಟಪಡಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಧಾರವಾಡ ಜಿಲ್ಲೆಯ ಐತಿಹಾಸಿಕ ಹಿನ್ನೆಲೆ, ಮಿಷನ-ಮಿಷನರಿಗಳ ಹಿನ್ನೆಲೆ, ಚರ್ಚುಗಳ ಹಿನ್ನೆಲೆಯನ್ನು ಕುರಿತು ಚರ್ಚಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಧಾರವಾಡ ಜಿಲ್ಲೆಯಲ್ಲಿ ಸೇವೆಗೈದ ಪ್ರಮುಖ ಮಿಷನರಿಗಳನ್ನು ಕುರಿತು ಹಾಗೂ ಧಾರವಾಡ ಜಿಲ್ಲೆಯ ಪ್ರಮುಖ ಚರ್ಚುಗಳ ಪಟ್ಟಿಯನ್ನು ಕುರಿತು ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಜಿಲ್ಲೆಯಲ್ಲಿ ಕ್ರೈಸ್ತ ಮಿಷನರಿಗಳ ಕಾರ್ಯಚಟುವಟಿಕೆಗಳಾದ ಶಿಕ್ಷಣ, ಮುದ್ರಣ, ಸಾಹಿತ್ಯ, ಕೈಗಾರಿಕೆ ಮತ್ತು ವೃತ್ತಿತರಬೇತಿ, ವೈದ್ಯಕೀಯ, ಮತಾಂತರ ಹೀಗೆ ಮುಂತಾದ ಚಟುವಟಿಕೆ ಕುರಿತು ವಿವರಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಜಿಲ್ಲೆಯ ಪ್ರಮುಖ ಚರ್ಚಿನ ವಾಸ್ತುಶಿಲ್ಪ ಹಾಗೂ ಜಿಲ್ಲೆಯಲ್ಲಿ ಬರುವ ಪ್ರಮುಖ ಚರ್ಚುಗಳ ಕ್ಷೇತ್ರಕಾರ್ಯದ ಮೂಲಕ ಛಾಯಾಚಿತ್ರಗಳನ್ನು ತೆಗೆದು ಸ್ಥಳೀಯವಾಗಿ ವಾಸಿರುವ ಪಾದ್ರಿಗಳಿಂದ ಮಾಹಿತಿ ಸಂಗ್ರಹಿಸಿ ಸಂಬಂಧಿಸಿದ ಎಲ್ಲಾ ಚರ್ಚುಗಳಿಗೆ ಭೇಟಿ ನೀಡಿ ಸಂದರ್ಶನದ ಮೂಲಕ ಸಂಗ್ರಹಿಸಿದ ಮಾಹಿತಿಗಳ ಆಧಾರದಿಂದ ಚರ್ಚಿನ ವಿವರಣೆ ಈ ಐದನೆಯ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಕೊನೆಯ ಅಧ್ಯಾಯ ಸಮಾರೋಪವಾಗಿದ್ದು, ಪ್ರಸ್ತುತ ಅಧ್ಯಾಯದಲ್ಲಿ ಕಂಡುಕೊಂಡ ಪ್ರಮುಖ ಸಂಗತಿಗಳ ಸಮೀಕ್ಷೆ, ಫಲಿತಗಳನ್ನು ಅಲ್ಲದೇ ಕೆಲವು ನಿರ್ಧಾರಗಳನ್ನು ಪ್ರಕಟಿಸುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ ೨

ಐತಿಹಾಸಿಕ ಹಿನ್ನೆಲೆ

೨.೧. ಧಾರವಾಡ ಜಿಲ್ಲೆಯ ಐತಿಹಾಸಿಕ ಹಿನ್ನೆಲೆ

೨.೨. ಮಿಷನ್-ಮಿಷನ್‌ರಿಗಳ ಹಿನ್ನೆಲೆ

೨.೩. ಚರ್ಚುಗಳ ಹಿನ್ನೆಲೆ

೨

ಐತಿಹಾಸಿಕ ಹಿನ್ನೆಲೆ

ಧಾರವಾಡ ಜಿಲ್ಲೆಯ ಐತಿಹಾಸಿಕ ಹಿನ್ನೆಲೆ

ಧಾರವಾಡ ಜಿಲ್ಲೆಯು ಕರ್ನಾಟಕದ ಇತಿಹಾಸದಲ್ಲಿ ಮಹತ್ವದ ಪಾತ್ರವನ್ನು ವಹಿಸಿದ ಜಿಲ್ಲೆಯಾಗಿದೆ. ಧಾರವಾಡ ಜಿಲ್ಲೆಯನ್ನು ಕರ್ನಾಟಕವನ್ನಾಳಿದ ಪ್ರಮುಖ ರಾಜಮನೆತನಗಳಾದ ಶಾತವಾಹನರು, ಬನವಾಸಿಯ ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಕಲಚೂರಿಗಳು, ದೇವಗಿರಿಯ ಯಾದವರು, ಹೊಯ್ಸಳರು, ವಿಜಯನಗರದ ಅರಸರು, ಬಹುಮನಿ ಸುಲ್ತಾನರು, ಬಿಜಾಪುರದ ಆದಿಲ್ ಶಾಹಿಗಳು ಹಾಗೂ ಮರಾಠ ಪೇಶ್ವೆಗಳು ಆಳ್ವಿಕೆಯನ್ನು ಮಾಡಿದರು. ಹತ್ತಿ ಬೆಳೆಯುವ ನಾಡಾಗಿ, ಹುಬ್ಬಳ್ಳಿ ಅಥವಾ ಹಳೇ ಹುಬ್ಬಳ್ಳಿ ಪ್ರಮುಖ ಕೈಗಾರಿಕಾ ಕೇಂದ್ರವಾಗಿತ್ತು. ಇಂದಿನ ಧಾರವಾಡ, ಬಿಜಾಪುರ, ರಾಯಚೂರು, ಜಿಲ್ಲೆಗಳು ಸಾವಿರಾರು ಮಗ್ಗಗಳಿಗೆ ಕೆಲಸ ಒದಗಿಸಲು ಈ ಜಿಲ್ಲೆ ಕಾರಣವಾಯಿತು. ಈ ಜಿಲ್ಲೆಯಲ್ಲಿ ಪ್ರಾಗೈತಿಹಾಸ ಕಾಲದಿಂದಲೂ ಮಾನವನ ಚಟುವಟಿಕೆಗಳು ನಡೆದ ಬಗ್ಗೆ ಕುರುಹುಗಳು ಕಂಡುಬಂದಿರುತ್ತವೆ. ೧೩ನೇ ಶತಮಾನದಿಂದಲೂ ಇಲ್ಲಿ ಕೆಲವು ವೀರಶೈವ ಪಂಥದ ಮಠಗಳು ವಿದ್ಯೆ, ಸಾಹಿತ್ಯ, ಸಂಸ್ಕೃತಿಗಳ ಕ್ಷೇತ್ರಕ್ಕೆ ಸಂಪೂರ್ಣವಾದ ಬೆಂಬಲ ನೀಡಿ ಇದನ್ನೊಂದು ಮಹತ್ವದ ಪ್ರದೇಶವನ್ನಾಗಿ ಮಾಡಿದವು. ''ರಾಜಾಶ್ರಯವಿಲ್ಲದಿದ್ದರು ಧಾರವಾಡವು ಆಧುನಿಕ ಕಾಲದಲ್ಲಿ ವಿದ್ಯೆ, ಸಾಹಿತ್ಯ, ಸಂಸ್ಕೃತಿ ಹಾಗೂ ರಾಜಕೀಯ ಚಟುವಟಿಕೆಗಳ ಕೇಂದ್ರವಾಯಿತು.''[೧] ಶಾಸನಗಳಲ್ಲಿ ೧೪ ಕರೆಗಳು ಇದ್ದ ಬಗ್ಗೆ ಉಲ್ಲೇಖವಿದೆ. ಧಾರವಾಡವು ಇತಿಹಾಸ ಪೂರ್ವ ಇತಿಹಾಸಕಾಲ, ಆಧುನಿಕ ಕಾಲ ಹೀಗೆ ಪ್ರತಿಘಟ್ಟದಲ್ಲಿಯೂ ಸಾಂಸ್ಕೃತಿಕ ಇತಿಹಾಸ ರಚನೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ.

೧೯ನೇ ಶತಮಾನದ ಆರಂಭದಲ್ಲಿ ಧಾರವಾಡ ಪ್ರದೇಶವು ಬ್ರಿಟಿಷರ ಅಧೀನಕ್ಕೆ ಒಳಪಟ್ಟಿತು. ಇದೇ ವೇಳೆಯಲ್ಲಿ ಕ್ರೈಸ್ತ ಮಿಶನರಿಗಳ ಸಂಪರ್ಕ ಹಾಗೂ ನೆಲಸುವಿಕೆಯು ಪ್ರಾರಂಭವಾಯಿತು. ಈ ಪರಿಣಾಮಗಳಿಂದ ನವಶಿಕ್ಷಣ, ಕೈಗಾರಿಕೆ, ವೈದ್ಯಕೀಯ ವ್ಯವಸ್ಥೆ, ಮುದ್ರಣ, ಧರ್ಮಪ್ರಚಾರ, ಸಾಹಿತ್ಯ,

ಚರ್ಚುಗಳ ನಿರ್ಮಾಣ ಮುಂತಾದ ಚಟುವಟಿಕೆಗಳು ನಡೆದು ಈ ಪ್ರದೇಶ ಅಭಿವೃದ್ಧಿಯತ್ತ ಮುನ್ನೆಡೆಯಿತು. ಹತ್ತಿಯ ಸಂಸ್ಕರಣ ಘಟಕ, ಉಗಿಬಂಡಿ ಮಾರ್ಗಗಳು, ರಸ್ತೆ ಸಂಪರ್ಕದ ಹೆಚ್ಚಳಕ್ಕೆ ದಾರಿಯಾಯಿತು. ಧಾರವಾಡವು ಉಗಿಬಂಡಿ ವ್ಯವಸ್ಥೆಯ ನಿರ್ವಹಣೆಯ ಕಛೇರಿಯ ತಾಣವಾಗಿ, ಹುಬ್ಬಳ್ಳಿಯ ರೈಲ್ವೆ ಕಾರ್ಯಗಾರದ ನೆಲೆಯಾಯಿತು. ಕನ್ನಡನುಡಿ ಅಭಿವೃದ್ಧಿಗೆ ಹಾಗೂ ಕರ್ನಾಟಕ ಏಕೀಕರಣ ಚಳುವಳಿಗೆ ಧಾರವಾಡ ಪ್ರಮುಖ ಪಾತ್ರವನ್ನು ವಹಿಸಿತು. ಹೀಗೆ ಧಾರವಾಡವು ಪುರಾಣಗಳ ಕಾಲದಿಂದ ರಾಜಕೀಯ ಇತಿಹಾಸ ಹಾಗೂ ಆಧುನಿಕ ಕಾಲದವರೆಗೆ ನಿರ್ವಹಿಸಿದ ಪಾತ್ರವು ಅತ್ಯಂತ ಸ್ಫೂರ್ತಿದಾಯಕ ಹಾಗೂ ಆಕರ್ಷಕವಾಗಿದೆ. ಸ್ವಾತಂತ್ರ್ಯ ನಂತರವು ಧಾರವಾಡ ಜಿಲ್ಲೆಯೂ ಕರ್ನಾಟಕದ ಇತರ ಜಿಲ್ಲೆಗಳಂತೆ ಅಭಿವೃದ್ಧಿಯತ್ತ ಸಾಗುತ್ತಾ ಬಂದಿದೆ. ಉತ್ತರ ಕರ್ನಾಟಕದ ಸಾಂಸ್ಕೃತಿಕ ನಗರವಾಗಿ ಧಾರವಾಡ ಮಾರ್ಪಟ್ಟಿದೆ.

ಪ್ರಾಗಿತಿಹಾಸಕಾಲ

ಗತಕಾಲದ ಮಾನವನ ಇತಿಹಾಸವನ್ನು ಅರಿಯದೇ ನಾವು ಚರಿತ್ರೆಯನ್ನು ಅಧ್ಯಯನ ಮಾಡುವುದು ಕಷ್ಟಸಾಧ್ಯ. ಮಾನವನ ಹುಟ್ಟು ಅವನ ಇರುವಿಕೆ ಹಂತ-ಹಂತವಾಗಿ ಅವನು ಬೆಳೆದುಬಂದ ರೀತಿ, ಜೀವನೋಪಾಯಕ್ಕಾಗಿ ಉಪಯೋಗಿಸಿದಂತಹ ವಿವಿಧ ವಸ್ತುಗಳು, ಉಪಕರಣಗಳ ಬಗ್ಗೆ ತಿಳಿಯುವುದು ಅವಶ್ಯ. ಮಾನವನ ಇತಿಹಾಸವನ್ನು ಪ್ರಮುಖವಾಗಿ ಎರಡು ಹಂತಗಳಲ್ಲಿ ವಿಂಗಡಿಸಲಾಗಿದೆ. ಮೊದಲನೆಯದು ಅಕ್ಷರಜ್ಞಾನವಿಲ್ಲದ ಹಂತವೆಂದು, ಇದನ್ನು ಪ್ರಾಗಿತಿಹಾಸಕಾಲ ಎಂತಲೂ, ಎರಡನೆಯದು ಅಕ್ಷರ ಜ್ಞಾನವಿದ್ದ ಹಂತ. ಇದನ್ನು ಇತಿಹಾಸ ಕಾಲವೆಂದು ಹೇಳಬಹುದು.

ಪ್ರಾಗಿತಿಹಾಸ ಕಾಲದಲ್ಲಿ ಶಿಲಾಯುಗ ಸಂಸ್ಕೃತಿ ಮತ್ತು ಲೋಹ ಸಂಸ್ಕೃತಿ ಎಂಬ ಎರಡು ಭಾಗಗಳಿವೆ. ಶಿಲಾಯುಗ ಸಂಸ್ಕೃತಿಯಲ್ಲಿ ಮತ್ತೆ ಹಳೆಯ ಶಿಲಾಯುಗ. ಇದರಲ್ಲಿ ಆದಿಹಳೆ ಶಿಲಾಯುಗ, ಮಧ್ಯ ಶಿಲಾಯುಗ ಮತ್ತು ನೂತನ ಶಿಲಾಯುಗವೆಂದು ವಿಭಾಗಿಸಲಾಗಿದೆ. ಶಿಲೆಯ ಬಳಕೆಯ ಜೊತೆಗೆ ತಾಮ್ರದ ಬಳಕೆಯು ಇರುವುದರಿಂದ ಈ ಹಂತವನ್ನು ಶಿಲಾತಾಮ್ರಯುಗ ಸಂಸ್ಕೃತಿ ಹಾಗೂ ಕಬ್ಬಿಣ ಯುಗದ ಅಥವಾ ಬೃಹತ್ ಶಿಲಾಯುಗ ಸಂಸ್ಕೃತಿ ಎಂದು ಕರೆಯಲಾಗಿದೆ.

ನೆಲೆಗಳು

ಧಾರವಾಡ ಜಿಲ್ಲೆಯು ಆದಿ ಶಿಲಾಯುಗದಿಂದಲೇ ಮಾನವನ ನೆಲೆಗಳನ್ನು ಹೊಂದಿದ್ದರ ಬಗ್ಗೆ ಅನೇಕ ಕುರುಹುಗಳು ಪ್ರಚುರಪಡಿಸುತ್ತದೆ. ಖ್ಯಾತ ಭೂವಿಜ್ಞಾನಿ ಶಾಸ್ತ್ರಜ್ಞ ರಾಬರ್ಟ್ ಬ್ರೂಸ್‌ಫೂಟ ಮಲಪ್ರಭಾ ಮತ್ತು ಬೆಣ್ಣೆಹಳ್ಳಗಳ ಸಂಗಮ ಸ್ಥಳದಲ್ಲಿ ಆದಿ ಶಿಲಾಯುಗದ ಆಯುಧಗಳುಳ್ಳ ನೆಲೆಗಳನ್ನು ಗುರುತಿಸಿದರು."[೨] ಕರ್ನಲ್ ಮಕೆಂಜೆ, ಎಂ.ಎಚ್.ಕೃಷ್ಣ, ಆರ್.ಶೇಷಾದ್ರಿ ಎಚ್.ಡಿ.ಸಂಕಾಲಿಯಾ,

ಆರ್.ಎಸ್.ಪಪ್ಪು ಹಾಗೂ ಅ.ಸುಂದರ ಅಲ್ಲದೆ ಇನ್ನು ಹಲವು ವಿದ್ವಾಂಸರು ಕೈಗೊಂಡಿರುವ ಸರ್ವೇಕ್ಷಣ ಕಾರ್ಯದ ಫಲವಾಗಿ ಹಳೆಯ ಶಿಲಾಯುಗ, ಮಧ್ಯಶಿಲಾಯುಗ, ಅಂತ್ಯ ಆದಿ ಹಳೆಯ ಶಿಲಾಯುಗ ಸಂಸ್ಕೃತಿಯ ಹಂತಗಳು ಬೆಳಕಿಗೆ ಬಂದವು. ಇವುಗಳಲ್ಲದೆ ನವಶಿಲಾಯುಗದ ಪಳಯುಳಿಕೆಗಳನ್ನು ಸಹ ಪತ್ತೆ ಹಚ್ಚಿದ್ದಾರೆ. "ಕಲ್ಲಾಪುರ ಗ್ರಾಮದಲ್ಲಿ ಹಳೆ ಶಿಲಾಯುಗದ ನೆಲೆಯನ್ನು, ಯಾದವಾಡದಲ್ಲಿ ಮಧ್ಯಹಳೆಶಿಲಾಯುಗದ ನೆಲೆಯನ್ನು, ವೀರಾಪುರದಲ್ಲಿ ಸೂಕ್ಷ್ಮ ಶಿಲಾಯುಗದ ನೆಲೆಗಳ ಪತ್ತೆ ಮಾಡಿದ್ದಾರೆ."[೩] ಬೆನಕನಹಳ್ಳಿಯಲ್ಲಿ ಆದಿ ಹಳೆ ಶಿಲಾಯುಗದ ಅವಶೇಷಗಳು ಹಾಗೂ ನವಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ ಆಯುಧಗಳು ದೊರೆತಿವೆ.

ಬಳಸಿದ ಶಿಲಾಮಾದರಿಗಳು

ಧಾರವಾಡ ತಾಲೂಕಿನ ಬೆನಕನಟ್ಟಿಯಲ್ಲಿ ಆದಿ ಹಳೆ ಶಿಲಾಯುಗದ ಸಲಕರಣೆಗಳು ಇದ್ದು, ಇವು ಅಬೇವಿಲಿಯನ್ ಹಾಗೂ ಅಶ್ಯೂಲಿಯನ್ ತಂತ್ರ ಪ್ರಕಾರಗಳಿಗೆ ಸೇರಿವೆ."[೪] ಒರಟು ಶಿಲಾಯುಧಗಳನ್ನು ಬಳಸುತ್ತಿದ್ದ ಆದಿ ಹಳೆಶಿಲಾಯುಗದ ಮಾನವರು ಕಾಲಾಂತರದಲ್ಲಿ ಉಜ್ಜಿ ನಯ ಮಾಡಿದ ಆಯುಧಗಳನ್ನು ಬಳಸಲು ಆರಂಭಿಸಿದರು ನವ ಶಿಲಾಯುಗದಲ್ಲಿ, ಅಲೆಮಾರಿ ಜೀವನ ಕೊನೆಯಾಗಿ ಒಂದು ಕಡೆ ಸ್ಥಿರವಾಗಿ ನೆಲೆಯನ್ನು ಕಂಡುಕೊಂಡನು. ವಾಸದ ಮನೆಯನ್ನು ಕಟ್ಟಿ, ಕೃಷಿ, ಪಶುಪಾಲನೆ, ಪ್ರಾರಂಭಿಸಿದನು. ಕಪ್ಪು-ಕೆಂಪು ಬಣ್ಣದ ಮಡಿಕೆ-ಕುಡಿಕೆ ಒಳಗೊಂಡಿದ್ದ ನಿವೇಶನ ಎಂದರೆ ನವಲಗುಂದ ತಾಲೂಕಿನ ಗುಡಿಸಾಗರ ಆಗಿದೆ. ಧಾರವಾಡ ಬಳಿಯ ಕ್ಯಾರಕೊಪ್ಪದ ಹೊರವಲಯದಲ್ಲಿ ನವಶಿಲಾಯುಗದ ಕೊಡಲಿಗಳನ್ನು ಹಾಗೂ ಹಲವು ಕ್ವಾರ್ಟ್‌ಜೆಟ್ ಆಯುಧಗಳನ್ನು ಇತ್ತೀಚೆಗೆ ಪತ್ತೆ ಮಾಡಲಾಗಿದೆ."[೫]

ಸ್ಥಳನಾಮ

ಹೆಸರುಗಳು ಒಂದು ಜನಾಂಗದ ಪ್ರದೇಶದ ಸಂಸ್ಕೃತಿಯ ಬೇರುಗಳು ಸಾಂಸ್ಕೃತಿಕ ಪರಂಪರೆಯ ಪುನರಾಚನೆಗೆ ಸ್ಥಳನಾಮಗಳು ಮುಖ್ಯ ಆಕರಗಳಾಗಿವೆ. ಈ ಹಿನ್ನೆಲೆಯಲ್ಲಿ ಧಾರವಾಡದ ಪ್ರಾಚೀನತೆ ಹಾಗೂ ಪರಂಪರೆಯ ಇತಿಹಾಸ ಅರಿಯುವುದು ಅಷ್ಟೇ ಮುಖ್ಯವಾಗಿದೆ. 'ಧಾರವಾಡ' ಎಂಬ ಹೆಸರು ಕನಿಷ್ಠ ಒಂದು ಸಾವಿರ ವರ್ಷಗಳಷ್ಟು ಪ್ರಾಚೀನ. "ಈ ನಗರದಲ್ಲಿರುವ ದುರ್ಗಾ ದೇವಾಲಯದಲ್ಲಿರುವ ಕ್ರಿ.ಶ.೧೧೧೭ರ ಕನ್ನಡ ಶಾಸದಲ್ಲಿ 'ಧಾರವಾಡ' ಎಂಬ ಹೆಸರಿದೆ."[೬] ಇದು ಅಂದಿನ ಕುಂದೂರಷ್ಟು ಎಂಬ ಆಡಳಿತ ಘಟಕದಲ್ಲಿತ್ತು. "ಇದರಲ್ಲಿ ಧಾರವಾಡ ಸೇರಿದಂತೆ ಇತರ ಕೆಲವು ಗ್ರಾಮಗಳು ಇದ್ದವೆಂಬುದು ಶಾಸನಗಳಿಂದ ತಿಳಿದುಬರುತ್ತದೆ.

ಒಂದು ಊಹೆಯ ಪ್ರಕಾರ ಪ್ರಾಚೀನ ಕಾಲದಿಂದಲೂ ಈಗಿನ ಧಾರವಾಡ ಮತ್ತು ಬಯಲು ಸೀಮೆಯ ನಡುವೆ ಸಾಗುತ್ತಿದ್ದ ವ್ಯಾಪಾರಿ ಸರಕುಗಳ ಸುಂಕ ಸಂಗ್ರಹಕ್ಕೆ "ದ್ವಾರ"ದಾತ್ತಿ ಮುಖ್ಯ

ಪಟ್ಟಣವಾಗಿತ್ತು. "ಕ್ರಿ.ಶ.೧೨೧೮ರ ಶಾಸನದಲ್ಲಿ ಧಾರವಾಡವನ್ನು ಪಟ್ಟಣವೆಂದು ವರ್ಣಿಸಿರುವುದು ಧಾರವಾಡದ ಪ್ರಾಮುಖ್ಯತೆಯು ಹೆಚ್ಚುತ್ತಿರುವುದನ್ನು ಸೂಚಿಸುತ್ತದೆ."[೭]

"ಕಲಕೂರಿನ ಶಾಸನ (ಹುಬ್ಬಳ್ಳಿ ತಾಲೂಕು) ಈ ಊರನ್ನು ಧಾರವಾಡ ಕಂಪಣಕ್ಕೆ ಸೇರಿದ್ದೆಂದು ವರ್ಣಿಸಿದೆ"[೮]ವಿಜಯನಗರ ಕಾಲದ ಸ್ಥಂಬವೊಂದರ ಪ್ರಕಾರ ಧಾರವಾಡವು ಆಡಳಿತ ಕೇಂದ್ರವಾಗಿದ್ದುದು ತಿಳಿದುಬರುತ್ತದೆ. ಧಾರವಾಡವು ನೂಲಿನ ವಸಾಹತು ಎಂಬ ಅರ್ಥವನ್ನು ಹೊಂದಿದ್ದು ಅದಕ್ಕೆ ತಂತುಪುರ (ದಾರ-ತಂತು, ನೂಲು) ಎಂಬ ಹೆಸರು ಇದ್ದಿತ್ತು ಎಂಬ ಊಹೆ ಇದೆ.

ಧಾರವಾಡ ಬಳಮ(ಬಯಲು ಸೀಮೆ) ಮತ್ತು ಮಲೆನಾಡುಗಳ ಮಧ್ಯೆ ಇದೆ. ಬಳಮದ ಮೂಲಕ ಮಲೆನಾಡಿಗೆ ಹೋಗಬೇಕಾದರೆ ಧಾರವಾಡವೇ ಮಾರ್ಗವಾದುದರಿಂದ 'ದ್ವಾರವಾಟ' ಎಂಬ ಹೆಸರು ಬಂದಿದ್ದು, ಇದೇ 'ಧಾರವಾಡ್' ಆಗಿ ಮುಂದೆ 'ಧಾರವಾಡ' ಆಯಿತು. ಬ್ರಿಟಿಷರ ಕಾಲದಲ್ಲಿ ಧಾರವಾಡವು 'ಧಾರವಾರ್' ಆಯಿತು. ನಂತರ 'ಧಾರವಾಡ' ಎಂದೇ ಪ್ರಸಿದ್ಧಿಯಾಗಿದೆ. ೩೧-೧-೧೯೭೭ರ ಸರ್ಕಾರದ ಆದೇಶಸದಿಂದ ಕರ್ನಾಟಕದ ಬಹುತೇಕ ಜಿಲ್ಲೆಗಳಂತೆ ಧಾರವಾಡವೂ ಒಂದು ಜಿಲ್ಲಾ ಕೇಂದ್ರವಾಗಿ ಪ್ರಸಿದ್ಧಿ ಪಡೆಯಿತು.

ರಾಜಕೀಯ ಇತಿಹಾಸ

ಧಾರಾವಾಡ ಜಿಲ್ಲೆಯ ಇತಿಹಾಸವು, ಪ್ರಾಗೈತಿಹಾಸಿಕ ಕಾಲದಿಂದಲೂ ಮಾನವನ ಸಾಂಸ್ಕೃತಿಕ ನೆಲೆ ಬೀಡಾಗಿದೆ. ಇತಿಹಾಸ ಕಾಲದಲ್ಲೂ ಇದು ತನ್ನ ಐತಿಹಾಸಿಕ ಮಹತ್ವವನ್ನು ಹಾಗೇ ಉಳಿಸಿಕೊಂಡು ಬಂದಿದೆ. ಧಾರವಾಡ ಪ್ರದೇಶ ಅಥವಾ ಧಾರವಾಡ ಜಿಲ್ಲೆಯಲ್ಲಿ ದೊರೆತ ಪ್ರಾಚ್ಯಾವಶೇಷ, ಶಾಸನ, ಸಾಹಿತ್ಯಿಕ ಆಕರಗಳಿಂದ ಸಂದರ್ಭನುಸಾರವಾಗಿ ರಾಜಕೀಯ ಚರಿತ್ರೆಯನ್ನು ವಿಶ್ಲೇಷಿಸಲಾಗಿದೆ. ಈ ಪ್ರದೇಶದಲ್ಲಿ(ಜಿಲ್ಲೆ) ಆಳ್ವಿಕೆ ಮಾಡಿದ ರಾಜಮನೆತನಗಳ ಚರಿತ್ರೆಯನ್ನು ಈ ಕೆಳಗಿನಂತೆ ಚಿತ್ರಿಸಲಾಗಿದೆ.

ಶಾತವಾಹನರು

ಕರ್ನಾಟಕವನ್ನು ಆಳ್ವಿಕೆಗೆ ಒಳಪಡಿಸಿಕೊಂಡ ಹಲವು ರಾಜಮನೆತನಗಳಲ್ಲಿ ಶಾತವಾಹನರ ರಾಜಮನೆತನ ಕೂಡ ಒಂದು. ಶಾತವಾಹನರ ಅವಶೇಷಗಳು ನೆರೆಯ ಬನವಾಸಿ, ವಡಗಾಂ-ಮಾದವಪುರ (ಬೆಳಗಾಂ ಜಿಲ್ಲೆ)ಗಳಲ್ಲಿ ಕಂಡುಬರುತ್ತದೆ. ಅಲೆಗ್ಸಾಂಡ್ರಿಯಾದ ಭೂಗೋಳತಜ್ಞ ಟಾಲೆಮಿ (ಕ್ರಿ.ಶ.೧೩೦) ಉಲ್ಲೇಖಿಸಿರುವ ಊರುಗಳಲ್ಲಿ ಧಾರವಾಡ ತಾಲೂಕಿನ ಕೆಲವು ಪ್ರದೇಶಗಳು ಸೇರಿವೆ.[೯] ಧಾರವಾಡ ಮತ್ತು ಬಳ್ಳಾರಿ ಜಿಲ್ಲೆಯ ಪ್ರದೇಶಗಳನ್ನು ಶಾತವಾಹನೀಹಾರ' ಎಂದು ಕರೆದಿರುವುದರಿಂದ ಇವರು ಇದೇ ಪ್ರದೇಶಕ್ಕೆ ಸೇರಿದವರೆಂದು ಡಾ.ಸುಖ್ರನಕರರ ಅಭಿಪ್ರಾಯ. ಇವರ ಕಾಲದಲ್ಲಿ ಭಾರತ ಮತ್ತು ರೋಮ್‌ಗಳ ನಡುವೆ ನಡೆದ ಸಮೃದ್ಧ ವ್ಯಾಪಾರವಿತ್ತು. ಇದರಲ್ಲಿ ಧಾರವಾಡ ಜಿಲ್ಲೆಯು ಪಾಲು

ಹೊಂದಿದೆ. ಇದಕ್ಕೆ ಆಧಾರವೆಂಬಂತೆ ರೋಮನ್ ನಾಣ್ಯಗಳು ಧಾರವಾಡ ಜಿಲ್ಲೆಯಲ್ಲಿ ದೊರೆತಿವೆ. ಒಟ್ಟಿನಲ್ಲಿ ಶಾತವಾಹನರು ಈ ಪ್ರದೇಶದಲ್ಲಿ ಆಳ್ವಿಕೆ ಮಾಡಿದ ಕುರುಹುಗಳು ಕಂಡುಬಂದಿರುತ್ತವೆ.

ಬನವಾಸಿಯ ಕದಂಬರು

ಕರ್ನಾಟಕವನ್ನು ಆಳಿದ ಕರ್ನಾಟಕದ ಮೊಟ್ಟ ಮೊದಲ ರಾಜಮನೆತನವೆಂದರೆ ಬನವಾಸಿಯ ಕದಂಬರರು ಕರ್ನಾಟಕವನ್ನು ಆಳಿದ ಕನ್ನಡದ ಮೊದಲ ಅರಸನೆಂಬ ಕೀರ್ತಿ ಮಯೂರಶರ್ಮರ(ವರ್ಮ)ನಿಗೆ ಸಲ್ಲುತ್ತದೆ. ಕದಂಬರ ಲಾಂಛನ ಸಿಂಹ ಲಾಂಛನ ಮತ್ತು ವಾನರ ಧ್ವಜವಾಗಿತ್ತು. ಕದಂಬರು ಕರ್ನಾಟಕದ ಪ್ರಮುಖ ಜಿಲ್ಲೆಗಳಾದ ಬೆಳಗಾವಿಯ ಹಲಸಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಬನವಾಸಿಗಳಲ್ಲಿ ಇವರ ಅವಶೇಷಗಳು ಕಂಡುಬರುತ್ತದೆ. ಶಾಸನಗಳಲ್ಲಿ ಸುದ್ದಿಕುಮದೂರು ವಿಷಯವು ಧಾರವಾಡ ತಾಲೂಕಿನ ನರೇಂದ್ರ ಹಳ್ಳಿಯಾಗಿದೆ. ಇದು ಹಲಸಿಯನ್ನು ಒಳಗೊಂಡಿರಬಹುದೆಂದು ಪಂಚಮುಖಿಯರು ಅಭಿಪ್ರಾಯಪಟ್ಟಿದ್ದಾರೆ.[೧೦]

ಬನವಾಸಿಯ ಕದಂಬರ ನಂತರ ಅವರ ಸಂಬಂಧಿಗಳಾದ ಗೋವೆಯ ಕದಂಬರು, ಹಾನಗಲ್‌ನ ಕದಂಬರು ತಮ್ಮನ್ನು ಕದಂಬ ವಂಶದವರೆಂದು ಹೇಳಿಕೊಂಡಿದ್ದಾರೆ. ಗೋವೆಯ ಕದಂಬರ ಆಳ್ವಿಕೆಗೆ ಧಾರವಾಡವು ಒಳಪಟ್ಟಿತ್ತು ಎಂಬುದು ತಿಳಿದುಬರುತ್ತದೆ.

ಒಟ್ಟಾರೆ ಕದಂಬರು ಆಳ್ವಿಕೆ ಮಾಡಿದ ಆಧಾರಗಳು ಧಾರವಾಡ ಜಿಲ್ಲೆಯಲ್ಲಿ ದೊರೆತಿರುವುದರಿಂದ ಆಧಾರಗಳ ಮೂಲದಿಂದ ಶಾತವಾಹನರ ಈ ಪ್ರದೇಶ ನಂತರ ಕದಂಬರ ಆಳ್ವಿಕೆಗೆ ಒಳಪಟ್ಟಿತ್ತು ಎಂಬುದು ತಿಳಿದುಬರುತ್ತದೆ.

ಬಾದಾಮಿ ಚಾಲುಕ್ಯರು

ಕರ್ನಾಟಕವನ್ನು ಆಳಿದ ಕನ್ನಡದ ಮತ್ತೊಂದು ಅರಸು ಮನೆತನವೆಂದರೆ ಬಾದಾಮಿ ಚಾಲುಕ್ಯರು ಬಾದಾಮಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿದರು. ಚಾಲುಕ್ಯರು ತಮ್ಮ ಆರಂಭದ ಶಾಸನಗಳಲ್ಲಿ 'ಚಾಲುಕ್ಯರು' ಎಂದು ತಮ್ಮನ್ನು ಕರೆದುಕೊಂಡಿದ್ದಾರೆ. ಬಾದಾಮಿ ಚಾಲುಕ್ಯರ (೧೫೦) ಶಾಸನಗಳು ಧಾರವಾಡ ಜಿಲ್ಲೆಯಲ್ಲಿ ಸುಮಾರು ೧೫ ಮಾತ್ರವೇ ದೊರೆತಿದ್ದುದ್ದವೆಂದು ಭಾವಿಸಲಾಗಿದೆ. "ಸಿರಗುಪ್ಪಿ(ಹುಬ್ಬಳ್ಳಿ ತಾಲೂಕು) ಶಾಸನದಲ್ಲಿ ಸೇಂದ್ರಕ ವಾಣಸತ್ತಿಯು ಮುಳುಗುಂದ ಆಳುತ್ತಿದ್ದನೆಂದು ಹೇಳಿದ್ದು, ಇವನು ಒಂದನೇ ಪುಲಿಕೇಶಿಯ ಮಾಂಡಲೀಕನೆಂದೂ, ಹಲವು ಶಾಸನದಲ್ಲಿ ಕದಂಬರ ಹರಿವರ್ಮನ ಮಂಡಲೀಕನೆಂದು ಉಲ್ಲೇಖವಾಗಿದ್ದು, ಕದಂಬರ ಸೋಲಿನ ನಂತರ ಇವನು ಚಾಲುಕ್ಯರ ಅಧಿಪತ್ಯ ಸ್ವೀಕಾರ ಮಾಡಿದ್ದಾನೆ ಎಂದು ಡಾ.ಕೆ.ವಿ.ರಮೇಶ ಹೇಳಿದ್ದಾರೆ."[೧೧]

ರಾಷ್ಟ್ರಕೂಟರು

ಬಾದಾಮಿ ಚಾಲುಕ್ಯರ ನಂತರ ಕರ್ನಾಟಕವನ್ನು ಆಳಿದ ಪ್ರಸಿದ್ಧ ರಾಜಮನೆತನವೆಂದರೆ ರಾಷ್ಟ್ರಕೂಟರು. ರಾಷ್ಟ್ರಕೂಟರ ಒಟ್ಟು ೫೦೦ಕ್ಕೂ ಮೇಲ್ಪಟ್ಟ ಶಾಸನಗಳಿವೆ. ಇದರಲ್ಲಿ ಸುಮಾರು ೧೦೦ ಶಾಸನಗಳು ಧಾರವಾಡ ಜಿಲ್ಲೆಯಲ್ಲಿ ಸಿಕ್ಕಿವೆ. ಧಾರವಾಡ ಪರಿಸರದಲ್ಲಿ ೧೧ ರಾಷ್ಟ್ರಕೂಟರ ಶಾಸನಗಳಿವೆ. ಈ ಶಾಸನಗಳು ದೇವಾಲಯಗಳ ಸ್ಥಾಪನೆ, ದಾನ, ಅಗ್ರಹಾರಗಳ ನಿರ್ಮಾಣ, ಕೆರೆ, ಮುಂತಾದವುಗಳ ಬಗ್ಗೆ ಉಲ್ಲೇಖಿಸುತ್ತವೆ. ಇದೇ ರೀತಿ ಉಣಕಲ್ -೩೦ ಎಂಬ ಪ್ರದೇಶದ ಉಲ್ಲೇಕವಿದೆ. ನವಲಗುಂದ ತಾಲೂಕಿನ ಶಿಶುವಿನಹಳ್ಳಿಯಲ್ಲಿನ ಅಗ್ರಹಾರಕ್ಕೆ ಬೆಳ್ವಲ-೩೦೦ರ ಅಧಿಕಾರಿ ರೇವಣಯ್ಯ ಕೆಲವೊಂದು ಸುಂಕ ವಿನಾಯಿತಿ ನೀಡಿದ ವಿಚಾರವಿದೆ. ಹುಬ್ಬಳ್ಳಿಯಲ್ಲಿ ಈಗ ಇರುವ ೯೭೪ರ ಶಾಸನ ಒಂದು ಮೋರಿಯದ ಕಲಿಟ್ಟಯ್ಯ ಕೆರೆಯೊಂದನ್ನು ಕಟ್ಟಿದ ವಿಚಾರವಿದ್ದು, ಯಾವು ಊರಲ್ಲಿ ಎಂದು ತಿಳಿಯದು. ತಂಬೂರು (ಕಲಘಟಗಿ ತಾ) ಶಾಸನದಲ್ಲಿ ಪಲಸಿಗೆ -೧೨,೦೦೦ನ್ನು ಕಣಹ ಮಹಾರಾಜನು ಆಳುವುದಾಗಿ ಉಲ್ಲೇಖಿಸುತ್ತದೆ.

ಕಲ್ಯಾಣದ ಚಾಲುಕ್ಯರು

ಕಲ್ಯಾಣದ ಚಾಲುಕ್ಯರು ಕರ್ನಾಟಕ ಇತಿಹಾಸದಲ್ಲಿ ಒಂದು ಪ್ರಸಿದ್ಧವಾದ ರಾಜಮನೆತವಾಗಿತ್ತು. ಕಲ್ಯಾಣದ ಚಾಲುಕ್ಯರು ರಾಷ್ಟ್ರಕೂಟರ ಅವನತಿಯ ನಂತರ ತಲೆ ಎತ್ತಿದ ಒಂದು ರಾಜಮನೆತನವಾಗಿದೆ. ಇವರ ಶಾಸನಗಳು ಧಾರಾವಾಡ ಜಿಲ್ಲೆಯಲ್ಲಿ ವಿಫುಲವಾಗಿ ದೊರೆಯುತ್ತವೆ. ರಾಷ್ಟ್ರಕೂಟರ ಸಾಮಂತನಾಗಿದ್ದ ಇಮ್ಮಡಿ ತೈಲಪನು ಕ್ರಿ.ಶ.೯೭೩ರಲ್ಲಿ ಅಸಮರ್ಥ ದೊರೆಯಾಗಿದ್ದರಿಂದ ರಾಷ್ಟ್ರಕೂಟರ ಇಮ್ಮಡಿ ಕರ್ಕನನ್ನು ಬದಿಗೊತ್ತಿ ಚಾಲುಕ್ಯರ ಅದಿಪತ್ಯವನ್ನು ಪುನಃ ಸ್ಥಾಪಿಸಿದನು.

ಕಲ್ಯಾಣ ಚಾಲುಕ್ಯರ ಅರಸರಲ್ಲಿ ಪ್ರಸಿದ್ಧರಾದವರು ಎಂದರೇ ೧ನೇ ಸೋಮೇಶ್ವರ, ಆರನೆಯ ವಿಕ್ರಮಾದಿತ್ಯ, ಮೂರನೇಯ ಸೋಮೇಶ್ವರ, ಸಾಮಾನ್ಯವಾಗಿ ಕಲ್ಯಾಣಿ ಚಾಲುಕ್ಯರ ಶಾಸನಗಳನ್ನು ಅವರ ಸಾಮಂತರಾದ ಗೋವೆಯ ಕದಂಬರು ಬರೆದವುಗಳಾಗಿದ್ದು, ಚಕ್ರವರ್ತಿಗಳೆಂಬ ಕಾರಣಕ್ಕಾಗಿ ಇವರ ಉಲ್ಲೇಖ ಬರುತ್ತದೆ. "ಮಗದ ಶಾಸನ ಒಂದನೆಯ ಸೋಮೇಶ್ವರನೂ, ಈತನ ಸಾಮಂತ ಗೋವೆಯ ಕದಂಬ ಚಟ್ಟಿಯದೇವನಲ್ಲಿ ಉಲ್ಲೇಖಿಸುತ್ತದೆ."

ಆರನೆಯ ವಿಕ್ರಮಾದಿತ್ಯನು(ಕ್ರಿ.ಶ.೧೦೭೬-೧೧೨೬) ಕಲ್ಯಾಣಿ ಚಾಲುಕ್ಯ ಅರಸರಲ್ಲಿ ಪ್ರಸಿದ್ಧ ಅರಸನಾಗಿದ್ದನು. ಕಲ್ಯಾಣಿ ಚಾಲುಕ್ಯರ ಶಾಸನಗಳು ಹೆಚ್ಚಾಗಿ ಈತನ ಶಕೆಯನ್ನು ಉಪಯೋಗಿಸಿವೆ. ಆರನೇ ವಿಕ್ರಮಾದಿತ್ಯನು ೧೦೭೬ರಲ್ಲಿ 'ವಿಕ್ರಮಶಕೆ'ಯನ್ನು ಸ್ಥಾಪಿಸಿದನು. ಇವನು ತ್ರಿಭುವನ ಮಲ್ಲ, ಪೆರ್ಮಾಡಿದೇವ' ಮುಂತಾದ ಬಿರುದುಗಳನ್ನು ಧರಿಸಿದನು. 'ಅಮ್ಮಿನ ಭಾವಿಯ ಒಂದು ಶಾಸನವು

[illegible]

(ಕ್ರಿ.ಶ.೧೦೭೧) ವಿಕ್ರಮಾದಿತ್ಯ ಆಳುತ್ತಿದ್ದನೆಂದು ಉಲ್ಲೇಖಿಸುತ್ತದೆ.'[೧೨] ಶಾಸನಗಳ ಪ್ರಕಾರ ಆರನೇ ವಿಕ್ರಮಾದಿತ್ಯನು ಕ್ರಿ.ಶ.೧೦೭೬ರಲ್ಲಿ ಸ್ವತಂತ್ರ ರಾಜನಾಗಿ ತನ್ನ ಆಳ್ವಿಕೆಯನ್ನು ಪ್ರಾರಂಭಿಸಿದರು. ಈ ಶಾಸನದ ಪ್ರಕಾರ ೬-೭ ವರ್ಷಗಳ ಮೊದಲೇ ತನ್ನ ಆಳ್ವಿಕೆ ಮಾಡಿದನೆಂದು ಸೂಚಿಸುತ್ತದೆ. ಆದುದರಿಂದ ಇದೊಂದು ಮಹತ್ವಪೂರ್ಣ ಶಾಸನವಾಗಿದೆ. ಅಲ್ಲದೆ ವಿಕ್ರಮಾದಿತ್ಯನ ಆಳ್ವಿಕೆಯ ಮೊದಲ ಶಾಸನ ಇದಾಗಿದೆ. "ನಿಗದಿ ಶಾಸನ ಕ್ರಿ.ಶ.೧೧೧೧ ಮೇಲೆ ಸಾಮಂತ ಮೂರನೆಯ ಗೋವಲದೇವನ ಕೆಳಗೆ ಚಕ್ರವರ್ತಿ ಆರನೇ ವಿಕ್ರಮಾದಿತ್ಯನ ಹೆಸರನ್ನು ಉಲ್ಲೇಖಿಸುತ್ತದೆ."[೧೩] ನರೇಂದ್ರ ಶಾಸನವು(ಕ್ರಿ.ಶ.೧೧೨೫) ವಿಕ್ರಮಾದಿತ್ಯನ ಮಗಳಾದ ಮೈಳಲದೇವಿಯನ್ನು ಎರಡನೆಯ ಜಯಕೇಸಿಯೊಡನೆ ವಿವಾಹ ಮಾಡಿಕೊಟ್ಟಿದ್ದನ್ನು ಉಲ್ಲೇಖಿಸುತ್ತವೆ.[೧೪] ನರೇಂದ್ರ ಶಾಸನವು (ಕ್ರಿ.ಶ.೧೧೨೭) ಹಾಗೂ ಸಿದ್ದಪೂರ (೧೧೨೦) ಶಾಸನಗಳು ನೇರವಾಗಿ ಆರನೆಯ ವಿಕ್ರಮಾದಿತ್ಯನನ್ನು, ಆತನ ಕಾಲಗಣನೆಯನ್ನು ತಿಳಿಸುತ್ತದೆ.

ಆರನೆಯ ವಿಕ್ರಮಾದಿತ್ಯನು ಕಲ್ಯಾಣಿ ಚಾಲುಕ್ಯರ ಇತಿಹಾಸದಲ್ಲಿ ಪ್ರಸಿದ್ಧ ಅರಸನಾಗಿ ಆಳಿದರು ಇವನಿಗೆ ಮಲ್ಲಿಕಾರ್ಜುನ, ಜಕರ್ಣ, ಮತ್ತು ಮಮ್ಮಡಿ ಸೋಮೇಶ್ವರ ಎಂಬ ಮೂವರು ಮಕ್ಕಳು ಇದ್ದರು. ಇವರಲ್ಲಿ ವಿಕ್ರಮಾದಿತ್ಯನ ತದನಂತರ ಮೂರನೇ ಸೋಮೇಶ್ವರ ಅಧಿಕಾರಕ್ಕೆ ಬಂದನೆಂದು ಮದನಬಾವಿ ಶಾಸನ(೧೧೨೭)ದಲ್ಲಿ ತಿಳಿಸುತ್ತದೆ. "ಸಿದ್ದಾಪೂರ ಶಾಸನ(೧೧೩೫) ಚಾಲುಕ್ಯ ಭೂಲೋಕವರಿಸ"[೧೫] ಎಂಬ ಬಿರದು ಹೊಂದಿದ್ದ ಎಂಬುದನ್ನು ಸೂಚಿಸುತ್ತದೆ.

"ಮೂರನೆಯ ಸೋಮೇಶ್ವರ ನಂತರ ಸಿಂಹಾಸನವೇರಿದ ಎರಡನೇ ಜಗದೇಕಮಲ್ಲನು ತುಲಾಪುರುಷ ಅದುದನ್ನು ಅಮ್ಮಿನಬಾವಿ ಶಾಸನ(೧೧೪೬) ತಿಳಿಸುತ್ತದೆ."[೧೬] ಕರ್ನಾಟಕವನ್ನು ಆಳಿದ ಕಲ್ಯಾಣ ಚಾಲುಕ್ಯರು ಧಾರವಾಡ ಪ್ರದೇಶವು ಅವರ ಅಳ್ವಿಕೆಗೆ ಒಳಪಟ್ಟಿತ್ತು ಎಂಬುದು ನಮಗೆ ಅವರ ಕಾಲದಲ್ಲಿ ರಚನೆಯಾದ ಶಾಸನಗಳಿಂದ ತಿಳಿದುಬರುತ್ತದೆ.

ಕಲಚುರಿಗಳು

ಬಿಜ್ಜಳನು ಕಲ್ಯಾಣದ ಚಾಲುಕ್ಯರ ಅರಸನಾದ ಇಮ್ಮಡಿ ತೈಲಪನಿಂದ ಸಾಮ್ರಾಜ್ಯವನ್ನು ಕಿತ್ತುಕೊಂಡು ಸ್ವತಂತ್ರವಾಗಿ ಆಳ್ವಿಕೆ ನಡೆಸಿದನು. ಈ ಮೊದಲು ಬಿಜ್ಜಳನು ಚಾಲುಕ್ಯ ಎರಡನೆಯ ಜಗದೇಕ ಮಲ್ಲನ ಆಳ್ವಿಕೆಯ ಅವಧಿಯಲ್ಲಿ ಸಾಮಂತನಾಗಿದ್ದನು. ಅಲ್ಲದೇ ಮುಮ್ಮಡಿ ತೈಲಪನ ಆಳ್ವಿಕೆಯ ಕಾಲದಲ್ಲಿ ಸೇವೆ ಸಲ್ಲಿಸಿದನು. ಈ ಅವಧಿಯಲ್ಲಿ ಬಿಜ್ಜಳನಿಗೆ ತ್ರಿಬುವನಮಲ್ಲ ಮತ್ತು ನಿಶ್ಯಂಕ ಮಲ್ಲ ಎಂಬ ಬಿರುದುಗಳಿದ್ದವು. ಕಲಚೂರಿಗಳ ಆಳ್ವಿಕೆಯ ಬಗ್ಗೆ ಧಾರವಾಡ ತಾಲೂಕಿನ ರಾಯಪುರದ ತಾಮ್ರಾಪಟ ಶಾಸನ ಸಿಗುತ್ತದೆ.

“ಬಿಜ್ಜಳನ ಮಗ ಅಹವಮಲ್ಲನು ದೇವರ ಹುಬ್ಬಳ್ಳಿ ಬ್ರಾಹ್ಮಣರಿಗೆ ಬೆಲ್ಲವೂರ ಗ್ರಾಮವನ್ನು ದಾನವಾಗಿ ನೀಡಿದ ವಿಷಯವನ್ನು ಉಲ್ಲೇಖಿಸುತ್ತದೆ.”[೧೭]

ದೇವಗಿರಿಯ ಯಾದವರು

ದೇವಗಿರಿಯ ಯಾದವರು ಕಲ್ಯಾಣ ಚಾಲುಕ್ಯರ ನಂತರ ಅಧಿಕಾರಕ್ಕೆ ಬಂದರು. ಇವರು ಆರಂಭದಲ್ಲಿ ರಾಷ್ಟ್ರಕೂಟರ ನಂತರ ಕಲ್ಯಾಣದ ಚಾಲುಕ್ಯರ ಸಾಮಂತರಾಗಿ ಸುಮಾರು ಮೂನ್ನೂರು ವರ್ಷಗಳ ಕಾಲ ಆಳ್ವಿಕೆ ಮಾಡಿದರು. ಕಲ್ಯಾಣ ಚಾಲುಕ್ಯರನ್ನು ಪದಚ್ಯುತಗೊಳಿಸಿ ಕರ್ನಾಟಕದ ಚಕ್ರವರ್ತಿಗಳಾದರು. ಇವರು ಮೊದಲು ನಂದಿನೇರಿ ನಂತರ ದೇವಗಿರಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡರು. ಇವರ ಕುರಿತು ಧಾರವಾಡ ತಾಲೂಕಿನ ಪ್ರಥಮ ಶಾಸನ ಹುಬ್ಬಳ್ಳಿ ಶಾಸನವಾಗಿದೆ.

ಹೊಯ್ಸಳರು

ಕರ್ನಾಟಕದ ಇತಿಹಾಸದಲ್ಲಿ ಹೊಯ್ಸಳರ ಆಡಳಿತವು ಒಂದು ಹೊಸ ಅಧ್ಯಾಯನವನ್ನು ಪ್ರಾರಂಬಿಸಿತು. ಇವರು ಆರಂಭದಲ್ಲಿ ಚೋಳರ ನಂತರ ಕಲ್ಯಾಣದ ಚಾಲುಕ್ಯರ ಸಾಮಂತರಾಗಿದ್ದು, ನಂತರ ಸ್ವತಂತ್ರರಾಗಿ ಆಳ್ವಿಕೆ ಮಾಡಿದರು. ಹೊಯ್ಸಳರಲ್ಲಿ ಪ್ರಸಿದ್ಧರಾದ ಅರಸರುಗಳೆಂದರೆ ವಿಷ್ಣುವರ್ಧನ, ಎರಡನೇ ಬಲ್ಲಾಳ, ಎರಡನೇ ನರಸಿಂಹ, ಸೋಮೇಶ್ವರ ಮತ್ತು ಮೂರನೇ ಬಲ್ಲಾಳ.

ಧಾರವಾಡ ಪರಿಸರದಲ್ಲಿ ಹೊಯ್ಸಳರ ಆಳ್ವಿಕೆಯು ವೀರಬಲ್ಲಾಳನಿಂದ (ಕ್ರಿ.ಶ.೧೧೭೩-೧೨೨೦) ಆರಂಭವಾಗಿತೆಂದು ಕಂಡುಬರುತ್ತದೆ. ಇವನು ತನ್ನ ಆಳ್ವಿಕೆಯ ಅವಧಿಯಲ್ಲಿ ಧಾರವಾಡ ಪರಿಸರದಲ್ಲಿ ಪ್ರಭಾವಿ ವ್ಯಕ್ತಿಯಾಗಿದ್ದನು. ಇವನಿಗೆ ಸಂಬಂಧಿಸಿದ ಸುಮಾರು ೭ ಶಾಸನಗಳು ದೊರೆತಿವೆ.[೧೮] ಹೊಯ್ಸಳರು ತಮ್ಮ ಅವಧಿಯಲ್ಲಿ ಸಮಾಜದಲ್ಲಿ ಜೈನ, ಬೌದ್ಧ, ಶೈವ, ವೈಷ್ಣವ ಹೀಗೆ ಚತುರ್ಥ ಧರ್ಮಕ್ಕೆ ಸಮಾನ ಪ್ರಾಮುಖ್ಯತೆ ನೀಡಿದ್ದನು. ಹೊಯ್ಸಳರು ಕ್ರಿ.ಶ.೧೦೦೦-೧೩೪೬ರವರೆಗೆ ಕರ್ನಾಟಕದಲ್ಲಿ ಆಳ್ವಿಕೆ ಮಾಡಿದರು. ಇವರು ಶಶಕಪುರ, ಬೇಲೂರು, ದ್ವಾರಸಮುದ್ರ(ಇಂದಿನ ಹಳೇಬೀಡು) ಈ ಪ್ರದೇಶಗಳನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಅನುಕ್ರಮವಾಗಿ ಅಳ್ವಿಕೆ ಮಾಡಿದರು.

ವಿಜಯನಗರ ಸಾಮ್ರಾಜ್ಯ

ವಿಜಯನಗರ ಸಾಮ್ರಾಜ್ಯದ ಸ್ಥಾಪನೆ ದಕ್ಷಿಣ ಭಾರತದಲ್ಲಿ ಅದರಲ್ಲಿಯೂ ವಿಶೇಷವಾಗಿ ಕರ್ನಾಟಕ ಇತಿಹಾಸದಲ್ಲಿ ಹೊಸ ಯುಗವನ್ನು ಸೃಷ್ಟಿಸಿತು. ವಿಜಯನಗರದ ಆರಂಭದ ಕಾಲದಲ್ಲಿ ಧಾರವಾಡ ಜಿಲ್ಲೆಯು ಸಾಮ್ರಾಜ್ಯದ ಒಂದು ಭಾಗವಾಗಿತ್ತು. ವಿಜಯನಗರದ ಅರಸರು ಹೊಯ್ಸಳರ

ಸಾಮಂತರಾಗಿದ್ದು, ತದನಂತರ, ಹರಿಹರ ಮತ್ತು ಬುಕ್ಕರು ವಿಜಯನಗರ ಸಾಮ್ರಾಜ್ಯವನ್ನು ಸ್ವಾತಂತ್ರವಾಗಿ ಸ್ಥಾಪಿಸಿದರು. ವಿಜಯನಗರ ಸಾಮ್ರಾಜ್ಯವು ಭಾರತದ ಇತಿಹಾಸದಲ್ಲಿ ಕಟ್ಟ ಕಡೆಯ ಹಿಂದೂ ಸಾಮ್ರಾಜ್ಯವಾಗಿತ್ತು. ವಿಜಯನಗರ ಸಾಮ್ರಾಜ್ಯವು ಕ್ರಿ.ಶ.೧೩೩೬ರಲ್ಲಿ ಅಧಿಕಾರಕ್ಕೆ ಬಂದಿತು. ೧೬೭೪ರವರೆಗೆ ಆಳ್ವಿಕೆ ಮಾಡಿತು. ವಿಜಯನಗರ ಸಾಮ್ರಾಜ್ಯವನ್ನು ಪ್ರಮುಖವಾಗಿ ನಾಲ್ಕು ಸಂತತಿಗಳು ಅನುಕ್ರಮವಾಗಿ ಆಳ್ವಿಕೆ ಮಾಡಿದರು. ಅವುಗಳೆಂದರೆ ಸಂಗಮ, ಸಾಳ್ವ, ತುಳುವ, ಅರವೀಡು, ಆಳ್ವಿಕೆ ಮಾಡಿದವು.

ಸಂಗಮ ವಂಶದ ಪ್ರಸಿದ್ಧ ಅರಸನಾದ ಪ್ರೌಢದೇವರಾಯ ಅಥವಾ ಇಮ್ಮಡಿ ದೇವರಾಯನ ಆಳ್ವಿಕೆಯ ಕೆಲವು ಶಾಸನಗಳು ಈ ಪ್ರದೇಶದಲ್ಲಿ ದೊರೆತಿವೆ. "ಕ್ರಿ.ಶ.೧೪೪೪ರಲ್ಲಿ ದೇವರಾಯನ ಮಗ ಮಲ್ಲಿಕಾರ್ಜುನ ಮಹಾರಾಯನ ಸಿಂಹಾಸನಾರೋಹಣದ ಸವಿನೆನಪಿಗಾಗಿ ಧಾರವಾಡದಲ್ಲಿ ನಂದಿಸ್ತಂಭವನ್ನು ಪ್ರತಿಷ್ಠಾಪಿಸಿ ನರೇಂದ್ರಪುರ, ಕಂಬಾಲಪುರ, ಬಮ್ಮರಸಿ, ಕೊಪ್ಪಗಳನ್ನು ದೇವರಿಗೆ ದತ್ತಿಯಾಗಿ ನೀಡಿದ ಬಗ್ಗೆ ಉಲ್ಲೇಖವಿದೆ."[೧೯] ವಿಜಯನಗರ ಸಾಮ್ರಾಜ್ಯವನ್ನು ಆಳಿದ ನಾಲ್ಕು ಸಂತತಿಗಳಲ್ಲಿ ತುಳು ವಂಶದ ಆಳ್ವಿಕೆಯು ಪ್ರಮುಖವಾಗಿದೆ. ತುಳುವಂಶಸದ ನರಸನಾಯಕನ ಮಗನಾದ ಕೃಷ್ಣದೇವರಾಯನು ಉತ್ತಮವಾದ ಆಡಳಿತವನ್ನು ನಡೆಸಿದನು. ತದನಂತರ ಸಹೋದರ ಅಚ್ಚುತರಾಯನ ಆಳಿದನು. ಅವನ ನಂತರ ಸಹೋದರನ ಮಗ ಸದಾಶಿವರಾಯನು ಆಳಿದನು. ಸದಾಶಿವರಾಯ ನಾಮಮಾತ್ರನಾಗಿದ್ದರಿಂದ ಕೃಷ್ಣದೇವರಾಯನ ಅಳಿಯನಾದ ರಾಮರಾಯನು ಆಡಳಿತದ ಮೇಲೆ ನಿಯಂತ್ರಣ ಹೊಂದಿದ್ದನು. ಈ ಅವಧಿಯಲ್ಲಿ ಧಾರವಾಡ ಜಿಲ್ಲೆಯ ಗುಡಿಸಾಗರ "ಅಮ್ಮಿನಬಾವಿ ದೇವರ ಹುಬ್ಬಳ್ಳಿ ಬೆಳವಟಿಗೆಯ ಕ್ರಿ.ಶ.೧೫೪೭ರ ಶಾಸನಗಳು ನಾವಿಂದರ ತೆರಿಗೆ ಅಂದರೆ ಕ್ಷೌರಿಕರಿಗೆ ವಿನಾಯಿತಿ ನೀಡಿದ ಬಗ್ಗೆ ಶಾಸನಗಳು ತಿಳಿಸಿವೆ."[೨೦] ೧೫೬೩ರಲ್ಲಿ ವಿಜಯನಗರದ ಅರಸ ಅಳಿಯ ರಾಮರಾಯನಿಗೂ ಬಹುಮನಿ ಸುಲ್ತಾನರ ಶಾಹಿಸುಲ್ತಾನರ ಮಧ್ಯೆ ನಡೆದ 'ರಕ್ಕಸತಂಗಡಗಿ' ಎಂಬ ಸ್ಥಳದಲ್ಲಿ ಯುದ್ಧ ನಡೆಯಿತು. ಈ ರಕ್ಕಸ ತಂಗಡಗಿ ಯುದ್ಧದಲ್ಲಿ ಅಳಿಯ ರಾಮರಾಯನು ಪರಾಭವಗೊಂಡು ಮರಣಹೊಂದಿದನು. ಈ ಯುದ್ಧದಲ್ಲಿ ಸುಲ್ತಾನರ ವಿಜಯದೊಂದಿಗೆ ಧಾರವಾಡ ಜಿಲ್ಲೆಯು ಆದಿಲ್ ಶಾಹಿಗಳ ಅಧಿಕಾರಕ್ಕೆ ಒಳಪಟ್ಟಿತು.

ಬಹುಮನಿ ಸುಲ್ತಾನರು

ವಿಜಯನಗರ ಸಾಮ್ರಾಜ್ಯವು ೧೩೩೬ರಲ್ಲಿ ಸ್ಥಾಪನೆಯಯಾಯಿತು. ವಿಜಯನಗರ ಸಾಮ್ರಾಜ್ಯವು ಹಿಂದೂ ಧರ್ಮದ ರಕ್ಷಣೆಗಾಗಿ ತಲೆ ಎತ್ತಿದ್ದ ಕಟ್ಟಕಡೆಯ ಹಿಂದೂ ರಾಜಮನೆತನವಾಗಿತ್ತು. ಇದೇ ಸಮಯದಲ್ಲಿ ಕ್ರಿ.ಶ.೧೩೪೭ ರಂದು ಗುಲ್ಬರ್ಗಾದಲ್ಲಿ ಬಹುಮನಿ ಸಾಮ್ರಾಜ್ಯ ಸ್ಥಾಪನೆಯಾಯಿತು. ಬಹುಮನಿ ಸಾಮ್ರಾಜ್ಯವು ೧೩ನೇ ಶತಮಾನದಲ್ಲಿ ಕರ್ನಾಟಕ ಮುಸ್ಲಿಂರ ಆಳ್ವಿಕೆ ಪ್ರಬಲವಾಗಿ

ಬೇರೂರಿತು. ಬಹುಮನಿ ಸಾಮ್ರಾಜ್ಯದ ಸ್ಥಾಪಕ ಅಲ್ಲಾವುದ್ದೀನ್ ಹಸನಗಂಗು ಬಹುಮನ್ ಷಾ. ವಿಜಯನಗರದ ಅರಸರಿಗೂ ಬಹುಮನಿ ಸುಲ್ತಾನರಿಗೂ ಸತತ ಅಥವಾ ನಿರಂತರ ಯುದ್ಧಗಳು ನಡೆದವು.

ಕ್ರಿ.ಶ.೧೪೦೬ರಲ್ಲಿ ಬಹುಮನಿ ಸುಲ್ತಾನ ಫಿರೋಜನು ಬಂಕಾಪುರವನ್ನು ವಿಜಯನಗರದಿಂದ ವಶಪಡಿಸಿಕೊಂಡ ಎಂಬ ಬಗ್ಗೆ ಆಧಾರಗಳು ದೊರೆಯದಿದ್ದರೂ ಬಂಕಾಪುರದಲ್ಲಿ ವಿಜಯನಗರ ಸಾಮ್ರಾಜ್ಯದ ಶಾಸನಗಳು ಲಭ್ಯವಾಗಿಲ್ಲದ್ದರಿಂದ ಬಂಕಾಪುರ ಬಹುಮನಿ ಸುಲ್ತಾನರ ಆಡಳಿತದಲ್ಲಿ ಇತ್ತು ಎಂಬುದು ತಿಳಿದುಬರುತ್ತದೆ.

ಬಿಜಾಪುರದ ಆದಿಲ್ ಷಾಹಿಗಳು

ವಿಜಯನಗರ ಪತನದ ನಂತರ ಬಹುಮನಿ ಸುಲ್ತಾನರು ಐದು ಶಾಹಿವಂಶಗಳಾಗಿ ಸ್ವತಂತ್ರಗೊಂಡರು. ಅದರಲ್ಲಿ ಬಿಜಾಪುರ ಆದಿಶಾಹಿಗಳು ಕೂಡ ಒಬ್ಬರು. ಬಿಜಾಪುರದ ಆದಿಲ್ ಶಾಹಿಗಳು ಕ್ರಿ.ಶ.೧೫೭೩ರಲ್ಲಿ ಧಾರವಾಡ ಜಿಲ್ಲೆಯನ್ನು ವಶಪಡಿಸಿಕೊಂಡರು. ಧಾರವಾಡ ಪಟ್ಟಣವನ್ನು ಶಿವರಖಾನ ಕ್ರಿ.ಶ.೧೫೬೭ರಲ್ಲಿ ಕಟ್ಟಿದ ಎಂದು ಜುಬೇರಿ ಹೇಳೀದ್ದಾನೆ.

ಧಾರವಾಡ ಜಿಲ್ಲೆಯು ಮೊಘಲರ, ಮರಾಠರ, ಬ್ರಿಟಿಷರ ಆಳ್ವಿಕೆಗೆ ಒಳಪಟ್ಟ ಪ್ರದೇಶವಾಗಿತ್ತು. “೧೬೯೦ರಲ್ಲಿ ಔರಂಗಜೇಬನು ಷೇಕದಾವುದ ಎಂಬ ಮುಲ್ಲಾನಿಗೆ ನೀಡಿದ ಒಂದು ಭೂದಾನ ಪತ್ರದಲ್ಲಿ ಧಾರವಾಡ ಮಾಳಪುರ, ಬಿಜಾಪುರಕ್ಕೆ ಸೇರಿತ್ತು ಎಂಬ ಉಲ್ಲೇಖವಿದೆ.”

ಔರಂಗಜೇಬನ ಕಾಲದಲ್ಲಿ ಕ್ರಿ.ಶ.೧೬೯೨ರಲ್ಲಿ ಸಿಯಾಲ್‌ಖಾನನ ನಂತರ ಅಲಾಧಖಾನ್, ಮೊಹಿನಉದ್ದೀನ ಕಲಂದರಖಾನ ಮುಂತಾದವರು ಇದ್ದರೆಂದು ಕೈಫಿಯತ್ ಉಲ್ಲೇಖಿಸುತ್ತದೆ.

ಮರಾಠರ ಆಳ್ವಿಕೆ

ಧಾರವಾಡವನ್ನು ಆದಿಲ್ ಶಾಹಿಗಳ ನಂತರ ಮರಾಠರ ಪೇಶ್ವೆಗಳು ಪಟವರ್ಧನರರು ಆಳ್ವಿಕೆ ಮಾಡುತ್ತಿದ್ದರು. ಹೀಗಾಗಿ ಧಾರವಾಡವು ಮರಾಠಿ ಭಾಷೆಯಿಂದ ಕೂಡಿತ್ತು. ಆಗ ದಕ್ಷಿಣ ವಿಭಾಗ(ದೋಅಬ್) ಅಂದರೆ ಈಗಿರುವ ಧಾರವಾಡ, ಬಿಜಾಪುರ, ಬೆಳಗಾವಿ, ಕಾರವಾರ, ರತ್ನಗಿರಿ, ಕುಲಾಬಾ ಜಿಲ್ಲೆಗಳು ಮರಾಠಿ ಭಾಷೆಯಿಂದ ಕೂಡಿದ್ದವು. ಧಾರವಾಡವನ್ನು ೧೮೧೮ರಲ್ಲಿ ಬ್ರಿಟಿಷರು ವಶಪಡಿಸಿಕೊಂಡರು. ಆಗ ಮರಾಠಿ ಭಾಷೆ “ದಕ್ಷಿಣ ವಿಭಾಗವು ಬ್ರಿಟಿಷರಿಂಧ ‘ದಕ್ಷಿಣಾ ಮರಾಠಾ’ ಪ್ರದೇಶವೆಂದು ಗುರುತಿಸಲ್ಪಟ್ಟಿತು.”[೨೧] ೧೮೩೦ರ ಸುಮಾರಿಗೆ ಪ್ರೊಸಸ್ಟೆಂಟ್ ಮಿಶನರಿಗಳು ಧಾರವಾಡವನ್ನು ಪ್ರವೇಶಿಸಿದರು. ೧೮೩೫ರ ಸುಮಾರಿಗೆ ಕ್ರೈಸ್ತಮಿಶನರಿಗಳಾದ ಬಾಸೆಲ್ ಮಿಶನರಿಗಳು ಧಾರವಾಡಕ್ಕೆ ಸ್ವಾಮುಯಲ್ ಹೆಬಿಕ್‌ರ ಆಗಮನದಿಂದ ಪ್ರಾರಂಭವಾಯಿತು.

[illegible]

೨.೨. ಮಿಶನರಿಗಳು ಹಿನ್ನೆಲೆ

ಯೇಸುಕ್ರಿಸ್ತನ ಶುಭವರ್ತಮಾನವನ್ನು ಎಲ್ಲೆಡೆಗಳಲ್ಲಿಯೂ ಹಬ್ಬಿಸಬೇಕೆಂಬ ಬಲದಿಂದ ತನ್ನ ಪ್ರಾಣವನ್ನು ಪಣಕ್ಕಿಟ್ಟು ಹೆಣಗಾಡಿದ ಪಾಲನೆಂಬ ಭಕ್ತನ ಚರಿತ್ರೆಯನ್ನು ಬೈಬಲ್ ನಲ್ಲಿ ಬರೆದಿಡಲಾಗಿದೆ. “ಕ್ರೈಸ್ತಮತದ ಧರ್ಮಪ್ರಸಾರಣೆಗೆ ಹೋದವರನ್ನು ‘ಮಿಶನರಿಗಳು’ ಎಂದು ಕರೆಯುವರು”[೨೨]

“ಹೊಗಿರಿ, ಪ್ರಪಂಚದ ತುಂಬಾ ಹೋಗಿರಿ, ಏಸುವಿನ ದಿವ್ಯ ವಚನಗಳನ್ನು
ಎಲ್ಲೆಡೆಗೂ ಸಾರಿರಿ “ಅದೆಂಥ ಅದ್ಭುತ ಶಕ್ತಿ ಈ ವಾಕ್ಯಗಳಲ್ಲಿ?
ಹಲವಾರು ವ್ಯಕ್ತಿಗಳ ಅಂತರಾಳವನ್ನೇ ಈ ವಾಕ್ಯಗಳು ಕಲಕಿದವು.
ಅವರ ಅಂತರಾಳದಲ್ಲಿ ಅವು ನೆಲೆಯೂರಿದವು. ವ್ಯಕ್ತಿಗಳು ಶಕ್ತಿಗಳಾದರು
ಕ್ರೈಸ್ತ ಮತ ಪ್ರಚಾರದ ಪಂಜನ್ನು ಹಿಡಿದುಕೊಂಡು ಎಲ್ಲೆಡೆಗೂ ಸಾಗಿದರು
ಅವರೇ ಆ ಮಿಶನರಿಗಳು”[೨೩]

ಈ ಮೇಲಿನ ವಾಕ್ಯಗಳನ್ನು ಅವಲೋಕಸಿದಾಗ ಕ್ರೈಸ್ತ ಮತ ಪ್ರಚಾರ ಪಂಜನ್ನು ಹಿಡಿದುಕೊಂಡು ಪ್ರಪಂಚದ ತುಂಬೆಲ್ಲಾ ಪ್ರಚಾರ ಮಾಡುವವರೇ ಮಿಶನರಿಗಳು ಎಂಬರ್ಥವನ್ನು ಸೂಚಿಸುತ್ತದೆ. ಆದರೆ ಮಿಷನ್ ಎಂಬ ಪದಕ್ಕೆ ಸಮಾನವಾದ ಅರ್ಥವೆಂದರೆ ‘ಜೀವನದ ಧ್ಯೇಯ’ ಎಂಬ ಪದ ಬಳಸುವರು. ಧಾರ್ಮಿಕ ಸುಧಾರಣೆ ಮತ್ತು ಪ್ರತಿಸುಧಾರಣೆಯ ನಂತರ ಯೂರೋಪಿನ ಯುವಕ-ಯುವತಿಯರು ಸ್ವಯಂ ಪ್ರೇರಿತರಾಗಿ ತಮ್ಮ ಬೋಗ ಜೀವನವನ್ನು ತ್ಯಾಗ ಮಾಡಿ ಧರ್ಮ ಸೇವೆಯಲ್ಲಿ ತೊಡಗುವ ಧ್ಯೇಯ ಹೊಂದಿದವರಾಗಿರುತ್ತಾರೆ. ಇದು ಮಿಷನ್ ಎಂಬ ಪದಕ್ಕೆ ಜೀವನ ಧ್ಯೇಯ ಎಂಬ ಅರ್ಥ ಬರಲು ಕಾರಣವಾಗಿದೆ.

ಒಟ್ಟಿನಲ್ಲಿ ಯೇಸುಕ್ರಿಸ್ತನ ಉಪದೇಶ ಹಾಗೂ ಸುವಾರ್ತೆಗಳನ್ನು ಸಾರಿ ಧರ್ಮ ಪ್ರಚಾರದ ಕಾರ್ಯಗಳಲ್ಲಿ ತೊಡಗಿದವರನ್ನು ಮಿಶನರಿಗಳೂ ಎಂದು ಕರೆಯುವರು. ಮಿಶನರಿಗಳ ಕುರಿತು ಅಧ್ಯಯನ ಮಾಡಿದ ಸಂಶೋಧಕರಾದ ವರದರಾಜ ಹುಯಿಲ್‌ಗೊಳ ಮತ್ತು ಎಡ್ವಿನೊರೊರವರು ಈ ರೀತಿ ಅಭಿಪ್ರಾಯ ಪಟ್ಟಿದ್ದಾರೆ. “ಕ್ರೈಸ್ತಧರ್ಮದ ಪ್ರಚಾರದ ಪ್ರಧಾನ ಉದ್ದೇಶವನ್ನು ಇಟ್ಟುಕೊಂಡು ಕ್ರೈಸ್ತರೇತರರ ನಡುವೆ ಕೆಲಸ ಮಾಡುವುದೇ ಮಿಶನರಿ” ಎಂದು ತಿಳಿಯುವುದು.

ಈ ಮೇಲಿನ ವಾಕ್ಯವು ಮಿಶನರಿ ಎಂಬ ಅರ್ಥವನ್ನು ತಿಳಿಸುತ್ತದೆ. ಕ್ರೈಸ್ತಧರ್ಮ, ಭಾರತಕ್ಕೆ ಹೇಗೆ ಪ್ರವೇಶವಾಯಿತು. ಕರ್ನಾಟಕಕ್ಕೆ ಹೇಗೆ ಪಾದಾರ್ಪಣೆ ಮಾಡಿತು. ಜೊತೆಗೆ ನಂತರ ಚರ್ಚುಗಳು ಹೇಗೆ ರಚನೆಯಾದವು ಎಂಬುದನ್ನು ತಿಳಿಯುವುದು ಈ ಪ್ರಸ್ತುತ ಅಧ್ಯಾಯದ ಉದ್ದೇಶವಾಗಿದೆ.

ಕ್ರೈಸ್ತಧರ್ಮ ಪ್ರಪಂಚದ ಪ್ರಮುಖ ಧರ್ಮಗಳಲ್ಲಿ ಒಂದಾಗಿದೆ. ಯೇಸು ಕ್ರೈಸ್ತರ ಉಪದೇಶದ ಆಧಾರದ ಮೇಲೆ ಈ ಧರ್ಮವು ಬೆಳೆದು ಬಂದಿದೆ. ಈ ಧರ್ಮವನ್ನು ಅನುಸರಿಸುವವರನ್ನು

ಕ್ರೈಸ್ತರೆನ್ನಲಾಗುತ್ತದೆ. ಕ್ರೈಸ್ತ ಎಂಬ ಪದಕ್ಕೆ ಹಲವಾರು ಅರ್ಥಗಳನ್ನು ನೀಡಲಾಗುತ್ತದೆ. ಅವುಗಳಲ್ಲಿ ಮಾನವತಾವಾದಿ, ತೆರೆದ ಮನಸ್ಸಿನ ವಿಶಾಲ ಹೃದಯಿ, ಶುದ್ಧಮನಸ್ಕ ಎಂಬ ಪದವನ್ನು ಹೆಚ್ಚಾಗಿ ಬಳಸಲಾಗುತ್ತದೆ. "೨೦೦೦ ವರ್ಷಗಳ ಹಿಂದೆ ಪ್ಯಾಲಸ್ಟೈನ್ ದೇಶದಲ್ಲಿ ಈ ಧರ್ಮ ಆರಂಭವಾಗಿ ಈಗ ಪ್ರಪಂಚದಲ್ಲೆಡೆ ಹಬ್ಬಿಕೊಂಡಿರುವ ಕ್ರೈಸ್ತ ಧರ್ಮ ಸುಮಾರು ೮.೫೦ ದಶಲಕ್ಷ ಮತಾನುಯಾಯಿಗಳನ್ನು ಒಳಗೊಂಡಿದೆ."[೨]

ಈ ಹಿನ್ನೆಲೆಯಲ್ಲಿ ಕ್ರೈಸ್ತಧರ್ಮದ ತಿರುಳು ಧರ್ಮಸಭೆಯ ಆಡಳಿತ ವ್ಯವಸ್ಥೆ, ಭಾರತದಲ್ಲಿ ಹರಡಿದ ಬಗ್ಗೆ ನಂತರ ಕರ್ನಾಟಕದಲ್ಲಿ ಮಿಶನರಿಗಳು ಹೇಗೆ ಧರ್ಮಪ್ರಚಾರ ಕಾರ್ಯದಲ್ಲಿ ತೊಡಗಿದರು. ಧಾರವಾಡದಲ್ಲಿ ಹೇಗೆ ಕ್ರೈಸ್ತಮಿಶನರಿಗಳು ಪ್ರಚಾರ ಕಾರ್ಯವನ್ನು ಮುಂದುವರೆಸಿಕೊಂಡು ಬಂದರು ಎಂಬುದನ್ನು ಈ ಪ್ರಸ್ತುತ ಅಧ್ಯಾಯದಲ್ಲಿ ತಿಳಿಯಬಹುದಾಗಿದೆ.

ಕ್ರೈಸ್ತ ಧರ್ಮದ ಪವಿತ್ರಗ್ರಂಥ ಬೈಬಲ್, ಬೈಬಲ್ ಗ್ರಂಥದಲ್ಲಿ ಇರುವ ತಿರುಳನ್ನು, ತಾತ್ವಿಕತೆಯನ್ನು ತಿಳಿಸುವುದು ಮಿಶನರಿಗಳ ಉದ್ದೇಶವಾಗಿದೆ. ಬೈಬಲನಲ್ಲಿ ೨ ಭಾಗಗಳಿವೆ ಒಂದು ಹೊಸ ಒಡಂಬಡಿಕೆ ಮತ್ತೊಂದು ಹಳೆಯ ಒಡಂಬಡಿಕೆ. ಹಳೆಯ ಒಡಂಬಡಿಕೆಯು ಯೇಸುವಿನ ಪೂರ್ವದ ಜೀವನದ ವೃತ್ತಾಂತವನ್ನು ತಿಳಿಸುತ್ತದೆ. ಹೊಸ ಒಡಂಬಡಿಕೆಯು ಯೇಸುವಿನ ಜೀವನ ಮತ್ತು ಆತನ ಬೋಧನೆ, ಯೇಸುವಿನ ಅಪೋಸಲ್ಸ್‌ರಲ್ಲಿ ಒಬ್ಬನಾದ ಪಾಲನ ಬಗ್ಗೆ ತಿಳಿಸುತ್ತದೆ.

ಮಿಶನರಿ ಎಂಬುದು ಆಂಗ್ಲ ಪದವಾದ ಮಿಷನಿಂದ ಉದ್ಭವಿಸಿದೆ. ಈ ಆಂಗ್ಲ ಪದದ ಕನ್ನಡದ ಅರ್ಥ ಧರ್ಮಪ್ರಚಾರಕ, ಧರ್ಮಬೋಧನೆ ಅಥವಾ ಪಾದ್ರಿ ಎಂಬ ಅರ್ಥವನ್ನು ಹೊಂದಿದೆ.

ಪಂಥಗಳು

ರೋಮನ್ ಸಾಮ್ರಾಜ್ಯದ ಅರಸನಾದ ಕಾನ್‌ಸ್ಟೆಂಟೈನ ಎಂಬಾತ ೩೧೨ರಲ್ಲಿ ಕ್ರೈಸ್ತ ಧರ್ಮ ರೋಮನ್ ಸಾಮ್ರಾಜ್ಯದ ಅಧಿಕೃತ ಧರ್ಮವೆಂದು ಸಾರಿದನು. ಇದರ ಫಲವಾಗಿ ಹೆಚ್ಚು ಜನರು ಕ್ರೈಸ್ತಧರ್ಮವನ್ನು ಸ್ವೀಕರಿಸಿದರು. ಯುರೋಪ್ ಖಂಡದ ಸಂಸ್ಕೃತಿಯ ಮೇಲೆ ಕ್ರೈಸ್ತಧರ್ಮದ ತತ್ವಗಳು ಹೆಚ್ಚು ಪ್ರಭಾವ ಬೀರಿದವು. ಅಂದಿನಿಂದ ಇಂದಿನವರೆಗಿನ ಶತಮಾನಗಳಲ್ಲಿ ಈ ಧರ್ಮ ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ಪ್ರಚಾರಗೊಂಡು ಆ ಪ್ರದೇಶ ಸಾಂಸ್ಕೃತಿಕ ಹಿನ್ನೆಲೆಗಳಿಗೆ ಅನುಗುಣವಾಗಿ ಬೆಳೆಯುತ್ತಾ ಬಂದಿದೆ.

ಜಾಗತಿಕ ಕ್ರೈಸ್ತ ಸಭೆಯಲ್ಲಿ ಮೂರು ಮುಖ್ಯ ವಿಭಾಗಗಳಿವೆ.

೧. ರೋಮನ್ ಕ್ಯಾಥೋಲಿಕ್ ಸಭೆ

೨. ಪೌರ್ವಾತ್ಯ ಸಾಂಪ್ರದಾಯಿಕ ಸಭೆ

೩. ಪ್ರಾಟೆಸ್ಟೆಂಟ್ ಸಭೆ

ಈ ಮೂರು ವಿಭಾಗಗಳಿಗೂ ಪಂಗಡಗಳಿಗೂ ಕ್ರೈಸ್ತ ತತ್ವದ ತಿರುಳಿನಲ್ಲಿ ಮತ್ತು ಮುಖ್ಯವಾಗಿ ಯೇಸುಕ್ರಿಸ್ತನನ್ನು ಕುರಿತು ನಂಬಿಕೆಗಳಿದ್ದ ಸಂಸ್ಕಾರಗಳನ್ನು ಆಚರಿಸುವುದರಲ್ಲಿ ಭಿನ್ನಾಭಿಪ್ರಾಯ ಹೊಂದಿವೆ.

೧. ರೋಮನ್ ಕ್ಯಾಥೋಲಿಕ ಸಭೆ

ರೋಮ ನಗರದಲ್ಲಿರುವ ಪೋಪನ ಸರ್ವಾಧಿಕಾರವನ್ನು ಮನ್ನಿಸುವ ಈ ಸಭೆಯಲ್ಲಿ ಸು.೪೨೩ ದಶಲಕ್ಷ ಸದಸ್ಯರಿದ್ದಾರೆ. ಕೆಥೊಲಿಕ್ ಎಂಬ ಗ್ರೀಕ್ ಪದದ ಮೂಲ ಅರ್ಥ ಸಾರ್ವತ್ರಿಕ ಎಂದರ್ಥ. ಇಗ್ನೆಷಿಯಸ್ ಎಂಬ ಸಭಾಪಿತೃ ೧೧೫ರಲ್ಲಿ ಬರೆದ ಒಂದು ಪತ್ರದಲ್ಲಿ ಈ ಪದವನ್ನು ಮೊದಲು ಉಪಯೋಗಿಸಿದ. ಆತನ ಅಭಿಪ್ರಾಯದ ಮೇರೆಗೆ ಎಲ್ಲಿ ಕ್ರಿಸ್ತನಿದ್ದಾನೋ ಅಲ್ಲಿ ಸಾರ್ವತ್ರಿಕ ಕ್ರೈಸ್ತತ್ತ್ವಸಭೆಯಿದೆ. ಅದು ಸಭೆಯ ಸತ್ವ ಪರೀಕ್ಷೆಯ ಕಾಲವಾಗಿದ್ದರಿಂದ ತನ್ನ ಸಂದೇಶದ ತಿರುಳು ಹಾಗೂ ಆಡಳಿತ ಕ್ರಮ ಭಿನ್ನಾಭಿಪ್ರಾಯ ಕಾಪಾಡಿಕೊಳ್ಳುವ ಅಗತ್ಯ ಇದ್ದುದರಿಂದ, ಪಾಶ್ಚಾತ್ಯ ರಂಗದಲ್ಲಿ ಕ್ಯಾಥೋಲಿಕ್ ಸಭೆ ಬೆಳೆದುಬಂತು.

ಕ್ಯಾಥೋಲಿಕ ಸಭಾತತ್ವದಲ್ಲಿ ೩ ಮುಖ್ಯವಾದ ವಿಷಯಗಳು ಅಡಕವಾಗಿವೆ. ಮೊದಲನೆಯದಾಗಿ ರೋಮ್ ನಗರದಲ್ಲಿ ಅಪೋಸಲ್‌ನಾದ ಪೀಟರ್ ಬಿಷಪ್ ಆಗಿದ್ದ ಎಂಬ ಅಭಿಪ್ರಾಯ ಆಧಾರಿಸಿ ಪಾರಂಪರಿಕನಾಗಿ ಬಿಷಪರ ಆಡಳಿತದ ಸ್ವೀಕಾರವಾದವರು. ನಂತರ ಪೋಪರ ಸ್ಥಾನಮಾನವನ್ನು ಅಧಿಕಾರವನ್ನು ಧಾರ್ಮಿಕ ಮಾನ್ಯತೆಯನ್ನು ರೂಪಿಸಿ ಬಲಪಡಿಸಿತು. ಎರಡನೆಯದು ಬೈಬಲಗ್ರಂಥ ಮತ್ತು ಸಭೆಯ ಸಾಂಪ್ರದಾಯಿಕ ಬೋಧನೆಗಳು, ಸಭೆಯ ತತ್ತ್ವನಿರೂಪಣೆಗೆ ಮೂಲವು, ಬೋಧನಾ ಶುದ್ಧತೆ ಪ್ರಮಾಣಗಳೇ ಆಗಿವೆ. ಮೂರನೆಯದು ಸರ್ವಸಭಾಂಗೀಕೃತವಾಗಿದ್ದು ಕ್ರೈಸ್ತಬೋಧನೆಯ ಸಾರಾಂಶವನ್ನು ಒಳಗೊಂಡಿರುವ ವಿಶ್ವಾಸ ಪ್ರಮಾಣಗಳು. ಈ ಸಭೆಯಲ್ಲಿ ಯೇಸುವಿನ ಮಾತೆಯಾದ ಮೇರಿಗೆ ಹೆಚ್ಚಿನ ಪ್ರಾಧಾನ್ಯತೆಯಿದೆ.

೨. ಪೌರ್ವಾತ್ಯ ಸಾಂಪ್ರದಾಯಿಕ ಸಭೆ

ಪೌರ್ವಾತ್ಯ ದೇಶಗಳು ಅಂದರೆ ಪ್ಯಾಲಸ್ಟೇನ್, ಸಿರಿಯಾ, ಇಥಿಯೋಪಿಯಾ, ಭಾರತ, ಗ್ರೀಸ್, ರಷ್ಯಾ ಮುಂತಾದಗಳಲ್ಲಿ ಹಬ್ಬಿಕೊಂಡಿರುವ ಸಾಂಪ್ರದಾಯಿಕ ಸಭೆಯಾಗಿದೆ. ರೋಮ ನಗರದಲ್ಲಿ ಕ್ರೈಸ್ತರು ನೆಲೆಸುವ ಮುಂಚೆಯೇ ಈ ದೇಶಗಳಲ್ಲಿ ಕ್ರೈಸ್ತ ಸಭೆಗಳು ಇದ್ದವೆಂದು ತಿಳಿದುಬರುತ್ತದೆ. ರೋಮನಗರದಲ್ಲಿರುವ ಕೇಂದ್ರಿಕೃತವಾದ ಪಾಶ್ಚಾತ್ಯ ರೋಮನ್, ಕ್ಯಾಥೊಲಿಕ್ ಸಭೆಗೂ ಈ ತಾತ್ವಿಕ, ಭೌಗೋಳಿಕ ವ್ಯತ್ಯಾಸಗಳಿವೆ. ಕ್ರೈಸ್ತರ ೭ ಸಂಸ್ಕಾರಗಳಲ್ಲಿ ಪ್ರಾಟಸ್ಟೆಂಟರು ೨ ಸಂಸ್ಕಾರಗಳನ್ನು ಒಪ್ಪಿಕೊಂಡರು. ಕ್ಯಾಥೊಲಿಕ್ ೫ ಸಂಸ್ಕಾರಗಳನ್ನು ಸ್ವೀಕರಿಸುತ್ತಾರೆ. ಕ್ಯಾಥೋಲಿಕರು ಬೇರೆ ಬೇರೆ

[illegible]

ದೇಶಗಳಿಗೆ ಹೋಗಿ ಸುವಾರ್ತಾ ಪ್ರಚಾರ ಮಾಡುವ ಕೆಲಸಕ್ಕೆ ಹೆಚ್ಚು ಆದ್ಯತೆಯನ್ನು ನೀಡಲಿಲ್ಲ. ಆದರೆ ದಕ್ಷಿಣ ಭಾರತಕ್ಕೆ ಸುವಾರ್ತೆಯನ್ನು ತಂದು ಕೇರಳದ ಕ್ರೈಸ್ತ ಸಭಾಸ್ಥಾಪನೆಗೆ ಕಾರಣರಾದರು.

೩. ಪ್ರಾಟೆಸ್ಟೆಂಟ್ ಸಭೆಗಳು

ಪ್ರಾಟೆಸ್ಟೆಂಟ್ ಸಭೆಗಳ ಪಿತಾಮಹ ಮಾರ್ಟಿನ್ ಲೂಥರ್ (೧೪೮೩-೧೫೪೬). ಇತನು ಜರ್ಮನಿ ದೇಶದಲ್ಲಿ ಧರ್ಮಸುಧಾರಣೆಯನ್ನು ಆರಂಭಿಸಿದ. ಮಾರ್ಟಿನ್ ಲೂಥರನು ಬಹುಧೈರ್ಯದಿಂದ ಸಾರಿದ ಧಾರ್ಮಿಕ ಸ್ವಾತಂತ್ರ್ಯ ಚಳುವಳಿಯು ಬಹಳ ಬೇಗ ಯೂರೋಪನಲ್ಲಿ ಅಷ್ಟೇ ಅಲ್ಲ ಇತರ ದೇಶಗಳಲ್ಲೂ ಹರಡಿತು. ಲೂಥರನು ಮೊದಲು ಕ್ಯಾಥೊಲಿಕ್ ಧರ್ಮದ ಸಂನ್ಯಾಸಿಯಾಗಿದ್ದನು. ಜರ್ಮನಿಯ ವಿಶ್ವವಿದ್ಯಾಲಯವೊಂದರಲ್ಲಿ ಮತಧರ್ಮಶಾಸ್ತ್ರದ ಪ್ರಾಧ್ಯಾಪಕನೂ ಆಗಿದ್ದ. ಪ್ರಾಟೆಸ್ಟೆಂಟ್ ಧರ್ಮ(ಸಭೆ) ಅಸ್ತಿತ್ವಕ್ಕೆ ಬರಲು ಲೂಥರ ಬಳಸಿದ ಪ್ರಮುಖ ಸೂತ್ರಗಳೆಂದರೆ, ಕ್ರಿಸ್ತನ ಬೋಧನೆಗೂ ಜೀವಿತಕ್ಕೂ ಬೈಬಲ್ ಅಲ್ಲದೇ ಬೇರೆ ಯಾವ ಮೂಲ ಆಧಾರವಾಗಲೀ ಇಲ್ಲ. ದೇವರ ವ್ಯಾಕ್ಯವಾದ ಬೈಬಲಿಗೆ ವಿರೋಧವಾಗಿ ಹೋಗುವ ಯಾವ ವಿಷಯಗಳನ್ನು ಸ್ವೀಕರಿಸಲಾಗುವುದಿಲ್ಲ. ಪಾಪಿ ಮಾನವನಿಗೆ ರಕ್ಷಣೆ ದೊರಕುವುದು ಪುಣ್ಯಕಾರ್ಯಗಳಿಂದಲ್ಲ, ಕೇವಲ ಭಕ್ತಿಯಿಂದ. ಒಳ್ಳೆಯ ಕೃತ್ಯಗಳು, ಭಕ್ತನ ವಿಶ್ವಾಸದ ಫಲವೇ ಹೊರತು, ತಾವಾಗಿಯೇ ಹುಟ್ಟಿಸುವಂತವಲ್ಲ ಎಂದು ಸಾರಿದರು. ಲೂಥರನ ಮುಖ್ಯ ಉದ್ದೇಶ ಸಭೆಯನ್ನು ಶುದ್ಧೀಕರಿಸಿ ಪುನರುಜ್ಜೀವನಗೊಳಿಸುವುದೇ ಆಗಿತ್ತು.

ಲೂಥರನು ಸ್ಥಾಪಿಸಿದ ಪ್ರೊಟೆಸ್ಟೆಂಟ್ ಧರ್ಮ ಬೆಳೆಯಲು ಕಾರಣ ಅಂದಿನ ಸಮಯದಲ್ಲಿದ್ದ ರೋಮಸಭೆ ಕೆಳಮಟ್ಟದಾಗಿತ್ತು. ಜೊತೆಗೆ ಆಧ್ಯಾತ್ಮಿಕ ವಿಷಯಗಳನ್ನು ಬದಿಗೊತ್ತಿ ಲೌಕಿಕ, ರಾಜಕೀಯ ಮುಂದಾಳು ಮನೋಭಾವನೆ ಯೂರೋಪಿನ ಜನಾಂಗಗಳ ಪರಸ್ಪರ ಸ್ಪರ್ಧೆ, ಇವುಗಳಿಂದ ಪ್ರೊಟೆಸ್ಟೆಂಟ್ ಪ್ರಬಲವಾಗುತ್ತಾ ಬೆಳೆಯಿತು. ಪ್ರೊಟೆಸ್ಟೆಂಟ್ ಸಭೆಯು ದೇಶ, ವಿದೇಶಗಳಲ್ಲಿ ಬೆಳೆಯುತ್ತಾ ಬಂದಿತು.

ಕ್ಯಾಲ್ವಿನ್, ಜ್ವಿಂಗ್ಲಿ, ನಾಕ್ಸ್ ವೆಸ್ಲಿ ಮೊದಲಾದ ಮುಂದಾಳುಗಳು ಲೂಥರನ ಸೂತ್ರಗಳನ್ನು ತಮ್ಮ ದೇಶಗಳ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಗಳಿಂದ ಅನುಸಾರ ರೂಪಿಸುತ್ತಾ ಬಂದರು.

"ಜರ್ಮನಿಯಲ್ಲಿ ಲೂಥರನ ಸಭೆ, ಸ್ವಿಡ್ಜರ್‌ಲ್ಯಾಂಡ್‌ನಲ್ಲಿ ಪ್ರೆಸ್ಬಿಟೆರಿಯನ್‌ಸಭೆ, ಇಂಗ್ಲೆಂಡಿನಲ್ಲಿ ಆಂಗ್ಲಿಕನ್ ಸಭೆ ಮತ್ತು ನಂತರದ ಶತಮಾನಗಳಲ್ಲಿ ಇಂತಹ ಅನೇಕ ಪ್ರಾಟೆಸ್ಟೆಂಟ್ ಸಭೆಗಳು ಅಸ್ತಿತ್ವಕ್ಕೆ ಬಂದವು."[೨೫]

ಭಾರತಕ್ಕೆ ಕ್ರೈಸ್ತ ಧರ್ಮ ಪ್ರವೇಶ

ಭರತ ಖಂಡದಲ್ಲಿ ಹಿಂದೂ ಧರ್ಮವು ಬಹುಪಕ್ಷೀಯವಾದ ಧರ್ಮವಾಗಿದೆ. ವೈವಿಧ್ಯತೆಯಲ್ಲಿ ಏಕತೆ ಎಂಬ ತತ್ವಕ್ಕೆ ಅನುಗುಣವಾಗಿ ಭರತ ಖಂಡವು ಅಥವಾ ಭಾರತದೇಶವು ಇತರ ಧರ್ಮಗಳಿಗೂ

ಮನ್ನಣೆ ನೀಡುತ್ತಾ ಬಂದಿದೆ. “ಕ್ರಿಸ್ತಶಕದ ಮೊದಲ ಶತಮಾನದಲ್ಲಿಯೇ ಇಲ್ಲಿಗೆ ಬಂದ ಕ್ರೈಸ್ತಧರ್ಮ ಕ್ರಮೇಣ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಜೀವನಕ್ಕೆ ಸಹಾಯ ಮಾಡುತ್ತದೆ.”[೨೬] ದಕ್ಷಿಣ ಭಾರತದಲ್ಲಿ ಕ್ರೈಸ್ತ ಧರ್ಮದ ಪ್ರಚಾರ ಕಾರ್ಯ ಮೂರು ಸಮುದ್ರದ ತೀರಗಳ ರೇವುಗಳಲ್ಲಿ ಆರಂಭವಾಯಿತು. ಪಶ್ಚಿಮ ತೀರದಲ್ಲಿ ಕ್ರಾಂಗನೂರು ಮತ್ತು ಗೋವ, ಪೂರ್ವದಲ್ಲಿ ಟ್ರಾಂಕ್ವಿಬಾರ್ ಈ ಮೂರು ಸ್ಥಳಗಳಲ್ಲಿ ಸಿರಿಯನ್, ರೋಮನ್ ಕ್ಯಾಥೊಲಿಕ್ ಮತ್ತು ಪ್ರಾಟಸ್ಟೆಂಟ್ ಮಿಶನರಿಗಳು ಸುವಾರ್ತಾ ಸೇವೆಯನ್ನು ಪ್ರಾರಂಭಿಸಿದವು.

“ಕ್ರಿ.ಶ.೫೨ರಲ್ಲಿ ಅಪೋಸಲ ಸಂತ ಥಾಮಸ್ ದಕ್ಷಿಣ ಭಾರತಕ್ಕೆಬಂದು ಮಲಬಾರಿನ ತೀರದಲ್ಲಿ ಕೆಲವು ಸಭೆಗಳನ್ನು ಸ್ಥಾಪಿಸಿದನೆಂದು ಕೇರಳದ ಸಿರಿಯನ್ ಕ್ರೈಸ್ತರು ಹೇಳುತ್ತಾರೆ.”[೨೭] ಇದರಿಂದಾಗಿ ಮೊದಲ ಶತಮಾನದಿಂದ ಕ್ರೈಸ್ತ ಧರ್ಮ ಭಾರತಕ್ಕೆ ಬಂದಿತು ಎಂಬುದು ತಿಳಿದುಬರುತ್ತದೆ. ಆದರೆ ಆರಂಭದ ಕ್ಯಾಥೋಲಿಕ ಪ್ರಚಾರಕರು ಸುವಾರ್ತ ಪ್ರಚಾರಕ್ಕೆ ಹೆಚ್ಚು ಗಮನ ನೀಡಿದ್ದರಿಂದ ಅದು ದೇಶದ ಇತರ ಭಾಗಗಳಿಗೆ ಹರಡಲಿಲ್ಲ.

“ವಾಸ್ಕೋಡಿಗಾಮನು ೧೪೯೮ರಲ್ಲಿ ಕಲ್ಲಿಕೋಟೆಗೆ ಬಂದು ಮುಟ್ಟಿದ್ದು ಯೂರೋಪ್ ಹಾಗೂ ಭಾರತ ಸಂಪರ್ಕದಲ್ಲೇ ಮೈಲಿಗಲ್ಲು”[೨೮] ಆಯಿತು. ಪೋರ್ಚುಗಲ್ಲಿನಿಂದ ರೋಮನ್ ಕ್ಯಾಥೋಲಿಕ್ ಪ್ರಚಾರ ತಂಡಗಳು ಮುಖ್ಯವಾಗಿ ಗೋವ, ಕೊಚ್ಚಿನ್ ಮೊದಲಾದ ಸ್ಥಳಗಳನ್ನು ಸೇವಾ ಕೇಂದ್ರಗಳನ್ನಾಗಿ ಮಾಡಿಕೊಂಡು ಪ್ರಚಾರವನ್ನು ಪ್ರಾರಂಭಿಸಿದರು. ಇದು ಭಾರತದಲ್ಲಿ ಕ್ರೈಸ್ತರು ಪ್ರಮುಖ ಪ್ರದೇಶಗಳಲ್ಲಿ ಪ್ರಚಾರಕ್ಕಾಗಿ ನೆಲೆವೂರಲು ನಿರ್ಧರಿಸಿದರು. ಫ್ರಾನ್ಸಿಸ್‌ಜೇವಿಯರ ಎಂಬುವನು ಭಾರತಕ್ಕೆ ಬಂದ ಮೊದಲ ಅಪೋಸಲನಾಗಿದ್ದನು. ಇತನು ಜೆಸ್ಯೂಟ್ ಪ್ರಚಾರಕರಲ್ಲಿ ಮೊದಲನೆಯವನಾಗಿದ್ದನು. ದೇಶೀಯ ಮುಂದಾಳುಗಳನ್ನು ತರಬೇತು ಮಾಡಿ ಅವರಿಗೆ ಹೆಚ್ಚಿನ ಜವಾಬ್ದಾರಿಯನ್ನು ಒಪ್ಪಿಸುವ ವಿಷಯದಲ್ಲಿ ರೋಮನ ಕ್ಯಾಥೋಲಿಕರ ಸಭೆಗಳು ಹೆಚ್ಚು ಪ್ರಯತ್ನ ಮಾಡಿವೆ.

ತಿರುಚನಾಪಳ್ಳಿಯ ಹತ್ತಿರವಿರುವ ಟಾಂಕ್ವಿಬಾರ ಎಂಬ ಸ್ಥಳದಲ್ಲಿ ದಕ್ಷಿಣ ಭಾರತದಲ್ಲಿ ಪ್ರಾಟಸ್ಟೆಂಟ್ ಕ್ರೈಸ್ತ ಸಭೆಯ ಉಗಮವಾಯಿತು. ಈ ಪಶ್ಚಿಮ ತೀರದ ಪಟ್ಟಣಕ್ಕೆ ೧೭೦೬ರಲ್ಲಿ ಡೆನ್ಮಾರ್ಕಿನ ಅರಸನ ಆಶ್ರಯ ಹೊಂದಿದ ಇಬ್ಬರು ಜರ್ಮನ್ ಪ್ರಚಾರಕರು ಬಂದಿಳಿದರು. ಕಷ್ಟ, ಇಕ್ಕಟ್ಟುಗಳ ಮಧ್ಯೆದಲ್ಲಿ ಇವರ ಸೇವೆಯು ಫಲದಾಯಕವಾಯಿತು.

ಉತ್ತರ ಹಿಂದೂಸ್ಥಾನದಲ್ಲಿ ೧೭೯೩ರಲ್ಲಿ ವಿಲಿಯಂ ಕ್ಯಾರಿ ಬಂದಿಳಿದಾಗ ಭಾರತದ ಕ್ರೈಸ್ತ ಸಭಾ ಚರಿತ್ರೆ ಹೊಸದೊಂದು ಮೈಲಿಗಲ್ಲನ್ನು ತಲುಪಿಸಿತು. ಈ ಮೊದಲಿನ ಪ್ರಚಾರಕರಂತೆ ಅಲ್ಲದೇ ಒಂದು ಪ್ರಚಾರ ಸಂಸ್ಥೆಯ ಪ್ರತಿನಿಧಿಯಾಗಿ ಭಾರತಕ್ಕೆ ಬಂದನು. ‘ವಿಲಿಯಂ ಕ್ಯಾರಿ ಆಧುನಿಕ ಪ್ರಚಾರ ಸೇವೆಯ

[illegible]

ಪಿತೃ' ಎಂಬ ಬಿರುದು ದೊರೆಯಿತು. ಬೈಬಲನ್ನು ಬೇರೆ ಬೇರೆ ಭಾಷೆಗಳಿಗೆ ಭಾಷಾಂತರಿಸುವುದರಲ್ಲಿ, ವಿದ್ಯಾಸಂಸ್ಥೆಗಳನ್ನು ಸ್ಥಾಪನೆ ಮಾಡುವುದರಲ್ಲಿ, ಪತ್ರಿಕೆ ಮತ್ತು ಸಾಹಿತ್ಯ ರಚನೆಗಳನ್ನು ಆರಂಭಿಸುವಲ್ಲಿ ವಿಲಿಯಂ ಕ್ಯಾರಿಯು ಬಹಳ ಶ್ರಮವಹಿಸಿದ್ದರಿಂದ ಉತ್ತರ ಹಿಂದೂಸ್ತಾನದ ಕ್ರೈಸ್ತಧರ್ಮ ಪ್ರಚಾರ ಕ್ಷೇತ್ರದಲ್ಲಿ ಅಗ್ರಸ್ಥಾನ ಹೊಂದಿದನು. ಕ್ರೈಸ್ತ ತತ್ವ ನಿರೂಪನೆಯ ಅಭ್ಯಾಸಕ್ಕಾಗಿಯೂ ಕಲ್ಕತ್ತದ ಹತ್ತಿರವಿರುವ "ಸೆರಾಂಪೂರ್" ಸ್ಥಳದಲ್ಲಿ ಒಂದು ದೊಡ್ಡ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಯಿತು.

ಭಾರತದಲ್ಲಿ ಇಂದು ಕ್ರೈಸ್ತ ಸಭೆಯಲ್ಲಿ ಸುಮಾರು ಹತ್ತು ಲಕ್ಷಕ್ಕೂ ಹೆಚ್ಚಿನ ಸದಸ್ಯರಿದ್ದಾರೆ. ಅನೇಕ ಪ್ರಚಾರ ಸಂಸ್ಥೆಗಳು ತಮ್ಮ ಆಡಳಿತದ ಜವಾಬ್ದಾರಿಗಳನ್ನು ವಹಿಸಿಕೊಂಡಿವೆ. ಭಾರತದ ಭಾಷೆಗಳ ಪ್ರಗತಿಗೆ ಸಾಹಿತ್ಯ ರಚನೆಗೆ ಅನೇಕ ಪಾದ್ರಿಗಳು ಸ್ಫೂರ್ತಿ, ಸಹಾಯ ನೀಡಿದ್ದಾರೆ. ತಮಿಳು ಭಾಷೆಯಲ್ಲಿ ಪಾದರ್ ಬೆಶಿ ಕನ್ನಡದಲ್ಲಿ ಕಿಟ್ಟಲ್, ಬಂಗಾಳೀಯಲ್ಲಿ ವಿಲಿಯಂ ಕ್ಯಾರಿ ಹೀಗೆ ಹಲವಾರು ಪ್ರಮುಖ ಮಿಶನರಿಗಳು ಮೊದಲಾದ ವಿಷಯಗಳಲ್ಲಿ ಮಾಡಿದ ಸೇವೆ ಸ್ಮುತ್ಯಾರ್ಹವಾಗಿದೆ. ಸಮಾಜದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದವರಿಗೆ ನಾನಾವಿಧಗಳಲ್ಲಿ ಸಹಾಯ ಮಾಡುವುದರ ಮೂಲಕ ಪ್ರಚಾರ ಸಂಸ್ಥೆಗಳು ಕಾರ್ಯನಿರ್ವಹಿಸುತ್ತವೆ. ಅವುಗಳೆಂದರೆ ಆಸ್ಪತ್ರೆಗಳು, ಅನಾಥಾಶ್ರಮಗಳು, ಶಾಲೆಗಳು, ವಿಶ್ವವಿದ್ಯಾಲಯಗಳು ಇನ್ನೂ ಅನೇಕ ಸೇವೆ ಕೇಂದ್ರಗಳು ಕ್ರೈಸ್ತ ಧರ್ಮವನ್ನು ಪ್ರಚಾರಪಡಿಸುವ ಕಾರ್ಯಗಳನ್ನು ಮಾಡುತ್ತಲಿವೆ.

೧೯೪೭ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತು. ಅದೇ ವರ್ಷದಲ್ಲಿ ದಕ್ಷಿಣ ಭಾರತ ಸಂಘಟಿತ ಸಭೆಯ ಸ್ಥಾಪನೆಯಾದ ಮೇಲೆ ಕ್ರೈಸ್ತ ಧರ್ಮ ಜನಾಂಗ ಜೀವನದಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಭಾಗವಹಿಸುವಂತಾಯಿತು.

ಕರ್ನಾಟಕದಲ್ಲಿ ಕ್ರೈಸ್ತ ಧರ್ಮ

ಕ್ರೈಸ್ತರು ಭಾರತದ ಒಳಗೆ ಪ್ರವೇಶ ಮಾಡಿದ ನಂತರ ಭಾರತದ ಪ್ರಮುಖ ಪ್ರದೇಶಗಳಲ್ಲಿ ಧರ್ಮ ಪ್ರಚಾರದ ಕಾರ್ಯವನ್ನು ಮಾಡಿದರು. ಕರ್ನಾಟಕದಲ್ಲಿಯೂ ತಮ್ಮ ಪ್ರಚಾರದ ಕಾರ್ಯವನ್ನು ಪ್ರಾರಂಭಿಸಿದರು. ಪಶ್ಚಿಮ ಕರಾವಳಿಯ ಪ್ರದೇಶದಲ್ಲಿ ಪೋರ್ಚುಗೀಸರು ಕಂಡುಬಂದ ಮೇಲೆ ಆ ನಂತರದಲ್ಲಿ ಕ್ರೈಸ್ತ ಧರ್ಮಿಯರ ಚಟುವಟಿಕೆಗಳು ಗೋವಾ, ಕರ್ನಾಟಕ, ಮಲಬಾರ್, ಪ್ರದೇಶಗಳಲ್ಲಿ ವ್ಯಾಪಕವಾಗಿ ಕಂಡುಬಂದವು. ೧೬ನೇ ಶತಮಾನದಲ್ಲಿ ರೋಮನ್ ಕ್ಯಾಥೊಲಿಕ್ ಪಂಥದವರು ಅದೇ ತೆರನಾಗಿ ೧೯ನೇ ಶತಮಾನದಲ್ಲಿ ಪ್ರಾಟೆಸ್ಟೆಂಟರ ವಿವಿಧ ಪಂಥಗಳವರೂ ಕರ್ನಾಟಕದಲ್ಲಿ ಕ್ರೈಸ್ತ ಧರ್ಮವನ್ನು ವ್ಯವಸ್ಥಿತವಾಗಿ ಸ್ಥಾಪಿಸಿದರು. ಕ್ರೈಸ್ತ ಮಿಶನರಿಗಳು ಧರ್ಮಪ್ರಚಾರದ ಕಾರ್ಯದಲ್ಲಿ ಅವರು ಕೈಗೊಂಡ ಚಟುವಟಿಕೆಗಳಾದ ಶಿಕ್ಷಣ, ಮುದ್ರಣ, ಸಾಹಿತ್ಯ, ಆಸ್ಪತ್ರೆಗಳು, ಕೈಗಾರಿಕೆ, ವೃತ್ತಿ ತರಬೇತಿಗಳು

[illegible]

[illegible]

[illegible]

ಮುಂತಾದ ಚಟುವಟಿಕೆಗಳು ಕ್ರೈಸ್ತಧರ್ಮದ ಹಿನ್ನೆಲೆಯಿಂದಲೂ ಕರ್ನಾಟಕ ಭಾರತದಲ್ಲಿ ಮುಖ್ಯಸ್ಥಾನವನ್ನು ಪಡೆದುಕೊಂಡಿದೆ.

ಉತ್ತರ ಕರ್ನಾಟಕದ ಬೀದರ್, ಗುಲ್ಬರ್ಗಾ, ಬಳ್ಳಾರಿ ಜಿಲ್ಲೆಗಳಲ್ಲಿ ಕ್ರೈಸ್ತಧರ್ಮದ ಚಟುವಟಿಕೆಗಳು

ದಕ್ಷಿಣ ಕರ್ನಾಟಕದ ಮೈಸೂರು, ಬೆಂಗಳೂರು, ಚಾಮರಾಜನಗರ, ಕೋಲಾರ, ತುಮಕೂರು ಕೊಡುಗು, ಕರಾವಳಿ ಜಿಲ್ಲೆಗಳಾದ ದಕ್ಷಿಣಕನ್ನಡ, ಉತ್ತರಕನ್ನಡ, ಉಡುಪಿ, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಾದ್ಯಾಂತ ಕ್ರೈಸ್ತಧರ್ಮ ತನ್ನ ಅಸ್ತಿತ್ವವನ್ನು ಕ್ರಮೇಣ ಪಡೆದುಕೊಂಡಿತು. ಹೀಗೆ ಕ್ರೈಸ್ತಧರ್ಮ ಆರಂಭದಲ್ಲಿ ತನ್ನ ಪ್ರಭಾವವನ್ನು ಕರ್ನಾಟಕದ ಸಾಂಸ್ಕೃತಿಕ ಕ್ಷೇತ್ರಗಳ ಮೇಲೆ ಮಹತ್ವದ ಪ್ರಭಾವ ಬೀರಿತು.

ಮಂಗಳೂರು ಮತ್ತು ಬಾರಕೂರಗಳ ಮೂಲಕ ಒಳನಾಡನ್ನು ಪ್ರವೇಶಿಸಿದ ಕ್ರೈಸ್ತ ಮಿಶನರಿಗಳು ಪೋರ್ಚುಗೀಸರ ಬೆಂಬಲವನ್ನು ಪಡೆದಿದ್ದರಿಂದ ಸ್ಥಳೀಯ ರಾಜರ ಅಧಿಕಾರಿಗಳ ಗೌರವಕ್ಕೆ ಪಾತ್ರರಾದರು. "ವಿಜಯನಗರ ಆಸ್ಥಾನದಲ್ಲಿ 'ನಿಮ್ಮೆಪೆಜಿರ್' ಎಂಬ ಕ್ರೈಸ್ತ ಮಂತ್ರಿ ಇದ್ದನೆಂದು ತಿಳಿದುಬರುತ್ತದೆ." ವಿಜಯನಗರದ ಅರಸರು ಪೋರ್ಚುಗೀಸ ಕ್ರೈಸ್ತರಿಗೆ ಧಾರ್ಮಿಕ ಚಟುವಟಿಕೆಗಳಿಗೆ ಅನೇಕ ಚರ್ಚುಗಳನ್ನು ಸ್ಥಾಪಿಸಲು ಅನುಮತಿ ನೀಡಿದರು. ಕೆಳದಿಯ ನಾಯಕರ ಕಾಲದಲ್ಲೂ ಮಿಶನರಿಗಳಿಗೆ ಮನ್ನಣೆ ದೊರೆಯಿತು. ಶಿವಪ್ಪನಾಯಕನು ದೇಶಿಯ ಕ್ರೈಸ್ತ ಪುರೋಹಿತ ವರ್ಗವನ್ನು ಸ್ಥಾಪಿಸುವ ವಿಷಯವನ್ನು ಚರ್ಚಿಸಲು ಗೋವಕ್ಕೆ ತನ್ನ ಪ್ರತಿನಿಧಿಗಳನ್ನು ಕಳಿಸಿದ್ದನು. ೧೬ ಮತ್ತು ೧೭ನೇ ಶತಮಾನದಲ್ಲಿ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಪುರೋಹಿತ ಅಭಾವದಿಂದ ಕ್ರೈಸ್ತಧರ್ಮದ ಪಾಲನೆಗೆ ದಕ್ಕೆಯಾದದ್ದರಿಂದ ಪಾದರ್ ಜೋಸೆಫ್ ಎಂಬುವನು ಸುಧಾರಿಸಿದನು.

ಮಂಗಳೂರಿನ ಪರಂಗಿ ಪೇಟೆಯಲ್ಲಿ ಪುರೋಹಿತರ ತರಬೇತಿ ಕೇಂದ್ರ (ಸೆಮಿನರಿ) ಸ್ಥಾಪಿಸಲಾಯಿತು. ಅಂಕೋಲಾ, ಸೋಮೇಶ್ವರಗಳಲ್ಲಿ ಕೆಲಸ ಮಾಡುತ್ತಿದ್ದು, ಜೊಯ್ಡಾದಲ್ಲಿ ಒಂದು ವಿದ್ಯಾಕೇಂದ್ರವನ್ನು ತೆರೆದರು. ೧೬೩೭ರಲ್ಲಿ ಬಿಜಾಪುರವನ್ನು, ೧೬೬೭ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಗಳನ್ನು ವಿಕ್ಕಾರಿಯೆಟ್ ಏಪೋಸ್ಟಾಲಿಕ್ ಎಂಬ ಧರ್ಮಕ್ಷೇತ್ರಗಳನ್ನು ಸ್ಥಾಪಿಸಿದರು. ೧೭೫೯ರಲ್ಲಿ ಪೋರ್ಚುಗಲ್ಲನ ಅಧಿಪತ್ಯದಿಂದ ಜೆಸುಯಿಟ್ಸರನ್ನು ಬಹಿಷ್ಕರಿಸಿದ್ದಾಗ ಕಾರ್ಮೆಲೈಟ್ ಸಂಸ್ಥೆ ಅದರ ಕೆಲಸವನ್ನು ಮುಂದುವರೆಸಿತು. ಇದರ ಕಾರ್ಯ ಕ್ಷೇತ್ರಕ್ಕೆ ಒಳಪಟ್ಟ ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ತುಮರಿಕೊಪ್ಪ ಹಳ್ಳಿಯಲ್ಲಿ ಮತಪ್ರಚಾರಕಾರ್ಯ ವಿಶೇಷವಾಗಿ ಯಶಸ್ಸನ್ನು ಗಳಿಸಿತು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಧಾರವಾಡದಲ್ಲಿ ಸಂತ ಮೇರಿಯ ಜೀವನ ಚರಿತ್ರೆಯನ್ನು ಒಳಗೊಂಡ ಹಳೆಯ ತಾಳೆಗರಿಗಳನ್ನು ಇಲ್ಲಿ ನೋಡಬಹುದು.

ಗೋವೆಯ ಸಂತ ಫ್ರಾನ್ಸಿಸ್ ಝೇವಿಯರನ ಮತ ಪ್ರಚಾರ ಕಾರ್ಯವು ಅದ್ಭುತ ಎನ್ನುವ ರೀತಿಯಲ್ಲಿ ಆರಂಭವಾಗಿದ್ದರಿಂದ ಅದರ ಪ್ರಭಾವ ಕರ್ನಾಟಕದ ಮೇಲೆ ಆಗಿ ಇತರ ಧರ್ಮದವರು ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಿದರು. ಈ ಎಲ್ಲಾ ಕಾರಣಗಳಿಂದಾಗಿ ಕರ್ನಾಟಕದಲ್ಲಿ ಕ್ಯಾಥೊಲಿಕರು ಕ್ರೈಸ್ತರು ಕರ್ನಾಟಕದಲ್ಲಿ ಅಧಿಕ ಸಂಖ್ಯೆಯನ್ನು ಹೊಂದಿದ್ದಾರೆ.

ಪ್ರೊಟೆಸ್ಟೆಂಟ್ ಪಂಥದವರು ಈ ನಾಡಿಗೆ ಬಂದುದು ೧೮ನೇ ಶತಮಾನದಲ್ಲಿ ಎಂದು ಹೇಳಬಹುದು. ಪೋರ್ಚುಗೀಸರು, ಬ್ರಿಟಿಷರ ಬೆಂಬಲದಿಂದಾಗಿ ಕ್ಯಾಥೋಲಿಕರು ಬೆಳೆದದ್ದು ಅಲ್ಲದೇ ಕರ್ನಾಟಕದ ಎಲ್ಲಾ ಕ್ಯಾಥೋಲಿಕ ಕ್ರೈಸ್ತರು ರೋಮಿನ ಪೋಪನ ಮುಂದಾಳತ್ವವನ್ನು ಮೊದಲೇ ಒಪ್ಪಿಕೊಂಡಿದ್ದರು. ಆದರೆ ಪ್ರೊಟೆಸ್ಟೆಂಟ ಪಂಥಗಳಿಗೆ ಈ ಬಗೆಯ ರಾಜಕೀಯ ಬೆಂಬಲ ಇಲ್ಲಿ ದೊರೆಯಲಿಲ್ಲ.

"ಕ್ರಿ.ಶ.೧೮೧೦ರಲ್ಲಿ ಬಳ್ಳಾರಿಯಲ್ಲಿ ನೆಲೆಸಿ ತನ್ನ ಮತ ಪ್ರಚಾರ ಕಾರ್ಯವನ್ನು ಆರಂಭಿಸಿದ ಲಂಡನ್ ಮಿಷನ್ ಕರ್ನಾಟಕ ನಾಡಿನಲ್ಲಿ ಪ್ರಾರಂಭವಾದ ಮೊಟ್ಟ ಮೊದಲ ಪ್ರಾಟೆಸ್ಟೆಂಟ ಪಂಥವೆಂದು ಹೇಳುತ್ತಾರೆ."[೨೯] ಇದೇ ಸಮಯದಲ್ಲಿ ಮೈಸೂರಿನಲ್ಲಿ ಡೇವಿನಿ ಲೂಥೆರನ್ ಮಿಷನ್ ತನ್ನ ಕಾರ್ಯವನ್ನು ಆರಂಭಿಸಿತ್ತು. ಲಂಡನ ಮಿಶನ್ ೧೮೨೧ರಲ್ಲಿ ಬೆಳಗಾವಿಯಲ್ಲಿ ಸ್ಥಾಪಿತಯಿತು. ಬೆಳಗಾವಿಯ ಸುತ್ತಮುತ್ತ ತನ್ನ ಕಾರ್ಯವನ್ನು ನಿರ್ವಹಿಸಿತು. ಇದೇ ಸಮಯದಲ್ಲಿ ಲಂಡನ ಮಿಶನ್ ಬೆಂಗಳೂರಿನಲ್ಲೂ ಕಾರ್ಯನಿರ್ವಹಿಸುತ್ತಿತ್ತು. ಹೀಗೆ ಪ್ರೊಟೆಸ್ಟೆಂಟ ಪಂಥವು ಕರ್ನಾಟಕ ವಿವಿಧ ಪ್ರದೇಶಗಳಲ್ಲಿ ತನ್ನ ಧರ್ಮ ಪ್ರಚಾರದ ಕಾರ್ಯವನ್ನು ಯಶಸ್ವಿಯಾಗಿ ಮುಂದುವರೆಸಿತು.

ವೆಸ್ಲಿಯನ್ ವಿಶನ್ ೧೮೨೦ರಲ್ಲಿ ಮೈಸೂರಿನಲ್ಲಿ ತನ್ನ ಕಾರ್ಯವನ್ನು ಆರಂಭಿಸಿದರೆ, ಬಾಸೆಲ್ ಮಿಷನ್ ೧೮೩೪ರಲ್ಲಿ ಮಂಗಳೂರಿನಲ್ಲಿ ಮತ ಪ್ರಚಾರಕ್ಕೆ ತೊಡಗಿತು. ಇದೇ ಬಾಸೆಲ್ ಮಿಷನ್ ೧೮೩೭ರಲ್ಲಿ ಧಾರವಾಡ, ಬೆಟಗೇರಿ, ಗುಳೇದಗುಡ್ಡ, ಬಿಜಾಪುರದಲ್ಲಿ ಜನಪ್ರಿಯವಾಯಿತು. ವೆಸ್ಲಿಯನ್ ಮಿಷನ್ ಗುಬ್ಬಿ, ಕುಣಿಗಲ್, ತುಮಕೂರು, ಶಿವಮೊಗ್ಗ, ಹಾಸನಗಳಲ್ಲಿ ಸೇವಾಕಾರ್ಯ ಮಾಡಿತು. ಬಾಸೆಲ್ ಮಿಷನ್ ಹುಬ್ಬಳ್ಳಿ, ಗದಗ-ಬೆಟಗೇರಿ, ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡಗಳಲ್ಲಿ, ಪ್ರಚಾರ ಕಾರ್ಯಮಾಡಿತು. ಸೀರಿಯನ್ ಕ್ರಿಶ್ಚಿಯನ್ ರು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಬೆಳ್ತಂಗಡಿ ಉಡುಪಿ, ಬ್ರಹ್ಮಾವರಗಳಲ್ಲಿ ನೆಲೆನಿಂತು ಸೇವಾ ಕಾರ್ಯ ಮುಂದುವರಿಸಿತು.

ಬಾಸೆಲ್ ಮಿಶನರಿ ಮಂಗಳೂರಿನ ನಂತರ ಧಾರವಾಡದ ಜಿಲ್ಲೆಯಾದ್ಯಂತ ಹೆಚ್ಚು ಧರ್ಮ ಪ್ರಚಾರ ಕಾರ್ಯ ಮಾಡಿತು. ಬಾಸೆಲ್ ಮಿಷನ್ ಕರ್ನಾಟಕದಲ್ಲಿ ಹೆಚ್ಚು ಪ್ರಚಾರ ಮಾಡಿತು. ಬಾಷಲ್ ಮಿಷನ್ ಸಂಸ್ಥೆಯು ಕರ್ನಾಟಕಕ್ಕೆ ಧರ್ಮ ಪ್ರಚಾರ ಕಾರ್ಯಕ್ಕೆ ಕಳುಹಿಸಿದ ಮೊದಲ ಮಿಶನರಿ ಎಂದರೆ

[illegible]

ಸ್ವಾಮುಯಮ್ ಹೆಬಿಕ್ ರು ಹಾಗೂ ಆತನ ಜೊತೆ ಮೋಗ್ಲಿಂಗ ಮತ್ತು ಲೆಹ್ನರು ಆಗಮಿಸಿದರು. ಸಾಮಯಮ್ ಹೆಬಿಕ ಮತ್ತು ಮೊಂಗ್ಲಿಂಗ್ ಹಾಗೂ ಇತರ ಪ್ರಮುಖ ಮಿಶನರಿಗಳು ಧಾರವಾಡದಲ್ಲಿ ಧರ್ಮ ಪ್ರಚಾರದ ಕಾರ್ಯ ಸಾಗಲು ಕಾರ್ಯಚಟುವಟಿಕೆಗಳಾದ ಶಿಕ್ಷಣ, ಮುದ್ರಣ, ಸಾಹಿತ್ಯ, ಕೈಗಾರಿಕೆ, ವೃತ್ತಿ ತರಬೇತಿಗಳು, ವೈದ್ಯಕೀಯ ಮುಂತಾದ ಚಟುವಟಿಕೆಗಳನ್ನು ಆರಂಭಿಸಿದರು. ಧಾರವಾಡವನ್ನು ಸಾಂಸ್ಕೃತಿಕ ನಗರವಾಗಿಸುವಲ್ಲಿ ಮಿಶನರಿಗಳು ಪಾತ್ರವು ಇದೆ. ಇನ್ನೂ ಹಲವಾರು ಬಾಸೆಲ್ ಮಿಶನರಿಗಳು ಝಿಗ್ಲರ, ವೈಗಲ್, ರೆ.ಎಚ್ ಪ್ರೆ, ರೆ.ಸಿ.ಎಸ್ಸಿಗ್, ರೆ.ಜಿ.ಸುಪ್ಪರ ಮುಲ್ಲರ, ಡಾ.ಪರ್ಡಿನಾಂಡ ಕಿಟಲ್ ಹಾಗೇ ಇಂಗ್ಲೀಷ್ ಅಧಿಕಾರಿಗಳು ಪ್ರಮುಖ ಪಾತ್ರನಿರ್ವಹಿಸಿದರು. ಧಾರವಾಡದಲ್ಲಿ ಕ್ಯಾಥೊಲಿಕರಿಗಿಂತ ಪ್ರೊಟೆಸ್ಟೆಂಟರ ಮಿಶನರಿಗಳು ಪ್ರಮುಖವಾದ ಕಾರ್ಯನಿರ್ವಹಿಸಿದವು.

೨.೩. ಚರ್ಚುಗಳ ಐತಿಹಾಸಿಕ ಹಿನ್ನೆಲೆ

ಪ್ರಸ್ತುತ ಈ ಅಧ್ಯಾಯದಲ್ಲಿ ಚರ್ಚುಗಳ ಐತಿಹಾಸಿಕ ಹಿನ್ನೆಲೆ ತೆಗೆದುಕೊಂಡು ಚರ್ಚುಗಳ ಉಗಮ, ಚರ್ಚಿನ ರಚನೆ, ಅವಶ್ಯಕತೆ ಹಾಗೂ ಚರ್ಚಿನ ಕಟ್ಟಡ ಶೈಲಿಗಳ ಬಗ್ಗೆ ತಿಳಿದುಕೊಳ್ಳೋಣ.

ಬಹಳ ಕಾಲದವರೆಗೆ ಕ್ರೈಸ್ತ ಸಭೆಗೆ ಆರಾಧನೆಯನ್ನು ನಡೆಯಿಸಲು ಬಹಿರಂಗ ಕಟ್ಟಡಗಳೇ ಇರಲಿಲ್ಲ. ಪ್ರಾಯಶಃ ಕೆಲವು ಪ್ರದೇಶಗಳಲ್ಲಿ ಆರಾಧನೆಗೆ ಪ್ರತ್ಯೇಕವಾದ ಸ್ಥಳವು ಇತರ ಕಡೆಗಳಿಗಿಂತಲೂ ಅತ್ಯವಶ್ಯಕವಾಗಿದೆ ಎಂದು ಅರಿತುಕೊಂಡರು. ಕ್ರೈಸ್ತ ಸಭೆಯು ಸ್ಥಾಪಿಸಲ್ಪಟ್ಟ ಮೇಲೆ ಕ್ರೈಸ್ತರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಾ ಸಾಗಿತು. ಈ ಕಾಲದಲ್ಲಿ ಅಂದರೆ ೧೫೦ ವರ್ಷಗಳವರೆಗೆ ಯಾವ ಪ್ರತ್ಯೇಕವಾದ ಕಟ್ಟಡವಿಲ್ಲದೆ ಕ್ರೈಸ್ತರು ಆರಾಧನೆಯನ್ನು ನಡೆಸುತ್ತಿದ್ದರು.

"೪ನೇ ಶತಮಾನದಲ್ಲಿದ್ದ ಒಂದು ಸಾಮಾನ್ಯ ದೇವಾಲಯದಲ್ಲಿ ಸಭಾಧ್ಯಕ್ಷನ ಕುರ್ಚಿಯು ಕಟ್ಟಡದ ಕೊನೆಭಾಗದಲ್ಲಿ ಕರ್ತನ ರಾತ್ರಿ ಬೋಜನ ಸಂಸ್ಕಾರದ ಮೇಜಿನ ಹಿಂಭಾಗದಲ್ಲಿ ಇದ್ದಿತು."[೩೦] ಈ ಮೇಜಿನ ಉಭಯ ಪಾರ್ಶ್ವದಲ್ಲಿ ಹಿರಿಯರು ಕುಳಿತುಕೊಳ್ಳುವುದಕ್ಕೆ ಬೆಂಚುಗಳಿದ್ದವು. ಪೂರ್ಣ ಸಭಾಂಗಿಗಳು ಕಟ್ಟಡದ ಮಧ್ಯಭಾಗದಲ್ಲಿ ಗಂಡಸರು ಒಂದು ಕಡೆ ಹೆಂಗಸರು ಇನ್ನೊಂದು ಕಡೆ ಇರುತ್ತಿದ್ದರು. ಇವರ ಹಿಂಭಾಗದಲ್ಲಿ ಹೆಬ್ಬಾಗಿಲಿನ ಸಮೀಪದಲ್ಲಿ ಒಂದು ಒಳಕೊಠಡಿಯ ಸ್ಥಳದಲ್ಲಿ ಸ್ನಾನದೀಕ್ಷೆಗೆ ಸಿದ್ಧರಾಗುವ ವಿಚಾರಕರು ಸಭಾ ಶಿಕ್ಷಣಕ್ಕೆ ಗುರಿಯಾದ ತಪ್ಪಿತಸ್ಥರು ಮತ್ತು ಕ್ರೈಸ್ತ ನಂಬಿಕೆಯಿಲ್ಲದ ಇತರರು ಇರುತ್ತಿದ್ದರು. "ಕಟ್ಟಡದ ಒಟ್ಟು ಆಕಾರವು ಆಗಿನಕಾಲದ ರೋಮದ ನ್ಯಾಯಸದನದಂತೆ ಇದ್ದಿತು."[೩೧]

ಯೂರೋಪಖಂಡದಲ್ಲಿ ವಿವಿಧ ಸನ್ನಿವೇಶಗಳಿಗೆ ಅನುಗುಣವಾಗಿ ಕಟ್ಟಲ್ಪಟ್ಟ ದೇವಾಲಯಗಳ ಆಕಾರವನ್ನು ಹಿಂದೂ ದೇಶದಲ್ಲಿರುವ ಸಭೆಯೂ ಕೂಡ ಅನುಸರಿಸಬೇಕೆಂಬ ನಿರ್ಬಂಧಗಳು ಇರುವುದಿಲ್ಲ.

ಏಕೆಂದರೆ ದೇವಾಲಯಗಳು ಕಟ್ಟಡಗಳ ರಚನೆಯ ಆಯಾ ದೇಶದವರ ಭಕ್ತಿ, ಸಂಸ್ಕೃತಿ ಸಂಪ್ರದಾಯಗಳ ಮೇಲೆ ಚರ್ಚಿನ ಕಟ್ಟಡದ ರಚನೆಯೂ ಪ್ರತಿನಿಧಿಸುತ್ತದೆ.

ಚರ್ಚಿನ ಕಟ್ಟಡದ ರಚನೆಯಲ್ಲಿ ವಿಭಿನ್ನ ಅಭಿಪ್ರಾಯಗಳಿವೆ. ಕೆಲವರು ಮಳೆ ಬಿಸಿಲುಗಳನ್ನು ತಡೆಯುವುದಕ್ಕೆ ಸಾಧಾರಣವಾದ ಮೇಲ್ಭಾವಣಿಯುಳ್ಳ ನಾಲ್ಕು ಗೋಡೆಗಳಿಂದ ಕಟ್ಟಿದ ಕಟ್ಟಡವೇ ಸಾಕೆಂದು ಹೇಳುತ್ತಾರೆ. ಅದರ ಕೆಲವರು ಮೇಲ್ಭಾಗದಲ್ಲಿರುವ ಆಕಾಶ ಮಂಡಲವೇ ದೇವರ ಪ್ರಸನ್ನತೆಗೆ ಅತಿಶಯವಾದ ಗುರುತು ಎಂದು ಹೇಳುವರು. ಇನ್ನು ಕೆಲವರು ದೇವಾಲಯದ ಕಟ್ಟಡದಲ್ಲಿ ಪವಿತ್ರ ವಸ್ತುಗಳನ್ನಿಡುವುದಕ್ಕೆ ಕರ್ತನ ರಾತ್ರಿ ಬೋಜನದ ಪವಿತ್ರ ಸಂಸ್ಕಾರವು ನಡೆಯುವುದಕ್ಕೆ ಗರ್ಭಗುಡಿಯು ಇರಲೇಬೇಕೆಂದು ಭಾವಿಸುವರು. ಕೆಲವೆಡೆ ಕಟ್ಟಡದಲ್ಲಿ ಕ್ರೈಸ್ತಗೋಪುರಗಳನ್ನು ಮಾಡುವುದಕ್ಕೆ ಸ್ಥಳವಿರಬೇಕೆಂದು ಅಪೇಕ್ಷೆಪಡುತ್ತಾರೆ. ಕೆಲವರು ಮಹಮ್ಮದಿಯರನ್ನು ಆಕರ್ಷಿಸುವುದಕ್ಕೆ ಕಮಾನುಗಳುಳ್ಳ ಪ್ರಾರ್ಥನಾಲಯಗಳು ಇರಬೇಕೆಂದು ಹೇಳುತ್ತಾರೆ. ಕೆಲವು ಪವಿತ್ರ ಸಂಸ್ಕಾರಗಳನ್ನು ಪ್ರಧಾನವಾಗಿಟ್ಟುಕೊಂಡು ಅವುಗಳಿಗೆ ತಕ್ಕಂತೆ ದೇವಾಲಯದ ಆಕಾರವನ್ನಿಟ್ಟುಕ್ಕೊಂಡು ಕಟ್ಟಬೇಕೆಂದು ಹೇಳುವರು. ಸುವಾರ್ತಾ ವಾಕ್ಯವನ್ನು ಸಾರುವ ಉದ್ದೇಶದಿಂದ ಕಟ್ಟಡವನ್ನು ಕಟ್ಟಿಸಬೇಕೆಂದು ಅಪೇಕ್ಷೆ ಮಾಡುವರು. ಹೀಗೆ ಚರ್ಚಿನ ಕಟ್ಟಡದ ರಚನೆಯಲ್ಲಿ ಭಿನ್ನ ಭಿನ್ನ ವಿಚಾರಗಳು ಇರುವುದು ತಿಳಿದುಬರುತ್ತದೆ.

ನಮ್ಮ ದೇಶದಲ್ಲಿ ಇರುವ ಚರ್ಚುಗಳು ಯುರೋಪಿಯನ್ ಶೈಲಿ, ಗಾಥಿಕ ಶೈಲಿ, ಜರ್ಮನ ಶೈಲಿ ಹೀಗೆ ಬೇರೆ ಶೈಲಿಗಳಲ್ಲಿವೆ. ಆದರೆ ೧೯ನೇ ಶತಮಾನದಲ್ಲಿ ಪಾಶ್ಚಿಮಾತ್ಯರ ಪ್ರಭಾವದಿಂದ ಕಟ್ಟಡದ ರಚನೆಯಲ್ಲಿ ಬಹಳಷ್ಟು ಬದಲಾವಣೆಗಳಾದವು. ಇಂತಹ ಬದಲಾವಣೆಯಿಂದ ನೂರಾರು ಕಟ್ಟಡದ ರಚನೆಗಳು ಬೆಂಗಳೂರಿನಲ್ಲಿ ಕಂಡುಬರುತ್ತದೆ. ಕಾರಣ ಅಂದಿನ ಸಂದರ್ಭದಲ್ಲಿ ಲೋಕೋಪಯೋಗಿ ಅಧಿಕಾರಿಗಳು ಇಂಜನಿಯರ್‌ಗಳು ಪಾಶ್ಚಿಮಾತ್ಯರೇ ಆಗಿದ್ದರು.

ಇಂತಹ ಪಾಶ್ಚಿಮಾತ್ಯರಿಂದ ರಚನೆಯಾದ ಕಟ್ಟಡಗಳು ಬೆಂಗಳೂರಿನಲ್ಲಿ ಬಹಳಷ್ಟು ಚರ್ಚಿನ ಕಟ್ಟಡಗಳಿವೆ. ಆಧುನಿಕ ಕಾಲದಲ್ಲಿ ರಚನೆಯಾದ ಚರ್ಚಿನ ಕಟ್ಟಡಗಳು ಸಮಕಾಲೀನ ವಾಸ್ತುಶೈಲಿ ಮಾದರಿಗಳು. "ಯುರೋಪಿಯನ್ ಎಂಜನಿಯರರು ತಮ್ಮೊಂದಿಗೆ ಅಯೋನಿಕ, ಡೋರಿಕ, ಕೊರಿನ್ಸಿಯನ್ ಮತ್ತು ಮಿಶ್ರ ಶೈಲಿಗಳನ್ನು ತಂದರು."[೨]

ಚರ್ಚುಗಳು ಅವುಗಳಿಗೆ ಬರುವ ದಾನಿಗಳ ಆದಾಯದ ಮೇಲೆ ಪೂಜಾ ವಿಧಿವಿಧಾನಗಳ ಮೇಲೆ ಆಯಾ ಸ್ಥಳೀಯ ಜನರ ಸಂಸ್ಕೃತಿಯ, ಸಮಾಜವನ್ನು ಪ್ರತಿನಿಧಿಸುವಂತೆ ಕಟ್ಟಡಗಳು ರಚನೆಯಾಗುತ್ತವೆ. ಈ ಚರ್ಚುಗಳು ವಿವಿಧ ಕಾಲಘಟ್ಟಗಳಲ್ಲಿ ವಿವಿಧ ಆಯಾಮಗಳನ್ನು ಪಡೆಯುವುದು ಕಂಡುಬರುತ್ತದೆ.

ಕರ್ನಾಟಕ ಹಲವಾರು ಪ್ರದೇಶಗಳಲ್ಲಿ ಕ್ರೈಸ್ತಮಿಶನರಿಗಳು ಕ್ರೈಸ್ತ ಧರ್ಮದ ಪ್ರಚಾರ ಕಾರ್ಯವನ್ನು ಮಾಡಿದ ನಂತರ ಅಲ್ಲಲ್ಲಿ ಕ್ರೈಸ್ತ ಚರ್ಚುಗಳು ಪ್ರಾರ್ಥನಾ ದೇವಾಲಯಗಳಾಗಿ ರಚನೆಯಾದವು. ಧಾರವಾಡ ಜಿಲ್ಲೆಯಲ್ಲಿ ೧೮ ಹಾಗೂ ೧೯ನೇ ಶತಮಾನದಲ್ಲಿ ಚರ್ಚುಗಳು ರಚನೆಯಾದವು.

ಅಡಿಟಿಪ್ಪಣಿಗಳು

೧. ಸೂರ್ಯನಾಥ್ ಕಾಮತ್(ಸಂ), ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಧಾರವಾಡ ಜಿಲ್ಲೆ, ೧೯೫೫, ಪು.೫೦

೨. ಅದೇ, ಪು.೫೨

೩. ಮಂಗಲಗೌಡ ಎಂ., ಅಮ್ಮಿನಬಾವಿ ಪರಿಸರದ ಸಾಂಸ್ಕೃತಿಕ ಅಧ್ಯಯನ, ಎಂ.ಫಿಲ್.ಸಂಪ್ರಬಂಧ, ೨೦೦೯, ಪು.೧೭

೪. ಸೂರ್ಯನಾಥ್ ಕಾಮತ್(ಸಂ), ಪೂರ್ವೋಕ್ತ, ೧೯೫೫, ಪು.೫೨

೫. ಅದೇ,

೬. ಅದೇ, ಪು.೪

೭. ಅದೇ

೮. ಅದೇ

೯. ಮಂಗಲಾ ಎಂ.ಗೌಡಾ, ಪೂರ್ವೋಕ್ತ, ೨೦೦೯, ಪು.೧೭

೧೦. ಅದೇ, ಪು.೨೧

೧೧. ಸೂರ್ಯನಾಥ್ ಕಾಮತ್(ಸಂ), ಪೂರ್ವೋಕ್ತ, ೧೯೫೫, ಪು.೫೭

೧೨. ಡಾ.ಎಂ.ಎಂ.ಕಲಬುರ್ಗಿ, ಧಾರವಾಡ ತಾಲ್ಲೂಕಿನ ಶಾಸನಗಳು, ೧೯೭೬, ಪು.೭

೧೩. ಅದೇ

೧೪. ಅದೇ

೧೫. ಅದೇ

೧೬. ಅದೇ

೧೭. ಅದೇ

೧೮. ಮಂಗಲಾ ಎಂ.ಗೌಡಾ, ಪೂರ್ವೋಕ್ತ, ೨೦೦೧, ಪು.೨೫

೧೯. ಅದೇ

೨೦. ಅದೇ

೨೧. ಶ್ರೀ.ನ.ಹ.ಕಟಗೇರಿ, ಗತಕಾಲದ ಧಾರವಾಡ, ೨೦೦೭-೦೮, ಪು.೮

೨೨. ಜೆ.ಎಂ.ಜೋಗುಳ, ಕರ್ನಾಟಕದಲ್ಲಿ ಬಾಸೆಲ್‌ಮಿಶನ್, ೧೯೮೬-೮೭, ಪು.೨

೨೩. ಅದೇ

೨೪. ಅಂಬಳಿಕೆ ಹಿರಿಯಣ್ಣ, ಕನ್ನಡ ವಿಶ್ವಕೋಶ, ೨೦೦೯, ಪು.೨೯೩

೨೫. ಅದೇ, ಪು.೨೯೫

೨೬. ಹಾಮಾನಾಯಕ, ಕನ್ನಡ ವಿಶ್ವಕೋಶ ಸಂಪುಟ-೫, ೧೯೭೨, ಪು.೬೦೪

೨೭. ಅದೇ, ಪು.೬೦೫

೨೮. ಡಾ.ಅಂಬಳಿಕೆ ಹಿರಿಯಣ್ಣ, ಪೂರ್ವೋಕ್ತ ೨೦೦೯, ಪು.೨೩೧

೨೯. ಎಚ್ಟ್‌ಸ್ಕೆ, ಅವಲೋಕನ, ೧೯೮೬, ಪು.೧೯೫

೩೦. ಸಿ.ಬಿ.ಫರ್ತ, ಪ್ರಾಚೀನ ಕ್ರೈಸ್ತ ಸಭಾ ಚರಿತ್ರೆ, ೧೯೪೧, ಪು.೧೨೫

೩೧. ಅದೇ

೩೨. ಬರಗೂರ ರಾಮಚಂದ್ರಪ್ಪ, ಕರ್ನಾಟಕ ಸಂಗಾತಿ, ೨೦೦೨, ಪು.೪೧೧

ಅಧ್ಯಾಯ ೩

ಕ್ರೈಸ್ತ ಮಿಷನರಿಗಳು

೩.೧. ಧಾರವಾಡ ಜಿಲ್ಲೆಯ ಕ್ರೈಸ್ತ ಮಿಷನರಿಗಳು

೩.೨. ಧಾರವಾಡ ಜಿಲ್ಲೆಯ ಪ್ರಮುಖ ಚರ್ಚುಗಳು

೩

ಕ್ರೈಸ್ತ ಮಿಶನರಿಗಳು

ಭಾರತದ ಹಲವಾರು ಪ್ರದೇಶಗಳನ್ನು ಕ್ರೈಸ್ತ ಮಿಶನರಿಗಳು ತಮ್ಮ ಧರ್ಮ ಪ್ರಚಾರದ ಕಾರ್ಯದಲ್ಲಿ ಒಳಪಡಿಸಿಕೊಂಡರು. ಅದೇ ವೇಳೆಗೆ ಕ್ರೈಸ್ತಮಿಶನರಿಗಳು ೧೭ನೇ ಶತಮಾನದಲ್ಲಿ ಕರ್ನಾಟಕವನ್ನು ಪ್ರವೇಶಿಸಿದರು. ಕರ್ನಾಟಕದಲ್ಲಿ ಕ್ರಿ.ಶ.೧೭೯೯ರಂದು ಟಿಪ್ಪುಸುಲ್ತಾನ ೪ನೇ ಆಂಗ್ಲೋ ಯುದ್ಧದಲ್ಲಿ ಮಡಿದನು. ಆಗ ಇಂಗ್ಲೀಷರಿಗೆ ಕರ್ನಾಟಕದ ಅನೇಕ ಪ್ರದೇಶಗಳು ವಶವಾದವು. ಅಂತಹ ಸಂದರ್ಭದಲ್ಲಿ ಪಶ್ಚಿಮದಲ್ಲಿ ಪ್ರಬಲರಾಗಿದ್ದ ಪೇಶ್ವೆಯವರು ೧೮೧೮ರಲ್ಲಿ ಯುದ್ಧದಲ್ಲಿ ಸೋಲುವುದರ ಮೂಲಕ ಬ್ರಿಟೀಷರು ಕರ್ನಾಟಕದ ಬಹುಪಾಲು ಪ್ರದೇಶವನ್ನು ಆಳ್ವಿಕೆಗೆ ಒಳಪಡಿಸಿಕೊಂಡರು.

ಕರ್ನಾಟಕದಲ್ಲಿ ಬ್ರಿಟಿಷರ ನೇರವಾದ ಆಳ್ವಿಕೆಗೆ ಒಳಗಾದ ಪ್ರದೇಶ ಎಂದರೆ 'ಕೆನರಾ'(ಧಾರವಾಡ, ಬಿಜಾಪುರ, ಬೆಳಗಾಂ) ಪ್ರದೇಶದ ನಂತರ ಬಳ್ಳಾರಿ ಪ್ರದೇಶ, ಬ್ರಿಟಿಷರು ಪೇಶ್ವೆಯವರಿಂದ ಧಾರವಾಡವನ್ನು ೧೮೧೮ರಲ್ಲಿ ವಶಪಡಿಸಿಕೊಂಡರು. ಆ ಸಂದರ್ಭದಲ್ಲಿ ಕ್ರೈಸ್ತ ಮಿಶನರಿಗಳು ಧಾರವಾಡಕ್ಕೆ ಆಗಮಿಸಿದರು. ಆದರೆ ಅದಕ್ಕೂ ಪೂರ್ವದಲ್ಲಿ ೧೭ನೇ ಶತಮಾನದಲ್ಲಿ ಕ್ಯಾಥೋಲಿಕ್ ಕ್ರೈಸ್ತರು ಕರ್ನಾಟಕ ಹಲವು ಪ್ರದೇಶಕ್ಕೆ ಆಗಮಿಸಿದರೂ ಕೇವಲ ವ್ಯಾಪಾರ ಉದ್ದೇಶವನ್ನು ಹೊಂದಿದ್ದರು. ಆದ್ದರಿಂದ ಅವರನ್ನು ಕ್ರೈಸ್ತ ಮಿಶನರಿಗಳೆಂದೂ ಕರೆಯಲು ಸಾಧ್ಯವಿಲ್ಲ. ೧೮ನೇ ಶತಮಾನದ ಆರಂಭದ ದಶಕಗಳಲ್ಲಿ ಹಾಗೂ ೧೯ನೇ ಶತಮಾನದಲ್ಲಿ ಕ್ರೈಸ್ತ ಮಿಶನರಿಗಳು ಧರ್ಮ ಪ್ರಸಾರ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿಕೊಂಡರು. ಕ್ರೈಸ್ತ ಮಿಶನರಿಗಳ ಮುಖ್ಯ ಉದ್ದೇಶ ಕ್ರೈಸ್ತ ಧರ್ಮದ ಪ್ರಚಾರ ಕಾರ್ಯವಾಗಿತ್ತು.

ಒಂದು ಆಡಳಿತ, ವ್ಯವಹಾರ

ಎರಡು, ಮುದ್ರಣ ಯಂತ್ರ

ಮೂರು, ಕ್ರೈಸ್ತ ಮತ ಪ್ರಚಾರ

ನಾಲ್ಕು ಹೊಸ ಶಿಕ್ಷಣ ಪದ್ಧತಿ ಮತ್ತು ಹೊಸ ವಿಚಾರ, ಸುಧಾರಣೆ, ಚರ್ಚುಗಳ ರಚನೆ ಸುಧಾರಣೆಯ ವಿಚಾರಗಳನ್ನು ಹೊಂದಿದ್ದರು. ಕರ್ನಾಟಕದ ಪ್ರಮುಖ ಪ್ರದೇಶಗಳಾದ ಮಂಗಳೂರು,

[illegible]

[illegible]

[illegible]

[illegible]

ಬೆಂಗಳೂರು, ಮೈಸೂರು, ಬೆಳಗಾಂ, ಬಳ್ಳಾರಿ ಪ್ರದೇಶಗಳಲ್ಲಿ ಕ್ರೈಸ್ತ ಮಿಶನರಿಗಳ ಕೇಂದ್ರಗಳು ಸ್ಥಾಪಿತವಾದವು.

೧೮೧೮ರಲ್ಲಿ ಬ್ರಿಟೀಷರು ಪೇಶ್ವೆಯವರೊಂದಿಗೆ ಧಾರವಾಡ ಸಭೆಯನ್ನು ವಶಪಡಿಸಿಕೊಂಡರು. ಆಗ ಧಾರವಾಡ ಮುಂಬೈ ಪ್ರಾಂತದಲ್ಲಿತ್ತು. ಧಾರವಾಡದಲ್ಲಿ ಮೊದಲಿಗೆ ರೋಮನ ಕ್ಯಾಥೋಲಿಕ ಮಿಶನರಿಗಳ ಧರ್ಮ ಪ್ರಸಾರದ ಕಾರ್ಯ ನಡೆದಿತ್ತು. ಜೊತೆಗೆ ಬ್ರಿಟಿಷ್ ಅಧಿಕಾರಿಗಳು ತಂದಂತಹ ಸೈನಿಕರು, ತೆಲುಗು, ತಮಿಳು, ಮಲೆಯಾಳಂ ಭಾಷೆ ಮಾತನಾಡುವಂತಹ ಕ್ರೈಸ್ತರು ಇಲ್ಲಿ ಇದ್ದರು.

೧೮೧೦ರ ಸುಮಾರಿಗೆ ಇಂಗ್ಲೆಂಡದ ಲಂಡನ ಮಿಶನರಿಯು ಬಳ್ಳಾರಿಯಲ್ಲಿ ತನ್ನ ಸೇವಕರನ್ನು ಕರೆಯಿಸಿ ಸೇವೆ ಪ್ರಾರಂಭಿಸಿತು. ೧೮೨೦ರಲ್ಲಿ ಬೆಳಗಾವಿಯಲ್ಲಿ ೧೮೩೦ರ ಸುಮಾರಿಗೆ ಧಾರವಾಡದಲ್ಲಿ ಬ್ರಿಟಿಷರು ಕ್ರೈಸ್ತ ಆರಾಧನೆ ಮಾಡಿ ಹೋಗುತ್ತಿದ್ದರು. ಅದುವರೆಗೂ ಧಾರವಾಡದಲ್ಲಿ ಕ್ರೈಸ್ತರ ದೇವಾಲಯಗಳಾಗಲಿ, ವಿದ್ಯಾಕೇಂದ್ರಗಳಾಗಲಿ ಇರಲಿಲ್ಲ. ಧಾರವಾಡವು ಉಳಿದ ಪ್ರದೇಶಗಳಂತೆ ಒಂದು ಪ್ರದೇಶವಾಗಿ ಮಾತ್ರ ಸೀಮಿತವಾಗಿತ್ತು. ಧಾರವಾಡಕ್ಕೆ ಪ್ರೊಟಸ್ಟೆಂಟ ಮಿಶನರಿಗಳಾದ ಸ್ಯಾಮುಯಲ್ ಹೆಬಿಕ್ ಮತ್ತು ಅವರೊಂದಿಗೆ ಮೋಗ್ಲಿಂಗರು ಧಾರವಾಡಕ್ಕೆ ಕ್ರೈಸ್ತ ಮಿಶನರಿಗಳಾಗಿ ಆಗಮಿಸಿದರು.

ಸ್ಯಾಮುಯಲ್ ಹೆಬಿಕರು ೧೮೩೫-೩೬ರಲ್ಲಿ ಮಾಡಿದ ಪ್ರಥಮ ಸಂದರ್ಶನಗಳ ಫಲವಾಗಿ ಧಾರಾವಾಡದಲ್ಲಿ ಕ್ರೈಸ್ತರ ಸೇವೆ ಪ್ರಾರಂಭವಾಯಿತು. "೧೮೩೭ರಲ್ಲಿ ಇದು ಧಾರವಾಡ ಬಾಸೆಲ್ ಮಿಶನ್ ಅಧಿಕೃತ ಠಾಣ್ಯ(ಕೇಂದ್ರ) ಎಂದು ಸ್ವೀಕರಿಸಲ್ಪಟ್ಟಿತ್ತು."[೧] ಧಾರವಾಡ ಮುಂದೆ ಕ್ರೈಸ್ತ ಮಿಶನರಿಗಳ ಕೇಂದ್ರ ಶಾಲೆ, ಚರ್ಚುಗಳ ರಚನೆಗೆ ಬೆಳವಣಿಗೆಯಾಯಿತು. ಹೀಗೆ ಧಾರವಾಡದಲ್ಲಿ ಕಾರ್ಯನಿರ್ವಹಿಸಿದ ಮಿಶನರಿಗಳನ್ನು ಕೇಂದ್ರವಾಗಿಟ್ಟುಕೊಂಡು ಅದರೊಂದಿಗೆ ಅವರ ಕಾರ್ಯಗಳನ್ನು ವಿವರಿಸಲಾಗಿದೆ.

ಬಾಸೆಲ್ ಮಿಶನರಿಗಳ ಪರಂಪರೆ

೧೮೧೫ ಸೆಪ್ಟೆಂಬರ್ ೧೫ ರಂದು ಸ್ವಿಡ್ಜರಲ್ಯಾಂಡದ ಬಾಸೆಲ್ ಪಟ್ಟಣದಲ್ಲಿ ಆರು ಜನ ಕ್ರೈಸ್ತ ಭಕ್ತರು ಕೂಡಿಬಂದಿದ್ದರು. ಪ್ರಾರ್ಥನಾ ಪೂರ್ವಕವಾಗಿ ಧ್ಯಾನ ಮಾಡಿ 'ಇವ್ಯಾಂಜಲಿಕಲ್ ಮಿಶನರಿ ಸೊಸೈಟಿ ಆಫ್ ಬಾಸೆಲ್' ಎಂಬ ಸಂಘವನ್ನು ಸ್ಥಾಪಿಸಿಕೊಂಡರು. ಈ ಮೊದಲು ೧೭೮೦ರಲ್ಲಿ ಸ್ಥಾಪನೆಯಾಗಿದ್ದ ಜರ್ಮನ ಭಾಷೆಯ ಜನರ ಸಂಘ ಎಂಬುದರ ಶಿಸುವಾಗಿ ಬಾಸೆಲ್ ಮಿಷನ್ ಜನ್ಮತಾಳಿತು.

ಬಾಸೆಲ್ ಮಿಶನ್ ಸಂಸ್ಥೆ ಸ್ಥಾಪನೆಯ ಉದ್ದೇಶವೆನೆಂದರೆ ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ಹರಡಿರುವ ಕ್ರೈಸ್ತರ ಅನುಯಾಯಿಗಳನ್ನು, ಯೇಸುವಿನ ಭಕ್ತರನ್ನು ಐಕ್ಯತೆಯನ್ನು ತರುವುದು ಈ ಮಿಶನ್ ಮುಖ್ಯ ಉದ್ದೇಶವಾಗಿದೆ. ಬಾಸೆಲ್ ಮಿಶನ್ ಕಾಲೇಜು ಸ್ಥಾಪನೆಯಾದ ನಂತರ ಅದರ ಚಟುವಟಿಕೆಯ

ಕಾರ್ಯಗಳು ವಿಸ್ತಾರವಾಗುತ್ತಾ ನಡೆದವು. ಬಾಸೆಲ್ ಮಿಶನ್ ಸಂಸ್ಥೆಯಲ್ಲಿ ಕಾಲೇಜು ಮುಖ್ಯವಾಗಿ ವಿದೇಶಗಳಿಗೆ ಶಾಂತಿ ಹಾಗೂ ಯೇಸುವಿನ ಶುಭವಾರ್ತೆಯನ್ನು ಒಯ್ಯುವ ಮಹಾಕಾರ್ಯಕ್ಕೆ ತರಬೇತಿಯನ್ನು ಕೊಡುವುದೇ ಈ ಕಾಲೇಜಿನ ಮುಖ್ಯ ಉದ್ದೇಶವಾಗಿತ್ತು. 'ಚರ್ಚ್ ಮಿಶನರಿಯ ಸೊಸೈಟಿ' ಕಳುಹಿಸಿದ ಮೊದಲಿನ ಮಿಶನರಿಗಳಲ್ಲಿ ಅನೇಕರು ಬಾಸೆಲ್ ಮಿಶನ್ ಸಂಸ್ಥೆಯಲ್ಲಿ ತರಬೇತಿ ಹೊಂದಿದ ಜರ್ಮನ್‌ರಾಗಿದ್ದರು. ಅಂಥವರಲ್ಲಿ ಪ್ರಮುಖರಾದವರೆಂದರೆ ಬರದ್ವಾನದ ಜೆ.ಜೆ.ವೈಟ್ ಬ್ರನ್ಡ್ ಇರ್ನೊರ್ವ ವ್ಯಕ್ತಿ ರೆನ್ನೆವಲ್ಲಿಯ ಸಿ.ಟಿ.ರನಿಯಸ್ ಎಂಬುವರು ಪ್ರಮುಖರಾಗಿದ್ದರು.

ಭಾರತದಲ್ಲಿ ಈ ಮೊದಲು ಬಂದಿದ್ದ ಬ್ರಿಟಿಷ್ ಡಚ್ ಮಿಶನರಿಗಳ ಅಭಿಪ್ರಾಯವನ್ನು ತಿಳಿದುಕೊಂಡಿದ್ದ ಬಾಸೆಲ್ ಮಿಶನ್ ಭಾರತದಲ್ಲಿ ಮಿಶನರಿ ಕೇಂದ್ರಗಳನ್ನು ಸ್ಥಾಪಿಸಲು ಅನುಕೂಲಕರವಾದ ಸೇವೆ ಮಾಡಲು ಯೋಗ್ಯವಾದ ಸ್ಥಳವೆಂದು ಅರಿತರು. ಇದರಿಂದಾಗಿ ಬಾಸೆಲ್ ಮಿಶನ್ ಸಂಸ್ಥೆಯು ಕ್ರಿ.ಶ.೧೮೩೪ರಿಂದ ಭಾರತದಲ್ಲಿ ತನ್ನ ಸೇವೆಯನ್ನು ಪ್ರಾರಂಭಿಸಿತು.

ಬಾಸೆಲ್ ಮಿಶನ್ ಸಂಸ್ಥೆಯಿಂದ ತರಬೇತಿ ಪಡೆದವರನ್ನು ಅದರ ಯೋಗ್ಯತೆಯ ಅನುಸಾರವಾಗಿ, ಧಾರ್ಮಿಕ, ಸಾಮಾಜಿಕ, ಔದ್ಯೋಗಿಕ, ವೈದ್ಯಕೀಯ ಹೀಗೆ ಮುಂತಾದ ಕ್ಷೇತ್ರಗಳನ್ನು ನಿರ್ಮಿಸಿ ಅವರಿಗೆ ಕಾರ್ಯನಿರ್ವಹಿಸಲು ವಹಿಸಿ ಕಳಿಸಿಕೊಟ್ಟಿತು.

ಜಾರ್ಜಶ್ನೆಲ್ ಬಾಕ್ ಹೇಳುವಂತೆ - ಈ ರೀತಿಯ ವಿಭಾಗ ಕ್ರಮವು ಕ್ರೈಸ್ತಮತಕ್ಕೆ ಜನರನ್ನು ಸೇರಿಸುವುದರಲ್ಲಿ ಒಂದು ರೀತಿಯ ಮಧ್ಯಮ ಮತ್ತು ನಿಧಾನವಾಗಿ ಪರಿಣಾಮಿಸಿತು ಎಂದು ಹೇಳಿದ್ದಾರೆ. ಮಿಶನರಿಗಳ ಕೆಲಸಕ್ಕೆ ಅವರ ಹೆಂಡತಿಯರು ತುಂಬಾ ಸಹಾಯಕಾರಿಯಾಗುತ್ತಿದ್ದರು. ಮಿಶನರಿಗಳು "ಧಾರ್ಮಿಕ ಜೀವನದಲ್ಲಿ ಆಸಕ್ತಿಯಿರುವ ಮಹಿಳೆಯರನ್ನು ಈ ಮಿಶನರಿಗಳು ಮದುವೆಯಾಗುತ್ತಿದ್ದರೆಂದು ತೋರುತ್ತದೆ."[೨] ಮಿಶನರಿಗಳು ಯಾವಾಗಲು ತನ್ನ ಭಾಷೆಯನ್ನು ಹೊರತುಪಡಿಸಿ ಬೇರೊಂದು ಭಾಷೆ ಯಲ್ಲಿ ಕಡ್ಡಾಯವಾಗಿ ಪ್ರಾವಿಣ್ಯತೆಯನ್ನು ಹೊಂದುವುದು ಕಡ್ಡಾಯವಾಗಿತ್ತು. ಹೀಗಾಗಿ ಮಿಶನರಿಗಳು ಬೇರೊಂದು ಭಾಷೆಯಲ್ಲಿ ಪರಿಪೂರ್ಣತೆಯನ್ನು ಪಡೆಯುತ್ತಿದ್ದರು. ಹೀಗೆ ಪ್ರಾವಿಣ್ಯತೆ ಪಡೆದ ಪ್ರಮುಖ ಉದಾಹರಣೆ ಎಂದರೆ ಕನ್ನಡದಲ್ಲಿ ಕಿಟಲ್ ಮತ್ತು ಜಿಗ್ಲರ ತುಳುವಿನಲ್ಲಿ ಮ್ಯಾನರ್ ಪ್ರಮುಖರಾಗಿದ್ದಾರೆ.

ಕರ್ನಾಟಕದಲ್ಲಿ ಬಾಸೆಲ್‌ಮಿಶನ್

ಕ್ರಿ.ಶ.೧೮೩೩ರಲ್ಲಿ ಬಾಸೆಲ್ ಮಿಶನ್ ಭಾರತದಲ್ಲಿ ತಮ್ಮ ಸೇವಾ ಕಾರ್ಯವನ್ನು ನಿರ್ಧರಿಸಿತು. ಬಾಸೆಲ್ ಮಿಶನ್ ಮೊದಲು ಕರ್ನಾಟಕದ ಮಂಗಳೂರನ್ನು ಆಯ್ದುಕೊಂಡಿತು. ಈ ಸ್ಥಳದಲ್ಲಿ ಸೇವಾಕೇಂದ್ರ ತೆರೆಯಲು ನಿರ್ಧರಿಸಿತು. ಸ್ವಾಮುಯಲ್ ಹೆಬಿಕ್ ಮತ್ತು ಅವರೊಂದಿಗೆ ಲೆಹ್ನರ ಹಾಗೂ ಕ್ರಿಸ್ಟೋಪಗ್ರನರ ೧೮೩೪ ಅಕ್ಟೋಬರ್ ೪ರಂದು ಮಂಗಳೂರಿಗೆ ಬಂದರು.

ಪಾಶ್ಚಿಮಾತ್ಯ ದೇಶದಿಂದ ಆಗಮಿಸಿ ಕ್ರೈಸ್ತ ಧರ್ಮದ ಪ್ರಚಾರ ಹಾಗೂ ಮತಾಂತರಕ್ಕಾಗಿ ಬಂದ ಮಿಶನರಿಗಳಲ್ಲಿ ಪ್ರಮುಖವಾಗಿ ೪ ಸಂಸ್ಥೆಗಳು ಶ್ರಮಿಸಿದವು. ಅವುಗಳಲ್ಲಿ ಬಾಸೆಲ್ ಮಿಶನ್ ಸಂಸ್ಥೆಯೂ ಕೂಡ ಒಂದಾಗಿತ್ತು. "ಇಲ್ಲಿಗೆ ಬಂದ ೫೦ ಮಿಶನರಿಗಳಲ್ಲಿ ೭ ಜನರು ಔದ್ಯೋಗಿಕ ಕ್ಷೇತ್ರದಲ್ಲೂ, ೧೦ ಜನ ಮುದ್ರಣ ಇಲಾಖೆ, ೧೮ ಜನ ಮತಪ್ರಚಾರ, ೧೦ ಜನ ಶಿಕ್ಷಣ ಇಲಾಖೆ, ೫ ಜನ ಸಾಹಿತ್ಯ, ಗ್ರಂಥೋದ್ಯಮದಲ್ಲಿ ತೊಡಗಿದರೆಂದು ಹೇಳಬಹುದು."[೩] ಕರ್ನಾಟಕದ ಹಲವಾರು ಪ್ರದೇಶಗಳ ಮೇಲೆ ಕ್ರೈಸ್ತ ಮಿಶನರಿಗಳು ಕಾರ್ಯನಿರ್ವಹಿಸಿದರು. ೧೮೧೮ರಲ್ಲಿ ಬ್ರಿಟೀಷರು ಪೇಶ್ವೆಯವರಿಂದ ಧಾರವಾಡ ವಶಪಡಿಸಿಕೊಂಡಂತೆ ಕ್ರೈಸ್ತ ಮಿಶನರಿ ಆಗಮಿಸಿದರು.

೧. ರೆವರೆಂಡ್ ಸ್ವಾಮುಯಲ್ ಹೆಬಿಕ್

ಜರ್ಮನಿಯ ವಿತ್ತೆಂಬರ್ಗನಲ್ಲಿರುವ ನೆಲ್ಲಿಂಗೆನ್ ಎಂಬಲ್ಲಿ ೧೮೦೩ ಏಪ್ರಿಲ್ ೨೯ ರಂದು ಸ್ವಾಮುಯಲ್ ಹೆಬಿಕ್ ಜನಿಸಿದರು. ಮನೆಯಲ್ಲಿನ ಬಡತನದ ಕಾರಣ ಸ್ವಾಮಯಲ್‌ರು ಮನೆಯಲ್ಲಿಯೇ ಶಿಕ್ಷಣ ಪಡೆದರು. ತಂದೆ ಸಾಮುಯಲ್‌ರವರಿಗೆ ಲ್ಯಾಟಿನ್, ಫ್ರೆಂಚ್ ಭಾಷೆಯನ್ನು ಹೇಳಿಕೊಟ್ಟನು. ೧೮೧೭ರ ಮೇ ೪ ರಂದು ದೃಢೀಕರಣ ಸಂಸ್ಕಾರವಾಯಿತು. ೧೮೩೧ರಲ್ಲಿ ಬಾಸೆಲ್ ಮಿಶನ್ ಕಾಲೇಜಿಗೆ ಸೇರಿದರು. ಸ್ವಾಮುಯಲ್ ಯೇಸುವಿನ ನಿಜವಾದ ಭಕ್ತನಾಗಿದ್ದನು. ಜನರನ್ನು ಹೇಗೆ ಯೇಸುವಿನ ಕಡೆಗೆ ಒಲಿಸಿಕೊಳ್ಳಬೇಕೆಂಬ ವಿದ್ಯೆ ಹಾಗೂ ಆಸಕ್ತಿ ಅವನಲ್ಲಿರುವುದರಿಂದ ಹೇಬಿಕರನ್ನು ಭಾರತಕ್ಕೆ ಮಿಶನರಿಯಾಗಿ ಕಳುಹಿಸಬೇಕೆಂದು ಬಾಸೆಲ್ ಮಿಶನ್ ಸಂಸ್ಥೆಯು ನಿರ್ಧರಿಸಿತು.

ಸ್ವಾಮುಯೆಲ್ ಹೇಬಿಕ್ ರವರು ಪ್ರೊಟೆಸ್ಟೆಂಟ್ ಮಿಶನರಿಯಾಗಿದ್ದರು. ಕ್ರೈಸ್ತಧರ್ಮದ ಹೊಣೆಯನ್ನು ಹೊತ್ತುಕೊಂಡು ತಮ್ಮ ಸಹಾಯಕರಾದ ಲೆಹ್ನರ ಮತ್ತು ಗ್ರೆಯರ ಇವರೊಡನೆ ಹೆಬಿಕ್‌ರು ೧೪ ಅಕ್ಟೋಬರ್ ೧೮೩೪ರಂದು ಹಡಗಿನಲ್ಲಿ ಭಾರತಕ್ಕೆ ಪ್ರಪ್ರಥಮವಾಗಿ ಕಾಲಿಟ್ಟರು. ತದನಂತರ ಅಕ್ಟೋಬರ್ ೩೦ ರಂದು ಮಂಗಳೂರಿನಲ್ಲಿ ನೆಲೆನಿಂತರು. ಕರ್ನಾಟಕಕ್ಕೆ ಬಂದ ಹೆಬಿಕರು ಅಖಿಲ ಕರ್ನಾಟಕವನ್ನು ಸಂಚರಿಸಬೇಕೆಂದು ಜೊತೆಗೆ ಬೈಬಲಿನ ಸುವಾರ್ತೆಯನ್ನು ಪ್ರಸಾರ ಮಾಡಬೇಕೆಂದು ಆಕಾಂಕ್ಷೆಯನ್ನು ಹೊಂದಿದ್ದರು.

೧೮೩೫ರ ಕೊನೆಗೆ ಹೆಬಿಕರು ಮಂಗಳೂರಿನಿಂದ ಹೊರಟು ಬೆಂಗಳೂರು, ಬಳ್ಳಾರಿ, ಮೊದಲಾದ ಕಡೆ ಸಂಚರಿಸಿದ ತದನಂತರ ಧಾರವಾಡಕ್ಕೆ ಬಂದರು. ಅದಕ್ಕೂ ಪೂರ್ವದಲ್ಲಿ ಕರ್ನಾಟಕದಲ್ಲಿ ವೆಸ್ಲಿಯನ್ ಮಿಶನರಿಗಳು ಸಲ್ಲಿಸಿದ ಸೇವೆಯನ್ನು ಪರಿಶೀಲಿಸಿದರು. ಧಾರವಾಡದಲ್ಲಿ ಬಾಸೆಲ್ ಮಿಶನ್ ಸಂಸ್ಥೆ ಸ್ಥಾಪನೆಯು ಕೂಡ ಆಕಸ್ಮಾತಾಗಿ ಒದಗಿಬಂತು. ಕಾರಣ ಧಾರವಾಡದ ಸೈನ್ಯದಲ್ಲಿರುವ ಕ್ರೈಸ್ತ ಅಧಿಕಾರಿಗಳಿಗೆ, ಸೈನಿಕರಿಗೂ, ಧರ್ಮೋಪದೇಶ ನೀಡುವುದು ಅತ್ಯಂತ ಅವಶ್ಯಕವಾಗಿತ್ತು. ನಿಸ್ಬೆತ್ ಎಂಬ

ಜಿಲ್ಲಾಧಿಕಾರಿಗಳೇ ಅಲ್ಲಿನ ಕ್ರೈಸ್ತರಿಗೆ ಬೋಧಕರಾಗಿದ್ದರು. ಆತನ ಮರಣದ ನಂತರ ಮೃತ್ಯಪತ್ರದ ಇಚ್ಛೆಯಂತೆ ಧಾರವಾಡಕ್ಕೆ ಮಿಶನರಿಗಳನ್ನು ಕರೆತಂದರು. ಕೇವಲ ಎರಡು ವರ್ಷಗಳಲ್ಲಿ ಧಾರವಾಡ-ಮತ್ತು ಮಂಗಳೂರಿನ ಸ್ಥಳಗಳನ್ನು ಬಾಸೆಲ್ ಮಿಶನ್ ತನ್ನ ಮುಖ್ಯ ಕೇಂದ್ರಗಳಾಗಿ ಮಾಡಿಕೊಂಡಿತು.

ಹೆಬಿಕರ ಸೇವಾಕಾರ್ಯಗಳು ಹೆಚ್ಚಾಗಿದ್ದರಿಂದ ಅವರ ಸಹಾಯಕ್ಕಾಗಿ ಭಾರತಕ್ಕೆ ಬಂದ ಮಿಶನರಿಗಳಲ್ಲಿ ಮೋಗ್ಲಿಂಗರು ಪ್ರಮುಖರಾಗಿದ್ದರು.

ಮೊಗ್ಲಿಂಗರು ೧೮೩೬ ಡಿಸೆಂಬರ್ ೬ರಂದು ಮಂಗಳೂರಿಗೆ ಬಂದರು. ಆದರೆ ಹೆಬಿಕ್-ಮೊಗ್ಲಿಂಗ್ ಮಧ್ಯ ಸಹಾಯಕ್ಕಿಂತ ಸ್ವಲ್ಪ ಭಿನ್ನವಾದ ವಿಚಾರಗಳನ್ನು ಹೊಂದಿದ್ದರು. ಧಾರವಾಡ ಹಾಗೂ ಉತ್ತರ ಕನ್ನಡ ಸೀಮೆಗಳಿಗೆ ಮೊಗ್ಲಿಂಗ್‌ರ ಸೇವೆ ನೇಮಕವಾದ ಮೊಗ್ಲಿಂಗರನ್ನು ಹೆಬಿಕರೇ ಕರೆದುಕೊಂಡು ಬಂದರು. ೧೮೩೮ ಅಕ್ಟೋಬರ್ ತಿಂಗಳಿನಲ್ಲಿ ಹೆಬಿಕ್ ಮತ್ತೆ ಧಾರವಾಡಕ್ಕೆ ಬಂದರು. ಈ ಸಲ "ಹುಬ್ಬಳ್ಳಿಯಲ್ಲಿ ಸುವಾರ್ತೆಯನ್ನು ಪ್ರಚಾರದ ಸೇವೆಯನ್ನು ಸಂಸ್ಥಾಪಿಸಿ, ಆಗ ಕಲೆಕ್ಟರಾಗಿದ್ದ ಇ.ಬಿ.ಮಿಲ್ಸ್ ಅವರ ಸಹಾಯದಿಂದ ಬಾಸೆಲ್ ಮಿಶನ್ ಸಂಸ್ಥೆಗೆ ಒಂದು ಯೋಗ್ಯ ಸ್ಥಳವನ್ನು ದೊರೆಕಿಸಿಕೊಂಡರು, ಹುಬ್ಬಳ್ಳಿಯಲ್ಲಿರುವಾಗ ಹೆಚ್ಚು ಸಮಯವನ್ನು ಹೆಬಿಕರು ದೇಶಸಂಚಾರದಲ್ಲಿ ಕಳೆದರು."[೪]

ಹೆಬಿಕರು ಧಾರವಾಡಕ್ಕೆ ಬಂದಾಗ ಹೊಸ ಜನ, ಹೊಸ ಪ್ರದೇಶ, ನಡೆನುಡಿಗಳ ಪರಿಚಯವಿರಲಿಲ್ಲ. ಊಟ ಉಪಚಾರಗಳು, ಸ್ಥಳೀಯ ವಿದ್ಯಾರ್ಥಿಗಳು ಇದ್ದರೂ ಸಹ ಅಚಲವಾದ ಆತ್ಮವಿಶ್ವಾಸವನ್ನು ಹೊಂದಿದ್ದರು. ಆಗ ೩೨ ವರ್ಷದವರಾಗಿದ್ದ ಹೆಬಿಕರು ಜನರ ವಿಶ್ವಾಸವನ್ನು ಗಳಿಸಿಕೊಂಡರು.

ದೇವಾಲಯದ ಗಂಟೆ

ಬೆಳಗಾವಿಯ ಮಿಶನ್ನಿನ ರೇಬೆಯನ್ನನ್ ಧಾರವಾಡಕ್ಕೆ ಬಂದರು. ರೆಬೆಯನ್ನರು ಹೆಬಿಕರಿಗೆ ಮತ್ತು ಮೊಗ್ಲಿಂಗ್‌ರವರಿಗೆ ಈ ಮೊದಲು ತಾವು ಮಾಡುತ್ತಿದ್ದ ಕಾರ್ಯ ಒಪ್ಪಿಸಿದರು. ೧೮೩೭ ಜನವರಿ ೨೪ರಂದು ಧಾರವಾಡ ಬಾಸಿಲ್ ಮಿಶನ್ ಅಧಿಕೃತ ಕೇಂದ್ರವಾಯಿತು. ಹೆಬಿಕರು ಭಾರತದಲ್ಲಿ ೨೫ ವರ್ಷದ ಸೇವೆ, ಕರ್ನಾಟಕದಲ್ಲಿ ೬ ವರ್ಷ ಸೇವೆ, ಧಾರವಾಡ - ಹುಬ್ಬಳ್ಳಿಯೂ ೪ ವರ್ಷಗಳು ಸೇವೆಯನ್ನು ಮಾಡಿದರು.

ಬಾಸೆಲ್ ಮಿಶನ್ ಸಂಸ್ಥೆಯು ಧಾರವಾಡದಲ್ಲಿ ತೀವ್ರಗತಿಯಾಗಿ ಬೆಳೆಯುತ್ತಿರುವಾಗ ದೇವಾಲಯದ ಅವಶ್ಯಕತೆಯಾಯಿತು. ಇಂತಹ ಸಂದರ್ಭದಲ್ಲಿ ಸ್ಥಳೀಯ ಜನರ ಸಹಕಾರದಿಂದ, ಸರ್ಕಾರದ ಸಹಾಯದಿಂದ ಸಂಸ್ಥೆ ದೇವಾಲಯದ ಕಟ್ಟಡದ ಕೆಲಸಕ್ಕೆ ಕೈ ಹಾಕಿತು. ಲೆಹ್ನರವರು ದೇವಾಲಯದ ಕಟ್ಟಡ ಮೇಲ್ವಿಚಾರಣೆ ಮಾಡಿದರು. ಸ್ಥಳೀಯ ಜನರು ಹಾಗೂ ಸಲಕರಣೆಗಳನ್ನು ಉಪಯೋಗಿಸಿ ಕಟ್ಟಡದ(೧೮೪೪ರಲ್ಲಿ) ಕೆಲಸ ಪ್ರಾರಂಭಿಸಿ, ನಂತರ ೧೮೪೫ ಡಿಸೆಂಬರ್ ೧೪ರಂದು ಕಟ್ಟಡದ ರಚನೆಯ ಕಾರ್ಯ ಮುಗಿಯಿತು.

ಈ ದೇವಾಲಯ(ಚರ್ಚ)ಕ್ಕೆ ಗಂಟೆಯನ್ನು ಮುಂಬಯಿಯ ಕೆಲವು ಜನ ನೀಡಿದರು. ಈ ದೇವಾಲಯ ಯುರೋಪಿಯನ್ ಶೈಲಿಯ ವಸ್ತುವಿನ್ಯಾಸವನ್ನು ಹೊಂದಿದೆ. ೨೬ ಅಡಿ ಉದ್ದ, ೪೨ ಅಡಿ ಅಗಲವಾಗಿದೆ. ಮುಂಭಾಗದಲ್ಲಿ ೨೪ ಅಡಿ ಎತ್ತರದ ಗೋಪುರ ಇದೆ. ಗೋಪುರದಲ್ಲಿ ಗಂಟೆ ಅಳವಡಿಸಿದ್ದಾರೆ.

“ಧಾರವಾಡದಲ್ಲಿ ಹಿಂದೂಗಳಿಗೆ ದೇವಾಲಯಗಳಂತೆ, ಮುಸ್ಲಿಂರಿಗೆ ಮಸೀದಿಯಂತೆ, ಜೈನ, ಬೌದ್ಧ ದೇವಾಲಯಗಳಂತೆ ಕ್ರೈಸ್ತರ ದೇವಸ್ಥಾನ ಸ್ಥಾಪಿತವಾಗಿ ಇತಿಹಾಸ ನಿರ್ಮಿಸಿತು. ಪ್ರಥಮ ದಿನ ಪ್ರಾರ್ಥನೆಗೆ ೨೮ ಜನ ತಮಿಳರು, ಒಬ್ಬ ಕನ್ನಡಿಗ ಹಾಗೂ ಬೋರ್ಡಿಂಗ ಶಾಲೆಯ ೧೪ ಬಾಲಕಿಯರು ಇದ್ದರು””[೫] ಧಾರವಾಡದಲ್ಲಿ ಹೆಬಿಕ್‌ರ ಅಮೋಘ ಸೇವೆಯನ್ನು ಪರಿಗಣಿಸಿದ ಕ್ರೈಸ್ತರು ಈ ಮಹಾ ದೇವಾಲಯಕ್ಕೆ ೧೯೩೩ರಲ್ಲಿ “ಹೆಬಿಕ್ ಮೆಮೋರಿಯಲ್ ಚರ್ಚ್’ ಎಂದು ನಾಮಕರಣವಾಯಿತು.

ಭಾರತ ದೇಶದಲ್ಲಿ ಹೆಬಿಕರು ಹಲವಾರು ಪ್ರದೇಶಗಳಿಗೆ ಸಂಚರಿಸಿ ಧರ್ಮ ಪ್ರಚಾರಕ ಕಾರ್ಯನಿರ್ವಹಿಸಿದ ಹೆಬಿಕರು ೧೮೬೮ ಮೇ ೨೧ ರಂದು ಕೊನೆಯ ಉಸಿರೆಳೆದರು. ಹೆಬಿಕ್ ಸೇವೆಯು ಇಂದಿಗೂ ಅಜರಾಮರವಾಗಿ ಉಳಿದಿದೆ.

೨. ಡಾ.ಹೆರ್ಮನ್ ಫ್ರೆಡರಿಕ ಮೋಗ್ಲಿಂಗ್

ಕರ್ನಾಟಕದಲ್ಲಿ ಆಧುನಿಕ ಶಿಕ್ಷಣ, ಸಾಹಿತ್ಯ ಮತ್ತು ಕ್ರಿಶ್ಚಿಯನ್ ಮತ ಪ್ರಚಾರ ಕಾರ್ಯದಲ್ಲಿ ಬಾಸೆಲ್ ಮಿಷನ್ ವಹಿಸಿದ ಪಾತ್ರ ಮಹತ್ತರವಾಗಿದೆ. ಇದನ್ನು ಸ್ವಾಮುಯಲ್ ಹೆಬಿಕ್ ಎಂಬಾತನು ೧೮೩೪ರಲ್ಲಿ ಸ್ಥಾಪಿಸಿದ. ಈ ಸಂಸ್ಥೆಯಿಂದ ಕರ್ನಾಟಕಕ್ಕೆ ಬಂದ ಮಿಶನರಿಗಳಲ್ಲಿ ಅನೇಕರು ಸಾಹಿತ್ಯ ಕ್ಷೇತ್ರಕ್ಕೆ ಹಾಗೂ ಶಿಕ್ಷಣ ಕ್ಷೇತ್ರಕ್ಕೆ ಅಪಾರವಾದ ಸಾಧನೆಯನ್ನು ಮಾಡಿದ್ದಾರೆ. ಅಂತವರ ಪಾಲಿಗೆ ನಿಲ್ಲುವ ಪ್ರಮುಖ ವ್ಯಕ್ತಿಗಳಲ್ಲಿ ಹರ್ಮನ ಮೋಗ್ಲಿಂಗ್ ಸಹ ಒಬ್ಬರು.

ಹೆರ್ಮನ್ ಮೋಗ್ಲಿಂಗರು ಜರ್ಮನಿಯ ಪ್ರಾಕನ್ ಹೈಮನಲ್ಲಿ ೧೮೧೧ರಲ್ಲಿ ಜನಿಸಿದರು. ಮೋಗ್ಲಿಂಗರು ಮೂರು ವರ್ಷದವರಿದ್ದಾಗ ತಾಯಿಯನ್ನು ಕಳೆದುಕೊಂಡರು. ತಮ್ಮ ೧೮ನೇ ವಯಸ್ಸಿನಲ್ಲಿ ಟುಬೆನ ವಿಶ್ವವಿದ್ಯಾಲಯದಲ್ಲಿ ಡಾಕ್ಟರೇಟ್ ಪದವಿಯನ್ನು ಪಡೆದರು. ತದನಂತರ ಕ್ರೈಸ್ತಧರ್ಮ ಪ್ರಸಾರಕ್ಕಾಗಿ ಮಂಗಳೂರನ್ನು ತಲುಪಿದರು. ೧೮೩೬ರಲ್ಲಿ ಮೋಗ್ಲಿಂಗರು ಹೆಬಿಕ ಜೊತೆ ಸೇರಿದರು. “ಕೆಲಕಾಲದ ನಂತರ ಹೆಬಿಕ ಮತ್ತು ಮೋಗ್ಲಿಂಗರು ಇಬ್ಬರೂ ಜೊತೆಗೂಡಿ ೨೫-೧-೧೮೩೭ ರಂದು ಧಾರವಾಡಕ್ಕೆ ಆಗಮಿಸಿದರು.”[೬] ಮೋಗ್ಲಿಂಗ್ ಹಾಗೂ ಹೆಬಿಕರು ಧರ್ಮಪ್ರಚಾರ ಕಾರ್ಯವನ್ನು ಮಾಡುತ್ತಿದ್ದರು. ಅವರಿಬ್ಬರಲ್ಲಿಯೂ ಭಿನ್ನವಾದ ವಿಚಾರಧಾರೆಗಳಿದ್ದವು. ಹೆಬಿಕರು ಈ ಪ್ರವಾಸವನ್ನು ಕುದುರೆಯನ್ನು ಹತ್ತಿಕೊಂಡು ಪೂರೈಸಬೇಕೆಂದು ತಿಳಿಸಿದರು. ಮೋಗ್ಲಿಂಗರು ಕ್ರೈಸ್ತ ಪ್ರಭುವಿನ ಹಾಗೆ

[illegible]

ಕಾಲ್ನಡಿಗೆಯಿಂದಲೇ ಪೂರೈಸಿದರು. ಧಾರವಾಡದ ಜನರು ಮೋಗ್ಲಿಂಗರಿಗೆ ಹೃದಯಪೂರ್ವಕ ಸ್ವಾಗತವನ್ನು ನೀಡಿದರು.

“ನಮ್ಮ ನಾಡಿನೊಳಗೆ ಮೋಗ್ಲಿಂಗ್ ನೆಲೆಸಿದ ೨೪ ವರ್ಷಗಳಲ್ಲಿ ಅವನು ಒಂದೆಡೆ ನಿಲ್ಲದೆ ಸುತ್ತಾಡಿದವನಾದರೂ ಅವನ ಕಾರ್ಯ ಸಾಧನೆಯು

೧೮೩೭-೧೮೩೮ ಧಾರವಾಡ

೧೮೩೯-೧೮೫೧ ಮಂಗಳೂರು

೧೮೫೨-೧೮೬೦ ಕೊಡಗು

ಎಂಬುದಾಗಿ ಭಾಗ ಮಾಡಬಹುದು.”[೭] ಧಾರವಾಡದಿಂದ ಹಿಂತಿರುಗಿ ೧೮೩೮ರಲ್ಲಿ ಮಂಗಳೂರಿಗೆ ಬಂದು ದೈವಜ್ಞಾನ ಶಾಲೆಯ(ಬೋಧಕರ ಶಾಲೆ)ಲ್ಲಿ ಅಧ್ಯಾಪನೆಯಲ್ಲಿ ತೊಡಗಿದ ನಂತರ ಮೋಗ್ಲಿಂಗರು ನಿಜವಾದ ಕಾರ್ಯವನ್ನು ಆರಂಭಿಸಿದರು. ಕ್ರಿ.ಶ.೧೮೫೨ರಲ್ಲಿ ಕೊಡಗಿಗೆ ಬೇಟಿ ನೀಡಿದರು. ಕೊಡಗು ಮೋಗ್ಲಿಂಗರ ಕ್ಷೇತ್ರವಾಯಿತು. ಮೋಗ್ಲಿಂಗರು ಕೊಡಗಿನವರ ಶಿಕ್ಷಣದ ಅಭಿವೃದ್ಧಿಯ ಬಗ್ಗೆ ಹೆಚ್ಚು ಪರಿಶ್ರಮಿಸಿದರು. “ಸರ್ಕಾರದ ಧನಸಹಾಯ ಒದಗಿ ಬರುವ ಮೊದಲೇ ಅಲ್ಲಿಯ ಏಕಮೇವ ಇಂಗ್ಲೀಷ್ ಶಾಲೆಯನ್ನು ತನ್ನ ಕೈಗೆ ತೆಗೆದುಕೊಂಡು ನಡೆಸಿದರು.”[೮] ಮೋಗ್ಲಿಂಗರು ತಾವೇ ಸ್ವತಃ ಮದ್ರಾಸಿಗೆ ಹೋಗಿ ಕೊಡುಗು ಶೈಕ್ಷಣಿಕ ಅಭಿವೃದ್ಧಿ ಯೋಜನೆಗಳನ್ನು ಪಾಸು(ಮಂಜೂರು) ಮಾಡಿಸಿಕೊಂಡು ಬರುತ್ತಿದ್ದರು. ಇದು ಮೋಗ್ಲಿಂಗರ ಶೈಕ್ಷಣಿಕ ಕ್ರಿಯಾಚಟುವಟಿಕೆಗೆ ಹಿಡಿದ ಕನ್ನಡಿಯಾಗಿದೆ.

ಮೋಗ್ಲಿಂಗ್ ಒಬ್ಬ ಅತ್ಯಂತ ಸರಳ ಜೀವಿಯಾಗಿದ್ದರು. ಅವರು ಜನಸಾಮಾನ್ಯರಲ್ಲಿ ಬೆರೆತು ಅವರಲ್ಲಿಯೇ ತಾವು ಸಹ ಒಬ್ಬರು ಎನ್ನುವ ಸ್ವಭಾವವನ್ನು ಹೊಂದಿದ್ದರು. ಮಂಗಳೂರಿನಿಂದ ಹುಬ್ಬಳ್ಳಿಗೆ ಸುಮಾರು ಇನ್ನೂರು ಮೈಲಿ ದೂರವನ್ನು ಯಾವ ವಿಶ್ರಾಂತಿ ತೆಗೆದುಕೊಳ್ಳದೇ ಸತತವಾಗಿ ನಡೆಯುತ್ತಾ ಮೋಗ್ಲಿಂಗರು ತಲುಪಿದರು. “ಮಂಗಳೂರಿನಲ್ಲಿದ್ದಾಗ ಮಿಶನ್ ಬಂಗ್ಲೆಯನ್ನು ಬಾಡಿಗೆಗೆ ಕೊಟ್ಟು ಒಂದು ಗುಡಿಸಲನ್ನು ಬಾಡಿಗೆ ಹಿಡಿದು ಅದರಲ್ಲಿ ವಾಸವಾಗಿದ್ದರು.”[೯] ಮಂಗಳೂರಿನಲ್ಲಿ ಮೋಗ್ಲಿಂಗರು ವೈಗಲ್ ಜೊತೆ ಸೇರಿ ಅಂಗ್ಲೋವೆರ್ನಾಕುಲರ ಶಾಲೆಯನ್ನು ಸ್ಥಾಪಿಸಿರುವುದು ಇದು ಅವರ ಸಾಧನೆಯಾಗಿದೆ. ಈ ಶಾಲೆ ನಿರ್ವಹಣೆ ಯಶಸ್ವಿಯಾಗಿದ್ದರಿಂದ ೧೮೪೪ ಜನವರಿ ೭ ರಂದು ಮಂಗಳೂರಿನಲ್ಲಿ ಮೂರು ಜನ ಬ್ರಾಹ್ಮಣ ಯುವಕರು ಕ್ರೈಸ್ತರಾದರೆಂದು ಪ್ರಕಟವಾಗಿದೆ.

ಹೆಬಿಕರು ಹರ್ಮನ ಮೋಗ್ಲಿಂಗರನ್ನು ಧಾರವಾಡ ಸೇವೆ ಮಾಡಲು ನೇಮಿಸಿದರು. “ಧಾರವಾಡದಲ್ಲಿ ಮೋಗ್ಲಿಂಗರು ಸುವಾರ್ತೆಯನ್ನು ಪ್ರಸಾರಣೆಯೊಂದಿಗೆ ಒಂದು ಇಂಗ್ಲೀಷ್ ಶಾಲೆಯನ್ನು ಪ್ರಾರಂಭಿಸಿದರು.”[೧೦] ಈ ಇಂಗ್ಲೀಷ್ ಶಾಲೆಯು ಇಂದು ಬೆಳೆದು ಬಾಸೆಲ್ ಮಿಷನ್ ಕಾಂಪೋಜಿಟ್ ಜೂನಿಯರ್ ಕಾಲೇಜ್ ಪಟ್ಟಕೇರಿದೆ.

ಮೋಗ್ಲಿಂಗರ ಜೀವನದ ಸಾಧನೆಯಲ್ಲಿ ಧರ್ಮಪ್ರಚಾರದ ಸೇವೆಯ ಒಂದು ಭಾಗವಾದರೆ, ಕನ್ನಡ ಸಾಹಿತ್ಯದ ಕ್ಷೇತ್ರಕ್ಕೆ ಅವರು ಸಲ್ಲಿಸಿದ ಸೇವೆಯು ಅವರ ಸಾಧನೆಯ ಇನ್ನೊಂದು ಭಾಗವಾಗಿದೆ.

ಈರಾರು ಪತ್ರಿಕೆ(೧೮೪೨)

ಈ ಕೃತಿಯು ಆನಂದರಾಯ ಕಾಂಡಿಣ್ಯ ಎಂಬ ಬ್ರಾಹ್ಮಣನು ಕ್ರೈಸ್ತಧರ್ಮ ಅಂಗೀಕರಿಸಿದ ಘಟನೆಗೆ ಸಂಬಂಧಪಟ್ಟದಾಗಿದೆ.

ಹೃದಯ ದರ್ಪಣ (೧೮೪೨)

ಮೋಗ್ಲಿಂಗರು ಈ ಕೃತಿಯನ್ನು ೧೮೪೨ರಲ್ಲಿ ಬರೆದರು. ಇದರ ಇಂಗ್ಲೀಷ್ ಶಿರೋನಾಮೆ 'ಹಾರ್ಟ್‌ಬುಕ್' ಎಂದು. ಈ ಗ್ರಂಥದ ೨ನೇ ಮುದ್ರಣ ೧೮೪೮ರಲ್ಲಿ ಆಯಿತು.

ಕ್ರೈಸ್ತ ಗೀತೆಗಳು

ಮೋಗ್ಲಿಂಗರು ವೈಗಲ್‌ರ ಜೊತೆಗೆ ಸೇರಿಕೊಂಡು ಹಲವು ಕ್ರೈಸ್ತ ಗೀತೆಗಳನ್ನು ರಚಿಸಿದರು.

ಯಾತ್ರಿಕನ ಸಂಚಾರ(೧೮೪೮)

ಮೋಗ್ಲಿಂಗರು ವೈಗಲ್ ಅವರ ಜೊತೆಗೆ ಸೇರಿಕೊಂಡು ಮತ್ತು ಪ್ರತ್ಯೇಕವಾಗಿಯೂ ಶ್ರೀಯುತರು ಬನಿಯನ್ ವಿರಚಿತ ಪಿಲಿಗ್ರೀಮ್ಸ್ ಪ್ರೊಗ್ರೆಸ್ ಎಂಬ ಯಾತ್ರಿಕನ ಸಂಚಾರಿ ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದ ಮಾಡಿದರು.

ಕನ್ನಡ ಗಾದೆಗಳು(೧೮೫೯)

ಕನ್ನಡ ಗಾದೆಗಳನ್ನು ಕುರಿತು ೧೮೪೭ರಲ್ಲಿ ಪ್ರಕಟವಾಯಿತು. ೧೫೭ ಪುಟಗಳ ಈ ಪುಸ್ತಕದಲ್ಲಿ ೩೫೪೭ ಕನ್ನಡ ಗಾದೆಗಳಿವೆ."[೧೧]

ಪತ್ರಿಕಾ ಪ್ರಪಂಚ

ಕನ್ನಡದಲ್ಲಿ ಪತ್ರಿಕಾ ವೃತ್ತಿಯನ್ನು ಪ್ರಾರಂಭಿಸಿದವರಲ್ಲಿ ಹರ್ಮನ ಮೊಗಲಿಗರೆಂದು ಹೇಳಲಾಗುತ್ತದೆ. ಮೋಗ್ಲಿಂಗರು ೧೮೪೩ರಲ್ಲಿ ಪ್ರಾರಂಭಿಸಿದ ಮಂಗಳೂರು ಸಮಾಚಾರ ಪತ್ರಿಕೆ, ಬಳ್ಳಾರಿಯಲ್ಲಿ ೧೮೪೪ರಲ್ಲಿ ಸ್ಥಾಪಿಸಿದ ಕನ್ನಡ ಸಮಚಾರ ಇವು ಕನ್ನಡದ ಪ್ರಥಮ ಪತ್ರಿಕೆಗಳಾಗಿವೆ. ಮೈಸೂರು ಕರ್ನಾಟಕ ಎಂದು ನಾಮಕರಣವಾಯಿತು. ನಂತರ ಧಾಯಿಸಿ ಸಭಾ ಸ್ಥಾಪಿಸಿದವರಲ್ಲಿ ಮೋಗ್ಲಿಂಗರು ಪ್ರಮುಖರಾಗಿದ್ದಾರೆ. ಈ ಪತ್ರಿಕೆಯನ್ನು ಆರಂಭಿಸುವುದರ ಪ್ರಮುಖ ಉದ್ದೇಶ ಕ್ರೈಸ್ತಮತದ ಪ್ರಸಾರವಾಗಿದ್ದರೂ ಅವುಗಳೊಂದಿಗೆ ಇತರ ಲೋಕವಿಚಾರಗಳನ್ನು ಕೂಡ ಪತ್ರಿಕೆ ಒಳಗೊಂಡಿರುತ್ತಿದ್ದವು.

ಕನ್ನಡದಲ್ಲಿ ಪಂಚಾಂಗ(೧೮೫೩)

ಮಂಗಳೂರು ಬಾಸೆಲ್ ಮಿಷನ್ನಿನ ರೆ.ಸಿ.ಗ್ರೆನಿಯರ್ ಮತ್ತು ಬುಹ್ರರ ಅವರೊಂದಿಗೆ ಕೂಡಿಕೊಂಡು ಮೋಗ್ಲಿಂಗ ಅವರು ೧೮೫೩ ರಿಂದ ಮಂಗಳೂರು ಆಲ್‌ಮನಕ್ ಅಥವಾ ಮಂಗಳೂರು ಪಂಚಾಂಗವನ್ನು ಪ್ರಾರಂಭಿಸಿದರು."[೧೨] ಇದು ಅನೇಕ ವರ್ಷಗಳ ಕಾಲ ಪ್ರಸಿದ್ಧವಾಯಿತು.

"ಕ್ರಿ.ಶ.೧೮೫೪ರಲ್ಲಿ ಕನ್ನಡ ಬೆಂಬಲ ಕೃತಿಗಳ ಪರಿಷ್ಕರಣಾ ಸಮಿತಿಯಲ್ಲಿ ರೆ.ಮೋಗ್ಲಿಂಗರು ಓರ್ವ ಸದಸ್ಯನಾಗಿದ್ದರು."[೧೩] ಮೋಗ್ಲಿಂಗರು ಜಿ.ವೈಗಲ್ ಮತ್ತು ಜಿ.ಎ.ವರ್ಥ ಇವರೊಂದಿಗೆ ಸೇರಿ 'ಶಾಲಗೃಹ ಪಠನೋದ್ಗರ ದೇವರ ವಾಕ್ಯ ವ್ಯಾಖ್ಯಾನ" ಗ್ರಂಥ ಬರೆದರು.

ಮೋಗ್ಲಿಂಗರು ಮಂಗಳೂರು, ಧಾರವಾಡ, ಕೊಡಗು ಹೀಗೆ ಪ್ರಮುಖ ಸ್ಥಳಗಳಲ್ಲಿ ಮತ ಪ್ರಚಾರ ಮಾಡಿದರು. ಜೊತೆಗೆ ಕನ್ನಡ ಸಾಹಿತ್ಯ ಕ್ಷೇತ್ರಕ್ಕೂ ಸೇವೆ ಸಲ್ಲಿಸಿದರು. ಮೋಗ್ಲಿಂಗರು ೧೮೮೧ ಮೇಲೆ ೧೦ ರಂದು ಎನ್ಲೆಂಗನ್ ದಲ್ಲಿ ಕೊನೆಯುಸಿರೆಳೆದರು. ಮೋಗ್ಲಿಂಗರ ನಿಧನದಿಂದ ಬಾಸೆಲ್ ಮಿಷನ ತನ್ನ ಇನ್ನೊರ್ವ ಪ್ರಾರಂಭಿಕ ಮಿಶನರಿಯನ್ನು ಕಳೆದುಕೊಂಡಂತಾಯಿತು.

೩. ರೆವೆರೆಂಡ್ ಜಾನ್ ಕ್ರಿಸ್ಟೊಪ ಲೆಹ್ನರ

ಸ್ವಿಡ್ಜರಲ್ಯಾಂಡಿನ ಬಾಸೆಲ್ ಮಿಶನರಿ ಕಾಲೇಜನಲ್ಲಿ ತರಬೇತಿ ಹೊಂದಿದವರಲ್ಲಿ ರೆವರೆಂಡ ಜಾನಕ್ರಿಸ್ಟೋಪ ಲೆಹ್ನರ ಕೂಡ ಒಬ್ಬರು. ಹೀಗೆ ಬಾಸೆಲ್ ಇವ್ಯಾಂಜಲಿಕಲ್ ಮಿಶನರಿ ಸೋಸೈಟಿಯು ಭಾರತಕ್ಕೆ ಮತ ಪ್ರಚಾರದ ಕಾರ್ಯಕ್ಕೆ ಕಳಿಸಲು ತೀರ್ಮಾನಿಸಿದಾಗ ಸ್ಯಾಮುಯಲ್ ಹೆಬಿಕರೊಂದಿಗೆ ರೆವರೆಂಡ ಜಾನ್ ಕ್ರಿಸ್ಟೊಪ ಲೆಹ್ನರನ್ನು ೧೮೩೪ರಲ್ಲಿ ಭಾರತಕ್ಕೆ ಕಳಿಸಿದರು.

೧೮೩೪ರಲ್ಲಿ ಬಾಸೆಲ್ ಮಿಶನದಿಂದ ಬಂದ ಈ ಮೂವರು ಮಿಶನರಿಗಳು ಪ್ರಾರಂಭದಲ್ಲಿ ಮಂಗಳೂರಿಗೆ ಬಂದರು. ಲೆಹ್ನರು ಕನ್ನಡ ಭಾಷೆಯಲ್ಲಿ ಅಭ್ಯಾಸ ಮಾಡಿ ಅವರು ಕನ್ನಡದಲ್ಲಿ ಸೇವೆಯನ್ನು ಪ್ರಾರಂಭಿಸಿದರು. ೧೯೩೯ರಲ್ಲಿ ಲೆಹ್ನರು ಹುಬ್ಬಳ್ಳಿಗೆ ಬಂದು, ಅನಂತರ ೧೯೪೦ರಲ್ಲಿ ಧಾರವಾಡಕ್ಕೆ ಬಂದರು. ಧಾರವಾಡದಲ್ಲಿ ಮೋಗ್ಲಿಂಗರಿಂದ ಉತ್ತಮ ಸೇವೆಯು ನಡೆಯಿತ್ತು. ಆದರೆ ಮೋಗ್ಲಿಂಗರು ತದನಂತರ ಧಾರವಾಡದಿಂದ ಮಂಗಳೂರಿಗೆ ಹೋದರು.

"೧೮೪೦ರ ಬಾಸೆಲ್ ಮಿಶನ್ ವರದಿಯ ಪ್ರಕಾರ ಲೆಹ್ನರು ಮತ್ತು ಅವರ ಪತ್ನಿಯವರು ಧಾರವಾಡದಲ್ಲಿ ಸೇವೆ ಸಲ್ಲಿಸುತ್ತಿದ್ದರು."[೧೪] ಶ್ರೀಮತಿ ಲೆಹ್ನರು ಕೂಡ ಬಾಲಕಿಯರ ಬೋರ್ಡಿಂಗ್ ಶಾಲೆಯ ಮೇಲ್ವಿಚಾರಣೆ ಮಾಡುತ್ತಿದ್ದರು.

೧೮೩೭ರಲ್ಲಿ ಡಾ.ಮೋಗ್ಲಿಂಗ್ ಪ್ರಾರಂಭಿಸಿದ ಹೈಸ್ಕೂಲ್ ಅಲ್ಲದೆ ಅವರು ಧಾರವಾಡದಲ್ಲಿ ಹಾಗೂ ಸುತ್ತಮುತ್ತಲಿನ ಸ್ಥಳಗಳಲ್ಲಿ ಕೆಲವು ಕನ್ನಡ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಿದರು.

[illegible]

ಮೋಗ್ಲಿಂಗ್ ಮಂಗಳೂರಿಗೆ ಹೋಗಿದ್ದರಿಂದ ಲೆಹ್ನರ ಹೈಸ್ಕೂಲನ್ನು ನೋಡಿಕೊಳ್ಳುವ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡು ಆಡಳಿತ ನಡೆಸಿದರು.

ಲೆಹ್ನರು ಕೇವಲ ಧರ್ಮ ಪ್ರಚಾರಕರಾಗಿ ಕಾರ್ಯನಿರ್ವಹಿಸಿದರು. ಅವರು ಶೈಕ್ಷಣಿಕ ರಂಗದಲ್ಲಿ ಹಾಗೂ ಕ್ರೈಸ್ತ ಧರ್ಮವು ಜಾತಿ ಭೇದ ಮರೆತು ಇರುವ ಒಂದು ಪ್ರಮುಖ ಧರ್ಮವಾಗಿದೆ ಎಂದು ತೋರಿಸಿದರು. ಧಾರವಾಡದಲ್ಲಿ ಕ್ರೈಸ್ತರ ಸಂಖ್ಯೆಯು ಬಹಳ ಕಡಿಮೆಯಾಗಿದ್ದರಿಂದ ಕೆಲ ತಮಿಳರು, ಬ್ರಿಟೀಷರು ಸಭೆಯ ಸದಸ್ಯರಾಗಿದ್ದರು. ಆದ್ದರಿಂದ ಜನರಲ್ಲಿ ಕ್ರೈಸ್ತಧರ್ಮದ ಪ್ರಚಾರದ ಅರಿವು ಮೂಡಿಸಿದರು.

೧೮೪೫ ಡಿಸೆಂಬರ್ ೧೪ ರಂದು ಧಾರವಾಡ ಬಾಸೆಲ್‌ಮಿಶನ್‌ನವರಿಗೆ ಒಂದು ಪ್ರಮುಖ ದಿನವಾಗಿತ್ತು. ಕಾರಣವೆಂದರೆ ಬಾಸೆಲ್ ಮಿಶನ್ ದೇವಾಲಯಗಳು ದೇವರನ್ನು ಆರಾಧಿಸುವುದಕ್ಕಾಗಿ ಪ್ರತಿಷ್ಠಾಪಿಸಲ್ಪಟ್ಟಿತ್ತು. ಕನ್ನಡಿಗರಿಗಾಗಿ, ಇಂಗ್ಲೀಷರಿಗಾಗಿ, ತಮಿಳರಿಗಾಗಿ ದೇವರನ್ನು ಆರಾಧಿಸಲು ಪ್ರತಿಷ್ಠಾಪನಾ ದೇವಾಲಯವಾಗಿತ್ತು. ಇದರಿಂದಾಗ ತಿಳಿಯುವ ಪ್ರಮುಖ ಅಂಶವೆಂದರೆ ಕ್ರೈಸ್ತನಲ್ಲಿ ಜನಾಂಗೀಯ ಭೇದ ಭಾವವಿಲ್ಲ ಎಂಬ ಅಂಶ ತಿಳಿಯುವುದು. ಲೆಹ್ನರುರವರು ಧಾರವಾಡದಲ್ಲಿ ಸೇವಾಕರ್ಯವನ್ನು ಪೂರೈಸಿದ ನಂತರ ಹೊನ್ನಾವರಕ್ಕೆ ಹೋದರು.

ಧಾರವಾಡದಲ್ಲಿ ಲೆಹ್ನರವರು ಶಿಕ್ಷಣ, ಜೊತೆಗೆ ಧರ್ಮ ಪ್ರಚಾರದ ಕಾರ್ಯವನ್ನು ಒಬ್ಬ ಯಶಸ್ವಿ ಮಿಶನರಿಯಾಗಿ ಕಾರ್ಯನಿರ್ವಹಿಸಿದರು.

೪. ರೆವರೆಂಡ್ ಫ್ರೆಡ್ರಿಕ್ ಝಿಗ್ಲರ

ಬಾಸೆಲ್ ಮಿಶನದ ಪ್ರಮುಖ ಮಿಶನರಿಗಳಲ್ಲಿ ಮತ್ತೊಬ್ಬ ಪ್ರಮುಖ ಮಿಶನರಿ ಎಂದರೆ ರೆವರೆಂಡ ಪೆಡ್ರಿಕ್ ಝಿಗ್ಲರ ಅವರು ಬಹುಮುಖ ಪ್ರತಿಭೆ ಹಾಗೂ ಅಸಾಧಾರಣ ವ್ಯಕ್ತಿತ್ವವುಳ್ಳ ಒಬ್ಬ ಪ್ರಮುಖ ಮಿಶನರಿಯಾಗಿದ್ದರು. ಇವರು ಧಾರವಾಡ, ಹುಬ್ಬಳ್ಳಿಯಲ್ಲಿ ಸುಮಾರು ೩೫ ವರ್ಷಗಳ ಕಾಲ, ಮಿಶನಿನ ಚಟುವಟಿಕೆಯನ್ನು, ಶಾಲೆಯ ಸ್ಥಾಪನೆಯ ಕೆಲಸವನ್ನು ಹಾಗೂ ಸಾಹಿತ್ಯದ ಸೇವೆಯನ್ನು ಮಾಡಿದರು.

ಝಿಗ್ಲರ ಹುಟ್ಟಿದ್ದು ಜರ್ಮನಿಯ ಬಾಂಬ್ಲಿಂಗನ್ ಜಿಲ್ಲೆಯ ಡಾಗರಶೆಮ ಎಂಬಲ್ಲಿ ೧೮೩೨ರ ಮೇ ೮ ರಂದು ಜನಿಸಿದರು. ತಂದೆ ಜೇಕಪ್ ಪ್ರೆಡ್ರಿಕ ಝಿಗ್ಲರ ತಾಯಿ ಮೇರಿಯಾ ಮಾರ್ಗರೇಟ್ ತಾಯಿಯಿಂದ ಝಿಗ್ಲರ ತುಂಬಾ ಪ್ರಭಾವಿತನಾಗಿದ್ದನು. ಝಿಗ್ಲರ ಅವರು ೧೪ ವರ್ಷ ವಯಸ್ಸಿನವರೆಗೆ ಡಾಗರಶೆಮದ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಣ ಪಡೆದರು. ಧರ್ಮ ಗುರುಗಳಾಗಿದ್ದ ಕೊಲ್ಕ ಎಂಬುವರ ಕೈಯಲ್ಲಿ ಉತ್ತಮ ಶಿಕ್ಷಣ ದೊರೆಯಿತು.

ಅಂದಿನ ಸಂದರ್ಭದಲ್ಲಿ ಕ್ರಿಶ್ಚಿಯನ್ ಮಿಶನರಿಗಳು ಕೇವಲ ಧರ್ಮಪ್ರಚಾರದ ಉದ್ದೇಶದಿಂದ ಭಾರತಕ್ಕೆ ೧೯ನೇ ಶತಮಾನದಲ್ಲಿ ಬಂದರು. ಆದರೆ ಅವರು ಧರ್ಮಪ್ರಚಾರಕೋಸ್ಕರ ಇಲ್ಲಿ ಮುದ್ರಣ ಯಂತ್ರವನ್ನು ಸ್ಥಾಪಿಸಿದರು. ಮುದ್ರಣ ಯಂತ್ರದ ಸಹಾಯದಿಂದ ಕ್ರೈಸ್ತರ ಗೀತೆ, ಸಾಹಿತ್ಯ, ಬೈಬಲನ್ನು ಕನ್ನಡದಲ್ಲಿ ಅನುವಾದ ಮಾಡಿ ಪ್ರಕಟಿಸಿದರು. ಧರ್ಮಪ್ರಚಾರದ ಹಿನ್ನೆಲೆಯಿಂದ ಶಿಕ್ಷಣಸಂಸ್ಥೆಗಳು ಪ್ರಾರಂಭಿಸಲ್ಪಟ್ಟವು. ಸ್ಥಳೀಯ ಮಟ್ಟದ ಭಾಷೆಯನ್ನು ಕಲಿತು ವ್ಯಾಕರಣ ರಚಿಸುವುದು ಇವರ ಉದ್ದೇಶವಾಗಿತ್ತು. ಇದರಿಂದಾಗಿ ಭಾರತೀಯರಲ್ಲಿ ಪುನರುಜ್ಜೀವನದ ಕಾರ್ಯಗಳು ಪ್ರಾರಂಭವಾದವು. ಇಂತಹ ಕಾರ್ಯದ ಚಟುವಟಿಕೆಯಲ್ಲಿ ಭಾಗವಹಿಸಿದ ಪ್ರಮುಖ ಬಾಸೆಲ್ ಮಿಶನದ ಮಿಶನರಿಗಳಲ್ಲಿ ಝಿಗ್ಲರು ಕೂಡ ಒಬ್ಬರು.

ಝಿಗ್ಲರು ತಮ್ಮ ಮೂವತ್ತನೇ(೩೦)ನೇ ವಯಸ್ಸಿನಲ್ಲಿ ಅಂದರೆ ೧೮೬೨ರಲ್ಲಿ ಭಾರತಕ್ಕೆ ಹೊರಟು, ಕರ್ನಾಟಕದ ಮಂಗಳೂರಿಗೆ ತಲುಪಿದರು. ೧೯೬೫ರಲ್ಲಿ ತಮ್ಮ ಗುರುಗಳಾದ ಕೊಲ್ಲರವರ ಪುತ್ರಿ ಜೂಲಿಯಾನಾ ಎಂಬುವವರನ್ನು ಮದುವೆಯಾದರು. ಝಿಗ್ಲರ ಮಂಗಳೂರಿನಿಂದ 'ದಕ್ಷಿಣ ಮಹಾರಾಷ್ಟ್ರ' ಎಂದು ಕರೆಯುವ ಹುಬ್ಬಳಿಗೆ ಬಂದರು. ನಂತರ ಧಾರವಾಡಕ್ಕೆ ಬಂದು ೧೯೭೮-೧೯೦೫ರವರೆಗೆ ಧಾರವಾಡದಲ್ಲಿ ಕಳೆದರು.

೧೮೩೮ ರಲ್ಲಿ ಮೋಗ್ಲಿಂಗ, ಲೈಯರ ರೆ ಪ್ರೆಡಿಕ್ ಇವರ ಅವಧಿಯಲ್ಲಿ ರಚನೆಯಾದ ಇಂಗ್ಲೀಷ್ ಮತ್ತು ಕನ್ನಡ ಶಾಲೆ ರಚನೆಯಾಗಿದ್ದವು. ೧೯೬೩ರಲ್ಲಿ ಆ ಶಾಲೆಗಳು ಪೂರ್ಣ ಹೈಸ್ಕೂಲ್ ಆಗಿ ಪರಿವರ್ತಿತವಾದವು. ಧಾರವಾಡ ಜಿಲ್ಲೆಯಲ್ಲಿ ಇದೇ ಪ್ರಥಮ ಹಾಗೂ ಮುಂಬಯಿಯ ಕರ್ನಾಟಕದಲ್ಲಿ ದ್ವಿತೀಯವು ಆಗಿತ್ತು. ಅ ಶಾಲೆಗೆ ಮೊದಲ ಪ್ರಿನ್ಸಿಪಾಲರಾಗಿ ಮೋಗ್ಲಿಂಗರು ಕಾರ್ಯನಿರ್ವಹಿಸಿದರು. ದ್ವಿತೀಯ ಪ್ರಿನ್ಸಿಪಾಲರಾಗಿ ಝಿಗ್ಲರಾಗಿ ಕಾರ್ಯನಿರ್ವಹಿಸಿದರು. ಝಿಗ್ಲರ ಪ್ರಿನ್ಸಿಪಾಲರಾದ ಸಂದರ್ಭದಲ್ಲಿ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆಯು ೨೦೦ಕ್ಕೆ ತಲುಪಿತು. ಝೀಗ್ಲರ ಸತತ ಪ್ರಯತ್ನದ ಮೂಲಕವಾಗಿ ಅಂದಿನ ಬ್ರಿಟಿಷ ಸರ್ಕಾರ ಶಾಲೆಗೆ ಆರು ಎಕರೆ ಭೂಮಿ ಕೊಟ್ಟಿತು. ಅವರ ಅವಧಿಯಲ್ಲಿ ಈ ಶಾಲೆ ಉತ್ತಮ ಮಾದರಿಯ ಶಾಲೆಯಾಗಿದೆ ಎಂದು ಪರಿಗಣಿಸಿದರು. "ಶ್ರೀ.ವಿ.ಎಸ್.ವೆಂಕಟಯ್ಯ, ದಿವಂಗತ ರೆ.ಚನ್ನಪ್ಪ ಉತ್ತಂಗಿ, ಕಡಪ ರಾಘುವೇಂದ್ರರಾಯರು ಮುಂತಾದ ಶ್ರೇಷ್ಠ ಕನ್ನಡಿಗರು ಅಲ್ಲಿಯ ಅಧ್ಯಾಪಕ ವರ್ಗದಲ್ಲಿದ್ದರು."[೧೫]

ಝಿಗ್ಲರ ಒಬ್ಬ ಶಿಕ್ಷಣ ತಜ್ಞ ಹಾಗೂ ಮಹಾಮೇಧಾವಿಯಾಗಿದ್ದರು. ಶಿಕ್ಷಣ ತಜ್ಞರಾಗಿ ಮಿಶನ್ಸ್ ಸ್ಕೂಲ್‌ಗಳಲ್ಲಿ ಕ್ರೈಸ್ತರೇತರ ವಿದ್ಯಾರ್ಥಿಗಳಿಗೂ ಪ್ರವೇಶವಿರಬೇಕೆಂದು ವಾದಿಸಿದ ಮೊದಲ ಮಿಶನರಿ ಅವರಾಗಿದ್ದರು. ಜೊತೆಗೆ ಕ್ರಿಶ್ಚಿಯನ್ನರಲ್ಲದ ವ್ಯಕ್ತಿಗಳನ್ನು ಉಪಾಧ್ಯಯರನ್ನಾಗಿ ನೇಮಿಸುವಂತೆ ಮಾಡಿದರು.

[illegible]

[illegible]

[illegible]

[illegible]

೧೮೮೩ರಲ್ಲಿ ಗದಗ ಬಳಿಯ ಬೆಟಗೇರಿಯ ಅನಾಥಾಲಯವನ್ನು, ಧಾರವಾಡದ ಅನಾಥ ಸಂಸ್ಥೆಯೊಂದಿಗೆ ವಿಲೀನಗೊಳಿಸಲಾಯಿತು. ಝೀಗ್ಲರು ತುಂಬಾ ಪ್ರಾಮಾಣಿಕತ್ವದ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡಿದ್ದರು. ಹಾಗೂ ಅವರ ಕಾರ್ಯದಿಂದ ಧಾರವಾಡದಲ್ಲಿ ಪ್ರಸಿದ್ಧ ವ್ಯಕ್ತಿಯಾಗಿ ಹೊರಹೊಮ್ಮಿದರು. ಝೀಗ್ಲರ ಕಾರ್ಯವನ್ನು ಮೆಚ್ಚಿದ ಮಿಷನ್ ಅವರನ್ನು ಭಾರತಕ್ಕೆ ತನ್ನ ಕಾರ್ಯದರ್ಶಿಯನ್ನಾಗಿ ನೇಮಿಸಿದರು.

ಕರ್ನಾಟಕ ಈ ಭಾಗದಲ್ಲಿನ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳ ಪ್ರಥಮ ಕೇಂದ್ರವಾದ ಕರ್ನಾಟಕ ವಿದ್ಯಾವರ್ಧಕ ಸಂಘವು ೧೮೯೦ರಲ್ಲಿ ಸ್ಥಾಪಿತವಾಯಿತು. ಕರ್ನಾಟಕಕ್ಕೆ ಕನ್ನಡ ನುಡಿಗೂ ಶ್ರಮಿಸಿದ ಮಿಶನರಿಗಳಾದ ಝೀಗ್ಲರ, ಕಿಟಲ್, ಫ್ಲೀಟ್, ಬಿ.ಎಲ್.ರೈಸ್ ಅವರಿಗೆ ಸಂಘ ವಿದ್ಯಾವರ್ಧಕ ಕಾರ್ಯದ ಗೌರವ ಸದಸ್ಯರಾಗಿ ಮಾಡಿದರು. ಝೀಗ್ಲರನ್ನು ಕರ್ನಾಟಕ ವಿದ್ಯಾವರ್ಧಕ ಸಂಘವು ಅವಿರೋಧವಾಗಿ ಅಧ್ಯಕ್ಷರೆಂದು ನೇಮಿಸಿದರು.

೧೯೪೦ರಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘವು ಚಿನ್ನದ ಹಬ್ಬವನ್ನು ಆಚರಿಸಿದಾಗ ಝೀಗ್ಲರ ಭಾವಚಿತ್ರವೊಂದನ್ನು ಸ್ಥಾಪಿಸಿ ಅವರ ಸೇವೆಗೆ ಕೃತಜ್ಞತೆಯನ್ನು ಸಲ್ಲಿಸಿದರು. ಝೀಗ್ಲರ ಕರ್ನಾಟಕಕ್ಕೂ, ಕನ್ನಡ ಸಾಹಿತ್ಯಕ್ಕೂ ಮಹತ್ತರವಾದ ಕೊಡುಗೆಯನ್ನು ನೀಡಿದ್ದಾರೆ.

"A Practpcal key to canarese Grammar (ಎ. ಪ್ರಾಕ್ಟಿಕಲ್ ಕೀ ಟು ದಿ ಕ್ಯಾನಲೀಜ್ ಲ್ಯಾಂಗ್ವೇಜ್)(೧೮೭೨) ಕನ್ನಡವನ್ನು ಕಲಿಯುವ ಅಭಿಲಾಷೆಯುಳ್ಳ ವಿದೇಶಿಯರಿಗಾಗಿ ಝೀಗ್ಲರ ಅವರು ಈ ಪಠ್ಯಪುಸ್ತಕವನ್ನು ರಚಿಸಿದರು."[೧೬]

ಕನ್ನಡ ವ್ಯಾಕರಣ ಬೋಧಿನಿ ೧೮೭೪ರಲ್ಲಿ ರಚಿಸಿದರು. ಇದೊಂದು ಬೈಬಲ್‌ನ ಪದ್ಯವನ್ನು ಒಳಗೊಂಡ ಪುಸ್ತಕ. ತನ್ನ ಸ್ವಂತ ಹಾಡುಗಳಲ್ಲದೆ, ಇತರ ಕ್ರೈಸ್ತ ವಿದ್ವಾಂಸರ ಹಾಡುಗಳು ಸೇರಿಸಲ್ಪಟ್ಟವು. ಆ ಹೊತ್ತಿಗೆ ಉತ್ತರ ಕರ್ನಾಟಕದ ಶಾಲೆಗಳಲ್ಲಿ, ಕ್ರೈಸ್ತ ಗುಡಿಗಳಲ್ಲಿ ಪ್ರಚಾರವಿತ್ತು.

ಕನ್ನಡ ಬಾಲ ವ್ಯಾಕರಣ(೧೮೭೭)

ಇದನ್ನು ಝೀಗ್ಲರ ಮತ್ತು ರೆ.ಪಿ.ಕಾಸ್ಟಾ ಅವರು ಸೇರಿಕೊಂಡು ೧೮೭೭ರಲ್ಲಿ ರಚಿಸಿದರು.

ಸೆಂಟ್ ಮಾರ್ಕ್‌ನು ಬರೆದ ಸುವಾರ್ತೆಗಳನ್ನು ಅಂದರೆ ಮುಕ್ತಿದಾಯಕ ಚರಿತ್ರೆ ೧೮೯೭ರಲ್ಲಿ ಝೀಗ್ಲರ ರೆ.ಹೆನ್ನಿಹಾಂಗ ಅವರು ಕೂಡಿ ೧೮೯೭ರಲ್ಲಿ ರಚಿಸಿದರು.

ಝೀಗ್ಲರ ಒಬ್ಬ ಕ್ರೈಸ್ತ ಮಿಶನರಿಯಾಗಿ ಧಾರವಾಡ ಪ್ರದೇಶದಲ್ಲಿ ಹೆಚ್ಚು ಕಾಲ ಕಳೆದು ತಮ್ಮ ನಿಷ್ಠಾವಂತ ಮಿಶನರಿಯಾಗಿ ಕಾರ್ಯನಿರ್ವಹಿಸಿದರು. ಇವರ ಸೇವೆಯಿಂದ ಶಿಕ್ಷಣ ಹಾಗೂ ಕನ್ನಡ ಸಾಹಿತ್ಯ ಅಭಿವೃದ್ಧಿಯತ್ತ ಸಾಗಿತು.

ನಿಸ್ವಾರ್ಥ ಸೇವೆಗೈದ ರಿಘೀಗ್ಲರು ೧೯೦೬ ನವೆಂಬರ್ ೧೮ರಂದು ಮಧ್ಯಾಹ್ನ ೧೨-೩೦ ಸಮಯಕ್ಕೆ ನಿಧನರಾದರು.

೫. ಗಾರ್ಡ್ ಫ್ರೈ ವೈಗಲ್ - ೧೮೧೬-೧೮೫೫

ಕರ್ನಾಟಕದ ಬಾಸೆಲ್ ಮಿಷನ್ ಅಡಿಯಲ್ಲಿ ಕಾರ್ಯನಿರ್ವಹಿಸಿದ ಪ್ರಮುಖ ಮಿಶನರಿಗಳಲ್ಲಿ ವೈಗಲ್ ಕೂಡ ಒಬ್ಬರಾಗಿದ್ದರು. ಕರ್ನಾಟಕದಲ್ಲಿ ಬಾಸೆಲ್ ಮಿಷನ್ ಆರಂಭದ ಮಿಶನರಿಗಳಲ್ಲಿ ಕಾರ್ಯ ನಿರ್ವಹಿಸಿದವರಲ್ಲಿ ವೈಗಲ್‌ರು ಒಬ್ಬರಾಗಿದ್ದಾರೆ. ವೈಗಲ್‌ರು ಕಡಿಮೆ ಅವಧಿಯವರೆಗೆ ಕಾರ್ಯನಿರ್ವಹಿಸಿದರು. ಆದರೆ ಉತ್ತಮ ಸೇವೆಯನ್ನು ನೀಡಿದರು.

ವೈಗಲ್‌ರು ೧-೭-೧೮೧೬ರಂದು ತ್ಸೆಲ್ ಎಂಬ ಹಳ್ಳಿಯಲ್ಲಿ ಜನಿಸಿದರು. ತಂದೆ ಒಬ್ಬ ಪಾದ್ರಿಯಾಗಿದ್ದನು. ವೈಗಲ್ ತನ್ನ ಬಾಲ್ಯದ ಅವಧಿಯನ್ನು ತನ್ನ ಅಜ್ಜನ ಬಳಿ ಕಳೆದನು. ಚಿಕ್ಕ ವಯಸ್ಸಿನಲ್ಲಿಯೇ ವೈಗಲ್ ತಂದೆ-ತಾಯಿಯನ್ನು ಕಳೆದುಕೊಂಡನು. ೧೮ ವರ್ಷದವರೆಗೂ ವೈಗಲ್ ತನ್ನ ಅಜ್ಜನ ಬಳಿ ಕಳೆದನು.

ಟುಬಿಂಜನ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಿದ ವೈಗಲರು ಬಾಸೆಲ್ ಮಿಷನಲ್ಲಿ ಶಿಕ್ಷಕರಾಗಿ ವೃತ್ತಿ ಆರಂಭಿಸಿದರು. ೧೯೪೦ರಲ್ಲಿ ವೈಗಲ್‌ರು ಭಾರತಕ್ಕೆ ಬಂದರು. ವೈಗಲ್ ಕರ್ನಾಟಕದ ಮಂಗಳೂರಿಗೆ ಬಂದಾಗ ವೈಗಲ್‌ರಿಗೆ ಮೋಗ್ಲಿಂಗರು ಆಪ್ತ ಸ್ನೇಹಿತರಾದರು. ಮೋಗ್ಲಿಂಗರು ವೈಗಲ್ ರಿಗಿಂತ ನಾಲ್ಕು ವರ್ಷ ಮೊದಲೇ ಭಾರತಕ್ಕೆ ಬಂದಿದ್ದರು. ವೈಗಲ್‌ರು ಮೋಗ್ಲಿಂಗರೊಂದಿಗೆ ಸ್ಥಳೀಯ ಭಾಷೆಯನ್ನು ಕಲಿತರು. ಮಂಗಳೂರಿಗೆ ಬಂದು ಕೆಲವೇ ತಿಂಗಳಿನಲ್ಲಿ ವೈಗಲ್ ಅಲ್ಲಿಯ ಇಂಗ್ಲೀಷ್ ಶಾಲೆ ವಹಿಸಿಕೊಂಡನು. ಆದರೆ ಮಂಗಳೂರಿನಲ್ಲಿ ಮುದ್ರಣಯಂತ್ರದ ಕೊರತೆಯಿತ್ತು. ಮುಂಬಯಿಂದ ಕೈ ಮುದ್ರಣಯಂತ್ರವನ್ನು ತಂದನು. ೬೦-೭೦ ವರ್ಷಗಳಿಂದ ಖ್ಯಾತಿಯನ್ನು ಪಡೆದಿದ್ದ ಮುದ್ರಾಣ ಯಂತ್ರಕ್ಕೆ ವೈಗಲ್ ನಾಂದಿ ಹಾಡಿದನು.

ಬ್ರಿಟಿಷ್ ಅಧಿಕಾರಿ ಕಸಮಜೀರ ಎಂಬುವನ ಪ್ರೋತ್ಸಾಹ ಪೋಷಣೆಯಿಂದ ವೈಗಲ್ ಬಡಗು ಮಿಶನ್ ಸ್ಥಾಪಿಸಿದನು. ತನ್ನ ಕಡೆಯ ಅವಧಿಯಲ್ಲಿ ವೈಗಲ್ ಕೆಲವು ವರ್ಷ ಧಾರವಾಡದ ಮಿಶನಿನಲ್ಲಿ ಸೇವೆಸಲ್ಲಿಸಿದನು. ವೈಗಲ್ ವಿವಿಧ ವಿಷಯಗಳ ಅಧ್ಯಯನದಲ್ಲಿ ಪರಿಣಿತನಾಗಿದ್ದನು. ಗಣಿತ, ಸಂಗೀತ, ವೇದ ಕಾಲದ ಸಾಹಿತ್ಯದ ವಿಷಯಗಳು ಅವರಿಗೆ ಪ್ರಿಯ ವಿಷಯಗಳಾಗಿದ್ದವು.

ವೈಗಲ್ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ತನ್ನದೇ ಆದ ಸೇವೆಯನ್ನು ನೀಡಿದ್ದಾನೆ. ಈತನು ಗ್ಯಾರೆಟ್, ಮೋಗ್ಲಿಂಗ್ ಸ್ಯಾಂಡರಸನ ನಂತರ ಬಂದವನಾಗಿದ್ದನು. ಆದರೆ ಬೇಗ ಪಾರ್ವಾತ್ಯಶಾಸ್ತ್ರ ವಾಜ್ಮಯಗಳನ್ನು ಆಳವಾಗಿ ಅಭ್ಯಾಸಿಸಿದನು. ಲಂಡನ್ ಮಿಷನಿನ ಜಾನಗ್ಯಾರೆಟನು ಭಗವದ್ಗೀತೆಯ ಭಾಷ್ಯ ವಾದಗಳ ವಿವಿಧ

[illegible]

[illegible]

[illegible]

[illegible]

[illegible]

[illegible]

ಮೇಲೆ ವ್ಯಾಖ್ಯಾನಗಳನ್ನು ಹೊರತರುವ ಸಂದರ್ಭದಲ್ಲಿ ವೈಗಲ್‌ನಿಗೆ ಸಲಹೆ ನೀಡಿದರು. ಕನ್ನಡ ಗೀತೆಯ ರಚನೆಯನ್ನು ತಿದ್ದಿದನು.

ವೈಗಲ್‌ನ ಇನ್ನೊಂದು ಕೃತಿಯೆಂದರೆ ಬನ್ಯನ್ಯೂನ Pililgrim's progres ದ ಕನ್ನಡದ ಅನುವಾದ 'ಯಾತ್ರಿಕನ ಸಂಚಾರ' ಎಂದು ಹೆಸರು. ವೈಗಲ್ ಕನ್ನಡಕ್ಕೆ ಮಾಡಿದ ಒಂದು ಮಹತ್ವಪೂರ್ಣ ಕೆಲಸವೆಂದರೆ 'ZDMG' ಇದು ಜರ್ಮನಿಯ ಸುಪ್ರಸಿದ್ಧ ಪತ್ರಿಕೆಗೆ ಕನ್ನಡ ಭಾಷೆ ಸಾಹಿತ್ಯ ಕುರಿತು ವೈಗಲ್‌ನು ಸವಿವರವಾದ ಲೇಖನ ಬರೆದು ಪ್ರಕಟಿಸಿದನು. ವೈಗಲ್‌ನ ಜ್ಞಾನವು ಮೋಗ್ಲಿಂಗನಿಗಿಂತ ಹೆಚ್ಚಾಗಿತ್ತು. ವೈಗಲಿನಿಂದ ಕ್ರೈಸ್ತಸಾಹಿತ್ಯ ಕ್ಷೇತ್ರಕ್ಕೆ ಸಿಕ್ಕ ಬಹುತೇಕ ಕಾಣಿಕೆ ಎಂದರೆ ಬೈಬಲ್‌ನ ಕನ್ನಡದ ಅನುವಾದ ಪರಿಷ್ಕರಣೆಯ ಕಾರ್ಯ.

ಬೈಬಲ ಸಂಪುಟವು ಕರ್ನಾಟಕದ ಎಲ್ಲ ಮಿಶನರಿ ಸಂಸ್ಥೆಗಳ ಪ್ರತಿನಿಧಿಗಳಿಂದ ಒಂದು ಸಮಿತಿಯನ್ನು ರಚಿಸಿ ಆ ಗಣ ಕನ್ನಡ ಬೈಬಲ್ಲಿನ ನವೀಕರಣದ ಕೆಲಸವನ್ನು ವೈಗಲನಿಗೆ ಒಪ್ಪಿಸಿತು."(೧೭) ವೈಗಲ್‌ನು ಬೈಬಲಿನ ಕನ್ನಡ ಅನುವಾದ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದನು. ಹಳೆಯ ಒಡಂಬಡಿಕೆಯ ತಿದ್ದುಪಡಿಯ ಕಾರ್ಯ ಮುಗಿಯುತ್ತಾ ಬಂದಾಗ ಕ್ರಿ.ಶ.೧೮೫೫ ಜೂನ್ ತಿಂಗಳಿನಲ್ಲಿ ವೈಗಲ್ ೬೯ನೇ ವಯಸ್ಸಿನಲ್ಲಿ ಮರಣ ಹೊಂದಿದನು.

೬. ರೆವರಂಡ್ ಎಚ್.ಪ್ರೇ

ರೆವರಂಡ್ ಎಚ್ .ಪ್ರೇಯವರು ಒಬ್ಬ ಬಾಸೆಲ್ ಮಿಷನಿನ ಮಿಶನರಿಯಾಗಿದ್ದನು. ಧಾರವಾಡ ಜಿಲ್ಲೆಗೆ ಕ್ರೈಸ್ತ ಮಿಶನರಿಯಾಗಿ ತಮ್ಮದೇ ಸೇವೆಗೈದಿದ್ದಾರೆ. ಧಾರವಾಡದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಧರ್ಮ ಪ್ರಚಾರದ ಕಾರ್ಯವನ್ನು ಮಾಡಿದರು. ರೆ ಎಚ್.ಪ್ರೇ ಬಾಸೆಲ್ ಮಿಶನ್‌ನಲ್ಲಿ ಸೇವೆ ಪ್ರಾರಂಭಿಸಿದರು.

ರೇ.ಎಚ್.ಪ್ರೇ.ರವರು ರೇ ಎಸ್ಸಿಗ್ ಜೊತೆಗೂಡಿ ಜಿಲ್ಲೆಯಲ್ಲಿ ಮೂರು ವಾರಗಳವರೆಗೆ ಸಂಚರಿಸಿದರು. ಬೆಂತೂರು ಎಂಬ ಪ್ರದೇಶದಲ್ಲಿ ವಾಸಿಸಿದರು. ಬೆಂತೂರ ಪ್ರದೇಶದ ಜನರೊಂದಿಗೆ ಕ್ರಿಸ್ತಧರ್ಮದ ಕುರಿತು ಚರ್ಚೆ ಮಾಡಿದರು. ೧೮೪೧ ಫೆಬ್ರವರಿ ೭ರಂದು ಹುಬ್ಬಳ್ಳಿಯಲ್ಲಿ ಪ್ರೇರವರು ೭ ಜನರಿಗೆ ಸ್ನಾನ ದೀಕ್ಷೆ ಕೊಟ್ಟರು. ಆ ೭ ಜನರು ಉತ್ತರ ಕರ್ನಾಟಕದಲ್ಲಿಯ ಬಾಸೆಲ್ ಮಿಷನಿನ ಪ್ರಥಮ ಫಲಗಳಾಗಿದ್ದಾರೆ. ರೆ.ಎಚ್.ಪ್ರೇಯವರು ಹುಬ್ಬಳ್ಳಿಯಿಂದ ಬೆಳಗಾವಿ, ಮಲಸಮುದ್ರಕ್ಕೆ ಹೋಗಿ ಬರುತ್ತಿದ್ದರು. ೧೮೪೧ ಜೂನ್ ನಲ್ಲಿ ಮಲಸಮುದ್ರಕ್ಕೆ ವರ್ಗವಾಗಿ ಹೋದರು. ಪ್ರೇಯರಿಂದ ಹುಬ್ಬಳ್ಳಿಯಲ್ಲಿ ಸ್ನಾನ ದೀಕ್ಷೆಯಿಂದ ಸಭೆಗೆ ಸೇರಿದ್ದ ಅಬ್ರಹಾಮ್ ಮತ್ತು ಜೋಸೆಫ್ ಎಂಬುವರು ಮಲಸಮುದ್ರಕ್ಕೆ ವಲಸೆ ಹೋದರು.

ಮಲಸಮುದ್ರದಲ್ಲಿ ಅನಾರೋಗ್ಯದಿಂದ ಬಳಲುತ್ತಿದ್ದ ಪ್ರೇ ಅವರು ೧೮೪೩ರ ಪ್ರಾರಂಭದಲ್ಲಿ ಯೂರೋಪರನ್ನು ವಿವಾಹವಾದರು. ಎಚ್.ಪ್ರೇರವರು ಧಾರವಾಡದಲ್ಲಿ ಉತ್ತಮ ಮಿಶನರಿಯಾಗಿ ಕಾರ್ಯನಿರ್ವಹಿಸಿದರು.

೭. ರೆವೆರಂಡ ಸಿ. ಎಸ್ಸಿಗ್

ಸಿ.ಎಸ್ಸಿಗ್ ಜರ್ಮನಿಯ ವುರ್ಕ್ತೆಂಬರ್ಗದ ಸೆವುಬೆರ್ಗ್‌ಯೆಂಬಲ್ಲಿ ೧೮೧೪ ಸೆಪ್ಟೆಂಬರ್ ೧೭ ರಂದು ಜನಿಸಿದರು. ಬಾಸೆಲ್ ಮಿಶನರಿ ಸಂಸ್ಥೆಯಲ್ಲಿ ತರಬೇತಿ ಪಡೆದು ೧೮೩೮ರಲ್ಲಿ ಅವರು ಮಿಶನರಿಗಾಗಿ ಭಾರತ ದೇಶಕ್ಕೆ ಬಂದರು. ಅವರು ಮಂಗಳೂರಿನಲ್ಲಿ ಒಂದು ವರ್ಷ ಸೇವೆ ಸಲ್ಲಿಸಿದರು. ನಂತರ ಧಾರವಾಡದಲ್ಲಿ ಸುಮಾರು ೩ ವರ್ಷಗಳ ಸೇವೆ ಮಾಡುತ್ತಾ ಕಳೆದರು.

ಎಸ್ಸಿಗ್‌ರು ಧಾರವಾಡದಲ್ಲಿದ್ದಾಗ ಬೇರೆ ಬೇರೆ ಗ್ರಾಮಗಳಿಗೆ ಕ್ರೈಸ್ತಧರ್ಮದ ಶುಭವಾರ್ತೆಯನ್ನು ಪ್ರಸಾರ ಮಾಡಿದರು. ಲಿಂಗಾಯಿತರಿಗೆ ಬೋಧನೆ ಮಾಡುವಲ್ಲಿ ಆಸಕ್ತರಾಗಿದ್ದರು. ಉಪದೇಶ ಮಾಡಲು ಎಸ್ಸಿಗರು ಧಾರವಾಡದಿಂದ ಗದಗಗೆ ಹಲವಾರು ಸಲ ಹೋಗಿ ಧರ್ಮ ಪ್ರಚಾರ ಮಾಡಿದರು.

"ಧಾರವಾಡದಲ್ಲಿರುವಾಗ ಪ್ರತಿದಿನ ಬೆಳಿಗ್ಗೆ ಕೆಲವು ಗಂಟೆಗಳು ಶಾಲೆಗಳ ಕೆಲಸದಲ್ಲಿ ಕಾಲ ಕಳೆಯುತ್ತಿದ್ದರು. ಮತ್ತು ವಾರದಲ್ಲಿ ಎರಡು ಮೂರು ಸಲ ಬಜಾರಿನಲ್ಲಿಯೂ ಇಂಗ್ಲೀಷ್ ಶಾಲೆಯ ಎದುರಿನಲ್ಲಿ ಬೋಧನೆ ಮಾಡುತ್ತಿದ್ದರು."[೧೮] ಎಸ್ಸಿಗರಿಗೆ ಧರ್ಮಪ್ರಚಾರ ಮಾಡುವ ಸೇವಾಮನೋಭಾವನೆ ಅಪಾರವಾಗಿರುವುದರಿಂದ ಧಾರವಾಡ, ಬಿಜಾಪುರ ಪ್ರದೇಶಕ್ಕೆ ಹೋಗಿದ್ದರು. ಮಲಸಮುದ್ರದಲ್ಲಿ ನಿರೀಕ್ಷಿತ ಮಟ್ಟದಲ್ಲಿ ಮಿಶನರಿಗಳಿಂದ ಧನ ಸಹಾಯ ಸಿಗದೇ ಹೋದುದರಿಂದ ಅನೇಕ ಜನರು ಕ್ರೈಸ್ತಧರ್ಮ ಸ್ವೀಕರಿಸಲು ಇಚ್ಛಿಸಲಿಲ್ಲ. ಜೊತೆಗೆ ಬಂಧುಗಳು ಹಿಂಸಿಸಿದ ಕಾರಣದಿಂದ ಅನೇಕ ಜನ ಕ್ರೈಸ್ತ ಧರ್ಮ ಸ್ವೀಕರಿಸಲಿಲ್ಲ. ಎಸ್ಸಿಂಗ್ ಅವರ ಪತ್ನಿಗೆ ಕಾಲರಾ ರೋಗ ತಗುಲಿತು ಆಕೆಗೆ ಶುಶ್ರೂಷೆ ಮಾಡುತ್ತಿದ್ದಾಗ ಎಸ್ಸಿಗ್‌ರವರಿಗೆ ಕೂಡ ಕಾಲರ ತಗುಲಿತು. ಎಸ್ಸಿಗ್‌ರವರು ಬಾಸೆಲ್ ಮಿಶನ್ ಸಂಸ್ಥೆಯ ನಿಷ್ಠವಂತರಲ್ಲಿ ಒಬ್ಬರಾಗಿದ್ದರು ಹಾಗೂ ಧಾರವಾಡ ಸಭೆಯ ಮೂಲಕ ಅನೇಕ ಕಾರ್ಯಗಳನ್ನು ನಿರ್ವಹಿಸಿದರು.

೮. ರೆವರೆಂಡ್ ಜಿ.ಸುಪ್ಪರ

ಧಾರವಾಡ ಜಿಲ್ಲೆಯ ಕ್ರೈಸ್ತಮಿಶನರಿಗಳಲ್ಲಿ ಬಾಸೆಲ್ ಮಿಶನ್ ಮಿಶನರಿಗಳು ಸಲ್ಲಿಸಿದ ಸೇವೆ ಅತ್ಯಂತ ಚೆತೋಹಾರಿಯಾಗುವಂತೆ ಕಾರ್ಯನಿರ್ವಹಿಸುವಲ್ಲಿ ರೆ.ಜಿ.ಸುಪ್ಪರ ಕೂಡ ಒಬ್ಬರಾಗಿದ್ದರು.

ರೆ.ಸುಪ್ಪರ ಅವರು ೧೮೪೫ರಲ್ಲಿ ಧಾರವಾಡಕ್ಕೆ ಬಂದರು. ಅಲ್ಲಿಂದ ಹುಬ್ಬಳ್ಳಿಗೆ ಸೇವೆಯ ಪ್ರಾರಂಭಕ್ಕೆ ಸಹಾಯಕರಾದರು. ಹುಬ್ಬಳಿಯ ಬಜಾರಿನಲ್ಲಿ ಒಂದು ಶಾಲೆಯ ಕಟ್ಟಡ ಕಟ್ಟಿಸಿದರು. ಅಲ್ಲಿ ಸುಮಾರು ೫೦ ಜನ ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದರು. ಅವರ ಮೇಲ್ವಿಚಾರಣೆಯನ್ನು ಸುಪ್ಪರ

ಮಾಡಿದರು ಎಂದು ಬಾಸೆಲ್ ಮಿಶನ್‌ರ ೧೮೪೦ರಲ್ಲಿ ವರದಿ ತಿಳಿಸುತ್ತದೆ. ಸುಪ್ಪರರವರಿಗೆ ಕ್ರೈಸ್ತ ಧರ್ಮವಲ್ಲದೇ ಬೋಧನ ವಿಷಯದಲ್ಲಿ ಆಸಕ್ತರಾಗಿದ್ದು, ಹೆಚ್ಚಿನ ಬೋಧನೆಯನ್ನು ಮಾಡುತ್ತಿದ್ದರು. ಸುಪ್ಪರ ಧಾರವಾಡ ಜಿಲ್ಲೆಯ ಸುತ್ತಮುತ್ತಲೆಲ್ಲಾ ಯೇಸುವಿನ ತತ್ವಗಳನ್ನು ಹಲವಾರು ಕಡೆ ಬೋಧನೆ ಮಾಡಿದರು.

ಬಾಲಕಿಯರಿಗೆ ಈ ವಿಭಾಗದಲ್ಲಿ ಶಾಲೆಯ ಕೊರತು ಇತ್ತು. ಆದುದರಿಂದ ಸುಪ್ಪರ ಪ್ರಯತ್ನದಿಂದ “೧೮೪೨ ಏಪ್ರಿಲ್ ತಿಂಗಳಲ್ಲಿ ಹೊಸ ಹುಬ್ಬಳಿಯಲ್ಲಿ ಸುಪ್ಪರ ಅವರು ಬಾಲಕಿಯರಿಗಾಗಿ ಪ್ರಥಮ ಶಾಲೆಯನ್ನು ಪ್ರಾರಂಭಿಸಿದರು. ಹಾಗೂ ಆಗಸ್ಟ್ ತಿಂಗಳಿನಲ್ಲಿ ಹಳೇಹುಬ್ಬಳ್ಳಿಯಲ್ಲಿ ಇನ್ನೊಂದು ಬಾಲಕಿಯರ ಶಾಲೆಯನ್ನು ಪ್ರಾರಂಭಿಸಿದರು.”[೧೯] ಇದು ಸುಪ್ಪರರವರು ಶೈಕ್ಷಣಿಕ ಸುಧಾರಣೆಯ ಕಾರ್ಯ ಮಾಡಿದ ನಿದರ್ಶನವಾಗಿದೆ. ಸುಪ್ಪರ ಅಲ್ಪ ಕಾಲದ ಹುಬ್ಬಳ್ಳಿಯ ಅವರ ಆರಂಭದ ಸೇವೆ ಶ್ಲಾಘನೀಯ ವಾದುದಾಗಿದೆ.

ರೆವರೆಂಡ ಯೋಹಾನ್ನೆಸ್ ಮುಲ್ಲರ್

ಯೋಹಾನ್ನಸ್ ಮುಲ್ಲರ್ ಅವರು ೧೮೧೩ ಜನವರಿ ೧೫ ರಂದು ವುರ್ಕ್ತಿಂಬುರ್ಗದಲ್ಲಿ ಗ್ಲ್ಯೊಪ್ಪಿಂಗನ್ ಎಂಬ ಗ್ರಾಮದಲ್ಲಿ ಜನಿಸಿದರು. ೧೮೩೫ರಲ್ಲಿ ಯೋಹಾನ್ನೆಸ್ ಬಾಸೆಲ್‌ದಲ್ಲಿರುವ ಮಿಶನ್ ಕಾಲೇಜಿಗೆ ಸೇರಿದರು. ಹಿರಿಯ ಅಧಿಕಾರಿಗಳಿದ್ದ ಮುಲ್ಲರ್ ಮೆಚ್ಚುಗೆಯನ್ನು ಪಡೆದುಕೊಂಡರು. ೧೮೩೯ರಲ್ಲಿ ರೆ ಅಮ್ಮನ್ನ ಹಾಗೂ ನಾಲ್ಕು ಜನ ಮಿಶನರಿಗಳೊಂದಿಗೆ ಭಾರತಕ್ಕೆ ಹೊರಟರು. ೧೮೪೦ರಲ್ಲಿ ಮಂಗಳೂರಿಗೆ ಬಂದರು. ಮಂಗಳೂರಿನಲ್ಲಿ ಕರ್ನಾಟಕ ಭಾಷೆಯನ್ನು ಕಲಿತುಕೊಂಡರು. ೧೮೪೧ರಲ್ಲಿ ಹುಬ್ಬಳ್ಳಿಗೆ ಬಂದರು. ಮುಲ್ಲರ್‌ರವರು ಧರ್ಮಪ್ರಸಾರ ಸೇವೆಯಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದರು. ಆ ಕಾರಣದಿಂದ ಅವರು ಹುಬ್ಬಳ್ಳಿಗೆ ಬರಲು ಒಪ್ಪಿದರು. ಹುಬ್ಬಳ್ಳಿಯಲ್ಲಿ ಬಾಸೆಲ್ ಮಿಶನ್ ಸೇವೆ ಪ್ರಾರಂಭವಾಗಿ ಒಂದು ವರ್ಷವಾಗಿತ್ತು. ಆದರೆ ಮುಲ್ಲರವರು ಬೇರೆ ಮಿಶನರಿಗಳು ವಲಸೆ ಹೊದರೆ ತಾವು ಅಲ್ಲಿಯೇ ಉಳಿದುಕೊಂಡರು.

ಮುಲ್ಲರರವರು ಧರ್ಮಪ್ರಸಾರಣೆಯ ಕಾರ್ಯ ಮಾತ್ರವಲ್ಲದೇ, ಶಾಲೆಗಳನ್ನು ಸ್ಥಾಪಿಸುವುದರಲ್ಲಿ ಬಹಳ ಶ್ರಮವಹಿಸಿದರು. “೧೮೪೪ರ ಸುಮಾರಿಗೆ ೧೩ ಶಾಲೆಗಳು ಹುಬ್ಬಳ್ಳಿ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿದ್ದವು ಎಂದು ೧೮೪೪ರ ವರದಿ ತಿಳಿಸುತ್ತದೆ.”[೨೦]

ಯೋಹಾನ್ನೆಸ್ ಮುಲ್ಲರ್ ರವರು ಹುಬ್ಬಳ್ಳಿಗೆ ಸಮೀಪದಲ್ಲಿರುವ ಉಣಕಲ ಸಭೆಯನ್ನು ಪ್ರಾರಂಭಿಸಿ ಬಹಳ ಉತ್ತಮವಾದ ಸೇವೆಯನ್ನು ಸಲ್ಲಿಸಿದರು. ಯೇಸುಕ್ರಿಸ್ತನ ವಿಷಯದ ಕುರಿತು ಬೋಧನೆ ಮಾಡಿದರು. ೧೮೫೪ ಡಿಸೆಂಬರ್ ರಿಂದ ೧೮೫೬ ನವೆಂಬರ್‌ವರೆಗೆ ಪಾರ್ಡಿನಾಂಡ ಕಿಟಲ್‌ರು ಮುಲ್ಲರ್‌ರಿಗೆ ಸಹಾಯಕರಾಗಿ ಕಾರ್ಯ ನಿರ್ವಹಿಸಿದರು. ಯೋಹಾನ್ನಿಸ್ ಮುಲ್ಲರರು ಹುಬ್ಬಳ್ಳಿಯಲ್ಲಿ

ಸುಮಾರು ೨೩ ವರ್ಷಗಳ ಕಾಲದವರೆಗೆ ಉತ್ತಮವಾದ ಸೇವೆಯನ್ನು ಸಲ್ಲಿಸಿದರು. ಧಾರವಾಡಕ್ಕೆ ಸೇವೆ ನೀಡಿದ ಮುಲ್ಲರನು ತಮ್ಮ ೫೧ನೇ ವಯಸ್ಸಿನಲ್ಲಿ ೧೮೬೩ ಡಿಸೆಂಬರ್ ೨೮ರಂದು ಹುಬ್ಬಳ್ಳಿಯಲ್ಲಿ ನಿಧನರಾದರು. ಮೃತ ಶರೀರದ ದೇಹವನ್ನು ಮಿಶನ್ ಬಂಗಲೆಯಲ್ಲಿ ಶವ ಸಂಸ್ಕಾರವನ್ನು ಮಾಡಲಾಯಿತು. ಉಣಕಲ್ ಸಭೆಗೆ ಅವರು ಅವಿರತವಾಗಿ ಶ್ರಮಿಸಿದ್ದರಿಂದ ಅವರ ಸವಿನೆನಪಿಗಾಗಿ ಉಣಕಲ್ ದೇವಾಲಯಕ್ಕೆ 'Mullar memoreal chrach" ಎಂದು ನಾಮಕರಣ ಮಾಡಲಾಯಿತು.

೧೦. ಫರ್ಡಿನಾಂಡ ಕಿಟೆಲ್

ಪರ್ಡಿನಾಂಡ್ ಕಿಟೆಲ್‌ರವರು ರಾಸ್ಟರ್ ಹಾಪ್ ಎಂಬಲ್ಲಿ ಏಪ್ರಿಲ್ ೭ ಕ್ರಿ.ಶ.೧೮೩೨ರಂದು ಜನಿಸಿದರು. ತಂದೆ ಪ್ಯಾಸ್ಟರ್‌ಗ್ರಾಟ್ ಪ್ರೀಡ್ ಕಿಟಲ್, ತಾಯಿ ಹೆಲನ್.ಕಿಟಲರು ಪ್ರಾಥಮಿಕ ಶಿಕ್ಷಣವನ್ನು ಹುಟ್ಟುರಾದ ರಾಸ್ಟರ ಹಾಪ್‌ಯಲ್ಲಿ ನಡೆಯಿತು. ಅಜ್ಜನ ಊರಾದ ಜೂರಿಕನಲ್ಲಿ ಹೈಸ್ಕೂಲ್ ಶಿಕ್ಷಣ ಪಡದರು. ಬಾಲ್ಯದಿಂದಲೇ ಕಿಟಲ್‌ರಿಗೆ ಅವರ ತಂದೆಯಂತೆಯೇ ಮತೋಪದೇಶ ಮಾಡಬೇಕೆಂಬ ಆಸೆಯಾಗಿತ್ತು. ತಮ್ಮ ೧೭ನೇ ವಯಸ್ಸಿಗೆ ಮಿಶನ್ ಕಾಲೇಜಿಗೆ ಕಿಟಲ್‌ರು ಸೇರಿದರು. ೧೮೫೦ರಲ್ಲಿ ಮಿಶನ್ ಕಾಲೇಜಿಗೆ ಪ್ರವೇಶ ದೊರೆಯಿತು. ೧೮೫೩ರಲ್ಲಿ ಮಿಶನ್ ತರಬೇತಿಯಿಂದ ಕಿಟಲ್‌ರು ಹೊರಗೆ ಬಂದರು. ಬಾಸೆಲ್ ಸಂಸ್ಥೆಯವರು ಕಿಟಲ್‌ರನ್ನು ಭಾರತಕ್ಕೆ ಕಳಿಸಲು ತೀರ್ಮಾನಿಸಿದರು.

೧೮೫೩ರಲ್ಲಿ ಅಕ್ಟೋಬರ್ ೧೬ರಂದು ಸ್ಟುಟರ್ಗಾಟದ ದೇವಾಲಯದಲ್ಲಿ ಗುರುದೀಕ್ಷೆಯನ್ನು ಕಿಟಲ್‌ರು ಪಡೆದರು. ಕಿಟಲ್‌ರು ಭಾರತಕ್ಕೆ ಬಂದರು. ನಂತರ ಕರ್ನಾಟಕದ ಮಂಗಳೂರಿಗೆ ಆಗಮಿಸಿದರು. ಕಿಟಲರು ಭಾರತಕ್ಕೆ ಮಿಶನರಿಗೆ ಬಂದಾಗ ಕೇವಲ ೨೨ ವರ್ಷದವರಾಗಿದ್ದರು. ಮಂಗಳೂರಿನಲ್ಲಿ ಕಿಟಲ್‌ರಿಗೆ ವೈಗಲ್‌ರು ಭಾಷಾಭ್ಯಾಸ ಹೇಳುವ ಮೊದಲ ಗುರುಗಳಾಗಿದ್ದರು. ಮಂಗಳೂರಿನಿಂದ ಕಿಟಲ್‌ರು ಧಾರವಾಡಕ್ಕೆ ಬಂದರು. ಧಾರವಾಡದಲ್ಲಿ ಕಿಟಲರು ಇಂಗ್ಲೀಷ್ ಸ್ಕೂಲ್‌ನಲ್ಲಿ ಉಪಾಧ್ಯಾಯರೆಂದು ನೇಮಕವಾದರು. "ಕ್ರಿ.ಶ. ೧೮೬೦ರವರೆಗೆ ಧಾರವಾಡದಲ್ಲಿ ಸೇವೆ ಸಲ್ಲಿಸಿದ ನಂತರ ಇವರು ಮುಂದಿನ ಹತ್ತು ವರ್ಷಗಳ ಕಾಲ ಮಂಗಳೂರಿನಲ್ಲಿ ಧರ್ಮ ಸೇವಾಕಾರ್ಯ ನಿರ್ವಹಿಸಿದರು."[೨೦] ಕ್ರಿ.ಶ.೧೮೬೦ರಲ್ಲಿ ಫಾಲೆನಾ ಎಫ್.ಐಥಳು ಎಂಬುವಳನ್ನು ಕಿಟಲ್‌ರು ವಿವಾಹವಾದರು. ಮಂಗಳೂರಿನಲ್ಲಿ ೧೮೬೦-೬೬ರವರೆಗೆ ದೈವಜ್ಞಾನವನ್ನು ಬೋಧಿಸುವ ಸಂಸ್ಥೆಯಲ್ಲಿ ಶಿಕ್ಷಕರು ಕಾರ್ಯನಿರ್ವಹಿಸಿ ಮೆಚ್ಚುಗೆಯನ್ನು ಪಡೆದುಕೊಂಡರು.

ಕಿಟಲ್‌ರು ಕೇವಲ ಧರ್ಮಪ್ರಚಾರದ ಕಡೆ ಹೆಚ್ಚು ಸಮಯದಲ್ಲಿ ಕಳೆಯದೇ ಸಾಹಿತ್ಯ ಕ್ಷೇತ್ರದಲ್ಲಿ ಹೆಚ್ಚು ತೊಡಗಿ ತಮ್ಮದೇ ಆದ ಮಹತ್ವದ ಕೊಡುಗೆಯನ್ನು ನೀಡಿದರು. ಕನ್ನಡದ ಆಳವಾದ ಅಭ್ಯಾಸ, ಹಳಗನ್ನಡ, ನಡುಗನ್ನಡ ಅಧ್ಯಯನವನ್ನು ಮಂಗಳೂರಿನಲ್ಲಿ ನಡೆಸಿದರು. ಕಿಟಲರು ಕನ್ನಡದ ಜೊತೆಗೆ ತಮಿಳು, ತೆಲುಗು, ಮಲಯಾಳಂ ಹಾಗೂ ತುಳು ಭಾಷೆಗಳನ್ನು ಅರಿತುಕೊಂಡರು. ಕಿಟೆಲ್‌ರ ಪತ್ನಿ ೧೮೬೮ರಲ್ಲಿ ತೀರಿಕೊಂಡರು. ಇದರಿಂದ ಇಬ್ಬರು ಮಕ್ಕಳೊಂದಿಗೆ ಕಿಟಲ್‌ರು ಆರೋಗ್ಯ ಸುಧಾರಣೆಗಾಗಿ

೧೮೬೬ರಲ್ಲಿ ಸ್ವದೇಶಕ್ಕೆ ಮರಳಿದರು. ೧೮೮೨ರಲ್ಲಿ ಮರಳಿ ಧಾರವಾಡಕ್ಕೆ ಬಂದರು. ಆಗ ಇಲ್ಲಿ ಲೈಸ್ಗ್ಲರ ಅವರು ಮಿಶನರಿಯಾಗಿದ್ದರು. ಅವರು ಸಭೆ ಹಾಗೂ ಶಾಲೆಗಳ ಮೇಲ್ವಿಚಾರಣೆ ಮಾಡುತ್ತಿದ್ದರು. ೧೮೮೩-೮೪ರಲ್ಲಿ ಬಾಸೆಲ್ ಮಿಶನ್ ಹೈಸ್ಕೂಲಿನ ಪ್ರಿನ್ಸಿಪಾಲರಾಗಿದ್ದರು. ಧಾರವಾಡ, ಹುಬ್ಬಳ್ಳಿಗಳಲ್ಲಿ, ಕೆಲವು ಸಮಯ ಕಳೆದ ನಂತರ ೧೮೮೬ರ ಅಕ್ಟೋಬರ್ ೧೬ರಂದು ಮಡಿಕೇರಿಗೆ ಹೋದರು. ಕ್ರಿ.ಶ.೧೮೯೨ರಲ್ಲಿ ಭಾರತವನ್ನು ಬಿಟ್ಟು ವುಟೆಬರ್ಗ ಪ್ರದೇಶಕ್ಕೆ ಹೋದರು. ಅದುವರೆಗೆ ಅವರು ಸಂಗ್ರಹಿಸಿದ ಸಾಮಾಗ್ರಿಗಳನ್ನು ಪರೀಕ್ಷಿಸಿದರು. ಕ್ರಿ.ಶ.೧೮೯೪ರಲ್ಲಿ ಜಿಮ್ ಬಾಸರ ಕನ್ನಡ-ಇಂಗ್ಲೀಷ್ ನಿಘಂಟು ಪ್ರಕಟವಾಯಿತು. ಈ ಮಹಾಕಾರ್ಯ ರಚನೆಯನ್ನು ಮೆಚ್ಚಿದ ಟುಬಂಗಮ್ ವಿಶ್ವವಿದ್ಯಾಲಯ ೧೮೯೫ರಲ್ಲಿ ಕಿಟಲ್‌ರಿಗೆ ಡಾಕ್ಟರೇಟ್ ಕೊಟ್ಟು ಗೌರವಿಸಿತು. ಕಿಟಲ್‌ರ ಹೆಸರಿನಲ್ಲಿ ಈಗ ಧಾರವಾಡದಲ್ಲಿ ಒಂದು ಮಹಾವಿದ್ಯಾಲಯವು ಶಿಕ್ಷಣ ನೀಡುತ್ತಲಿದೆ. ಇದು ಈಗ ಪ್ರಸಿದ್ಧ ಶಿಕ್ಷಣ ಕೇಂದ್ರವಾಗಿದೆ.

ಕಿಟಲ್‌ರು ತರುಣ ವಯಸ್ಸಿನಲ್ಲಿ ಭಾರತಕ್ಕೆ ಬಂದರು. ಅವರು ಸುಮಾರು ೪೦ ವರ್ಷಗಳ ಕಾಲ ಕೂಡ ಸಾಹಿತ್ಯ, ವ್ಯಾಕರಣ, ಶಿಕ್ಷಣ, ನಿಘಂಟು ರಚನೆ, ಧರ್ಮಪ್ರಚಾರದ ಕಾರ್ಯ ಹೀಗೆ ಕಾರ್ಯನಿರ್ವಹಣೆ ಕನ್ನಡಕ್ಕೆ ಮಾಡಿದ ಸೇವೆಯು ಅಮೋಘವಾದುದಾಗಿದೆ. ಕಿಟಲರು ಕ್ರೈಸ್ತ ಧರ್ಮ ಹಾಗೂ ಹಿಂದೂಧರ್ಮಗಳಿಗೆ ಸಂಬಂಧಿಸಿದ ಹಲವು ಕೃತಿಗಳನ್ನು ರಚಿಸಿದ್ದಾರೆ. ಕಿಟಲ್‌ರ ಮೊದಲ ಕೃತಿ "ಕಥಾ ಮಾಲೆ" ಕ್ರೈಸ್ತಮತಕ್ಕೆ ಸಂಬಂಧಪಟ್ಟಿದ್ದಾಗಿದೆ. ಇಲ್ಲಿಯ ಜನರಿಗೆ ಕ್ರಿಸ್ತನು ಭಜಿಸುವ ಹಾಡುಗಳನ್ನು ಮಿಶನರಿಗಳು ಹೇಳಕೊಡುತ್ತಿದ್ದರು. ಕನ್ನಡಿಗರ ಹಾಡಿನ ರೂಪಗಳಾದ ಷಟ್ಪದಿ, ಕೀರ್ತನೆ ಮುಂತಾದ ಛಂದಸ್ಸಿನಲ್ಲಿ ಈ ಕಥಾ ಮಾಲೆಯನ್ನು ರಚಿಸಿದ್ದಾರೆ. "ಮಿಶನರಿ ಜನರಲ್ಲಿ ಪ್ರಥಮವಾಗಿ ಖಂಡಕಾವ್ಯ"ವೊಂದನ್ನು ರಚಿಸಿದ ಕೀರ್ತಿ ಕಿಟಲರಿಗೆ ಸಲ್ಲುತ್ತದೆ. ಇದೇ ಅವರ ಮೊದಲ ಕೃತಿ."(೨೨) ಕ್ರೈಸ್ತಸಭಾಚರಿತ್ರೆ ೧೮೬೮ರಲ್ಲಿ ರಚಿಸಿದರು. ಇದರಲ್ಲಿ ಚರ್ಚಿನ ಉಗಮ ವಿವಿಧ ದೇಶಗಳಲ್ಲಿ ಅದು ಬೆಳೆದು ಬಂದ ಬಗೆಯನ್ನು ಹೇಳಲಾಗಿದೆ.

ಪಠ್ಯಪುಸ್ತಕಗಳು

ಕಿಟಲ್‌ರು ಕೆಲವು ಪಠ್ಯಪುಸ್ತಕಗಳನ್ನು ಶಾಲೆಗಳ ಅಗತ್ಯಕ್ಕಾಗಿ ರಚಿಸಿದರು. ಕಿಟಲ್ ರಚಿಸಿದ ಪಠ್ಯಪುಸ್ತಕಗಳನ್ನು ಶಾಲೆಗಳಿಗಾಗಿ ನಿಗಧಿಪಡಿಸಿದಿದ್ದಾರೆ. ಇವರು ಪಂಚತಂತ್ರ ಕಥೆಗಳನ್ನು ಆಧರಿಸಿ, ಕೃತಿ ರಚನಾಕಾರರು "ಹಿಂದೂ ದೇಶದಚರಿತ್ರೆ" ಕೃತಿಯಲ್ಲಿ ಪ್ರಾಚೀನ ಕಾಲದಿಂದ ೧೮೫೭ ಸಿಪಾಯಿದಂಗೆ ವರೆಗೆ ಇತಿಹಾಸವಿದೆ."[೨೩]

ಗ್ರಂಥ ಸಂಪಾದನೆ

ಕೇಶಿರಾಜನ "ಶಬ್ದಮಣಿದರ್ಪಣ" ಎಂಬ ಕೃತಿಯೂ ಹೊರತಂದರು. ಇವರು ಶಬ್ದಮಣಿದರ್ಪಣ'ದ ಸಂಪಾದನೆಗೆ ಹಸ್ತಪ್ರತಿಗಳನ್ನು ಬಳಸಿದ್ದಾರೆ. ನಾಗವರ್ಮನ ಛಂಧೋಬುಂಧಿಯನ್ನು "ನಾಗವರ್ಮನ ಕನ್ನಡ ಛಂದಸ್ಸು' ಎಂದು ಸಂಪಾದಿಸಿದ್ದಾರೆ.

[illegible]

ಕಿಟಲರಿಗೆ ಬಾಸೆಲ್ ಮಿಶನದ ಕ್ರಿ.ಶ.೧೮೭೨ರ ಸುಮಾರಿಗೆ ಕನ್ನಡ ಇಂಗ್ಲೀಷ್ ನಿಘಂಟು ರಚಿಸುವ ಕೆಲಸವನ್ನು ವಹಿಸಿಕೊಟ್ಟಿತು. ಬ್ರಿಟಿಷರ ಸರ್ಕಾರದ ಆರ್ಥಿಕ ನೆರವು ಕಿಟಲರಿಗೆ ಹೆಚ್ಚು ಪುಷ್ಟಿ ನೀಡಿತು. ಕ್ರಿ.ಶ.೧೮೯೪ಳ ಕೋಶ ರಚನೆ ಕಾರ್ಯ ಮುಗಿದು ಗ್ರಂಥವು ಪ್ರಕಟವಾಯಿತು.

ಭಾಷಾಭ್ಯಾಸ

ಕಿಟಲ್‌ರು ಇಂಗ್ಲೀಷಿನಲ್ಲಿ ವ್ಯಾಕರಣ ಗ್ರಂಥಗಳನ್ನು ರಚಿಸಿದರು. ಅಷ್ಟೇ ಅಲ್ಲದೆ ಕೆಲವೊಂದು ಬಿಡಿಲೇಖನಗಳನ್ನು ರಚಿಸಿದ್ದಾರೆ. ಇಂಡಿಯನ್ ಆಯಂಟಿಕ್ವರಿ ಎಂಬ ಗ್ರಂಥವನ್ನು ಬರೆದಿದ್ದಾರೆ. 'ವಿಚಿತ್ರ ವರ್ತಮಾನ ಸಂಗ್ರಹ' ಇದರಲ್ಲಿ ಇಂಗ್ಲೀಷ್ ಲೇಖನಗಳು ಇದ್ದವು. ವಿಶೇಷವಾದ ಮಾಹಿತಿಯೊಂದಿಗೆ ಪ್ರತಿ ಎರಡು ವರ್ಷಕ್ಕೊಮ್ಮೆ ಪ್ರಕಟವಾಗುತ್ತಿದ್ದವು. ಹೀಗೆ ಹಲವಾರು ಸಂಖ್ಯೆಯಲ್ಲಿ ಕ್ರೈಸ್ತ ಮಿಶನರಿಗಳು ಧಾರವಾಡ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸಿದರು. ಕೆಲವು ಮಿಶನರಿಗಳ ಸಂಕ್ಷಿಪ್ತ ಮಾಹಿತಿಯನ್ನು ಆಧಾರಿಸಿ ತಿಳಿಸಲಾಗಿದೆ.

ಇನ್ನೂ ಅನೇಕ ಮಿಶನರಿಗಳು ತಮ್ಮ ಸೇವಾಕಾರ್ಯಗಳನ್ನು ಧಾರವಾಡ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸಿದ್ದಾರೆ. ಇವರುಗಳು ಸೇವಾ ಮನೋಭಾವನೆಯಿಂದ ಇಂದಿಗೂ ಧಾರವಾಡ ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ, ಆಧ್ಯಾತ್ಮಿಕವಾಗಿ ಪ್ರಗತಿಯನ್ನು ಸಾಧಿಸಿದೆ. ಮಿಶನರಿಗಳ ನಿಸ್ವಾರ್ಥ ಸೇವಾ ಮನೋಭಾವನೆಯೂ ಎಂದಿಗೂ ಅಮರವಾಗಿದಂತಾಗಿದೆ.

ಧಾರವಾಡ ಜಿಲ್ಲೆಯ ಪ್ರಮುಖ ಚರ್ಚ್‌ಗಳು

ಧಾರವಾಡ ಜಿಲ್ಲೆಯು ಒಂದು ಐತಿಹಾಸಿಕ ತಾಣವಾಗಿದೆ. ವೈವಿಧ್ಯತೆಯಲ್ಲಿ ಏಕತೆ ಎಂಬ ತತ್ವಕ್ಕೆ ಅನುಗುಣವಾಗಿ ಇತಿಹಾಸಪೂರ್ವ ಕಾಲದಿಂದ ಆಧುನಿಕ ಇತಿಹಾಸ ಕಾಲದವರೆಗೂ ಅನೇಕ ಮಜಲುಗಳನ್ನು ದಾಟಿ ಬಂದಿದೆ. ಎಲ್ಲ ಧರ್ಮದವರು ಈ ಜಿಲ್ಲೆಯಲ್ಲಿ ಇರುವುದು ಕಂಡುಬರುತ್ತದೆ. ಹಿಂದೂಗಳಿಗೆ ದೇವಾಲಯ, ಮುಸ್ಲಿಂರಿಗೆ ಮಸೀದಿ, ಜೈನರಿಗೆ ಮಂದಿರಗಳು ಇರುವಂತೆ ಕ್ರೈಸ್ತರಿಗೆ ಧಾರವಾಡ ಜಿಲ್ಲೆಯ ಪ್ರಮುಖ ಐದು ತಾಲೂಕುಗಳಲ್ಲಿ ಚರ್ಚುಗಳು ಇರುವುದು ಕಂಡುಬರುತ್ತದೆ. ಆದರೆ ಪ್ರಮುಖವಾಗಿ ಮೂರು ತಾಲೂಕುಗಳಲ್ಲಿ ಮಾತ್ರ ಅಧಿಕವಾಗಿ ಚರ್ಚುಗಳು ಕಂಡುಬರುತ್ತವೆ. ಅವುಗಳೆಂದರೆ ಧಾರವಾಡ ತಾಲೂಕು, ಹುಬ್ಬಳ್ಳಿ ತಾಲೂಕು, ಕಲಘಟಕಿ ತಾಲೂಕುಗಳಲ್ಲಿ ಹೆಚ್ಚು ಚರ್ಚುಗಳಿವೆ.

ಧಾರವಾಡ ಜಿಲ್ಲೆಯ ಚರ್ಚುಗಳ ಕಟ್ಟಡದ ರಚನೆ ಕೆಲವು ಭಿನ್ನ ಭಿನ್ನ ಸ್ವರೂಪದಾಗಿದೆ. ಕೆಲವು ಯೂರೋಪಿನ್ ಶೈಲಿಯ ಚರ್ಚುಗಳಿದ್ದರೆ, ಕೆಲವು ಜರ್ಮನ್ ಶೈಲಿಯ ಚರ್ಚುಗಳು, ಇನ್ನು ಕೆಲವು ಆಧುನಿಕ ಮಾಧರಿಯ ಶೈಲಿಯನ್ನು ಹೊಂದಿರುವುದರಿಂದ ಗೃಹಶೈಲಿ ಕಟ್ಟಡವನ್ನು ಹೊಂದಿವೆ. ಭಾರತದ ಚರ್ಚುಗಳ ವಾಸ್ತುಶಿಲ್ಪವನ್ನು ಅವಲೋಕಿಸಿದಾಗ ಭಾರತದ ಚರ್ಚುಗಳ ಒಂದೇ ಬಗೆಯ ಶೈಲಿಯ ರಚನೆಯಿಂದ ರಚಿತವಾಗಿಲ್ಲ. ಜೊತೆಗೆ ಅವುಗಳ ರಚನೆಯ ಶೈಲಿಯನ್ನು ಗುರುತಿಸುವುದು ಕಷ್ಟಕರವಾದುದಾಗಿದೆ.

ಧಾರವಾಡ ಜಿಲ್ಲೆಯಲ್ಲಿ ಕ್ಯಾಥೋಲಿಕ್ ಹಾಗೂ ಪ್ರೊಟೆಸ್ಟೆಂಟ್ ಮಾದರಿಯ ಎರಡು ಪಂಥಗಳ ಚರ್ಚುಗಳು ಕಂಡುಬರುತ್ತವೆ. ಇಂತಹ ಚರ್ಚುಗಳು ಶಾಂತಿ ಸಂದೇಶವನ್ನು ಸಾರುವ ಕೇಂದ್ರಗಳಾಗಿವೆ. ಚರ್ಚುಗಳು ಯೇಸುವಿನ ತತ್ವಗಳನ್ನು ಹಾಗೂ ಸುವಾರ್ತೆಗಳನ್ನು ಬೋಧಿಸುವ ಆಕರಗಳಾಗಿವೆ.

ಚರ್ಚುಗಳು ಕೇವಲ ಕಟ್ಟಡದ ರಚನೆಯಲ್ಲಿ ಭಿನ್ನವಾಗಿ ಕಾಣಿಸದೇ ಅವು ಆಯಾ ಕಾಲದ, ಸಾಂಸ್ಕೃತಿಕ ಇತಿಹಾಸ ಹಾಗೂ ಸಮಾಜವನ್ನು ಪ್ರತಿನಿಧಿಸುತ್ತವೆ. ಆದ್ದರಿಂದ ಚರ್ಚುಗಳು ಆಯಾ ಸ್ಥಳೀಯ ಜನರ ಸಂಸ್ಕೃತಿಯ ಆಧಾರದ ಮೇಲೆ ರಚಿತವಾಗಿವೆ. ಹೀಗಾಗಿ ಆಧುನಿಕ ಕಾಲದ ಚರ್ಚುಗಳ ರಚನೆಯೇ ಗೃಹಶೈಲಿ ಅಥವಾ ಹಿಂದೂ ದೇವಾಲಯಗಳ ಮಾದರಿಗಳನ್ನು ಅನುಸರಿಸುತ್ತವೆ.

ಕ್ರ.ಸಂ.	ಚರ್ಚಿನ ಹೆಸರು	ತಾಲ್ಲೂಕು
೧.	ಹೆಬಿಕ ಮೆಮೋರಿಯಲ್ ಚರ್ಚ್	ಧಾರವಾಡ
೨.	ಆಲ್ ಸೈಂಟ್ಸ್ ಚರ್ಚ್	ಧಾರವಾಡ
೩.	ನಿತ್ಯ ಸಹಾಯ ಮಾತೆಯ ದೇವಾಲಯ(ಚರ್ಚ್)	ಧಾರವಾಡ
೪.	ಹೋರೇಬ್ ಪ್ರಾರ್ಥನಾ ಮಂದಿರ	ಧಾರವಾಡ
೫.	ಹೊಲಿ ಕ್ರಾಸ್ ಚರ್ಚ್	ಧಾರವಾಡ
೬.	ಕ್ಯಾಥೋಲಿಕ್ ಚರ್ಚ್(ಅಳ್ನಾವರ್)	ಧಾರವಾಡ
೭.	ಮುಲ್ಲರ ಮೆಮೋರಿಯಲ್ ಚರ್ಚ್	ಹುಬ್ಬಳ್ಳಿ
೮.	ಸಿ.ಎಸ್.ಐ.ಚರ್ಚ್	ಹುಬ್ಬಳ್ಳಿ
೯.	ಮ್ಯೆಯರ್ ಮೆಮೋರಿಯಲ್ ಚರ್ಚ್	ಹುಬ್ಬಳ್ಳಿ
೧೦.	ಸ್ವರ್ಗಾರೋಹಣ ದೇವಾಲಯ ಚರ್ಚ್	ಹುಬ್ಬಳ್ಳಿ
೧೧.	ಸಂತ ಜೋಸೆಫರ್ ಕ್ಯಾಥೋಲಿಕ್ ದೇವಾಲಯ	ಹುಬ್ಬಳ್ಳಿ
೧೨.	ಬಾಲ ಯೇಸು ದೇವಾಲಯ	ಹುಬ್ಬಳ್ಳಿ
೧೩	ಸಂತ ಎಂಡ್ರಿವ್ಯೂಸ್ ಚರ್ಚ್	ಹುಬ್ಬಳ್ಳಿ
೧೪.	ಸಂತ ಪೀಟರ್ಸ್ ಚರ್ಚ್ ಸಿ.ಎಸ್.ಐ.	ಹುಬ್ಬಳ್ಳಿ
೧೫.	ದಿ ಹೊಲಿನೆಮ್ ಕ್ಯಾಥಡ್ರೆಲ್	ಹುಬ್ಬಳ್ಳಿ
೧೬.	ಟ್ರಿನಿಟಿ ಫೆಲೋಸಿಪ್ ಚರ್ಚ್	ಕಲಘಟಗಿ
೧೭.	ಯೇಸುನಾಥನ ಚರ್ಚ್	ಕಲಘಟಗಿ
೧೮.	ಜಪಮಾಲೆ ಮಾತೆಯ ದೇವಾಲಯ	ಕಲಘಟಗಿ

ಅಡಿಟಿಪ್ಪಣಿಗಳು

೧. ಜೋಗುಳ ಜೆ.ಎಂ., ಕರ್ನಾಟಕದಲ್ಲಿ ಬಾಸೆಲ್ ಮಿಶನ್, ೧೯೮೬, ಪು.೮

೨. ಮ್ಯಾಥ್ಯೂ ಕೆ.ಎಂ., ರೆ.ಎಫ್.ಕಿಟಲ್ ಒಂದು ಸಮಗ್ರ ಅಧ್ಯಯನ, ೧೯೯೪, ಪು.೮

೩. ಅದೇ,

೪. ಜೋಗುಳ ಜೆ.ಎಂ., ಕರ್ನಾಟಕದಲ್ಲಿ ಬಾಸಲ್ ಮಿಶನ್, ೧೯೮೬, ಪು.೧೧೮

೫. ಕಟಗೇರಿ ನ.ಹ., ಗತಕಾಲದ ಧಾರವಾಡ, ೨೦೦೭ ೦೮, ಪು.೧೩

೬. ಧಾರವಾಡಕರ ರಾ.ಯ., ಹೊಸಗನ್ನಡ ಸಾಹಿತ್ಯದ ಉದಯಕಾಲ, ೧೯೭೫, ಪು.೫೮೮

೭. ಶ್ರೀನಿವಾಸ ಹಾವನೂರು, ಹೊಸಗನ್ನಡದ ಅರುಣೋದಯ, ೨೦೦೦, ಪು.೧೧೪

೮. ಅದೇ, ಪು.೧೧೫

೯. ಜೋಗುಳ ಜೆ.ಎಂ., ಪೂರ್ವೋಕ್ತ, ೧೯೮೬ ೮೭, ಪು.೧೨೪

೧೦. ಧಾರವಾಡಕರ ರಾ.ಯ., ಪೂರ್ವೋಕ್ತ, ೧೯೭೫, ಪು.೫೮೯

೧೧. ಅದೇ, ಪು.೫೯೦

೧೨. ಅದೇ, ಪು.೫೯೧

೧೩. ಮುತ್ತಣ್ಣ ಐ.ಮಾ., ೧೯ನೇ ಶತಮಾನದಲ್ಲಿ ಪಾಶ್ಚಮಾತ್ಯ ವಿದ್ವಾಂಸರ ಕನ್ನಡ ಸೇವೆ, ೧೯೬೯, ಪು.೨೪೨

೧೪. ಜೋಗುಳ ಜೆ.ಎಂ., ಪೂರ್ವೋಕ್ತ, ೧೯೮೬ ೮೭, ಪು.೧೨೭

೧೫. ಅದೇ, ಪು.೧೭೯

೧೬. ಧಾರವಾಡಕರ ರಾ.ಯ., ಪೂರ್ವೋಕ್ತ, ೧೯೭೫, ಪು.೫೯೭

೧೭. ಜೋಗುಳ ಜೆ.ಎಂ., ಪೂರ್ವೋಕ್ತ, ೧೯೮೬ ೮೭, ಪು.೧೪೦

೧೮. ಅದೇ, ಪು.೧೪೪

೧೯. ಅದೇ, ಪು.೧೪೫

೨೦. ಅದೇ, ಪು.೧೪೭

೨೧. ಅದೇ, ಪು.೧೪೮

೨೨. ಮಾಥ್ಯೂ ಕೆ.ಎಂ., ಪೂರ್ವೋಕ್ತ, ಪು.೧೫

೨೩. ಅದೇ, ಪು.೧೯

ಅಧ್ಯಾಯ ೪

ಕ್ರೈಸ್ತ ಮಿಷನರಿಗಳ ಕಾರ್ಯ ಚಟುವಟಿಕೆಗಳು

೪.೧. ಶಿಕ್ಷಣ

೪.೨. ಮುದ್ರಣ

೪.೩. ಸಾಹಿತ್ಯ

೪.೪. ಕೈಗಾರಿಕೆ ಮತ್ತು ವೃತ್ತಿ ತರಬೇತಿ

೪.೫. ವೈದ್ಯಕೀಯ ಕ್ಷೇತ್ರ

೪.೬. ಮತಾಂತರ

೪

ಕ್ರೈಸ್ತ ಮಿಶನರಿಗಳ ಕಾರ್ಯ ಚಟುವಟಿಕೆಗಳು

ಭಾರತವು ಒಂದು ಸಾಂಪ್ರದಾಯಿಕ ದೇಶವಾಗಿದೆ. ಇಲ್ಲಿ ಏನೇ ಬದಲಾವಣೆಗಳಾದರು ಅವು ಸಾಂಪ್ರದಾಯಿಕವಾಗಿ ನಡೆಯುತ್ತಿದ್ದವು. ಇದರೊಂದಿಗೆ ಭಾರತೀಯರಲ್ಲಿ ಮೌಢ್ಯತೆ, ಸಂಪ್ರದಾಯ, ಅಂಧಾನುಕರಣೆ, ಮೇಲು-ಕೀಳು, ಅಸ್ಪೃಶ್ಯತೆ, ಸ್ತ್ರೀ-ಪುರುಷ ಎಂಬ ಕಲ್ಪನೆಗಳು ಭಾರತೀಯರಲ್ಲಿ ಮನೆ ಮಾಡಿಕೊಂಡಿದ್ದವು. ಎಲ್ಲಾ ಅವಕಾಶಗಳು, ಸೌಲಭ್ಯಗಳು ಕೇವಲ ಮೇಲ್ವರ್ಗದವರ ಹಾಗೂ ಬಲಿತ ವರ್ಗಗಳ ಸ್ವತ್ತಾಗಿದ್ದವು.

ಪಾಶ್ಚಿಮಾತ್ಯರ ಆಗಮನದಿಂದಾಗಿ ಭಾರತೀಯರಲ್ಲಿ ಹೊಸ ವಿಚಾರ, ವಿನಿಮಯ, ಆಧುನಿಕತೆಯ ಅರಿವು ಜನರಲ್ಲಿ ಮೂಡಿತು. ಕೆಲವು ಸಂಪ್ರದಾಯಬದ್ಧರಿಗೆ ಇದು ಅಸಮಾಧಾನವನ್ನುಂಟು ಮಾಡಿತು. ಆದರೆ ಆಧುನಿಕತೆ ಬಯಸುವ ಯುವಕರು ಪಾಶ್ಚಿಮಾತ್ಯರ ಪ್ರಗತಿದಾಯಕ ವಿಚಾರಗಳನ್ನು ಸ್ವೀಕರಿಸಿದರು. ಬ್ರಿಟಿಷರು ಸಾಮಾಜಿಕ ಸುಧಾರಣೆಯನ್ನು ತರಲು ಕೆಲವು ಕಾಯ್ದೆಗಳನ್ನು ಜಾರಿಗೆ ತಂದರು. ಭಾರತಕ್ಕೆ ಆಗಮಿಸಿದ ಕ್ರೈಸ್ತ ಮಿಶನರಿಗಳ ಮುಖ್ಯ ಉದ್ದೇಶ ಧರ್ಮಪ್ರಚಾರದ ಕಾರ್ಯವನ್ನು ಮಾಡುವುದಾಗಿತ್ತು. ಅದರೊಂದಿಗೆ ಸುಧಾರಣೆಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಅಂತಹ ಸುಧಾರಣೆಯ ಕ್ರಮಗಳೆಂದರೆ ಶಿಕ್ಷಣ, ಮುದ್ರಣ, ಸಾಹಿತ್ಯ, ಕೈಗಾರಿಕೆ ಮತ್ತು ವೃತ್ತಿ ತರಬೇತಿ, ವೈದ್ಯಕೀಯ ಕ್ಷೇತ್ರ, ಅನಾಥಾಲಯದ ಸ್ಥಾಪನೆ, ಪತ್ರಿಕೋದ್ಯಮ, ಚರಿತ್ರೆ ರಚನೆ. ಹೀಗೆ ಮುಂತಾದ ಸುಧಾರಣೆಯ ಕ್ರಮಗಳನ್ನು ತಮ್ಮ ಸೇವೆಯ ಶಾಖೆಗಳನ್ನಾಗಿ ಮಾಡಿಕೊಂಡರು. ಭಾರತದ ಅನೇಕ ಪ್ರದೇಶಗಳ ಮೇಲೆ ಕ್ರೈಸ್ತಧರ್ಮದ ಪ್ರಚಾರ ಕಾರ್ಯವನ್ನು ಮಿಶನರಿಗಳು ಕೈಗೊಂಡರು. ಕರ್ನಾಟಕದಲ್ಲಿ ಕೂಡ ಈ ಪ್ರಚಾರ ನಡೆಯ ತೊಡಗಿತು. ಕರ್ನಾಟಕದ ಪ್ರಮುಖ ಪ್ರದೇಶಗಳಾದ ಮಂಗಳೂರು, ಬೆಂಗಳೂರು, ಮೈಸೂರು, ಬಳ್ಳಾರಿ, ಬಿಜಾಪುರ, ಕೊಡಗು, ಹಾಗೂ ಧಾರವಾಡದಲ್ಲಿ ಕ್ರೈಸ್ತ ಮಿಶನರಿಗಳು ಬಂದರು. ಆದರೆ ಧಾರವಾಡಕ್ಕೆ ಕ್ರಿ.ಶ.೧೮೩೭ರಲ್ಲಿ ಆಗಮಿಸಿದರು. ಬಂದಂತಹ ಮಿಶನರಿಗಳು ಮತಾಂತರದ ಜೊತೆಗೆ ಸಾಮಾಜಿಕ ಸುಧಾರಣಾ ಕ್ರಮಗಳನ್ನು ಕೈಗೊಂಡರು.

ಬಾಸೆಲ್ ಮಿಷನ್ ಸಂಸ್ಥೆಯಿಂದ ಧಾರವಾಡಕ್ಕೆ ಸ್ಯಾಮುಯಲ್ ಹೆಬಿಕ್‌ರು ಪ್ರಥಮ ಮಿಶನರಿಯಾಗಿ ಆಗಮಿಸಿದರು. ಅಂದಿನಿಂದ ಧಾರವಾಡವು ಮಿಶನರಿಗಳ ಪ್ರಮುಖ ಕ್ಷೇತ್ರವಾಯಿತು. ಅವರು ಶಿಕ್ಷಣ, ಮುದ್ರಣ, ಸಾಹಿತ್ಯ, ಕೈಗಾರಿಕೆ ವೃತ್ತಿ ತರಬೇತಿ, ವೈದ್ಯಕೀಯ ಸೇವೆ, ಮತಾಂತರ, ಕನ್ನಡ ಭಾಷೆ ಕುರಿತು ನಿಘಂಟು ರಚನೆ ಮುಂತಾದ ಚಟುವಟಿಕೆಗಳಲ್ಲಿ ತೊಡಗಿಕೊಂಡರು. ಇದರಿಂದಾಗಿ ಕ್ರೈಸ್ತ ಮಿಶನರಿಗಳ ಕಾರ್ಯಚಟುವಟಿಕೆ ಚುರುಕುಗೊಂಡಿತು. ಆದರೆ ಈ ಸಂದರ್ಭದಲ್ಲಿ ಧಾರವಾಡ ಜಿಲ್ಲೆಯಲ್ಲಿಯ ಕ್ರೈಸ್ತರ ಚಟುವಟಿಕೆಗಳನ್ನು ಅರಿಯದೇ ಅವುಗಳ ಕಾಲಾನುಕ್ರಮದ ಅಧ್ಯಯನ ಅಪೂರ್ಣವಾಗುತ್ತದೆ. ಆದ ಕಾರಣ ಧಾರವಾಡದಲ್ಲಿ ನಡೆದ ಮಿಶನರಿಗಳ ಕಾರ್ಯಚಟುವಟಿಕೆಗಳ ಕುರಿತು ವಿವರಿಸುವುದೇ ಈ ಅಧ್ಯಯನದ ಉದ್ದೇಶವಾಗಿದೆ.

ಧಾರವಾಡದಲ್ಲಿ ಅಂದು ಆರಂಭಿಸಿದ ಪ್ರಾಥಮಿಕ ಶಿಕ್ಷಣ ಕೇಂದ್ರಗಳು ಇಂದು ಮಹಾವಿದ್ಯಾಲಯದ ಕೇಂದ್ರಗಳಾಗಿವೆ. ಕ್ರೈಸ್ತರು ಅಂದು ಸಾಮಾಜಿಕ ಅಭಿವೃದ್ಧಿಯತ್ತ ಧಾರವಾಡ ಜಿಲ್ಲೆಯನ್ನು ಕೊಂಡೊಯ್ದರು ಎಂದರೆ ತಪ್ಪಾಗಲಾರದು. ಧಾರವಾಡಕ್ಕೆ ಬಂದ ಪ್ರಮುಖ ಬಾಸೆಲ್ ಮಿಶನರಿಗಳಾದ ಹೆಬಿಕ್, ಮೋಗ್ಲಿಂಗ್, ಲೆಹ್ನರ, ಸುಪ್ಪರ, ಮುಲ್ಲರ, ಝೀಗ್ಲರ, ಕಿಟ್ಟಲ್ ಅವರಂಥ ಮಹನೀಯರು. ಇವರು ಶೈಕ್ಷಣಿಕ ಹಾಗೂ ಸಾಮಾಜಿಕ ಹಾಗೂ ಧಾರ್ಮಿಕವಾಗಿ ಮಾಡಿದ ಸಾಧನೆಗಳು ಅಮೋಘವಾಗಿವೆ. ಇಂತಹ ಮಿಶನರಿಗಳಿಂದ ಶಿಕ್ಷಣ ಪಡೆದ ಸ್ಥಳೀಯ ಯುವಕರು ಆಧುನೀಕರಣ, ಜಾಗತೀಕರಣದ ಬಗ್ಗೆ ಗಮನಹರಿಸುವಂತಾದರು. ಈ ಹಿನ್ನೆಲೆಯಲ್ಲಿ ಮಿಶನರಿಗಳ ಕಾರ್ಯಚಟುವಟಿಕೆಗಳನ್ನು ಗ್ರಹಿಸಿ ಈ ಕೆಳಗಿನಂತೆ ವಿಶ್ಲೇಷಿಸಬಹುದಾಗಿದೆ.

೪.೧. ಶಿಕ್ಷಣ

ಭಾರತಕ್ಕೆ ಕಾಲಿಟ್ಟ ಎಲ್ಲ ಮಿಶನರಿಗಳ ಮುಖ್ಯ ಉದ್ದೇಶ ಧರ್ಮಪ್ರಚಾರದ ಕಾರ್ಯವಾಗಿತ್ತು. ಆದರೆ "ಇಲ್ಲಿಯ ಜನತೆಯ ಮೂಢನಂಬಿಕೆಗಳನ್ನು ಹೋಗಲಾಡಿಸಿ ಕ್ರೈಸ್ತ ಧರ್ಮದಲ್ಲಿ ಆಸ್ಥೆಯನ್ನು ಕುದುರಿಸುವುದಕ್ಕೆ ಪ್ರಥಮವಾಗಿ ಕಾರ್ಯವೆಂದರೆ ಪಾಶ್ಚಾತ್ಯ ಶಿಕ್ಷಣ ಕ್ರಮವೇ ಎಂದು ನಂಬಿದ್ದರು."[೧] ಆದ ಕಾರಣ ಮಿಶನರಿಗಳು ಆದ್ಯತೆಯ ಅನುಸಾರ ಮೊಟ್ಟ ಮೊದಲಿಗೆ ಶಿಕ್ಷಣ ಕೇಂದ್ರಗಳನ್ನು ಪ್ರಾರಂಭಿಸಿದರು. ಭಾರತಕ್ಕೆ ಬಂದ ಬಹುತೇಕ ಮಿಶನರಿಗಳು ತಮ್ಮ ಕಾರ್ಯಸಾಧನೆಗಾಗಿ ಮಾತ್ರ ದೇಶಿಯ ಸಂಸ್ಕೃತಿ, ಇತಿಹಾಸ ಮತ್ತು ಪ್ರಾದೇಶಿಕ ಭಾಷೆಯನ್ನು ಕಲಿಯುವುದಕ್ಕೆ ಆಸಕ್ತಿ ತೋರಿಸಿದರು. ಇನ್ನೂ ಕೆಲವು ಮಿಶನರಿಗಳು ಅಗತ್ಯಕ್ಕೂ ಹೆಚ್ಚು ಅಧ್ಯಯನ ಮಾಡಿ ತಮಗೆ ಇಷ್ಟವಾದ ವಿಷಯದಲ್ಲಿ ಪರಿಣತಿ ಪಡೆದರಲ್ಲದೇ, ಭಾರತೀಯ ಸಂಸ್ಕೃತಿಯ ಸಾರವನ್ನು ಮೊಟ್ಟಮೊದಲಿಗೆ ಪ್ರಪಂಚದ ಇತರ ಭಾಗಗಳಿಗೆ ಪ್ರಚಾರ ಮಾಡಿದರು.

ಭಾರತದಲ್ಲಿ ವೈದಿಕ ಕಾಲದಿಂದಲೂ ಶಿಕ್ಷಣವು ಸಾಂಪ್ರದಾಯಿಕ ಪದ್ಧತಿ ಕ್ರಮಾನುಸಾರ ರೂಢಿಯಲ್ಲಿತ್ತು. ಆದರೆ ಪಾದ್ರಿಗಳ ಶಿಕ್ಷಣ ವ್ಯವಸ್ಥೆಯು ಆಧುನಿಕ ಪದ್ಧತಿ ರೂಪದಲ್ಲಿ ಪ್ರಸಾರಗೊಂಡಿತು. ಪಾದ್ರಿಗಳು ಶಿಕ್ಷಣ ವ್ಯವಸ್ಥೆಯನ್ನು ಭಾರತದಲ್ಲಿ ಜಾರಿಗೆ ತಂದಾಗ ಅದನ್ನು ಸಂಪ್ರದಾಯವಾದಿಗಳು ವಿರೋಧಿಸಿದರು. ಆದರೆ ಯುವ ಪೀಳಿಗೆಯು ಆಧುನಿಕ ಇಂಗ್ಲೀಷ್ ಶಿಕ್ಷಣ ಪದ್ಧತಿಯನ್ನು ಒಪ್ಪಿಕೊಂಡರು.

ಈ ಮೊದಲು ಧಾರವಾಡವನ್ನು ವಿವಿಧ ರಾಜಮನೆತನಗಳು ತಮ್ಮ ವ್ಯವಹಾರಿಕ ಕೇಂದ್ರವಾಗಿ ಮಾಡಿಕೊಂಡು ಆಳುತ್ತಿದ್ದರು. ೧೮೧೮ರ ವರೆಗೆ ಧಾರವಾಡವನ್ನು ಪೇಶ್ವೆಗಳು ಮತ್ತು ಸವಣೂರಿನ ನವಾಬರು ಆಳುತ್ತಿದ್ದರು. ಬ್ರಿಟಿಷರು ೧೮೧೮ರಲ್ಲಿ ಪೇಶ್ವೆಗಳನ್ನು ಸೋಲಿಸಿ ಧಾರವಾಡವನ್ನು ವಶಪಡಿಸಿಕೊಂಡರು. ಅಂತಹ ಸಂದರ್ಭದಲ್ಲಿ ಮರಾಠಿ ಭಾಷೆಯನ್ನು ಮಾತನಾಡುವ ಜನರು ಧಾರವಾಡವನ್ನು ಸುತ್ತುವರೆದಿದ್ದರು. ಮರಾಠಿ ಭಾಷೆಯ ಬಳಸುವ ಹೆಚ್ಚಿನ ಜನರನ್ನು ಈ ಪ್ರದೇಶವು ಹೊಂದಿತ್ತು. ಆದ್ದರಿಂದ ಇದನ್ನು 'ಸದರ್ನ ಮರಾಠಾ ಪ್ರಾಂತ್ಯ'(Southern Maratha Country) ಎಂದು ಕರೆಯುತ್ತಿದ್ದರು. ಸಮಾಜದ ಮೇಲ್ವರ್ಗಗಳಾದ ಬ್ರಾಹ್ಮಣರು, ಲಿಂಗಾಯಿತರಿಗೆ ಸಹ ಅದೇ ಶಿಕ್ಷಣವನ್ನು ಕೊಡುತ್ತಿದ್ದರು. ಮರಾಠಿ ಭಾಷೆಯ ಶಿಕ್ಷಣ ಕೊಡಿಸುತ್ತಿದ್ದರು. ವಿಶೇಷವಾಗಿ ಹೆಣ್ಣುಮಕ್ಕಳಿಗೆ ಲಿಂಗಾಯಿತರ ಮಠಗಳಲ್ಲಿ ಮಾತ್ರ ಕನ್ನಡದಲ್ಲಿ ಶಿಕ್ಷಣ ಪಡೆಯುತ್ತಿದ್ದರು. ಅಂತಹ ಮಠಗಳಿಗೆ, ಸಾಲಿಮಠ, ಓದುಮಠ ಮತ್ತು ಓದಿಸುವ ಮಠ ಎಂದು ಕರೆಯುತ್ತಿದ್ದರು. ಇಂತಹ ಮಠಗಳೇ ಕನ್ನಡವನ್ನು ಉಳಿಸಿಕೊಂಡು ಬಂದವು.

ಬ್ರಿಟಿಷ್ ಸರ್ಕಾರದ ಅಧಿಕಾರಿ ಆಗಿ ಬಂದ ವಾಲ್ಟರ ಎಲಿಯಟ್‌ನು ಧಾರವಾಡದಲ್ಲಿ ಹತ್ತು ವರ್ಷಗಳ ಕಾಲ ಸೇವೆಗೈದನು. ಆದ್ದರಿಂದ ವಾಲ್ಟರ್ ಎಲಿಯಟ್‌ನು ಕನ್ನಡ ಶಾಲೆ ತೆರೆಯಬೇಕೆಂದು ಬ್ರಿಟಿಷ್ ಸರ್ಕಾರಕ್ಕೆ ಮನವಿ ಮಾಡಿಕೊಂಡನು. ಎಲಿಯಟ್‌ನ ಮನವಿ ಒಪ್ಪಿದ "ಬ್ರಿಟಿಷ್ ಸರ್ಕಾರ ೨೧-೧೧-೧೮೩೦ರಂದು ಕನ್ನಡ ಶಾಲೆಯೊಂದನ್ನು ಸದ್ಯ ಧಾರವಾಡದಲ್ಲಿ ತೆರೆಯಲಾಗುವುದು ಅದಕ್ಕಾಗಿ ಕನ್ನಡ ಮಾಸ್ತರನೊಬ್ಬನನ್ನು ಹುಡುಕಿರಿ ಎಂದು ಎಲಿಯಟ್‌ನಿಗೆ ಆದೇಶ ಕೊಟ್ಟಿತು."[೨] ಎಲಿಯಟ್ ಬ್ರಿಟಿಷ್ ಸರ್ಕಾರದ ಆದೇಶದಂತೆ ಕನ್ನಡ ಶಾಲೆ ತೆರೆದನು. ಅದಕ್ಕೆ ಬ್ರಿಟಿಷ್ ಸರ್ಕಾರದಿಂದ ಸಂಬಳ ಬರಲಿಲ್ಲ. ಎಲಿಯಟ್‌ನು ಸ್ವತ ಎರಡು ಮೂರು ವರ್ಷಗಳ ಕಾಲ ಸ್ವತಃ ಸಂಬಳವನ್ನು ಕೊಟ್ಟು ಶಾಲೆ ನಡೆಸಿದನು. ಇದು ಧಾರವಾಡದಲ್ಲಿ ಪ್ರಾರಂಭವಾದ ಮೊಟ್ಟಮೊದಲ ಕನ್ನಡ ಶಾಲೆಯಾಯಿತು. ಎಲಿಯಟ್‌ನು ದೀರ್ಘಕಾಲದ ರಜೆ ನೀಡಿ ಆಗಿನ ಜಿಲ್ಲಾಧಿಕಾರಿಗೆ ಜವಾಬ್ದಾರಿಯನ್ನು ವಹಿಸಿ ಸ್ವದೇಶಕ್ಕೆ ಹೋದನು. ನಂತರದ ದಿನಗಳಲ್ಲಿ ಶಾಲೆಗೆ ಹಣ ಮಂಜೂರಾಗಿ ಬಂತು. ಹುಬ್ಬಳ್ಳಿಯಲ್ಲಿ ೧೮೩೩ರಲ್ಲಿ ಕನ್ನಡ ಶಾಲೆ ಆರಂಭವಾಯಿತು. ಒಟ್ಟಿನಲ್ಲಿ ಧಾರವಾಡ ಪರಿಸರವು "ಇಂಗ್ಲೀಷ್ ಜಗತ್ತಿನ ಅರಿವಿಗೆ ಹೆಬ್ಬಾಗಿಲಾಯಿತು. ಆಧುನಿಕ ವಿಜ್ಞಾನ, ತಂತ್ರಜ್ಞಾನ, ಅರ್ಥಶಾಸ್ತ್ರ, ಆಲೋಚನಾ ವಿಧಾನಗಳು,

ಇವುಗಳಿಗೆಲ್ಲಾ ನಮ್ಮನ್ನು ಕರೆದೊಯ್ದದ್ದು ಇಂಗ್ಲೀಷ್."[೬] ಇಂಗ್ಲೀಷ್ ಭಾಷೆ ನಮ್ಮನ್ನು ಕಾರ್ಯತಹ ಒಂದು ಆಡಳಿತಕ್ಕೆ ಒಳಪಡಿಸುವಂತೆ ಮಾಡಿತು ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಭಾರತವು ಸ್ವಾತಂತ್ರ್ಯ ಪಡೆಯುವುದಕ್ಕೂ ಒಂದು ಶತಮಾನ ಪೂರ್ವದಲ್ಲಿ ಕಾಲಿಟ್ಟ ಬಾಸೆಲ್ ಮಿಶನರಿಗಳು ಕ್ರೈಸ್ತಧರ್ಮ ಪ್ರಚಾರವನ್ನು ಪ್ರಾರಂಭಿಸಿದರು. ಅದರಲ್ಲೂ ಬಾಸೆಲ್ ಮಿಶನರಿಗಳು ಕರ್ನಾಟಕಕ್ಕೆ ಧರ್ಮಪ್ರಚಾರದಲ್ಲಿ ತೊಡಗಿದಾಗ ಹೆಚ್ಚಿನ ಸಂಖ್ಯೆಯ ಜನರು ಕನ್ನಡ ಭಾಷೆಯನ್ನು ಮಾತನಾಡುವವರಿದ್ದರು. ಆದ್ದರಿಂದ ಕನ್ನಡ ಭಾಷೆಯಲ್ಲಿಯೇ ಧರ್ಮ ಪ್ರಚಾರ ಮಾಡುವ ತುರ್ತು ಉಂಟಾಯಿತು. ಆದ ಕಾರಣ ಮಿಶನರಿಗಳು ಕನ್ನಡ ಭಾಷೆಯನ್ನು ಕಲಿತು ಕನ್ನಡದಲ್ಲಿ ಬೋಧಿಸಿದರು.

೧೮೩೭ರ ಸುಮಾರಿಗೆ ಧಾರವಾಡಕ್ಕೆ ಆಗಮಿಸಿದ ಬಾಸೆಲ್ ಮಿಶನದ ಮಿಶನರಿಗಳಲ್ಲಿ ಪ್ರಥಮ ಮಿಶನರಿ ಎಂದರೆ ಸ್ಯಾಮುಯಲ್ ಹೆಬಿಕರು. ಹೆಬಿಕ ಮತ್ತು ಅವರ ಸಹಾಯಕರಾಗಿ ಅವರೊಂದಿಗೆ ಬಂದ ಇಬ್ಬರೂ ಮಿಶನರಿಗಳೆಂದರೆ ಲೆಹ್ನರ ಮತ್ತು ಗ್ರೆಯ್ನರ. ಮೋಗ್ಲಿಂಗರು ಮಿಶನರಿಯಾಗಿ ಬಂದಾಗ ಇಂಗ್ಲೀಷ್ ಶಾಲೆಯನ್ನು ಪ್ರಾರಂಭಿಸಿದರು. ಮೋಗ್ಲಿಂಗರ ಬಿಟ್ಟು ಬಹುತೇಕ ಎಲ್ಲ ಮಿಶನರಿಗಳು ಕನ್ನಡ ಶಾಲೆಯನ್ನು ಪ್ರಾರಂಭಿಸಿದರು ಎಂಬುದು ಗಮನಾರ್ಹವಾದುದಾಗಿದೆ. ಬಾಸೆಲ್ ಮಿಶನ ಸಂಸ್ಥೆಯು ಆರಂಭದಲ್ಲಿ ಕನ್ನಡ ಕಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಿದಂತಹ ಶಾಲೆಗಳು ಇಂದು ಪದವಿ ಹಂತದ ಶಿಕ್ಷಣ ನೀಡುವಂತಹ ವಿದ್ಯಾಕೇಂದ್ರಗಳಾಗಿವೆ. "ಭಾರತೀಯ ತರುಣರನ್ನು ಕ್ರಿಶ್ಚಿಯನ್ ಪ್ರಭಾವದ ವ್ಯಾಪ್ತಿಯಲ್ಲಿ ಶಾಲೆ ಮತ್ತು ಪ್ರೌಢಶಾಲೆಗಳ ಮೂಲಕ ತರುವುದೇ ತಮ್ಮ ಮುಖ್ಯ ಗುರಿಯೆಂದು ಮಿಶನರಿಗಳು ದೃಢಮಾಡಿಕೊಂಡರು."[೪]

ಬಾಸೆಲ್ ಮಿಶನರಿಗಳು ತಾವು ಸ್ಥಾಪಿಸಿದ ಶಾಲೆಯಲ್ಲಿ ತಾವೇ ಸ್ವತಃ ಪಾಠಬೋಧನೆ ಮಾಡುತ್ತಿದ್ದರು. ಸತ್ಯವೇದದ ಬಗ್ಗೆ ಬೋಧನೆ ಮಾಡುತ್ತಿದ್ದರು. ಸತ್ಯವೇದವು ಒಂದು ವಿಷಯ ಮಾತ್ರ ಆಗಿದ್ದು ಉಳಿದ ವಿಷಯಗಳಿಗೆ ಸ್ಥಳೀಯ ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳುತ್ತಿದ್ದರು. ಹುಬ್ಬಳ್ಳಿ-ಧಾರವಾಡಗಳಲ್ಲಿ ಕಾರ್ಯನಿರ್ವಹಿಸಿದ ಮಿಶನರಿಗಳಲ್ಲಿ ಲೆಹ್ನರ, ರೆ. ಎಸ್ಸಿಗ, ರೆ.ಜಿ.ಸುಪ್ಪರ, ಮುಲ್ಲರ, ಮೋಗ್ಲಿಂಗ್ ಇವರುಗಳು ಬಹಳ ಪರಿಶ್ರಮದಿಂದ ಶಾಲೆಗಳನ್ನು ಪ್ರಾರಂಭಿಸಿದರು. ಅಲ್ಲಿನ ವಿದ್ಯಾರ್ಥಿಗಳು ಶಾಲೆಗೆ ಬರುವಂತೆ ಮಾಡಲು ತುಂಬಾ ಪ್ರಯತ್ನಿಸಿದರು.

ಹುಬ್ಬಳ್ಳಿಯ ವಿಭಾಗದಲ್ಲಿ ಪ್ರಾರಂಭದ ಹಂತದಲ್ಲಿ ಬಾಲಕಿಯರಿಗಾಗಿ ಶಾಲೆಗಳೇ ಇರಲಿಲ್ಲ. ಸುಪ್ಪರ ಅವರು ಮೊದಲ ಬಾರಿಗೆ ೧೮೫೨ರಲ್ಲಿ ಬಾಲಕಿಯರಿಗಾಗಿ ಶಾಲೆಯನ್ನು ಹೊಸ ಹುಬ್ಬಳ್ಳಿಯಲ್ಲಿ ತೆರೆದರು. ಅಗಸ್ಟ್ ನಲ್ಲಿ ಅದೇ ವರ್ಷದಲ್ಲಿ ಇನ್ನೊಂದು ಶಾಲೆಯನ್ನು ಹಳೇ ಹುಬ್ಬಳ್ಳಿಯಲ್ಲಿ ತೆರೆದರು. ಆಗ ಶಾಲೆಯಲ್ಲಿ ೧೦-೧೭ ಬಾಲಕಿಯರು ಮಾತ್ರ ಕಲಿಯುತ್ತಿದ್ದರು. ಇದು ಧಾರವಾಡ ಜಿಲ್ಲೆಯಲ್ಲಿ ಬಾಲಕಿಯರಿಗೆ ಶಿಕ್ಷಣದ ಬಗ್ಗೆ ಆಸಕ್ತಿ ಕೆರಳಿಸುವಂತೆ ಮೊಳಕೆ ಒಡೆಯಿತು.

"೧೯೪೨ರಲ್ಲಿ ಹುಬ್ಬಳ್ಳಿಯ ವಿಭಾಗದಲ್ಲಿ ಒಂಬತ್ತು ಶಾಲೆಗಳಿದ್ದವು. ೧೯೪೩ರ ಅವಧಿಯಲ್ಲಿ ಅವುಗಳ ಸಂಖ್ಯೆ ೧೩ಕ್ಕೆ ಏರಿತು"[೫] ಹುಬ್ಬಳ್ಳಿ - ಧಾರವಾಡಗಳಲ್ಲಿ ಮಾತ್ರ ಅಲ್ಲದೇ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಶಾಲೆಗಳು ಪ್ರಾರಂಭವಾದವು. ಬಾಸೆಲ್ ಮಿಶನ್ ಸಂಸ್ಥೆಯು ೨೦ನೇ ಶತಮಾನದಲ್ಲಿ ಹಳ್ಳಿಗಳಲ್ಲೂ ಬಹುತೇಕ ಹಾಗೂ ನಗರಗಳಲ್ಲೂ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುತ್ತಲಿದೆ. ಮೊದಲು ಸ್ಥಾಪನೆಯಾದ ಶಿಕ್ಷಣ ಸಂಸ್ಥೆಗಳು ಉನ್ನತ ಶಿಕ್ಷಣದ ಕೇಂದ್ರಗಳಾಗಿವೆ.

ಬಾಸೆಲ್ ಮಿಶನ್ ಪ್ರೌಢಶಾಲೆ ಧಾರವಾಡ

ಹಾಲಿಗೇರಿ ಮೇಲಿದ್ದ ಒಂದು ಚಿಕ್ಕ ಕಟ್ಟಡವು ಮೋಗ್ಲಿಂಗ್ ರ ನಿವಾಸವಾಗಿತ್ತು. ಮೋಗ್ಲಿಂಗರು ಈ ಕಟ್ಟಡದಲ್ಲಿಯೇ ಕ್ರಿ.ಶ.೧೮೩೮ರಂದು ಇಂಗ್ಲೀಷ್ ಕಿರಿಯ ಪ್ರಾಥಮಿಕ ಶಾಲೆಯನ್ನು ಹಾಗೂ ಒಂದು ಕನ್ನಡ ಕಿರಿಯ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದರು. ಮಿಶನರಿಗಳು ಕ್ರೈಸ್ತಧರ್ಮದ ಪ್ರಚಾರದ ಕಾರ್ಯ ನೇರವಾಗಿ ಸಾಧ್ಯವಾಗದಿದ್ದಾಗ ಇಂತಹ ಶಿಕ್ಷಣ ಸಂಸ್ಥೆಗಳ ಮೂಲಕ ಪ್ರಚಾರ ಕಾರ್ಯವನ್ನು ಆರಂಭಿಸಿದರು. ಪ್ರಾರಂಭದಲ್ಲಿ ಮಿಶನರಿಗಳು ಉಚಿತವಾಗಿ ಯಾವುದೇ ಶುಲ್ಕವಿಲ್ಲದೇ ಶಿಕ್ಷಣ ಪಡೆಯಲು ಪ್ರವೇಶ ನೀಡುವುದಾಗಿ ಜನರಿಗೆ ಮನವೊಲಿಸಿದರು. ಉಚಿತ ಶಿಕ್ಷಣವನ್ನು ಮಿಶನರಿಗಳು ನೀಡಿದರು.

೧೮೭೩ರಲ್ಲಿ ಈ ಶಾಲೆ ಸಂಪೂರ್ಣ ಪ್ರೌಢಶಾಲೆಯಾಗಿ ಸರ್ಕಾರದಿಂದ ಮಾನ್ಯತೆ ಪಡೆಯಿತು. ಇದು ಧಾರವಾಡ ಜಿಲ್ಲೆಯಲ್ಲಿ ಪ್ರಥಮ ಪ್ರೌಢಶಾಲೆ ಹಾಗೂ ಉತ್ತರ ಕರ್ನಾಟಕದಲ್ಲಿ ದ್ವಿತೀಯ ಪ್ರೌಢಶಾಲೆಯಾಗಿದೆ. ಬೆಳಗಾವಿಯಲ್ಲಿ ಆರಂಭವಾಗಿದ್ದ ಬೆನನ್ ಸ್ಮಿಥ್ ಪ್ರೌಢಶಾಲೆಯು ಪ್ರಥಮದ್ದಾಗಿದೆ.

ಝೀಗ್ಲರ್ ಎರಡು ವರ್ಷಗಳ ಕಾಲ ಈ ಶಾಲೆಯ ಪ್ರಿನ್ಸಿಪಾಲರಾಗಿದ್ದರು. ೧೮೮೩ ಹಾಗೂ ೧೮೮೪ರ ಅವಧಿಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ - ೨೦೦ಕ್ಕೇರಿತು. ಝೀಗ್ಲರು ಪ್ರಯತ್ನಿಸಿದ್ದರಿಂದ ಬ್ರಿಟಿಷ ಸರ್ಕಾರದಿಂದ ೬ ಎಕರೆ - ೧೪ ಗುಂಟೆ ಭೂಮಿ ಪಡೆದು ಕಟ್ಟಡ ಕಟ್ಟಲಾಯಿತು. ಅದು ಈಗಿನ ಕಟ್ಟಡವಾಗಿದೆ. ೧೮೯೨ರಲ್ಲಿ ೧೦ ಕೊಠಡಿಯುಳ್ಳ ಕಟ್ಟಡ ಕಟ್ಟಲಾಯಿತು. ೧೮೮೩-೮೪ರವರೆಗೆ ಕಿಟಲ್ ಪ್ರಿನ್ಸಿಪಾಲರಾಗಿ ಕಾರ್ಯನಿರ್ವಹಿಸಿದರು.

ಬಾಸೆಲ್-ಮಿಶನ್ ಬಾಲಿಕಾ ಪ್ರೌಢಶಾಲೆ ಧಾರವಾಡ

೧೯೪೫ರಲ್ಲಿ ಬಾಸೆಲ್ ಮಿಶನ್ ಪ್ರೌಢಶಾಲೆ ಪ್ರಾರಂಭವಾಯಿತು. ಬಾಸೆಲ್ ಮಿಶನ್‌ನ ಹಳೆಯ ಬಂಗ್ಲೆಯಲ್ಲಿ ಪ್ರಾರಂಭವಾದ ಶಾಲೆ ಈಗ ಸ್ವಂತ ಕಟ್ಟಡದಲ್ಲಿ ಇದೆ. ಈಗ ಪ್ರಸ್ತುತವಾಗಿ ಹೆಚ್ಚು ಸಂಖ್ಯೆಯಲ್ಲಿ ಬಾಲಿಕೆಯರು ಶಿಕ್ಷಣ ಪಡೆಯುತ್ತಿರುವ ವಿದ್ಯಾಕೇಂದ್ರವಾಗಿ ಹೊರಹೊಮ್ಮಿದೆ. ೧೪೦೦ ವಿದ್ಯಾರ್ಥಿನಿಯರನ್ನು ಹೊಂದಿದ ಒಂದು ಬಾಲಿಕೆಯರ ಪ್ರೌಢಶಾಲೆಯಾಗಿದೆ.

ಬಾಸೆಲ್-ಮಿಶನ್ ಶಿಕ್ಷಕ-ಶಿಕ್ಷಕಿಯರ ತರಬೇತಿ ಸಂಸ್ಥೆ ಧಾರವಾಡ

೧೯೪೭೦ರಲ್ಲಿ ಪ್ರಾಥಮಿಕ ಶಿಕ್ಷಕರ ತರಬೇತಿಗಾಗಿ ಈ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಶ್ರೀ ಎಸ್.ವಿ.ಗೋಕಾವಿಯವರು ಅನೇಕ ವರ್ಷಗಳ ಕಾಲ ಇದರ ಪ್ರಾನ್ಸಿಪಾಲರಾಗಿ ಕಾರ್ಯನಿರ್ವಹಿಸಿದರು. ಪ್ರಸ್ತುತವಾಗಿ ಚಾಲನೆಯಲ್ಲಿದೆ. ಇಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ತರಬೇತಿ ನೀಡುತ್ತಿದ್ದಾರೆ. ಈ.ವಿ.ಬಾರಟಕ್ಕೆಯವರು ಈಗ ಪ್ರಿನ್ಸಿಪಾಲರಾಗಿ ಕಾರ್ಯನಿರ್ವಸುತ್ತಿದ್ದಾರೆ. ಇಲ್ಲಿ ಸ್ತ್ರೀ-ಪುರುಷರಿಬ್ಬರಿಗೂ ಈ ತರಬೇತಿಯನ್ನು ನೀಡುವ ಶಿಕ್ಷಣ ಸಂಸ್ಥೆಯಾಗಿದೆ.

ಬಾಸೆಲ್ ಮಿಶನ್ ಇಂಗ್ಲೀಷ್ ಮಿಡಿಯಮ್ ಹೈಸ್ಕೂಲ್

ಬಾಸೆಲ್ ಮಿಶನ್ ಇಂಗ್ಲೀಷ್ ಮಿಡಿಯಮ್ ಮೊದಲು ಪ್ರಾಥಮಿಕ ಶಾಲೆಯಾಗಿ ಪ್ರಾರಂಭವಾಯಿತು. ಇಂದು ಹೈಸ್ಕೂಲ್ ಅಗಿ ಬೆಳವಣಿಗೆಯನ್ನು ಹೊಂದಿದೆ. ೨೯೬೮ ವಿದ್ಯಾರ್ಥಿಗಳು ಈ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಈ ಸಂಸ್ಥೆಯು ಅನೇಕ ವಿದ್ಯಾರ್ಥಿಗಳ ಶಿಕ್ಷಣ ಪಡೆಯಲು ಅನುಕೂಲವಾಯಿತು. ಪುಷ್ಪದಾಸರವರು ಈಗಿನ ಮುಖ್ಯೋಪಾಧ್ಯಾಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಧಾರವಾಡ-ಹುಬ್ಬಳ್ಳಿಯ ತಾಲ್ಲೂಕುಗಳಲ್ಲಿ ಕ್ರೈಸ್ತರ ಹೆಚ್ಚು ಶಿಕ್ಷಣ ಸಂಸ್ಥೆಗಳು ಕಂಡುಬರುತ್ತದೆ. ಕಲಘಟಗಿ ತಾಲ್ಲೂಕಿನಲ್ಲಿ ಶಿಕ್ಷಣ ಕೇಂದ್ರಗಳು ಕಡಿಮೆ ಸಂಖ್ಯೆಯಲ್ಲಿವೆ. ಕಲಘಟಗಿ ತಾಲ್ಲೂಕಿನ ತುಮರಿಕೊಪ್ಪದಲ್ಲಿಯೂ ಕೂಡ ಚರ್ಚು ಇದೆ. ಹಾಗೂ ತುಮರಿಕೊಪ್ಪದಲ್ಲಿ ಪ್ರೌಢಶಾಲೆಯೂ ಕಾರ್ಯನಿರ್ವಹಿಸುತ್ತಿದೆ. ಧಾರವಾಡ ನಗರದಲ್ಲಿ ಒಟ್ಟು ಸುಮಾರು ೧೨,೦೦೦ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕ್ರೈಸ್ತರ ಶಿಕ್ಷಣ ಕೇಂದ್ರದಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ.

ಕ್ರೈಸ್ತರ ಶಿಕ್ಷಣ ಕೇಂದ್ರಗಳಲ್ಲಿ ಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಹಂತದವರೆಗೆ ಶಿಕ್ಷಣ ನೀಡುವ ಕೇಂದ್ರಗಳಾಗಿ ಬೆಳವಣಿಗೆಯನ್ನು ಹೊಂದಿವೆ. ಜೊತೆಗೆ ವೃತ್ತಿಪರ ತರಬೇತಿ ಕೇಂದ್ರಗಳು, ಕೈಗಾರಿಕೆ, ವಿಜ್ಞಾನ ವಿಷಯಗಳು ಮುಂತಾದ ವಿಷಯಗಳನ್ನು ಬೋಧಿಸುವರು. ಧಾರವಾಡ ಜಿಲ್ಲೆಗೆ ಕ್ರೈಸ್ತರ ಬಾಸೆಲ್ ಮಿಶನ್ ಸಂಸ್ಥೆಯು ಶಿಕ್ಷಣರಂಗಕ್ಕೆ ಅದ್ಭುತವಾದ ಕೊಡುಗೆಯನ್ನು ನೀಡಿದೆ.

ಧಾರವಾಡ ಜಿಲ್ಲೆಯ ಪ್ರಮುಖ ತಾಲೂಕು ಆದ ಹುಬ್ಬಳ್ಳಿಯು ಕ್ರೈಸ್ತರ ಪ್ರಮುಖ ಕೇಂದ್ರವಾಗಿದೆ. ಧಾರವಾಡದಿಂದ ಹುಬ್ಬಳ್ಳಿಯು ಸುಮಾರು ೨೦ ಕಿ.ಮೀ ಅಂತರದಲ್ಲಿದೆ. ಹುಬ್ಬಳ್ಳಿಯು ವ್ಯವಹಾರಿಕವಾದ ಪಟ್ಟಣವೆಂದು ಪ್ರಸಿದ್ಧಿ ಪಡೆದಿದೆ. ಇಲ್ಲಿ ಕ್ರೈಸ್ತರ ಪ್ರಭಾವ ಹೆಚ್ಚಾಗಿದೆ. ಹುಬ್ಬಳ್ಳಿಯಲ್ಲಿ ಕ್ರೈಸ್ತ ಮಿಶನರಿಗಳ ಶಿಕ್ಷಣ ಸಂಸ್ಥೆಗಳು ಅಧಿಕವಾಗಿವೆ. ಇಲ್ಲಿ ಪ್ರಾಥಮಿಕ ಶಿಕ್ಷಣ ಕೇಂದ್ರದಿಂದ ಸ್ನಾತಕೋತ್ತರ ಶಿಕ್ಷಣದವರೆಗೆ ಸಂಸ್ಥೆಗಳು ಇವೆ. ಹುಬ್ಬಳ್ಳಿ ತಾಲ್ಲೂಕಿಗೆ ರಾಜಮನೆತನಗಳ ಕಾಲದ ಹಿನ್ನೆಲೆ ಇದೆ.

[illegible]

ಶಿಕ್ಷಣ ಸಂಸ್ಥೆಗಳು

ಕ್ರ.ಸಂ.	ಶಾಲೆಯ ಹೆಸರು	ಮುಖ್ಯಸ್ಥರು	ಸಿಬ್ಬಂದಿಗಳ ಸಂಖ್ಯೆ	ವಿದ್ಯಾರ್ಥಿಗಳ ಸಂಖ್ಯೆ	ಸ್ಥಳ
೧.	ಬಾಸೆಲ್ ಮಿಶನ್ ಕನ್ನಡ ಮಾಧ್ಯಮ ಕಿರಿಯ ಪ್ರಾಥಮಿಕ ಬಾಲಿಕೆಯರ ಶಾಲೆ	ಶ್ರೀಮತಿ ಪಿ.ಎ.ಗೌಡರ	೫೦	೧೪೦೦	ಮುಖ್ಯ ಅಂಚೆ ಕಚೇರಿ ಎದುರಿಗೆ ರೈಲು ನಿಲ್ದಾಣದ ರಸ್ತೆ, ಧಾರವಾಡ
೨.	ಬಾಸೆಲ್ ಮಿಶನ್ ಬಾಲಿಕೆಯ ಪ್ರೌಢಶಾಲೆ	ಶ್ರೀಮತಿ ಪಿ.ಎ.ಗೌಡರ	೫೦	೧೪೦೦	ಮುಖ್ಯ ಅಂಚೆ ಕಚೇರಿ ಎದುರಿಗೆ ರೈಲು ನಿಲ್ದಾಣದ ರಸ್ತೆ, ಧಾರವಾಡ
೩.	ಬಾಸಲ್ ಮಿಶನ್ ಇಂಗ್ಲೀಷ್ ಮಿಡಿಯಂ ಪ್ರೌಢಶಾಲೆ	ಪುಷ್ಪಾದಾಸ್	೧೦೦	೨೯೬೮	ಮುಖ್ಯ ಅಂಚೆ ಕಚೇರಿ ಎದುರಿಗೆ ರೈಲು ನಿಲ್ದಾಣದ ರಸ್ತೆ, ಧಾರವಾಡ
೪.	ಪ್ರೆಜೆಂಟೇಶನ ಹಿರಿಯ ಪ್ರಾಥಮಿಕ ಶಾಲೆ	ಸಿಸ್ಟರ್ ಲೂಸಿ ಡಿಸೋಜಾ	೧೯	೧೯೮೭	ಬೆಳಗಾಂ ರಸ್ತೆ, ಧಾರವಾಡ
೫.	ಪ್ರೆಜೆಂಟೇಶನ್ ಪ್ರೌಢಶಾಲೆ	ಸಿಸ್ಟರ್ ಪೆರೋನಿಕ	೨೫	೮೬೮	ಬೆಳಗಾಂ ರಸ್ತೆ, ಧಾರವಾಡ
೬.	ಪ್ರೆಜೆಂಟೇಶನ ಗರ್ಲ್ಸ್ ಕಾಂಪೋಜಿಟ್ ಪದವಿಪೂರ್ವ ಕಾಲೇಜು	ಸಿಸ್ಟರ್ ಪ್ರೇಮಾ	೧೪	೧೨೮	ಬೆಳಗಾಂ ರಸ್ತೆ, ಧಾರವಾಡ
೭.	ಬಾಸೆಲ್ ಮಿಶನ್ ಶಿಕ್ಷಕ ಶಿಕ್ಷಕಿಯರ ತರಬೇತಿ ಸಂಸ್ಥೆ	ಶ್ರೀಮತಿ ಈ.ವಿ.ಬಾರಟಕ್ಕೆ	೧೨	೧೨೦	ಜುಬ್ಲಿ ಸರ್ಕಲ್ ಹತ್ತಿರ, ಧಾರವಾಡ
೮.	ಬಾಸೆಲ್ ಮಿಶನ್ ಪ್ರಾಯೋಗಿಕ ಪ್ರಾಥಮಿಕ ಶಾಲೆ	ಶ್ರೀ ವಿಲ್ಸನ್ ಜೆ.ಮೈಲಿ	೧೦	೬೨೦	ಜುಬ್ಲಿ ಸರ್ಕಲ್ ಹತ್ತಿರ ಧಾರವಾಡ
೯.	ಬಾಸೆಲ್ ಮಿಶನ್ ಪೂರ್ವ ಪ್ರಾಥಮಿಕ ಶಾಲೆ		೧೦	೩೦೦	ಜುಬ್ಲಿ ಸರ್ಕಲ್ ಹತ್ತಿರ ಧಾರವಾಡ

೧೦.	ಬಾಸೆಲ್ ಮಿಶನ್ ಸಂಯುಕ್ತ ಪದವಿಪೂರ್ವ ಮಹಾವಿದ್ಯಾಲಯ	ಅಶೋಕ ಕಸ್ತೂರಿ	೨೦	೭೦೦	ಬಾಸೆಲ್ ಮಿಶನ್ ಕಂಪೌಂಡ ಜುಬ್ಲಿ ಸರ್ಕಲ್ ಹತ್ತಿರ ಧಾರವಾಡ
೧೧.	ಬಾಲಕಿಯರ ನರ್ಸಿಂಗ್ ಕಾಲೇಜು	ಥೆರೇಸಾ ಸಿ.ಎಲ್.	೧೫	೭೩	ಕೆಲಗೇರಿ ರಸ್ತೆ, ಧಾರವಾಡ
೧೨.	ಕಿಟಲ್ ಮಹಾವಿದ್ಯಾಲಯ	ಶ್ರೀಮತಿ ಪ್ರಮೀಳಾ ಸುರೇಶ	೧೮	೫೦೦	ಜುಬ್ಲಿ ಸರ್ಕಲ್ ಹತ್ತಿರ ಧಾರವಾಡ
೧೩.	ಕಿಟಲ್ ಪದವಿಪೂರ್ವ ಕಾಲೇಜು	ಶ್ರೀಮತಿ ಎಂ.ಎಚ್.ಈಡೇನ್	೧೫	೪೫೦	ಜುಬ್ಲಿ ಸರ್ಕಲ್ ಹತ್ತಿರ ಧಾರವಾಡ
೧೪.	ಸಿ.ಎಸ್.ಆಯ್.ಕಾಲೇಜು	ಮಲೇಕರ ಐ.ಎಸ್.	೨೦	೩೫೦	ಕಿಟಲ್ ಕಾಲೇಜು ಕಂಪೌಂಡ್, ಧಾರವಾಡ
೧೫.	ಕಿಟಲ್ ಕಲಾ ಮಹಾವಿದ್ಯಾಲಯ	ಪುನೀತ್	೩೦	೭೦೦	ಕಿಟಲ್ ಕಾಲೇಜು ಕಂಪೌಡ, ಧಾರವಾಡ
೧೬.	ಸೆಂಟ್ ಜೋಸೆಫ್ ಇಂಗ್ಲೀಷ್ ಮಿಡಿಯಂ ಹೈಸ್ಕೂಲ್	ಪಾದರ ಡಿ.ಅಲೆಕ್ಸ್	೨೫	೬೦೦	ಜುಬ್ಲಿ ಸರ್ಕಲ್ ಹತ್ತಿರ ಧಾರವಾಡ
೧೭.	ಸೆಂಟ್ ಜೀಸಸ್ ಬಿ.ಎಸ್.ಡಬ್ಲ್ಯೂ ಕಾಲೇಜು	ಪೀಠರ್	೧೦	೮೦	ಜುಬ್ಲಿ ಸರ್ಕಲ್ ಹತ್ತಿರ ಧಾರವಾಡ

ಶಿಕ್ಷಣ ಸಂಸ್ಥೆಗಳು

ಕ್ರ.ಸಂ.	ಶಾಲೆಯ ಹೆಸರು	ಮುಖ್ಯಸ್ಥರು	ಸಿಬ್ಬಂದಿಗಳ ಸಂಖ್ಯೆ	ವಿದ್ಯಾರ್ಥಿಗಳ ಸಂಖ್ಯೆ	ಸ್ಥಳ
೧.	ಬಾಸೆಲ್ ಮಿಶನ್ ಸಿನಿಯರ್ ಹೆಣ್ಣು ಮಕ್ಕಳ ಪ್ರಾಥಮಿಕ ಶಾಲೆ	ಶ್ರೀಮತಿ ಎಸ್.ವಿ.ಶಿಸನಹಳ್ಳಿ	೭	೨೫೦	ಮಿಶನ್ ಕಂಪೌಂಡ್, ಹುಬ್ಬಳ್ಳಿ
೨.	ಬಾಸೆಲ್ ಮಿಶನ್ ಪೆರೋಕಿಯಲ್ ಕನ್ನಡ ಗಂಡು ಮಕ್ಕಳ ಶಾಲೆ	ಶ್ರೀಮತಿ ಕೆ.ಡಿ.ಪುನೀತ	೯	೩೫೦	ಮಿಶನ್ ಕಂಪೌಂಡ್, ಹುಬ್ಬಳ್ಳಿ
೩.	ಬಾಸೆಲ್ ಮಿಶನ್ ಬಾಲಕರ ಪ್ರೌಢಶಾಲೆ	ಶ್ರೀ ಸಕ್ರಿ	೨೪	೨೬೦	ಮಿಶನ್ ಕಂಪೌಂಡ್, ಹುಬ್ಬಳ್ಳಿ
೪.	ಬಾಸೆಲ್ ಮಿಶನ್ ಹೆಣ್ಣುಮಕ್ಕಳ ಪ್ರೌಢಶಾಲೆ, ಕಾರವಾರ ರಸ್ತೆ	ಶ್ರೀ ಚಾರ್ಲ್ಸ್ ಹೋಸಿಯಾ	೧೪	೨೮೦	ಮಿಶನ್ ಕಂಪೌಂಡ್, ಹುಬ್ಬಳ್ಳಿ
೫.	ಬಾಸೆಲ್ ಮಿಶನ್ ಆಂಗ್ಲ ಮಾಧ್ಯಮಶಾಲೆ	ಶ್ರೀಮತಿ ಎಸ್.ಜೆ.ಬಸ್ಮಿ	೪೨	೧೩೦೦	ಕಾರವಾರ ರಸ್ತೆ, ಮಿಶನ್ ಕಂಪೌಂಡ್, ಹುಬ್ಬಳ್ಳಿ
೬.	ಸಿಕ್ರೆಡ್ ಹಾರ್ಟ್ ಕಾನ್ವೆಂಟ್ ಗರ್ಲ್ಸ್ ಸ್ಕೂಲ್	ಶಕುಂತಲಾ ಮೊರಾಯಿಟ್	೧೦೪	೩೮೦	ಕೇಶ್ವಾಪುರ ರಸ್ತೆ, ಹುಬ್ಬಳ್ಳಿ
೭.	ಪಾತಿಮಾ ಹೈಸ್ಕೂಲ್	ಡಾ.ಥಾಮಸ್	೧೭	೮೦೮	ಕೇಶ್ವಾಪುರ ರಸ್ತೆ, ಹುಬ್ಬಳ್ಳಿ
೮.	ಕನ್ನಡ ಮಾಧ್ಯಮ ಫಾತಿಮಾ ಪ್ರಿಯೂನಿರ್ವಸಿಟಿ ಕಾಲೇಜು	ಡಾ.ನೆಲ್ಸನರೆಡ್ಡಿ	೧೫	೫೦೦	ಕೇಶ್ವಾಪುರ ರಸ್ತೆ, ಹುಬ್ಬಳ್ಳಿ
೯.	ಸೆಂಟ್ ಮೆರಿಸ್ ಇಂಗ್ಲೀಷ್ ಬಾಯ್ಸ್ ಹೈಸ್ಕೂಲ್	ಫಾದರ್ ಫಿಲೀಪ್	೩೨	೧೬೫೦	ಕೇಶ್ವಾಪುರ ರಸ್ತೆ, ಹುಬ್ಬಳ್ಳಿ

೧೦.	ಸೆಂಟ್ ಫೀಟರ್ಸ್ ತೆಲುಗು ಪ್ರೈಮರಿ ಶಾಲೆ	ಸಿ.ಕೆ.ಐ.ದೇವಪ್ರಸಾದ್	೭	೨೬೦	ಗದಗ ರಸ್ತೆ, ಹುಬ್ಬಳ್ಳಿ
೧೧.	ಸೆಂಟ್‌ಮೆರಿಸ್ ಇಂಗ್ಲೀಷ್ ಹೈಸ್ಕೂಲ್	ರೆ.ವೆ.ಎಸ್.ಸಿಂದೆ	೧೧	೨೧೦	ಗದಗ ರಸ್ತೆ, ಹುಬ್ಬಳ್ಳಿ
೧೨.	ಮಾರ್ಟಿನ್ ಲೂಥರ್ ನರ್ಸಿಂಗ್	ಶ್ರೀ ಫಿತಮ್	೬	೧೩೦	ಮಿಶನ್ ಕಂಪೌಂಡ್ ಹುಬ್ಬಳ್ಳಿ
೧೩.	ಸಿಕ್ರೆರ್ಡ್ ಹೈಸ್ಕೂಲ್	ಸಿಸ್ಟರ್ ಐರಿನ್ ಅಲ್ಮೇಡಾ	೨೧	೧೧೭೮	ಕೇಶ್ವಾಪುರ ರಸ್ತೆ, ಹುಬ್ಬಳ್ಳಿ
೧೪.	ಸಿಕ್ರೆರ್ಡ್ ಪ್ರಾಥಮಿಕ ಶಾಲೆ	ಎಸ್.ಡಿ.ಡಿಸೋಜಾ	೨೦	೭೯೦	ಕೇಶ್ವಾಪುರ ರಸ್ತೆ, ಹುಬ್ಬಳ್ಳಿ
೧೫.	ಸೆಂಟ್‌ಮೆರಿಸ್ ಕನ್ನಡ ಪ್ರಾಥಮಿಕ ಶಾಲೆ	ಸಿಸ್ಟರ್ ಡಿಸೋಜಾ	೨೧	೧೫೫೬	ಕೇಶ್ವಾಪುರ ರಸ್ತೆ, ಹುಬ್ಬಳ್ಳಿ
೧೬.	ಸೆಂಟ್‌ಪೀಟರ್ಸ್ ತೆಲುಗು ಪ್ರೇಮರಿ ಹೈಸ್ಕೂಲ್	ಶ್ರೀಮತಿ ಐ.ಜೋಸ್ಲೆ	೫	೯೫	ಗದಗ ರಸ್ತೆ, ಹುಬ್ಬಳ್ಳಿ
೧೭.	ಸೆಂಟ್ ಝುವಿಯರ್ ಪ್ರಾಥಮಿಕ ಮತ್ತು ಪ್ರೌಢಶಾಲೆ		೧೫	೩೫೦	ತುಮರಿಕೊಪ್ಪ, ಕಲಘಟಗಿ ತಾಲ್ಲೂಕು

ಕ್ರೈಸ್ತರ ಪ್ರಾರ್ಥನಾ ಸ್ಥಳವಾದ ಚರ್ಚುಗಳು ಹುಬ್ಬಳ್ಳಿಯಲ್ಲಿ ಸುಮಾರು ಹತ್ತಕ್ಕೂ ಹೆಚ್ಚು ಕಂಡುಬರುತ್ತವೆ. ಚರ್ಚುಗಳು ಸಾಂಸ್ಕೃತಿಕವಾಗಿ ಜನಸಾಮಾನ್ಯರ ಆಚರಣೆಗಳನ್ನು ಪ್ರತಿಬಿಂಬಿಸುತ್ತವೆ. ಪ್ರತಿ ಭಾನುವಾರ, ಬುಧವಾರ ಹಾಗೂ ವಿಶೇಷ ದಿನಗಳಲ್ಲಿ ಕಾರ್ಯಕ್ರಮವನ್ನು ಚರ್ಚಿನಲ್ಲಿ ನಡೆಸಲಾಗುತ್ತದೆ. ಚರ್ಚುಗಳು ದೇವರ ಮತ್ತು ಮನುಷ್ಯರ (ಭಕ್ತರ) ಮಧ್ಯೆ ನಡೆಯುವ ಭಕ್ತಿಯ ಪಿಸುಮಾತು ಬೋಧಿಸುತ್ತವೆ. ಕ್ರೈಸ್ತರ ಶಿಕ್ಷಣ ಸಂಸ್ಥೆಗಳಲ್ಲಿ ಶಿಸ್ತನ್ನು ವಿದ್ಯಾರ್ಥಿಗಳು ಮೈಗೂಡಿಸಿಕೊಳ್ಳುವಂತೆ ಕಲಿಸುತ್ತಾರೆ.

ವಸತಿ ನಿಲಯಗಳು

ಮಿಶನರಿಗಳು ಧರ್ಮಪ್ರಚಾರ ಕಾರ್ಯದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಮಾತ್ರ ಪ್ರಾರಂಭಿಸದೆ ಶಿಕ್ಷಣವನ್ನು ಪಡೆಯುವ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ವಸತಿ ನಿಲಯಗಳನ್ನು ತೆರೆದರು. ಇದು ಅವರ ಸೇವಾ ಮನೋಭಾವನೆಯನ್ನು ತೋರುತ್ತದೆ. ವಸತಿ ನಿಲಯಗಳಲ್ಲಿ ವಸತಿ ಜೊತೆಗೆ ಆಹಾರದ ವ್ಯವಸ್ಥೆಯು ಇರುತ್ತದೆ. ಇದರಿಂದಾಗಿ ವಿದ್ಯಾರ್ಥಿಗಳಲ್ಲಿ ವಿದ್ಯಾಭ್ಯಾಸದಲ್ಲಿ ಹೆಚ್ಚು ಆಸಕ್ತಿವಹಿಸುವಂತೆ ಮಾಡುತ್ತದೆ. ವಿದ್ಯಾರ್ಥಿಗಳಲ್ಲಿ ಶಿಸ್ತು, ನೈತಿಕತೆಯನ್ನು ಈ ವಸತಿ ನಿಲಯಗಳು ಬೆಳೆಸುತ್ತವೆ. ವಿಶೇಷವಾಗಿ ಕ್ರೈಸ್ತರೇತರ ಧರ್ಮದವರು ಈ ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳಾಗಿದ್ದುದು ಕಂಡುಬಂದಿದೆ.

ವಸತಿ ನಿಲಯಗಳು

ಕ್ರ. ಸಂ.	ವಸತಿ ನಿಲಯದ ಹೆಸರು	ವಿದ್ಯಾರ್ಥಿಗಳ ಸಂಖ್ಯೆ	ಸಿಬ್ಬಂದಿ ಸಂಖ್ಯೆ	ಸ್ಥಳ
೧.	ಕೆ.ಎನ್.ಎಚ್.ಗಂಡು ಮಕ್ಕಳ ಆಶ್ರಯಶಾಲೆ	೨೩	೨	ಮಿಶನ ಕಂಪೌಂಡ್ ಹುಬ್ಬಳ್ಳಿ
೨.	ಕೆ.ಎನ್.ಎಚ್.ಬಾಲಕಿಯರ ವಸತಿಶಾಲೆ	೧೮	೨	ಮಿಶನ್ ಕಂಪೌಂಡ ಹುಬ್ಬಳ್ಳಿ
೩.	ಸೆಂಟ್ ಪೀಟರ್ಸ್ ವಸತಿ ನಿಲಯ	೨೫	೨	ಗದಗ ರೋಡ್ ಹುಬ್ಬಳ್ಳಿ
೪.	ಮಾರ್ಟಿನ ಲೂಥರ ನರ್ಸಿಂಗ್ ಬಾಯ್ಸ್ ಹಾಸ್ಟೆಲ್	೫೦	೨	ಮಂಗಳವಾಣಿ ಕಾರವಾರ ರೋಡ್ ಹುಬ್ಬಳ್ಳಿ
೫.	ಮಾರ್ಟಿನ್ ಲೂಥರ ನರ್ಸಿಂಗ್ ಗರ್ಲ್ಸ್ ಹಾಸ್ಟೆಲ್	೩೫	೨	ದೀನಬಂಧು ಕಾಲೋನಿ ಕಾರವಾರ ರೋಡ ಹುಬ್ಬಳ್ಳಿ
೬.	ಲೂರ್ಥ ಮಾತೆಯ ನರ್ಸಿಗ್ ಮಹಿಳೆಯ ವಸತಿ ನಿಲಯ	೬೩	೩	ಕೆಲಗೇರಿ ರೋಡ್ ಧಾರವಾಡ

೪.೨. ಮುದ್ರಣ

ಪುನರುಜ್ಜೀವನ ಕಾಲದಲ್ಲಿ ಅತ್ಯಂತ ಮಹತ್ವದ ಪಾತ್ರವಹಿಸಿದ ಸಾಧನವೆಂದರೆ ಮುದ್ರಣಯಂತ್ರ. ಮುದ್ರಣಯಂತ್ರದಿಂದ ಹೊರಡಿಸಿದ ಪತ್ರಿಕೆಗಳು ಬಹುಬೇಗ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಮಾಹಿತಿಗಳನ್ನು ತಿಳಿಸಲ್ಪಡುತ್ತವೆ. ಇಂತಹ ಪ್ರಮುಖ ಸಾಧನವನ್ನು ಯೂರೋಪಿನಲ್ಲಿ ಕ್ರಿ.ಶ.೧೪೫೬ರಲ್ಲಿ ಮೆನ್ಜನ ಗುಟೇನಬರ್ಗ ಎಂಬುವವನು ಶೋಧಿಸಿದನು. ಅಚ್ಚು ಮೊಳೆಗಳನ್ನು ಮೊದಲ ಬಾರಿಗೆ ತಯಾರಿಸುವ ಮೂಲಕ ಪ್ರಪಂಚಕ್ಕೆ ಕೊಡುಗೆಯನ್ನು ನೀಡಿದನು. ನಂತರ ಜೋಹನ ಪಾಸ್ಟ್ ಹಾಗೂ ಫಿಟರ್ ಶೇಷ ಎಂಬುವರು, ಇಂಗ್ಲೆಂಡಿನ ಕಾಕ್ಸ್‌ಟನರು ಸುಧಾರಿತ ಮುದ್ರಣಯಂತ್ರವನ್ನು ಶೋಧಿಸಿದರು. ಮುದ್ರಣ ಯಂತ್ರವು ಕ್ರೈಸ್ತ ಮಿಶನರಿಗಳಿಗೆ ಒಂದು ವರದಾನವಾಯಿತು.

ಭಾರತಕ್ಕೆ ಮೊದಲು ಬಂದ ಕ್ರೈಸ್ತರು ಕೇವಲ ವ್ಯಾಪಾರಕ್ಕಾಗಿ ಬಂದಿದ್ದರಿಂದ ಅವರಿಗೆ ಮುದ್ರಣಯಂತ್ರದ ಅವಶ್ಯಕತೆ ಇರಲಿಲ್ಲ. ಕ್ರೈಸ್ತರು ಯಾವಾಗ ಮತಪ್ರಚಾರದ ಕಾರ್ಯವನ್ನು ಪ್ರಾರಂಭಿಸಿದರು ಆಗ ಅವರನ್ನು ಮಿಶನರಿಗಳೆಂದು ಕರೆದರು. ಭಾರತದ ಬೇರೆ ಬೇರೆ ಪ್ರದೇಶಗಳಿಗೆ ಮಿಶನರಿಗಳು ಹೋಗುವುದರಿಂದ ಅಲ್ಲಿನ ಸ್ಥಳೀಯ ಭಾಷೆಯನ್ನು ಅಧ್ಯಯನ ಮಾಡುಬೇಕಾಗುತ್ತಿತ್ತು. ಜೊತೆಗೆ ಸ್ಥಳೀಯ ಭಾಷೆಯಲ್ಲಿಯೇ ಉಪದೇಶಗಳನ್ನು ಅಥವಾ ಸುವಾರ್ತೆಗಳನ್ನು ಮುದ್ರಿಸಿ ಪ್ರಚಾರ ಮಾಡಬೇಕಾದ ಸಂದಿಗ್ಧ ಪರಿಸ್ಥಿತಿಯಲ್ಲಿ ಮುದ್ರಣ ಯಂತ್ರದ ಅವಶ್ಯಕತೆ ಮಿಶನರಿಗಳಿಗೆ ಒದಗಿ ಬಂದಿತು.

ಭಾರತಕ್ಕೆ ಮುದ್ರಣಯಂತ್ರವು ಸುಮಾರು ಕ್ರಿ.ಶ.೧೫೫೭ರಲ್ಲಿ ಕ್ಯಾಥೋಲಿಕ ಪಾದ್ರಿಯಾದ ಸಂತ ಝೇವಿಯರ್‌ನಿಂದ ಗೋವೆಯಲ್ಲಿ ಪ್ರಾರಂಭವಾಯಿತು. ಸಂತ ಝೇವಿಯರನು ಪೋರ್ಚುಗೀಸರ ಮಿಶನರಿಯಾಗಿದ್ದನು. 'ಸಂತಝೇವಿಯರನು ಡಾಟ್ರಿನ್ ಕ್ರಿಸ್ತಾ ಎಂಬ ಗ್ರಂಥವನ್ನು ಕ್ರಿ.ಶ.೧೫೫೭ರಲ್ಲಿ ಹೊರತಂದನು. ಇದುವೆ ಭಾರತದ ಮೊದಲ ಕೃತಿಯಾಗಿದೆ."[೬] ಮಿಶನರಿಗಳಿಗೆ ಸ್ಥಳೀಯ ಭಾಷೆಯಲ್ಲಿಯೇ ಮುದ್ರಿಸುವ ಅನಿವಾರ್ಯತೆಯು ಒದಗಿಬಂತು. ಕನ್ನಡ ಲಿಪಿಯ ಮೊಳೆಗಳ ತಯಾರಿಕೆಗೆ ಗೋನ್ಸಾಲಿಸ್ ಎಂಬುವವರು ಪ್ರಯತ್ನಿಸಿದ್ದು ಸಾಧ್ಯವಾಗಲಿಲ್ಲ. ಕ್ರಿ.ಶ.೧೭೬೦ರಲ್ಲಿ ಪೋರ್ಚುಗೀಸ್ ಮಿಶನರಿಗಳು ಮುದ್ರಣ ಕಾರ್ಯವನ್ನು ನಿಲ್ಲಿಸಿದರು.

"ಹೊಸ ಕಾಲದ ಪ್ರಥಮ ಮುದ್ರಿತ ಕನ್ನಡ ಪುಸ್ತಕವೆಂದರೆ ವಿಲಿಯಂ ಕೇರಿ ಬರೆದ ಕ್ರಿ.ಶ.೧೮೧೭ರಂದು ಮುದ್ರಿಸಿದ A Grammar of the Kurnataka Language"[೭] ಇದು ಒಂದು ಪ್ರಥಮ ಮುದ್ರಿತ ಕನ್ನಡ ಪುಸ್ತಕವಾಗಿದೆ.

ಕ್ರಿ.ಶ.೧೮೧೬ರಲ್ಲಿ ವಿಲಿಯಂ ಕೇರಿಯ ಕೆಲಸಗಾರರಲ್ಲಿ ಒಬ್ಬನಾದ ಮನೋಹರ ಕನ್ನಡದ

ಮೊಳೆಗಳನ್ನು ಸಿದ್ಧಪಡಿಸಿದ ಕೀರ್ತಿ ಅವನಿಗೆ ಸಲ್ಲುತ್ತದೆ. ಆದ್ದರಿಂದ ವಿಲಿಯಂ ಕೇರಿಯು ತನ್ನ ವ್ಯಾಕರಣ ಗ್ರಂಥವನ್ನು ಮೊದಲಿಗೆ ಮುದ್ರಿಸಿದನು. ಇದರಿಂದಾಗಿ ಕನ್ನಡದ ಮುದ್ರಣದ ಕಾರ್ಯಗಳು ಪ್ರಾರಂಭವಾದವು. ೧೮೨೩ರಲ್ಲಿ ಕನ್ನಡ ಅನುವಾದ ಬೈಬಲಿನ ಪ್ರತಿಯು ಬೆಂಕಿ ಅನಾಹುತದಿಂದ ಸುಟ್ಟು ಹೋಯಿತು. ಆ ಕೃತಿಯನ್ನು ಕನ್ನಡದ ಬೈಬಲ್‌ನ್ನು ಮತ್ತೆ ೧೮೨೩ರಲ್ಲಿ ಮುದ್ರಿಸಿದ ಕೀರ್ತಿ ವಿಲಿಯಂ ಕೇರಿಗೆ ಸಲ್ಲುತ್ತದೆ.

ಕ್ರಿ.ಶ.೧೮೦೪ರಲ್ಲಿ ಸ್ಥಾಪಿತವಾದ ಮದ್ರಾಸಿನ ಫೋರ್ಟಸೆಂಟ್‌ಜಾರ್ಜ್ ಕಾಲೇಜಿನ ಅಚ್ಚುಕೂಟದಿಂದ ಪತ್ರಿಕೆಗಳು ಹೊರಬಂದವು. 'ಜಾನ್ ಮೆಕ್ಕರನು ಕ್ರಿ.ಶ.೧೮೧೭ರಲ್ಲಿ A Grammar of the Karnataka Language ಎಂಬ ಪುಸ್ತಕವು ೧೮೨೦ರಲ್ಲಿ ಕಾಲೇಜ್ ಪ್ರೆಸ್‌ನಿಂದ ಹೊರಬಂದಿತು."[೮]

ವಿಲಿಯಂ ರೀವ್ ಬರೆದ ಇಂಗ್ಲೀಷ-ಕನ್ನಡ ಶಬ್ದಕೋಶ(೧೯೨೪) ಇದುವೆ ಹೊಸಗನ್ನಡ ಕಾಲದ ಮೊಟ್ಟ ಮೊದಲಿನ ಕೋಶ ರಚನೆಯ ಪ್ರಯತ್ನವಾಗಿದೆ. ವಿಲಿಯಂ ರೀವನು ಕನ್ನಡ-ಇಂಗ್ಲೀಷ್‌ನ ಶಬ್ದ ಕೋಶವನ್ನು ರಚಿಸಿದನು. ೧೮೩೨ರಲ್ಲಿ ಈ ಕೃತಿಯು ಗವರ್ನಮೆಂಟ್ ಗೆಜೆಟ್ ಪ್ರೆಸ್ಸಿನಲ್ಲಿ ಮುದ್ರಿತವಾಯಿತು.

ಕರ್ನಾಟಕದ ಪ್ರಮುಖ ಪ್ರದೇಶಗಳಲ್ಲಿ ಮುದ್ರಣದ ಸ್ಥಾಪನೆಗಳು ಹಾಗೂ ವಿವಿಧ ಮಿಶನರಿಗಳಿಂದ ಮುದ್ರಣದ ಕಾರ್ಯಗಳು ಬೆಳವಣಿಗೆಯಾಗುತ್ತಾ ಬಂದವು. ಮುದ್ರಣ ಯಂತ್ರದಿಂದ ಬಿಡುಗಡೆಯಾದ ಅಥವಾ ಪ್ರಕಟಣೆಯಾದ ಬೈಬಲ್‌ನ ಕನ್ನಡದ ಅನುವಾದ ಹಾಗೂ ಇತರೆ ಸುವಾರ್ತೆಯ ವಿಷಯಗಳು ದೂರದಲ್ಲಿರುವ ವ್ಯಕ್ತಿಗಳಿಗೆ ಕೇಳಲು ಸಾಧ್ಯವಾಗದಿದ್ದಾಗ ಅವುಗಳನ್ನು ಪುಸ್ತಕ ರೂಪದಲ್ಲಿ ಮುದ್ರಿಸಿ ಪ್ರಕಟಿಸುವಂತೆ ಮಾಡಿದರು. ಇದರಿಂದಾಗಿ ಬೈಬಲ್‌ನ ಜ್ಞಾನ ಜನಸಾಮಾನ್ಯರು ತಿಳಿಯುವಂತಾದರು. ಕರ್ನಾಟಕದ ಪ್ರದೇಶಗಳಾದ ಬಳ್ಳಾರಿ, ಬೆಂಗಳೂರು, ಮಂಗಳೂರು, ಇನ್ನೂ ಹಲವು ಪ್ರದೇಶಗಳಲ್ಲಿ ಮುದ್ರಣಗಳಿಂದ ಅನೇಕ ಕೃತಿಗಳು ಬಿಡುಗಡೆಯಾದವು.

ಬಳ್ಳಾರಿಗೆ ಬಂದ ಜಾನ್ ಹ್ಯಾಂಡ್ಸ್ ೨-೩ ವರ್ಷಗಳಲ್ಲಿಯೇ ಕನ್ನಡ ವ್ಯಾಕರಣ ಕೋಶ ಮತ್ತು ಬೈಬಲನ ಅನುವಾದ ಹಸ್ತಪ್ರತಿಗಳನ್ನು ಸಿದ್ಧಪಡಿಸಿದನು. "ಜಾನ್‌ಹ್ಯಾಂಡನ ನೆರವಿನಿಂದ ಕ್ರಿ.ಶ.೧೮೨೬ರಲ್ಲಿ ಮುದ್ರಣಯಂತ್ರವು ಬಳ್ಳಾರಿಯನ್ನು ತಲುಪಿತು."[೯] ಕ್ರಿ.ಶ.೧೮೩೨ರಲ್ಲಿ ಹ್ಯಾಂಡ್ಸ್‌ನು ಲಂಡನ್ನಿನಿಂದ ಕನ್ನಡದ ಮೊಳೆಗಳನ್ನು ಮಾಡಿಸಿ ತಂದನು. ಜೊತೆಗೆ 'ಪೆನ್' ಎಂಬ ಮುದ್ರಕವನ್ನು ಬಳ್ಳಾರಿಗೆ ತಂದನು. ಅಕಾಲಿಕ ಕಾಲರಾ ರೋಗದಿಂದ ಪೆನ್ ಕ್ರಿ.ಶ.೧೮೩೪ರಲ್ಲಿ ಮರಣ ಹೊಂದಿದನು. ಆಗ ಮುದ್ರಣ ಕಾರ್ಯ ನಿಂತು ಹೋಯಿತು.

ಬೆಂಗಳೂರಿನಲ್ಲಿ ಕ್ರಿ.ಶ.೧೮೪೦ಕ್ಕಿಂತ ಮೊದಲು ಕನ್ನಡ ಮುದ್ರಣಾಲಯವೇ ಇರಲಿಲ್ಲ. ೧೮೪೦ರಲ್ಲಿ ಮುದ್ರಣಾಲಯವನ್ನು ಸ್ಥಾಪಿಸಿಕೊಂಡರು. ಮೊದಲಿಗೆ ಪ್ರಕಟವಾದ ಕೃತಿ 'ಪ್ರಶ್ನೋತ್ತರ ಶಾಲಾ ಪುಸ್ತಕ'. ಹಾಂಡ್ಸನು ಕ್ರಿ.ಶ.೧೮೪೩ರಲ್ಲಿ ಲಂಡನ್ನಿನಿಂದ ಹಿಂತಿರುಗುತ್ತಿದ್ದಾಗ ಕನ್ನಡದ ಮೊಳೆಗಳನ್ನು ಪ್ರತ್ಯೇಕವಾಗಿ

ಮಾಡಿಸಿ ತಂದನು. ಕ್ರಿ.ಶ.೧೮೬೦-೧೮೭೦ರ ಅವಧಿಯಲ್ಲಿ ದಕ್ಷಿಣ ಭಾರತದಲ್ಲಿಯೇ ಶ್ರೇಷ್ಠ ಮುದ್ರಾಣಾಲಯ ಎಂಬ ಖ್ಯಾತಿಯನ್ನು ಪಡೆಯಿತು. ಲಾಭಾಂಶವಿಲ್ಲದ ಕಾರಣದಿಂದ ವೆಸ್ಲಿಯನ ಮಿಶನನ್ನು ೧೮೭೨ರಲ್ಲಿ ಒಬ್ಬ ಖಾಸಗಿ ವ್ಯಕ್ತಿಗೆ ಮಾರಾಟ ಮಾಡಿದರು.

ಕನ್ನಡ ಮುದ್ರಣದಲ್ಲಿ ಮಂಗಳೂರು ಬಾಸೆಲ್ ಮಿಶನ್ ಹೆಸರು ಅಜರಾಮರವಾಗಿದೆ. ಮಂಗಳೂರು ಮುದ್ರಣದಲ್ಲಿ ಜಾನ್ ವೈಗ್ಲೆ ಮುದ್ರಿಸಿದ ಮೊದಲ ಪುಸ್ತಕವೆಂದರೆ 'ತುಳು ಕೀರ್ತನೆಗಳು'. ಬಾಸೆಲ್ ಮಿಶನ್ ಮುದ್ರಣದಲ್ಲಿ ಕನ್ನಡ, ಇಂಗ್ಲೀಷ್, ತಮಿಳು, ಮಲಯಾಳಿ, ಸಂಸ್ಕೃತ, ಜರ್ಮನ್ ಭಾಷೆಗಳ ಗ್ರಂಥಗಳ ಮುದ್ರಣವಾಗುತ್ತಿದ್ದವು.

ಮಂಗಳೂರಿನಲ್ಲಿ ಇನ್ನೊಂದು ಪ್ರಸಿದ್ಧ ಕ್ರೈಸ್ತ ಮುದ್ರಣಾಲಯವೆಂದರೆ 'ಕೊಡಿಯಾಲಬೈಲ ಪ್ರೆಸ್'. ಇದು ರೋಮನ್ ಕ್ಯಾಥೋಲಿಕರಿಗೆ ಸೇರಿದ್ದು. ಈ ಪ್ರೆಸ್‌ನಲ್ಲಿ ಹೆಚ್ಚಾಗಿ ಕೊಂಕಣಿ ಭಾಷೆಯ ಕೃತಿಗಳು ಮುದ್ರಣವಾಗುತ್ತಿದ್ದವು. ಕ್ಯಾಥೋಲಿಕರು 'ಸೊಸೈಟಿ ಆಫ್ ಜೀಸಸ್' ಸಂಸ್ಥೆಯನ್ನು ಕ್ರಿ.ಶ.೧೮೭೮ರಲ್ಲಿ ಸ್ಥಾಪಿಸಿದರು. ಇಲ್ಲಿ ಪಠ್ಯಪುಸ್ತಕಗಳು, ಪ್ರವಚನ ಪುಸ್ತಕಗಳನ್ನು ಮುದ್ರಿಸಲಾಯಿತು.

ಮೈಸೂರು ಸಂಸ್ಥಾನದ ಸರ್ಕಾರಿ ಮುದ್ರಣಾಲಯವು ಕ್ರಿ.ಶ.೧೮೮೦ರ ಸುಮಾರಿಗೆ ಜಾನ್ ಗ್ಯಾಟ್ ನೇತೃತ್ವದಲ್ಲಿ ಅಧಿಕೃತವಾಗಿ ಅಸ್ತಿತ್ವಕ್ಕೆ ಬಂತು. 'ಸುಬುದ್ಧಿ ಪ್ರಕಾಶ' ಎಂಬ ಪತ್ರಿಕೆಯು ೧೮೪೯ರಂದು ಬೆಳಗಾವಿಯಲ್ಲಿ ಆರಂಭವಾಯಿತು. ಬೆಳಗಾವಿಯಲ್ಲಿ ಕನ್ನಡ - ಮರಾಠಿಯ ಎರಡು ಭಾಷೆಗಳಲ್ಲಿ ಪತ್ರಿಕೆಗಳು ಪ್ರಕಟವಾದವು.

ಧಾರವಾಡ ಜಿಲ್ಲೆಯಲ್ಲಿಯೂ ಕೂಡ ಮುದ್ರಣದ ಕಾರ್ಯವು ಜಿಲ್ಲೆಯ ಸವಣೂರು ಗ್ರಾಮದಲ್ಲಿ ಪ್ರಾರಂಭವಾಯಿತು. ಆದರೆ ೧೮೬೦ರಲ್ಲಿ ಸವಣೂರ ಪ್ರೆಸ್. ಇದು ಖಾಸಗಿ ಮುದ್ರಣ ಸಂಸ್ಥೆಗಳು ಈ ಪ್ರೆಸ್‌ನಲ್ಲಿ ಪರ್ಷಿಯನ್ ಭಾಷೆಯಲ್ಲಿ ಮುದ್ರಣದ ಚಾಲನೆಯಲ್ಲಿತ್ತು. ಈ ಮುದ್ರಣಾಲಯದಲ್ಲಿ ನಾಗವರ್ಮನ ಛಂದೋಬುದಿಯ ಕೃತಿಯು ೧೮೬೨ರಲ್ಲಿ ಮುದ್ರಣವಾಯಿತು.

"ಜ್ಞಾನಬೋಧಕ ಮುದ್ರಣಾಲಯ ನಂತರ ಧಾರವಾಡಕ್ಕೆ ಸ್ಥಳಾಂತರ ಹೊಂದಿತು."[೧೦] ಕ್ರಿ.ಶ.೧೮೬೦-೭೭ರ ಅವಧಿಯಲ್ಲಿ ಧಾರವಾಡದೊಳಗೆ ಸನ್ಮಾರ್ಗದರ್ಶಕ, ಜ್ಞಾನಸಾಗರ ಮತ್ತು ಜ್ಞಾನವರ್ಧಕ ಎಂಬ ಹೆಸರಿನಿಂದ ಪ್ರೆಸ್ ಚಾಲನೆಗೆ ಬಂದವು. ಸನ್ಮಾರ್ಗ ಪ್ರೆಸ್ ಗೋವಿಂದ ಪ್ರಕಾರ ಹಾಗೂ ಮುಂಬಯಿ ಕರ್ನಾಟಕದ ದ್ವಿತೀಯ ಕನ್ನಡ ಪತ್ರಿಕೆಯಾದ "ಕನ್ನಡ ಜ್ಞಾನಬೋಧಕ(೧೮೬೧) ಪ್ರಾರಂಭದಲ್ಲಿ ಇಲ್ಲಿಯೇ ಮುದ್ರಿತವಾಗುತ್ತಿತ್ತು."[೧೧]

ಜ್ಞಾನಸಾಗರ ಪ್ರೆಸ್ ಸುರ್ಜನ್ ಸಿಂಗ್ ಎಂಬುವವನ ಒಡೆತನದಲ್ಲಿತ್ತು. ಹಿಂದೂ ಪಂಚಾಂಗವು ಪ್ರಸಿದ್ಧವಾದುದು ಮೊತ್ತಮೊದಲು ಇದೇ ಜ್ಞಾನಸಾಗರ ಪ್ರೆಸ್‌ನಿಂದ. ಜ್ಞಾನವರ್ಧಕ ಪ್ರೆಸ್ ಮೇಲಿನ ಎರಡು ಮುದ್ರಣಕ್ಕಿಂತ ಹೆಚ್ಚು ಪ್ರಸಿದ್ಧಿಯನ್ನು ಪಡೆಯಿತು. ಅಂದಿನ ಶಿಕ್ಷಣಾಧಿಕಾರಿಯಾದ ಚೆನ್ನಬಸಪ್ಪನ

ಪ್ರೋತ್ಸಾಹ ಪಡೆದು ಕಲ್ಯಾಣಪ್ಪ ಮಾದನಶೆಟ್ಟಿ ಎಂಬುವವನು ೧೮೬೫ರಲ್ಲಿ ಇದನ್ನು ಆರಂಭಿಸಿದನು. ಈ ಮುದ್ರಣಗಳು ೨೦ನೇ ಶತಮಾನದ ಆರಂಭದ ದಶಕದಲ್ಲಿ ಜನಸಾಮಾನ್ಯರಿಗೆ ಬೇಕಾಗುವ ಪುಸ್ತಕಗಳನ್ನು ಪಠ್ಯಪುಸ್ತಕಗಳನ್ನು ರಚನೆ ಮಾಡಿದವು.

ಈ ಮೇಲ್ಕಾಣಿಸಿದ ಕ್ರೈಸ್ತಮಿಶನರಿಗಳು ತಮ್ಮ ಧರ್ಮಪ್ರಚಾರದ ಕಾರ್ಯಚಟುವಟಿಕೆಗೆ ಅನುಕೂಲವಾಗುವ ರೀತಿಯಲ್ಲಿ ಮುದ್ರಣಯಂತ್ರದ ಬಳಕೆಯನ್ನು ಕರ್ನಾಟಕದ ಪ್ರಮುಖ ನಗರಗಳಲ್ಲಿ ಸ್ಥಾಪಿಸುವುದರೊಂದಿಗೆ ಧಾರವಾಡ ಜಿಲ್ಲೆಯಲ್ಲಿಯೂ ಕೂಡ ಮುದ್ರಣಯಂತ್ರದ ಬಳಕೆ ತಂದರು. ಮಿಶನರಿಗಳ ಮುದ್ರಣ ಯಂತ್ರದ ಬಳಕೆಯಿಂದ ಇಂದಿನ ಆಧುನಿಕ ಪ್ರೆಸ್ ಬಳಕೆ ಮಾದರಿಯಾಯಿತು. ಇಂದಿನ ಪ್ರೆಸ್ ಬಳಕೆಯಿಂದ ಅದೆಷ್ಟೋ ಕುಟುಂಬಗಳ ಜೀವನಕ್ಕೆ ಆಧಾರವಾಗಿವೆ.

೪.೩. ಸಾಹಿತ್ಯ

ಕನ್ನಡ ಸಾಹಿತ್ಯ ಹಲ್ಮಿಡಿ ಶಾಸನದಿಂದ ಇಂದಿನ ಆಧುನಿಕ ಕನ್ನಡ ಸಾಹಿತ್ಯದವರೆಗೆ ತನ್ನದೇ ಆದ ಹಲವು ಮಜಲುಗಳನ್ನು ದಾಟಿಕೊಂಡು ಬಂದಿದೆ. ಭಾರತೀಯ ಸಾಹಿತ್ಯದಲ್ಲಿ ಹೊಸಯುಗವು ಒಂದೇ ಕಾಲಾವಧಿಯಲ್ಲಿ ಅಂದರೆ ೧೯ನೇ ಶತಮಾನದಲ್ಲಿ ಕಾಣಿಸಿಕೊಂಡಿತು. ಮಿಶನರಿಗಳ ಆಗಮನದಿಂದ ಕನ್ನಡ ಸಾಹಿತ್ಯದಲ್ಲಾದ ಮಹತ್ತರವಾದ ಅಭಿವೃದ್ಧಿಯನ್ನು ಆಧುನಿಕ ಸಾಹಿತ್ಯದ ಪುನರುಜ್ಜೀವನದ ಕಾಲ ಎಂದರೆ ತಪ್ಪಾಗಲಾರದು.

ಪಾಶ್ಚಿಮಾತ್ಯ ವಿದ್ವಾಂಸರಿಗೆ ೧೮ನೇ ಶತಮಾನದಲ್ಲಿ ಭಾರತೀಯ ವೇದಾಂತಗಳಲ್ಲಿ, ಸಂಸ್ಕೃತ ಗ್ರಂಥಗಳಲ್ಲಿ ವಿಶೇಷ ಆಸಕ್ತಿಯನ್ನು ತಳೆದರು. ೧೭೮೫ರಲ್ಲಿ ಚಾರ್ಲ್ಸ್ ವಿಲ್ಕಿನ್ಸ್ ಎಂಬುವನು ಭಗವದ್ಗೀತೆಯನ್ನು ಇಂಗ್ಲೀಷ್‌ಗೆ ಅನುವಾದ ಮಾಡಿದನು. ಅದೇ ಸಂದರ್ಭದಲ್ಲಿ ಪಾಶ್ಚಿಮಾತ್ಯ ಪ್ರಮುಖ ವಿದ್ವಾಂಸರಾದ ಎಲ್.ಫಿನ್‌ಸ್ಟನ್, ಕ್ಯಾಸಲ್, ವಿನ್ಸೆಂಟ್ ಸ್ಮಿತ್ ಮೊದಲಾದ ಚರಿತ್ರೆಕಾರರು ಭಾರತದ ಇತಿಹಾಸ ಅಧ್ಯಯನ ಮಾಡಿದರು. ಮ್ಯಾಕ್ಸ್‌ಮುಲ್ಲರ ೧೮೪೨ ರಿಂದ ೧೮೬೫ರವರೆಗೆ ವೇದಗಳನ್ನು ಕುರಿತು ಮೂರು ಗ್ರಂಥಗಳನ್ನು ಪ್ರಕಟಿಸಿದ.

"ಕನ್ನಡದಲ್ಲಿ ಹೊಸಬಗೆಯ ಸಾಹಿತ್ಯ ಸೃಷ್ಟಿಗೆ ಮುಖ್ಯ ಪ್ರೇರಣೆ ಇಂಗ್ಲೀಷ ವಿದ್ಯಾಭ್ಯಾಸದಿಂದ ಬಂದಿದ್ದು."[೧೨] ಹೊಸಗನ್ನಡ ಸಾಹಿತ್ಯದ ಆರಂಭವನ್ನು ಕೆಲವು ವಿದ್ವಾಂಸರು ಈ ಕೆಳಗಿನಂತೆ ತಿಳಿಸಿದ್ದಾರೆ.

"ಶ್ರೀನಿವಾಸ ಹಾವನೂರ ಹೊಸಗನ್ನಡದ ಅರಣೋದಯದ ಆರಂಭದ ವರ್ಷ ಎಂದು ಕರೆದಿದ್ದಾರೆ."[೧೩] "ರಂ.ಶ್ರೀ.ಮುಗುಳಿಯವರು ಸಹ ಹೊಸಗನ್ನಡ ಸಾಹಿತ್ಯದ ಉದಯ ೧೮೨೦ ರಿಂದ

೧೮೩೦ ಎಂದು ಗುರುತಿಸಿದ್ದರು.''[೧೪] ಧಾರವಾಡಕ್ಕೆ ಧರ್ಮಪ್ರಚಾರಕ್ಕೆ ಬಂದ ಮಿಶನರಿಗಳು ಕೇವಲ ಧರ್ಮ ಪ್ರಚಾರಕ್ಕೆಂದು ಮಾತ್ರ ಅಂಟಿಕೊಳ್ಳದೇ ಸಾಹಿತ್ಯಕ ಕೊಡುಗೆಯಾಗಿ ಕನ್ನಡಕ್ಕೆ ಸೇವೆ ಸಲ್ಲಿಸಿದ್ದಾರೆ.

''ನಮ್ಮ ಜನರ ಆಚಾರ, ವಿಚಾರ, ಮನೋಧರ್ಮ, ಕಲೆ, ಸಂಸ್ಕೃತಿ, ಮೊದಲಾದ ವಿಷಯಗಳನ್ನು ಅರಿತು ಕನ್ನಡ ಪಂಡಿತರಿಂದ ಕನ್ನಡ ಕಲಿತು, ಕನ್ನಡ ಭಾಷೆಗೆ ನಾನಾ ರೂಪಗಳಲ್ಲಿ ದುಡಿದು, ಆಡಳಿತ, ಶಿಕ್ಷಣ, ಸಾಹಿತ್ಯ, ಕಲೆ, ಜಾನಪದ ಮೊದಲಾದ ವಿಷಯಗಳಲ್ಲಿ ಕನ್ನಡ ಸಾಹಿತ್ಯಕ್ಕೆ ಚಿರಸ್ಮರಣೀಯವಾದ ಸೇವೆ ಸಲ್ಲಿಸಿದ್ದಾರೆ.''[೧೫]

ಧಾರವಾಡಕ್ಕೆ ಮಿಶನರಿಯಾಗಿ ಬಂದವರು ಕನ್ನಡ ಭಾಷೆ, ವ್ಯಾಕರಣ, ಶಬ್ದಕೋಶ, ನಿಘಂಟು, ಪುಸ್ತಕ ಪ್ರಕಟಣೆ ಮುಂತಾದ ಕೆಲಸಗಳನ್ನು ಇಲ್ಲಿ ಮಾಡಿದರು. ''ಹರ್ಮನ ಮೋಗ್ಲಿಂಗರು ೧.ಹೃದಯ ದರ್ಪಣ ೨.ಜಾಲೆ, ೩.ವಿಚಾರಣೆ, ೪.ದೇವ ವಿಚಾರಣೆ, ೫.ಯಾತ್ರಿಕನ ಸಂಚಾರ, ೬.ವೇದವ್ಯಾಖ್ಯಾನ ೭.ಬಾಸೆಲ್ ಮಿಶನಿನ ಸಭಾಕ್ರಮ, ೮. ಮಂಗಳೂರು ಸಮಾಚಾರ, ೯. ಕನ್ನಡ ಸಮಾಚಾರ, ೧೦. ಕನ್ನಡ ಸುವಾರ್ತಿಕ''[೧೬] ಕನ್ನಡ ಗಾದೆಗಳು, ಕ್ರೈಸ್ತರ ಗೀತೆಗಳು ಹೀಗೆ ಪ್ರಮುಖವಾದ ಕೃತಿಗಳನ್ನು ರಚಿಸಿದರು. ಹರ್ಮನ್ ಮೋಗ್ಲಿಂಗರು ಧರ್ಮಪ್ರಚಾರದ ಕಾರ್ಯದೊಂದಿಗೆ ಜನಸಾಮಾನ್ಯರೊಂದಿಗೆ ಬೆರೆತು ಅತ್ಯಂತ ಸಾಧಾರಣ ಜೀವನವನ್ನು ಕಳೆದರು. ಲೆಹ್ನರವರು ಕನ್ನಡದಲ್ಲಿ ಪಂಚಾಂಗವನ್ನು ರಚಿಸಿದರು. ಜಿ.ಎಚ್.ವೈಗಲ್ ಬೈಬಲನನ್ನು ಕನ್ನಡಕ್ಕೆ ಅನುವಾದ ಪರಿಷ್ಕರಿಸಿದನು.

ಕಿಟೆಲ್‌ರು ಕನ್ನಡ ಸಾಹಿತ್ಯಕ್ಕೆ ತಮ್ಮ ಜೀವನದ ಹಲವು ವರ್ಷಗಳ ಕಾಲ ದುಡಿದಿದ್ದಾರೆ. ಕನ್ನಡ ವ್ಯಾಕರಣ, ಕನ್ನಡ-ಇಂಗ್ಲೀಷ್ ನಿಘಂಟು, ಕಥನಮಾಲೆ, ಕ್ರೈಸ್ತ ಸಭಾಚರಿತ್ರೆ ೧೮೬೮ ಕ್ರೈಸ್ತ ಚರ್ಚಿನ ಉಗಮ ಮತ್ತು ವಿವಿಧ ದೇಶಗಳಲ್ಲಿ ಬೆಳೆದು ಬಂದ ಬಗ್ಗೆ ಹೇಳಿದ್ದಾರೆ. ಪಠ್ಯಪುಸ್ತಕಗಳು, ಹಿಂದೂದೇಶದ ಚರಿತ್ರೆ, ಕೋಶ ರಚನೆ, ಭಾಷಾಶಾಸ್ತ್ರ ಬಿಡಿ ಲೇಖನಗಳು, ಪತ್ರಿಕಾ ಸಂಪಾದನೆ, ಒಟ್ಟಾರೆಯಾಗಿ ಕಿಟಲ್‌ರ ಜೀವನ ಬರಹಗಳನ್ನು ಗಮನಿಸಿದಾಗ ಶ್ರದ್ಧೆ ಅವರಲ್ಲಿ ಆಳವಾಗಿ ಬೇರೂರಿತ್ತು ಎಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಕಿಟಲ್‌ರು ಧಾರವಾಡದಲ್ಲಿ ಕಾರ್ಯನಿರ್ವಹಿಸಿ ಶಿಕ್ಷಣಕ್ಕಾಗಿ, ಧರ್ಮಪ್ರಚಾರಕ್ಕಾಗಿ, ಕನ್ನಡ ಸಾಹಿತ್ಯಕ್ಕೆ ಕೊಡುಗೆಯನ್ನು ನೀಡಿದ್ದಾರೆ.

ಝೀಗ್ಲರರು - A protical key to kannada languge(೧೮೧೮). ಇಂಗ್ಲೀಷ್ -ಕನ್ನಡ ಕೋಶ ಎಂಬ ಕೃತಿಗಳನ್ನು ರಚಿಸಿದರು. ಇದರಿಂದ ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮವನ್ನು ತಂದುಕೊಟ್ಟ ಶ್ರೇಯಸ್ಸು ಧಾರವಾಡದಲ್ಲಿ ಸೇವೆ ಸಲ್ಲಿಸಿದ ಮಿಶನರಿಗೆ ಸಲ್ಲುತ್ತದೆ.

೪.೪. ಕೈಗಾರಿಕೆ ಮತ್ತು ತರಬೇತಿ

ಧಾರವಾಡ ಜಿಲ್ಲೆಗೆ ಕ್ರೈಸ್ತ ಮಿಶನರಿಗಳು ಧರ್ಮಪ್ರಚಾರಕ್ಕೆಂದು ಬಂದರು. ಇಲ್ಲಿನ ಜನರ ಬಡತನದ ಕಷ್ಟಗಳನ್ನು ಅರಿತರು. ಜನರ ಜೀವನೋಪಾಯಕ್ಕಾಗಿ ವೃತ್ತಪರ ಕೇಂದ್ರಗಳನ್ನು ಇಲ್ಲಿನ

[illegible]

ಬಾಸೆಲ್ ಮಿಶನರಿಗಳೇ ಪ್ರಾರಂಭಿಸಿದರು. ಇಲ್ಲಿ ಕಡಿಮೆ ಬಂಡವಾಳ ಮತ್ತು ಕಡಿಮೆ ಅವಧಿಯಲ್ಲಿ ತಯಾರು ಮಾಡುವಂತಹ ತರಬೇತಿಗಳನ್ನು ನೀಡುತ್ತಿದ್ದರು. ಇವುಗಳಲ್ಲಿ ಮಡಿಕೆ ತಯಾರಿಸುವ, ಬುಟ್ಟಿ ಹೆಣೆಯುವ ಮತ್ತು ಹೆಂಚು ತಯಾರಿಸುವ ಇಟ್ಟಿಗೆ ತಯಾರಿಸುವ, ಎಂಬ್ರಾಯಿಡ್ರರಿ, ಫ್ಯಾಷನ್ ಡಿಷನ್, ಕಂಪೂಟರ್ ತರಬೇತಿ, ಕೈಗಾರಿಕೆಯ ಕೆಲವು ವಿಷಯಗಳನ್ನು ಇಲ್ಲಿ ತರಬೇತಿ ನೀಡಿದರು.

ಧಾರವಾಡದಲ್ಲಿ ಇಂತಹ ತರಬೇತಿ ಶಾಲೆಗಳು ಈಗ ಬೆರಳೆಣಿಕೆಯಲ್ಲಿ ಇವೆ. ಇವು ಪ್ರಮುಖವಾಗಿ ಮಹಿಳೆಯರು ಸ್ವಾವಲಂಬಿಯಾಗಿ ಜೀವನ ನಡಸುವಂತ ತರಬೇತಿ ನೀಡುತ್ತವೆ. ಮತ್ತೆ ಕೆಲವು ಸಂಸ್ಥೆಗಳು ಮಹಿಳೆ ಮತ್ತು ಪುರುಷರಿಗೆ ಕೈಗಾರಿಕೆಯ ವಿಷಯಗಳನ್ನು ತಿಳಿಸುತ್ತದೆ. ಬೆರಳಚ್ಚು, ಶೀಘ್ರಲಿಪಿ, ಕಸೂತಿ ಹೀಗೆ ಮುಂತಾದ ವಿಷಯಗಳನ್ನು ಇವು ತರಬೇತಿಯನ್ನು ನೀಡುತ್ತವೆ.

ಕೈಗಾರಿಕೆ ತರಬೇತಿ ಕೇಂದ್ರಗಳು

ಕೇಂದ್ರದ ಹೆಸರು	ತರಬೇತಿ ವಿಷಯಗಳು	ಮುಖ್ಯಸ್ಥರು	ಸ್ಥಳ	ವಿ.ಸಂಖ್ಯೆ
ಐಟಿಸಿ ಮೋಟಾರ	ಮೆಕ್ಯಾನಿಕಲ್ ವೆಹಿಕಲ್ ಎಂಬ್ರಾಯಿಡರಿ	ಪ್ರೊ.ವಿಜಯಕುಮಾರದಂಡಿನ	ಧಾರವಾಡ	೪೮
ಸಿಎಸ್ಐ	ಎಂಪ್ಲಾಯಿಮೆಂಟ್ ಟ್ರೆನಿಂಗ್ ಆ್ಯಂಡ್ ಗೈಡ್	ಸದ್ಯ ನಿಂತುಹೋಗಿದೆ	ಧಾರವಾಡ	

ಬಾಸೆಲ್ ಮಿಶನದವರು ಕರ್ನಾಟಕದ ಪ್ರಮುಖ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಪ್ರಾರಂಭಿಸಿದರು. ಅದರಲ್ಲಿ ಮುಖ್ಯ ನಗರಗಳಾದಂತಹ ಮಂಗಳೂರು, ಉತ್ತರ ಕನ್ನಡ, ಧಾರವಾಡ, ಬಿಜಾಪುರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಪ್ರಾರಂಭಿಸಿದರು. ಇದರಿಂದಾಗಿ ಹೆಚ್ಚು ಕುಟುಂಬಗಳಿಗೆ ಉದ್ಯೋಗ ದೊರೆತಂತಾಯಿತು. ಜೊತೆಗೆ ಹಲವಾರು ಬಡ ಕುಟುಂಬಗಳ ಜೀವನ ನಿರ್ವಹಣೆಗೆ ಆಶ್ರಯವಾಯಿತು.

ಮಿಶನರಿಗಳು ಹೆಣ್ಣು ಮಕ್ಕಳಿಗಾಗಿ ಕಸೂತಿ, ಬುಟ್ಟಿ ಹೆಣೆಯುವುದು ಎಂಬ್ರಾಯಿಡರಿ ಟೇಲರಿಂಗ್, ಇಂತಹ ತರಬೇತಿಗಳನ್ನು ನೀಡುವುದರಿಂದ ಹೆಣ್ಣು ಮಕ್ಕಳಿಗಾಗಿ ಅವರ ಸ್ವಾವಲಂಬಿಯಾಗಿ ಜೀವನ ಸಾಗಿಸಲು ಅನುಕೂಲವಾಗುವ ನಿಟ್ಟಿನಲ್ಲಿ ಮಿಶನರಿಗಳು ತರಬೇತಿ ನೀಡಿದರು. ಮಂಗಳೂರು ಹಂಚು ಇಂದಿಗೂ ಅದು ಪ್ರಸಿದ್ಧವಾದ ಹೆಸರನ್ನು ಉಳಿಸಿಕೊಂಡು ಬಂದಿದೆ. ಎನ್‌ಟಿಟಿಎಫ್ ಇದು ಕೈಗಾರಿಕಾ ತಾಂತ್ರಿಕ ತರಬೇತಿ ಸಂಸ್ಥೆಯಾಗಿದೆ. ಇದರಲ್ಲಿ ಡಿಪ್ಲೋಮಾದಲ್ಲಿ ತಾಂತ್ರಿಕ ಕೋರ್ಸುಗಳು ನಡೆಯುತ್ತಿವೆ. ಇದು ಹುಡುಗ-ಹುಡುಗಿಯರು ತರಬೇತಿಯನ್ನು ಪಡೆಯುವ ಒಂದು ಸಂಸ್ಥೆಯಾಗಿದೆ. ಇಲ್ಲಿ ವ್ಯಾಸಂಗ ಅಥವಾ ತರಬೇತಿಯನ್ನು ಪಡೆಯುವ ಹುಡುಗ-ಹುಡುಗಿಯರಿಗೆ ಪ್ರತ್ಯೇಕ ವಸತಿ ನಿಲಯಗಳು ಇವೆ.

[illegible]

[illegible]

[illegible]

[illegible]

೪.೫. ವೈದ್ಯಕೀಯ ಕ್ಷೇತ್ರ

ರೋಗಿಗಳ ಸೇವೆ ಮಾಡುವುದರ ಮೂಲಕ ದೇವರ ಪ್ರೀತಿಗೆ ಪಾತ್ರರಾಗಬೇಕೆಂಬುದು ಏಸು ಬೋಧಿಸಿದ ಮುಖ್ಯತತ್ವಗಳಲ್ಲಿ ಒಂದಾಗಿದೆ. ಹೀಗಾಗಿ ಕ್ರೈಸ್ತ ಮಿಶನರಿಗಳು ವೈದ್ಯಕೀಯ ರಂಗವನ್ನು ತಮ್ಮ ಸೇವಾಕ್ಷೇತ್ರವನ್ನಾಗಿ ಮಾಡಿಕೊಂಡರು. ವೈದ್ಯಕೀಯ ರಂಗದಲ್ಲಿ ತೊಡಗಿದ ಮಿಶನರಿಗಳ ಕರ್ನಾಟಕದ ಪ್ರಮುಖ ಸ್ಥಳಗಳಾದ ಮಂಗಳೂರು, ಬೆಂಗಳೂರು, ಮೈಸೂರು, ಕೊಡಗು, ಉತ್ತರ ಕನ್ನಡ, ಧಾರವಾಡ, ಬೆಳಗಾವಿ, ಬಳ್ಳಾರಿ ಇನ್ನು ಹಲವು ಪ್ರದೇಶಗಳನ್ನು ಆಸ್ಪತ್ರೆಗಳನ್ನು ಸ್ಥಾಪಿಸಿದರು.

೧೮೭೮ರಲ್ಲಿ ಮಂಗಳೂರಿಗೆ ಬಂದ ಜೆಸುಯಿಟ್ ಪಾದ್ರಿ ಪಾದರ ಮುಲ್ಲರ, ಹೊಮಿಯೋಪಥಿಕ್ ಆಸ್ಪತ್ರೆ ಸ್ಥಾಪಿಸಿದರು. ಅದು ಇಂದು ಬಹಳ ದೊಡ್ಡ ಹಾಗೂ ಪ್ರಸಿದ್ಧವಾದ ಆಸ್ಪತ್ರೆಯಾಗಿ ಹೆಸರುವಾಸಿಯಾಗಿದೆ. ಪಾದರ ಮುಲ್ಲರ ಸ್ಪೆನಿಪಿಕ್ಸ ಎಂಬ ಹೊಮಿಯೋಪಥಿಕ್ ಔಷಧಿಗಳು ಇಲ್ಲಿ ತಯಾರಾಗಿ ಭಾರತದ ವಿವಿಧ ಭಾಗಗಳಿಗೆ ಮಾತ್ರವಲ್ಲದೆ ಬೇರೆ ದೇಶಗಳಾದ ಶ್ರೀಲಂಕಾ, ಬರ್ಮಾ ಮತ್ತು ಇತರ ದೇಶಗಳಿಗೆ ರಫ್ತಾಗುತ್ತವೆ. ಈ ಆಸ್ಪತ್ರೆಯು ಮಾನಸಿಕ ಚಿಕಿತ್ಸಾಲಯ ವಿಭಾಗವನ್ನು ಹೊಂದಿದೆ. ಈ ಸಂಸ್ಥೆಯವರು ಆಸ್ಪತ್ರೆಗೆ ಬೇಕಾಗುವ ದಾದಿಯರ ತರಬೇತಿ ಶಾಲೆ, ರೋಗ ವೈಜ್ಞಾನಿಕ ಪ್ರಯೋಗಶಾಲ, ರಕ್ತದ ಬ್ಯಾಂಕು ಮೊದಲಾದ ವಿಭಾಗವನ್ನು ಹೊಂದಿದೆ.

ಪ್ರೊಟೆಸ್ಟೆಂಟ್ ಕ್ರಿಶ್ಚಿಯನ್ನರು ನಡೆಸುವ ಉಡುಪಿಯ ಕ್ರಿಶ್ಚಿಯನ್ ಆಸ್ಪತ್ರೆ ದಕ್ಷಿಣ ಕನ್ನಡ ಜಿಲ್ಲೆಯ ಪ್ರಮುಖ ಆಸ್ಪತ್ರೆಗಳಲ್ಲಿ ಒಂದಾಗಿದೆ. ಬೆಂಗಳೂರಿನಲ್ಲಿರುವ ಸೈಂಟ್ಸ್ ಥಾಮಸ್ ಆಸ್ಪತ್ರೆಯು ಕೂಡ ಅತ್ಯಾಧುನಿಕವಾದ ಎಲ್ಲ ಶಸ್ತ್ರ ಚಿಕಿತ್ಸೆಗಳಿಂದ ಕೂಡಿದ ಒಂದು ಆಸ್ಪತ್ರೆಯಾಗಿದೆ. ಮೈಸೂರಿನ ಹೋಲ್ಸ್ ವರ್ಥ ಮೆಮೋರಿಯಲ್ ಆಸ್ಪತ್ರೆಯನ್ನು ವೆಸ್ಲಿಯನ್ ಮಿಶನರಿಗಳು ನಡೆಸಿಕೊಂಡು ಬರುತ್ತಿದ್ದಾರೆ. ಈ ಎಲ್ಲಾ ಆಸ್ಪತ್ರೆಗಳಲ್ಲಿ ಬಡ ರೋಗಿಗಳಿಗೆ ಉಚಿತ ಇಲ್ಲವೇ ಕಡಿಮೆ ದರದಲ್ಲಿ ಸೇವಾ ಸೌಲಭ್ಯ ದೊರೆಯುತ್ತದೆ. ಮಿಶನರಿಗಳ ಸೇವಾ ಮನೋಭಾವನೆ ಆಸ್ಪತ್ರೆಗಳಲ್ಲಿ ರಿಯಾಯಿತಿ ದರದಲ್ಲಿ ಚಿಕಿತ್ಸೆ ನೀಡುವುದು ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಸೌಲಭ್ಯ ಪಡೆಯಲು ಅನುಕೂಲವಾಯಿತು.

ಮಿಶನರಿಗಳು ತಾವು ಸ್ಥಾಪಿಸಿದ ಆಸ್ಪತ್ರೆಯಲ್ಲಿ ನುರಿತ ವೈದ್ಯರನ್ನು ನೇಮಕ ಮಾಡಿದರು. ವಿವಿಧ ಖಾಯಿಲೆಗಳಿಗೆ ಸಂಬಂಧಿಸಿದಂತೆ ಚಿಕಿತ್ಸೆ ನೀಡಲು ವೈದ್ಯರನ್ನು ಆಸ್ಪತ್ರೆಗೆ ನೇಮಕ ಮಾಡಿದರು. ಆಸ್ಪತ್ರೆಯ ಹತ್ತಿರದಲ್ಲಿಯೇ ಔಷಧಾಲಯಗಳನ್ನು ತೆರೆಯುವಂತೆ ಮಾಡಿದರು.

ಬೆಂಗಳೂರಿನ ಜಾನ್ ಮೆಡಿಕಲ್ ಕಾಲೇಜು ಆಸ್ಪತ್ರೆಯು ಮಿಶನರಿಗಳು ಸ್ಥಾಪಿಸಿರುವ ಸಾಧನೆಗಳಲ್ಲಿ ಒಂದಾಗಿದೆ. ಜೊತೆಗೆ ಅಲ್ಲಲ್ಲಿ ಅನಾಥಾಲಯ, ವೃದ್ಧಾಶ್ರಮ, ವಿಶ್ರಾಂತಿಧಾಮಗಳನ್ನು ಸ್ಥಾಪಿಸಿ ಅದರ ಮೂಲಕ ಸೇವೆಯನ್ನು ಮಿಶನರಿಗಳು ಮಾಡಿದರು. ಬೆಳಗಾವಿಯ ಹತ್ತಿರ ಹಿಂಡಲಗಾ ಪ್ರದೇಶದಲ್ಲಿ

[illegible]

ಕುಷ್ಠರೋಗಿಗಳ ಅನಾಥಾಲಯವನ್ನು ಸ್ಥಾಪಿಸಿದ್ದಾರೆ. ಇದು ಕುಷ್ಠರೋಗಿಗಳ ಪಾಲಿಗೆ ಆಶ್ರಯವಾಗಿದೆ. ಇದು ಮಿಶನರಿಗಳ ಸೇವಾ ಮನೋಭಾವನೆಯನ್ನು ತಿಳಿಸುತ್ತದೆ.

ಧಾರವಾಡ ನಗರದಲ್ಲಿಯೂ ಕ್ರೈಸ್ತ ಮಿಶನರಿಗಳು 'ಲೂರ್ಥ ಮಾತೆಯ ಆಸ್ಪತ್ರೆ'ಯನ್ನು ಸ್ಥಾಪಿಸಿದ್ದಾರೆ. ಇದು ಇಂದಿಗೂ ಅಸ್ತಿತ್ವದಲ್ಲಿದೆ. ಇಂದು ಜನಸಾಮಾನ್ಯರು ಜರ್ಮನ್ ಆಸ್ಪತ್ರೆಯೆಂದು ಈ ಆಸ್ಪತ್ರೆಗೆ ಸಂಬೋಧಿಸುವರು. ಇದು ಧಾರವಾಡ ನಗರದ ಉಪನಗರವಾದ ಸಾಧನಕೇರಿಯ ಸರ್ಕಾರಿ ಮುದ್ರಣಾಲಯದ ಹತ್ತಿರದಲ್ಲಿದೆ. ಇದು ಪ್ರಸ್ತುತವಾಗಿ ಒಂದು ಪ್ರಸಿದ್ದ ಆಸ್ಪತ್ರೆಯೆಂದು, ಇಲ್ಲಿ ನುರಿತ ತಜ್ಞರನ್ನು ಹೊಂದಿದ ಅಸ್ಪತ್ರೆಯನ್ನು, ಆಸ್ಪತ್ರೆಯ ಕಟ್ಟಡದ ಒಳಗೆ ರೋಗಿಗಳಿಗೆ ಬೇಕಾದ ಔಷಧಾಲಯವನ್ನು ಹೊಂದಿದೆ. ಜೊತೆಗೆ ರಕ್ತದ ಬ್ಯಾಂಕು ಕೂಡ ಇದೆ. ಜೊತೆಗೆ ಆಸ್ಪತ್ರೆಯಲ್ಲಿ ರೋಗಿಗಳಿಗೆ ಯೋಗಕ್ಷೇಮ ವಿಚಾರಿಸಲು ಬೇಕಾಗುವ 'ದಾದಿಗಳು' ಬೇಕಾಗುವುದರಿಂದ 'ಸ್ಕೂಲ್ ಆಫ್ ನರ್ಸಿಗ್' ಎಂಬ ದಾದಿಯರ ತರಬೇತಿ ಶಾಲೆಯನ್ನು ಕೂಡ ನಡೆಸುತ್ತಿದ್ದಾರೆ.

ಲೂರ್ಥಮಾತೆಯ ಆಸ್ಪತ್ರೆಯು ಸುಮಾರು ೪೦ಕ್ಕಿಂತ ಅಧಿಕ ಹಾಸಿಗೆಯುಳ್ಳ ಒಂದು ಆಸ್ಪತ್ರೆಯಾಗಿದೆ. ಇಲ್ಲಿ ಹೆರಿಗೆ ಹಾಗೂ ಇತರ ಸಾಮಾನ್ಯ ಖಾಯಿಲೆಗಳಿಗೆ ಚಿಕಿತ್ಸೆ ನೀಡುವ ಆಸ್ಪತ್ರೆಯಾಗಿದೆ. ಇದು ಒಂದು ಕ್ಯಾಥೋಲಿಕ್ ಆಸ್ಪತ್ರೆಯಾಗಿದೆ. 'ಲೂರ್ಥಮಾತೆಯ ಸ್ಕೂಲ್ ಆಫ್ ನರ್ಸಿಂಗ್'ದಲ್ಲಿ ಪ್ರಸ್ತುತ ಸುಮಾರು ೭೩ ವಿದ್ಯಾರ್ಥಿನಿಯರು ತರಬೇತಿಯನ್ನು ಪಡೆಯುತ್ತಿದ್ದಾರೆ. ೧೫ ಜನ ಸಿಬ್ಬಂದಿಗಳನ್ನು ಹೊಂದಿದ ಕಟ್ಟಡ ಇದಾಗಿದೆ. ಈ ಆಸ್ಪತ್ರೆಯು ಬಡವರ ಪಾಲಿಗೆ ಹೆಚ್ಚು ಅನುಕೂಲವಾಗಿದೆ. ರಿಯಾಯಿತಿ ದರದಲ್ಲಿ ಚಿಕಿತ್ಸೆಯನ್ನು ನೀಡುವ ಆಸ್ಪತ್ರೆಯಾಗಿದೆ.

೪.೬. ಮತಾಂತರ

೧೯ನೇ ಶತಮಾನದ ಮಧ್ಯಭಾಗದಲ್ಲಿ ಧಾರವಾಡಕ್ಕೆ ಬರತೊಡಗಿದ್ದ ಐರೋಪ್ಯನ್ನರ ಸಂಖ್ಯೆ ಹೆಚ್ಚತೊಡಗಿತು. "ಜಿಲ್ಲಾಧಿಕಾರಿಗಳು, ನ್ಯಾಯಾಧೀಶರು, ಸೇನಾ ಸಿಬ್ಬಂದಿಗಳು, ವೈದ್ಯರು ಸಿವಿಲ್ ಇಂಜನೀಯರ್‌ಗಳು, ಗುತ್ತಿಗೆದಾರರು ಹೀಗೆ ವಿವಿಧ ಹುದ್ದೆ ವೃತ್ತಿಗಳ ಜನರು ಧಾರವಾಡದಲ್ಲಿದ್ದರು."[೧೭]

ಇವ್ಯಾಲಾಂಜಿಕಲ್ ಮಿಶನರಿ ಸೊಸೈಟಿ ಆಫ್ ಬಾಸೆಲ್ ಮಿಷನ್ ಇದರ ಸ್ಥಾಪನೆ ೧೮೧೫ ಸೆಪ್ಟೆಂಬರ್ ೧೫ರಂದು ಆಯಿತು. ಈ ಸಂಸ್ಥೆಯಲ್ಲಿ ಉತ್ತಮ ತರಬೇತಿ ಪಡೆದ ಮಿಶನರಿಗಳನ್ನು ತರುಣ ಯುವಕರನ್ನು ಧರ್ಮಪ್ರಚಾರದ ಕಾರ್ಯಗಳಿಗೆ ಕಳಿಸುತ್ತಿದ್ದರು. ಅದೇ ಕಾರಣದಿಂದ ಭಾರತಕ್ಕೆ ಆಗಮಿಸಿದ ಬಾಸೆಲ್ ಮಿಶನ್‌ದವರು ನಂತರ ಕರ್ನಾಟಕದ ಮಂಗಳೂರಿಗೆ ಬಂದರು. ಮಂಗಳೂರು ನಂತರ ಕರ್ನಾಟಕದ ಇತರ ಪ್ರಮುಖ ಪ್ರದೇಶಗಳಾದ ಬೆಂಗಳೂರು, ಉತ್ತರ ಕನ್ನಡ, ಬಳ್ಳಾರಿ, ಬೆಳಗಾವಿ,

ಧಾರವಾಡ ಹುಬ್ಬಳ್ಳಿ, ಗದಗ, ಬೆಟಗೇರಿ ಹೀಗೆ ಮುಂತಾದ ಪ್ರದೇಶಗಳಿಗೆ ಧರ್ಮಪ್ರಚಾರ ಕಾರ್ಯಕ್ಕೆ ತೊಡಗಿದರು.

ಕ್ಯಾಥೋಲಿಕರು ಕರ್ನಾಟಕವನ್ನು ೧೬ನೇ ಶತಮಾನದಲ್ಲಿ ಪ್ರವೇಶಿಸಿದರು. ಆದರೆ ಮತಾಂತರ ಕಾರ್ಯದಲ್ಲಿ ಹೆಚ್ಚಾಗಿ ತೊಡಗಲಿಲ್ಲ. ಅಂತೆಯೇ ಧರ್ಮ ಪ್ರಚಾರಕಾರ್ಯದಲ್ಲಿ ತೊಡಗಲಿಲ್ಲ. ಆದರೆ ಪ್ರೊಟಸ್ಟೆಂಟರು ಧರ್ಮಪ್ರಚಾರ ಕಾರ್ಯದಲ್ಲಿ ಹೆಚ್ಚಾಗಿ ತೊಡಗಿಸಿಕೊಂಡರು. ಮತಾಂತರ ಆಚರಣೆಗೆ ತಂದರು. ಕ್ರೈಸ್ತರೇತರರನ್ನು ಕ್ರೈಸ್ತಧರ್ಮಕ್ಕೆ ಮತಾಂತರಗೊಳಿಸುತ್ತಿದ್ದರು. ಆದರೆ ಮತಾಂತರವು ಯಾವುದೇ ಬಲವಂತದಿಂದ ನಡೆಯುತ್ತಿರಲಿಲ್ಲ. ಸುವಾರ್ತೆಯನ್ನು ಬೋಧಿಸುವುದು ಹಾಗೂ ಅದರಲ್ಲಿರುವ ಒಳ್ಳೆಯ ಅಂಶಗಳನ್ನು ತಿಳಿಸುವುದು. ಅದರ ಮೂಲಕ ಮನವೊಲಿಸಿ ಮತಾಂತರಗೊಳಿಸುತ್ತಿದ್ದರು.

'ಕ್ರೈಸ್ತರ ಮುಖ್ಯ ಉದ್ದೇಶ ದೇಶಿಯರನ್ನು ಮತಾಂತರಗೊಳಿಸುವುದು. ಅದಕ್ಕಾಗಿ ಅವರು ಭಾರತೀಯ ಭಾಷೆಗಳನ್ನು ಕಲಿತರು, ಭಾರತೀಯ ಧರ್ಮಗ್ರಂಥಗಳನ್ನು ಪಠಿಸಿದರು ಮತ್ತು ಕ್ರೈಸ್ತಧರ್ಮ ಮತ್ತು ಹಿಂದುಧರ್ಮಗಳನ್ನು ತುಲನಾತ್ಮಕವಾಗಿ ಪಠಿಸಿದರು."[೧೮] ಆದರೆ ಸಾಹಿತ್ಯಕ್ಕಾಗಿ ಇವರು ತೋರಿದ ಪರಿಶ್ರಮ ಸಂತೋಷದಾಯಕ ವಿಚಾರವಾಗಿದೆ.

ಈ ಮೇಲಿನ ಅಂಶಗಳಿಂದ ತಿಳಿಯುವುದೇನೆಂದರೆ ಮತಾಂತರಗೊಳಿಸಲು ಅವರು ಭಾರತೀಯರ ಒಳ್ಳೆಯ ಗ್ರಂಥದಿಂದ ಅಂಶಗಳನ್ನು ಅಧ್ಯಯನ ಮಾಡಿ ಭಾರತೀಯರನ್ನು ಮನವೊಲಿಸುವ ಮೂಲಕ ಮತಾಂತರ ಮಾಡಿದರು. ಬ್ರಿಟಿಷ್ ಸರ್ಕಾರದ ಸಹಾಯದಿಂದ ಜನರ ಮನಪರಿವರ್ತನೆ ಮಾಡುವುದರ ಮೂಲಕ ಮತಾಂತರಗೊಳಿಸಿದರು. ಧಾರವಾಡದಲ್ಲಿ ಬಹುತೇಕ ಜಾತಿಗಳು ಮತಾಂತರಗೊಂಡಿರುವುದನ್ನು ಕಾಣುತ್ತೇವೆ. ಬ್ರಾಹ್ಮಣರು, ಲಿಂಗಾಯಿತರು, ಸಮಾಜದ ಕೆಳವರ್ಗದವರು ಮತಾಂತರಗೊಂಡರು.

ಕ್ರೈಸ್ತರ ಮೂಲ ಉದ್ದೇಶ ಮತಾಂತರಗಳಿಸುವುದಾಗಿತ್ತು. ಆದರೆ ಮತಾಂತರಕ್ಕೆ ಮಾತ್ರ ಅಂಟಿಕೊಳ್ಳದೇ ಅವರು ಸಮಾಜದಲ್ಲಿ ದೀನದಲಿತರ ಬಾಳಿಗೆ ಆಶಾಕಿರಣರಾದರು. ಮಿಶನರಿಗಳು ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆ ಶ್ಲಾಘನೀಯವಾಗಿದೆ. ಧಾರವಾಡದ ಎಷ್ಟೋ ಕುಟುಂಬಗಳು ಮತಾಂತರ ಹೊಂದಿ ಸಂತೋಷದಾಯಕ ಜೀವನ ಸಾಗಿಸುತ್ತಿದ್ದಾರೆ. ಕರ್ನಾಟಕದ ನಾನಾ ಪ್ರದೇಶದ ಕುಟುಂಬಗಳು ಸಹ ಮತಾಂತರ ಹೊಂದಿ ಇಂದಿಗೂ ಸಂತೋಷದಾಯಕರಾಗಿದ್ದಾರೆ.

ಅಡಿಟಿಪ್ಪಣಿಗಳು

೧. ಮಾಥ್ಯೂ ಕೆ.ಎಂ., ರೆ.ಆರ್.ಎಫ್.ಕಿಟಲ್ ಒಂದು ಸಮಗ್ರಹ ಅಧ್ಯಯನ, ೧೯೯೪, ಧಾರವಾಡ, ಪು.೯

೨. ಕಲಬುರ್ಗಿ ಎಂ.ಎಂ., ಮಹಾಮಾರ್ಗ, ೧೯೯೮, ಪು.೩೧೧

೩. ಶಂಕರ ನಾರಾಯಣ ಎನ್.ಪಿ., ಸ್ವಾತಂತ್ರ ಗಂಗೆಯ ಸಾವಿರ ತೊರೆಗಳು, ೨೦೦೮, ಪು.೧೦೭

೪. ತಾರಚಾಂದ ಮತ್ತು ಜಿ.ಎಸ್.ದೀಕ್ಷಿತ್, ಭಾರತದಲ್ಲಿ ಸ್ವಾತಂತ್ರ್ಯ ಚಳವಳಿ, ಸಂ.೨. ಪು.೨೫೪

೫. ಜೋಗಳ ಜೆ.ಎಂ., ಕರ್ನಾಟಕದಲ್ಲಿ ಬಾಸೆಲ್ ಮಿಶನ್, ೧೯೮೬-೮೭, ಪು.೩೩೧

೬. ಹಾವನೂರು ಶ್ರೀನಿವಾಸ, ಹೊಸಗನ್ನಡದ ಅರುಣೋದಯ, ಬೆಂಗಳೂರು, ೨೦೦೦, ಪು.೩೧

೭. ಅದೇ, ಪು.೩೨

೮. ಅದೇ, ಪು.೩೩

೯. ಅದೇ, ಪು.೩೪

೧೦. ಅದೇ, ಪು.೪೬

೧೧. ಅದೇ, ಪು.೪೬

೧೨. ಶೇಷಗಿರಿರಾವ್ ಎಲ್.ಎಸ್., ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪ್ರಕಾಶನ, ಪು.೭

೧೩. ಹಾವನೂರು ಶ್ರೀನಿವಾಸರಾವ್, ಪೂರ್ವೋಕ್ತ ಪು.೮

೧೪. ಮುಗುಳಿ ರಂ.ಶ್ರೀ, ಕನ್ನಡ ಸಾಹಿತ್ಯ ಚರಿತ್ರೆ, ೧೯೫೩, ಪು.೫೦

೧೫. ದಳವಾಹಿ ರಾಜಪ್ಪ, ಕನ್ನಡ ಸಾಹಿತ್ಯ ಕೋಶ, ೬ನೇ ಮುದ್ರಣ ಬೆಂಗಳೂರು, ಪು.೭೪

೧೬. ನಿಂಗಣ್ಣ ಚಿ.ಸಿ., ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ, ೨೦೦೮, ಪು.೫೯

೧೭. ನಾಗರಾಜ ಎಂ.ಜಿ.(ಸಂ), ಇತಿಹಾಸ ದರ್ಶನ, ಸಂಪುಟ ೧೨, ೧೯೯೭, ಪು.೨೦೯

೧೮. ಮುತ್ತಣ್ಣ ಐ.ಮಾ., ೧೯ನೇ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ, ೧೯೬೯, ಪು.೨೫೩

ಅಧ್ಯಾಯ ೫

ಚರ್ಚುಗಳ ವಾಸ್ತುಶಿಲ್ಪ

೫.೧. ಚರ್ಚಿನ ಮುಖ್ಯ ಲಕ್ಷಣಗಳು

೫.೨. ಪ್ರಮುಖ ಚರ್ಚುಗಳ ರಚನೆ ಮತ್ತು ವಿನ್ಯಾಸ

೫

ಚರ್ಚುಗಳ ವಾಸ್ತುಶಿಲ್ಪ

ಜಗತ್ತಿನ ಪ್ರತಿಯೊಂದು ಧರ್ಮವು ತನ್ನದೇ ಆದ ಪ್ರಾರ್ಥನಾ ಸ್ಥಳವನ್ನು ಹೊಂದಿರುತ್ತದೆ. ಹಿಂದೂಗಳಲ್ಲಿ ದೇವಾಲಯಗಳಂತೆ, ಮುಸ್ಲಿಂರಲ್ಲಿ ಮಸೀದಿಯಂತೆ, ಜೈನರಲ್ಲಿ ಚೈತ್ಯಾಲಯದಂತೆ, ಬೌದ್ಧರಲ್ಲಿ ವಿಹಾರದಂತೆ, ಕ್ರೈಸ್ತರಿಗೆ ಚರ್ಚುಗಳಿವೆ. ಕ್ರೈಸ್ತರ ಪ್ರಾರ್ಥನಾ ಮಂದಿರಕ್ಕೆ ಚರ್ಚು ಎಂದು ಹೆಸರು. ಚರ್ಚುಗಳ ಕಟ್ಟಡ ರಚನೆಯಲ್ಲಿ ಹಲವು ಆಯಾಮವನ್ನು ಪಡೆದುಕೊಂಡಿತು. ಆಯಾ ದೇಶ, ಕಾಲ, ಸಂಸ್ಕೃತಿ, ಸಮಾಜಕ್ಕೆ ಒಳಪಡುವ ಚರ್ಚು ಅಲ್ಲಿಯ ಸ್ಥಳೀಯ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ.

ಕ್ರಿ.ಶ.೪ನೆಯ ಶತಮಾನದಲ್ಲಿ ಕಾನ್‌ಸ್ಟೆಂಟಿನ ಆಡಳಿತದ ಕಾಲದಲ್ಲಿ ಚರ್ಚುಗಳ ವಾಸ್ತುಶಿಲ್ಪವು ರೋಮನ್ ಪ್ರಪಂಚದಲ್ಲಿ ಆರಂಭವಾಗಿರಬಹುದು. ಆಗ ಪೋರ್ಚುಗೀಸರು ಗಾಥಿಕ್ ಮತ್ತು ಬರೋಕ ವಾಸ್ತುಶಿಲ್ಪವನ್ನು ಭಾರತಕ್ಕೆ ತಂದರು. ಆದರೆ "ಬ್ರಿಟಿಷರು ಭಾರತವನ್ನು ಆಳುತ್ತಿರುವಾಗ ಯುರೋಪ ಮತ್ತು ಅಮೇರಿಕಾ ವಾಸ್ತು ಮಾದರಿಗಳು ಭಾರತವನ್ನು ಪ್ರವೇಶಿಸಿದವು".[೧] ಕೆಲವು ಕ್ರೈಸ್ತರು ಭಾರತೀಯ ವಾಸ್ತುಶಿಲ್ಪಕ್ಕೆ ಮನ್ನಣೆ ನೀಡಿದರು. ಆದರೆ ಭಾರತದ ಚರ್ಚುಗಳಿಗೆ ಯಾವುದೊಂದು ಪ್ರತ್ಯೇಕ ಶೈಲಿ ಇಲ್ಲ ಎಂದು ಮಹತ್ವ ನೀಡಲಿಲ್ಲ. ಆದ್ದರಿಂದ ಭಾರತದಲ್ಲಿ ರಚನೆಯಾದ ಚರ್ಚುಗಳಿಗೆ ಒಂದೇ ಮಾದರಿಯ ಶೈಲಿ ಎಂಬುದನ್ನು ನಿರ್ಧರಿಸಲು ಸಾಧ್ಯವಿಲ್ಲ. ಆದರೆ ಚರ್ಚುಗಳು ಸ್ಥಳೀಯ ಜನರ ಸಂಸ್ಕೃತಿಯನ್ನು ಪ್ರತಿನಿಧಿಸುವುದರಿಂದ ಆಯಾ ಕಾಲದಂತೆ ರಚನೆಯಲ್ಲಿ ಮಾರ್ಪಾಡುಗೊಳ್ಳುವುದು ಕಂಡುಬರುತ್ತದೆ.

೫.೧. ಚರ್ಚಿನ ಮುಖ್ಯ ಲಕ್ಷಣಗಳು

ಕ್ರೈಸ್ತರ ದೇವಾಲಯದ ಒಳಭಾಗವು ವಾಸ್ತು ರಚನೆಯನ್ನು ಆಧರಿಸಿ ಮುಖ್ಯವಾಗಿ ಎರಡು ಭಾಗಗಳನ್ನಾಗಿ ಮಾಡಬಹುದು. ಅವುಗಳೆಂದರೆ ಒಂದು ಸಭಾಂಗಣ ಇನ್ನೊಂದು ಗರ್ಭಾಂಗಣ. ಸಭಾಂಗಣ ಎಂದರೆ ಚರ್ಚಿನ ಒಳಗೆ ಪ್ರವೇಶಿಸಿದಂತೆ ಚರ್ಚಿನ ಗಾತ್ರಕ್ಕೆ ಅನುಗುಣವಾಗಿ ಸಭಾಂಗಣವಿರುತ್ತದೆ.

ಇದು ವಿಶಾಲವಾದ ಅಂಗಳವಿರುತ್ತದೆ. ಈ ಭಾಗದಲ್ಲಿ ಪ್ರಾರ್ಥನೆ ಹಾಗೂ ಚರ್ಚೆಯ ವಿಚಾರಗಳಿಗೆ ಭಕ್ತರು ಕುಳಿತುಕೊಳ್ಳಲು ಆಸನದ ವ್ಯವಸ್ಥೆಯಿರುತ್ತದೆ. ಗರ್ಭಾಂಗಣವು ಪ್ರಮುಖ ಸ್ಥಳವಾಗಿರುತ್ತದೆ. ಗರ್ಭಾಂಗಣದಲ್ಲಿ ದೇವತಾ ಆರಾಧನೆ ಮತ್ತು ಪವಿತ್ರ ಬಲಿಪೂಜೆಯ ಧಾರ್ಮಿಕ ವಿಧಿಗಳು ನಡೆಯುತ್ತವೆ. ಬಲಿ ಪೂಜೆಯ ಆಕರ್ಷಣೆಗೆಂದು ಪವಿತ್ರ ಬಲಿಪೀಠ(ಅಲ್ಟರ ಇರುತ್ತದೆ. ಕ್ರೈಸ್ತ ಧರ್ಮದಲ್ಲಿ ಎರಡು ಪಂಥಗಳಿವೆ. ೧. ರೋಮನ್ ಕ್ಯಾಥೋಲಿಕ್ ಮತ್ತು ೨. ಪ್ರೊಟಸ್ಟೆಂಟ್. ಈ ಪಂಥಗಳಿಗೆ ಅನುಸಾರವಾಗಿ ಚರ್ಚುಗಳ ರಚನೆಯು ಒಳ ವಿನ್ಯಾಸದಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಚರ್ಚಿನಲ್ಲಿ ಪೀಠದ ಹಿಂಬದಿಯ ಗೋಡೆಗೆ ಶಿಲುಬೆಯನ್ನು ಅಳವಡಿಸಿರುತ್ತಾರೆ.

ಶಿಲುಬೆಯು ಕ್ರೈಸ್ತರ ಪವಿತ್ರ ಲಾಂಛನವಾಗಿದೆ. ಶಿಲುಬೆಯನ್ನು ಕಡ್ಡಾಯವಾಗಿ ಚರ್ಚಿನಲ್ಲಿ ಇಟ್ಟಿರುವುದು ಕಂಡುಬರುತ್ತದೆ. "ಶಿಲುಬೆಯು ಕ್ರಿಸ್ತನ ಯಾತನೆ, ಹಿಂಸೆ ಮತ್ತು ಮರಣಗಳನ್ನು ನೆನಪಿಗೆ ತರುತ್ತದೆ ಎಂದು ನಂಬಿಕೆಯಿದೆ."[೨] ಗರ್ಭಾಂಗಣವು ಚರ್ಚ್‌ನಲ್ಲಿ ಪೂಜಾ ಕೇಂದ್ರ ಸ್ಥಳವಾಗಿದೆ. ಗರ್ಭಾಂಗಣವು ಸಾಮಾನ್ಯವಾಗಿ ಹಿಂಬದಿಯ ಗೋಡೆಯಿಂದ ಹೊರಚಾಚಿ ಅರ್ಧಚಂದ್ರಾಕಾರದಲ್ಲಿ ಅಥವಾ ಬಹುಕೋನಾಕಾರದಲ್ಲಿ ಇರುವುದು. ಕೆಲವೊಂದು ಚರ್ಚುಗಳಲ್ಲಿ ಶಿಖರದ ಮೇಲೆ ಕಳಸಕ್ಕೆ ಬದಲಾಗಿ ಶಿಲುಬೆ ಇರುತ್ತದೆ.

ಸಭಾಂಗಣವು ಸಾಮಾನ್ಯವಾಗಿ ಸಾಲುಕಂಬಗಳಿಂದ ಕೂಡಿದ ಪ್ರದೀರ್ಘ ಸಭಾಭವನದಂತಿರುತ್ತದೆ. ಸಭಾಂಗಣದ ಮೇಲೆ ಎತ್ತರದ ಚಾವಣಿ ಇರುತ್ತದೆ. ಸಭಾಭವಣದಲ್ಲಿ ಭಕ್ತರು ಪ್ರಾರ್ಥಿಸಲು ಅನುಕೂಲವಾಗುವಂತೆ ಪೀಠೋಪಕರಣಗಳು, ಮೊಳಕಾಲು ಪೀಠಗಳು ಇರುತ್ತವೆ. ಇಕ್ಕೆಲಗಳ ಗೋಡೆಗಳ ಮೇಲೆ ಯೇಸುಕ್ರಿಸ್ತನ ಮತ್ತು ಸಂತರ ಚಿತ್ರಗಳು ಇರುತ್ತವೆ. ಕ್ಯಾಥೋಲಿಕರ ಚರ್ಚುಗಳಲ್ಲಿ ಪ್ರತಿಮೆಗಳು ಇರುತ್ತವೆ. ಗೋಡೆಗಳ ಮೇಲೆ ಬಣ್ಣದ ಚಿತ್ತಾರವಿರುವ ಗಾಜನ್ನು ಅಳವಡಿಸಿರುತ್ತಾರೆ. ಗಂಟೆಯ ಗೋಪುರವು ಚರ್ಚಿಗೆ ಸೇರಿಕೊಂಡಿರುತ್ತದೆ. ಚರ್ಚುಗಳು ಕೇವಲ ಧಾರ್ಮಿಕ ಕೇಂದ್ರಗಳಾಗಿರದೆ ಸಾಂಸ್ಕೃತಿಕ ಹಾಗೂ ಸಾಮಾಜಿಕ ಕೇಂದ್ರಗಳಾಗಿಯೂ ಕಾರ್ಯನಿರ್ವಹಿಸುತ್ತವೆ.

ವಸಾಹತು ಕಾಲದ ವಾಸ್ತುಶಿಲ್ಪ

ಹತ್ತೊಂಬತ್ತನೆಯ ಶತಮಾನದಲ್ಲಿ ವಾಸ್ತುಶಿಲ್ಪ ಕ್ಷೇತ್ರಕ್ಕೆ ಮಹತ್ವಪೂರ್ಣವಾದ ಬದಲಾವಣೆಯನ್ನು ಕಂಡಿತು. ಮೊಹಕವಾದ ಈ ವಾಸ್ತುಶಿಲ್ಪದ ವಿಕಾಸಕ್ಕೆ ಪೋಷಕವಾಗಿ ಪರಿಣಮಿಸಿದ ಎರಡು ಮುಖ್ಯವಾದ ಅಂಶಗಳೆಂದರೆ ಆಗ ಕರ್ನಾಟಕದಲ್ಲಿ ಕಂಡುಬರುವ ಶಾಂತಿ ಮತ್ತು ಸಮಾಧಾನದ ೧೭ನೇ ಶತಮಾನದ ಕೊನೆಯಲ್ಲಿ ಅಂದರೆ ಟಿಪ್ಪುಸುಲ್ತಾನ ನಾಲ್ಕನೆಯ ಆಂಗ್ಲೋ ಮೈಸೂರು ಯುದ್ಧದಲ್ಲಿ ಸೋಲನ್ನು ಅನುಭವಿಸಿ ಮರಣ ಹೊಂದಿದರು. ಇದರಿಂದಾಗಿ ಮೈಸೂರು ಒಡೆಯರು ಮರಳಿ ಅಧಿಕಾರವನ್ನು

[illegible]

[illegible]

[illegible]

[illegible]

ವಹಿಸಿಕೊಂಡರು. ಆಗ ವಸಾಹತುಶಾಹಿ ಮತ್ತು ಪಾಶ್ಚಾತ್ಯ ಕಲಾ ಶೈಲಿಗಳು ಅಂದಿನ ಕರ್ನಾಟಕದ ವಾಸ್ತುಶಿಲ್ಪದ ಮೇಲಿನ ಪ್ರತ್ಯಕ್ಷವಾಗಿ ಪ್ರಭಾವವನ್ನು ಬೀರಿದವು.

ಹೊಸ ವಿಚಾರಗಳು ದೂರದ ಪಾಶ್ಚಿಮಾತ್ಯರಿಂದ ಬಂದವು. ಅವು ಐರೋಪ್ಯಯನ್ ಭಾರತೀಯ ವಸಾಹತು ಕೇಂದ್ರಗಳಾದ ಮುಂಬಯಿ ಹಾಗೂ ಮದ್ರಾಸ್‌ಗಳಲ್ಲಿ ಮೊದಲು ಪ್ರಯೋಗಿಸಲ್ಪಟ್ಟವು. ನೆರೆಯ ಪ್ರದೇಶಗಳಂತೆ ಕರ್ನಾಟಕದ ವಾಸ್ತುಶಿಲ್ಪದ ಮೇಲೆಯೂ ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಭಾವ ಬೀರಿತು. ವಾಸ್ತುಶಿಲ್ಪ ಕ್ಷೇತ್ರದಲ್ಲಿ ೧೬ನೆಯ ಶತಮಾನವು ಹಿಂದಿನ ಶತಮಾನಗಳಿಗಿಂತ ಬಹಳಷ್ಟು ವ್ಯತ್ಯಾಸವನ್ನು ಕಂಡಿತು. ವಾಸ್ತವಾಗಿ ಹೇಳಬೇಕೆಂದರೆ ೧೬ನೇ ಶತಮಾನವನ್ನು ವಾಸ್ತುಶಿಲ್ಪ ಕ್ಷೇತ್ರದಲ್ಲಿ ಒಂದು ಸಂಧಿಕಾಲ ಎನ್ನಬಹುದು. ಏಕೆಂದರೆ ಈ ಶತಮಾನದಲ್ಲಿ ದೇವಾಲಯ, ಮಸೀದಿ, ಆಸ್ಪತ್ರೆ ಹಾಗೂ ಚರ್ಚಿನ ಕಟ್ಟಗಳು ರಚನೆಯಾದವು. ೧೯ನೇ ಶತಮಾನದಲ್ಲಿ ಆರಂಭವಾದ ಲೋಕೋಪಯೋಗಿ ಇಲಾಖೆಯಲ್ಲಿ ಬಹುತೇಕವಾಗಿ ಇಂಗ್ಲೀಷ್ ಎಂಜನಿಯರರೇ ನೇಮಕವಾದರು. ಈ "ಐರೋಪ್ಯನ ಎಂಜನಿಯರರು ಅಥವಾ ವಾಸ್ತುಶಿಲ್ಪಿಗಳು ತಮ್ಮೊಂದಿಗೆ ಆಯೋನಿಕ್, ಡೋರಿಕ್, ಕೋರಿನ್ಥಿಯನ್ ಮತ್ತು ಮಿಶ್ರ ಶೈಲಿಗಳನ್ನು ತಂದರು".[೩] ಅಲ್ಲದೇ ಸಾರ್ವಜನಿಕ ಕಟ್ಟಡಗಳಲ್ಲಿ ಫ್ರೆಂಚ್ ಮತ್ತು ರಿನೈಸಾನ್ಸ್ ಶೈಲಿಯನ್ನು ಹೆಚ್ಚಾಗಿ ಅನುಸರಿಸಿದರು. ಈ ಶೈಲಿಯ ಕಟ್ಟಡಗಳು ಹೆಚ್ಚಾಗಿ ಬೆಂಗಳೂರಿ ನಗರದಲ್ಲಿ ಕಂಡುಬರುತ್ತವೆ.

ಚರ್ಚಿನ ವಾಸ್ತುಶಿಲ್ಪ

ಈ ಕಾಲದ ವಾಸ್ತುಶಿಲ್ಪದ ಬೆಳವಣಿಗೆಯನ್ನು ಅರಿಯಬೇಕಾದರೆ ವಾಸ್ತು ರಚನೆಯನ್ನು ಕುರಿತು ಅಧ್ಯಯನ ಮಾಡುವುದು ಅತ್ಯವಶ್ಯಕವಾಗುತ್ತದೆ. ೧೯ನೇ ಶತಮಾನದಲ್ಲಿ ಕಟ್ಟಲ್ಪಟ್ಟ ಈ ಚರ್ಚುಗಳು ಸಮಕಾಲೀನ ವಾಸ್ತುಶೈಲಿಯ ಮಾದರಿಗಳಾಗಿವೆ. ಬೆಂಗಳೂರು ನಗರದಲ್ಲಿ ಇಂತಹ ವಿವಿಧ ಶೈಲಿಯ ನೂರಾರು ಚರ್ಚುಗಳು ಇಂದಿಗೂ ನೋಡಲು ಲಭ್ಯವಿದೆ.

ಕರ್ನಾಟಕದಲ್ಲಿ ವಾಸ್ತುಶಿಲ್ಪ ಕಲೆಯು ಮೂಲತಃ ಧಾರ್ಮಿಕ ತಳಹದಿಯ ಮೇಲೆ ಬೆಳೆದು ಬಂದಿದೆ. "ಐರೋಪ್ಯರು ಈ ನಾಡಿನಲ್ಲಿ ತಮ್ಮ ಧರ್ಮ ಪ್ರಸಾರ ಮಾಡುವ ಕಾಲಕ್ಕೆ ಹಲವು ಧಾರ್ಮಿಕ ಕಟ್ಟಡಗಳನ್ನು ಕಟ್ಟಿದರು".[೪] ಇವು ಸಮಕಾಲೀನ ಧರ್ಮ ಸಂಸ್ಕೃತಿಗಳಿಗೆ ಅನುಗುಣವಾಗಿದ್ದವು. ಮೊದಲು ಕ್ರೈಸ್ತ ಮಿಶನರಿಗಳು ಗ್ರೀಕ್‌ರೋಮನ್, ಬೆಸಲಿಕನ್ ರೋಮನ್ ಶೈಲಿಗಳಲ್ಲಿ ಚರ್ಚುಗಳನ್ನು ನಿರ್ಮಿಸಲಾಯಿತು. ನಂತರದಲ್ಲಿ ಕಾಲಕ್ರಮೇಣ ಗಾಥಿಕ್ ಶೈಲಿಯ ಕಟ್ಟಡಗಳು ಹೆಚ್ಚಾಗಿ ನಿರ್ಮಾಣ ಆಗ ತೊಡಗಿದವು.

ಐರೋಪ್ಯ ಶೈಲಿಯ ಚರ್ಚು ವಾಸ್ತುಶಿಲ್ಪದಲ್ಲಿ ವಿಶಾಲವಾದ ಒಳಸಭಾಂಗಣ, ಮಧ್ಯಾಂಗಣ ಹಾಗೂ ಇಕ್ಕೆಲದ ಗೋಡೆಗಳನ್ನು ಹೊಂದಿರುತ್ತದೆ. ಸಭಾಂಗಣದ ಒಳಗೆ ಹೋದರೆ ಮಧ್ಯದ ಗೋಳ ಹಾಗೂ ಅದರ ಇಕ್ಕೆಲ ಗೋಡೆಗಳ ಬಾಹುಗಳು ಕಂಡುಬರುತ್ತವೆ. ಇವುಗಳಲ್ಲಿ ಮಧ್ಯಂಕರಣದ ಹಿಂಬದಿಗೆ ಚಾನ್ಸೆಲ್ ಎಂಬ ಪೂರ್ವ ಭಾಗವು ಅದರ ಹಿಂಬದಿಗೆ 'ಆಯಪ್ಸ' ಎಂಬ ಭಾಗವು ಇರುತ್ತದೆ. ಈ ರೀತಿಯಾಗಿ ಭಾಗಗಳನ್ನು ಒಳಗೊಂಡ ಚರ್ಚಿನ ತಲವಿನ್ಯಾಸ ಕ್ರೈಸ್ತರ ಲಾಂಛನ ಶಿಲುಬೆಯಾಕಾರ ದಲ್ಲಿರುತ್ತದೆ. ಇದಕ್ಕೆ ಕ್ರೈಸ್ತಧರ್ಮದಲ್ಲಿ ಸಾಂಸ್ಕೃತಿಕ ಮಹತ್ವವಿದೆ. ಅಲ್ಲದೆ ವಾಸ್ತು ತಂತ್ರದ ದೃಷ್ಟಿಯಿಂದಲೂ ಇದು ವಿಶೇಷವಾಗಿದೆ.

ಶಿಲುಬೆ ಆಕಾರದಲ್ಲಿ ರಚನೆಯಾದ ಚರ್ಚುಗಳಲ್ಲಿರುವ ವೇದಿಕೆ ಒಳಾಂಗಣದಲ್ಲಿರುವ ಭಕ್ತರೆಲ್ಲರಿಗೂ ಗೋಚರಿಸುತ್ತದೆ. ದೇವಕೊಷ್ಠಕಗಳಲ್ಲಿರುವ ಕ್ರೈಸ್ತ ಪ್ರತಿಮೆಗಳನ್ನು ದೂರದಿಂದ ಕಾಣಿಸುವಂತೆ ಅಳವಡಿಸಿರುತ್ತಾರೆ. ಟ್ರಾನ್ಸೆಪ್ಷನ್ ಮಧ್ಯಾಂಕಣದ ಛಾವಣಿಯು ಗೋಳಾಕರವಾಗಿರುತ್ತದೆ. ಅಲ್ಲದೆ ಬಣ್ಣ ಬಣ್ಣದ ಗಾಜುಗಳನ್ನು ಜೋಡಿಸಲಾಗಿರುತ್ತದೆ. ವರ್ಣಚಿತ್ರವುಳ್ಳ ಗಾಜುಗಳು ದೇವ ಕೋಷ್ಠಕದ ಹಾಗೂ ಒಳಾಂಗಣದ ಕಿಟಕಿಗಳಲ್ಲಿ ಕಂಡುಬರುತ್ತವೆ.

ಪೋರ್ಚುಗೀಸ್ ಶೈಲಿಯ ಕೆಲವು ಚರ್ಚುಗಳಲ್ಲಿ ಒಳ ವೇದಿಕೆ ಅಲಂಕೃತವಾಗಿರುತ್ತದೆ. ಅನೇಕ ಚರ್ಚುಗಳು ಹೊರನೋಟಕ್ಕೆ ಸರಳವಾಗಿದ್ದರೂ ಒಳಭಾಗದಲ್ಲಿ ಆಶ್ಚರ್ಯವನ್ನುಂಟು ಮಾಡುವಂತೆ ಅಲಂಕರಣೆಗೊಂಡಿರುವುದು ವಿಶೇಷ.

ಐರೋಪ್ಯ ಶೈಲಿಯ ಚರ್ಚುಗಳಲ್ಲಿ ಪೀಠೋಪಕರಣ, ಪೂಜಾವಸ್ತುಗಳು, ಶಿಲ್ಪಚಿತ್ರಗಳು, ವರ್ಣ ಚಿತ್ರಗಳು ಮುಂತಾದವು ಅಮೋಘವಾಗಿರುವುದನ್ನು ಕಾಣಬಹುದು. ಐರೋಪ್ಯ ಮಾದರಿಯ ಚರ್ಚುಗಳು ಹೊರನೋಟಕ್ಕೆ ಎತ್ತರವಾಗಿ, ಸುಂದರವಾದ ಕಟ್ಟಡ ಹೊಂದಿದ್ದು ನೋಡಲು ಬಹಳ ಆಕರ್ಷಕವಾಗಿರುತ್ತವೆ. ಅಲ್ಲದೆ ಪ್ರವೇಶ ದ್ವಾರದ ಮೇಲುಗಡೆ ಇಕ್ಕೆಲಗಳಲ್ಲಿ ಎತ್ತರದ ಗಾಥಿಕ ಶೈಲಿಯ ಮೊನಚು ಶಿಖರಗಳನ್ನೊಳಗೊಂಡಿರುತ್ತದೆ. ಮೈಸೂರಿನ ಸೆಂಟ್ ಜೊಸೆಫ್ ಕ್ಯಾಥ್‌ಡ್ರಲ್ ಚರ್ಚು ಇದಕ್ಕೆ ಒಂದು ಉದಾಹರಣೆ. ಶಿಖರಗಳಿಗೆ ಸೇರಿಸುವಂತೆ ಎಲ್ಲೆ ಮೊನಚು ಕಮಾನುಗಳನ್ನು ದುಂಡು ಕಮಾನುಗಳನ್ನು ಸ್ವಾರಸ್ಯವಾಗಿ ಹೊಂದಿಸಿರುವುದುಂಟು. ಈ ಬಗೆಯ ಚರ್ಚುಗಳಲ್ಲಿ ಲಾಲಿತ್ಯ ಹೆಚ್ಚು. ಜೊತೆಗೆ ಒಳಾಂಗಣದಲ್ಲಿ ಸಾಕಷ್ಟು ಗಾಳಿ, ಬೆಳಕು ಇರುವಂತೆ ಯೋಜಿಸಲಾಗಿರುತ್ತದೆ.

ಕರ್ನಾಟಕದಲ್ಲಿ ಚರ್ಚುಗಳ ವಾಸ್ತು ರಚನೆಯು ೧೬ನೆ ಶತಮಾನದಲ್ಲಿ ಪ್ರಾರಂಭವಾದವು. ಆದರೆ "ಪ್ರಮುಖ ವಾಸ್ತು ರಚನೆಯ ಚರ್ಚುಗಳು ೧೮ ಹಾಗೂ ೧೯ನೇ ಶತಮಾನದಲ್ಲಿ ರಚನೆಯಾದವು".* ೧೫೨೧ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರವೇಶಿಸಿದ ಫ್ರಾನ್ಸಿಸ್ ಮಿಶನರಿಗಳು ಉಳ್ಳಾಲ, ಪರಂಗಿಪೇಟೆ,

ಮಂಗಳೂರು ಮುಂತಾದ ಕಡೆಗಳಲ್ಲಿ ಕ್ರೈಸ್ತ ದೇವಾಲಯಗಳನ್ನು ನಿರ್ಮಿಸಿದರು. ಕ್ರಿ.ಶ.೧೬೬೦ರ ಬೆಳಗಾವಿಯ ಬಳಿಯ ಖಾನಾಪುರದಲ್ಲಿ ಹಾಗೂ ೧೭೦೯ರಲ್ಲಿ ಕಾರವಾರ ಬಳಿ ಸೊಂಕೇರಿಯಲ್ಲಿ ಕ್ರೈಸ್ತ ಧರ್ಮ ಪ್ರಚಾರ ಸಂಸ್ಥೆಗಳು ಪ್ರಾರಂಭವಾಗಿರುವುದು ತಿಳಿದುಬರುತ್ತದೆ.

ಧಾರವಾಡದಲ್ಲಿ ೧೮೪೦ರ ನಂತರ ಚರ್ಚುಗಳ ಕಟ್ಟಡದ ರಚನೆಗಳು ಪ್ರಾರಂಭವಾದವು. ೧೮೪೫ರಲ್ಲಿ ಹೆಬಿಕ್ ಮೆಮೋರಿಯಲ್ ಚರ್ಚ್ ರಚನೆಯಾಯಿತು. ೧೮೮೫ರಲ್ಲಿ ಯುರೋಪಿನ ಶೈಲಿಯಲ್ಲಿ ಆಲ್‌ಸೆಂಟ್ಸ್ ಚರ್ಚ್ ರಚನೆಯಾಯಿತು. ೧೯೪೨ರಲ್ಲಿ ಹೊಲಿಕ್ರಾಸ ಚರ್ಚ್ ರಚನೆಯಾಯಿತು.

ಹೀಗೆ ಧಾರವಾಡದಲ್ಲಿ ಚರ್ಚುಗಳ ರಚನೆಗಳು ಪ್ರಾರಂಭವಾಗಿ, ಈಗ ಧಾರವಾಡ ಜಿಲ್ಲೆಯಾದ್ಯಂತ ಚರ್ಚುಗಳು ರಚನೆಯಾಗಿರುವುದು ಕಂಡುಬರುತ್ತದೆ. ಕ್ರೈಸ್ತ ಮಿಶನರಿಗಳು ಕೇವಲ ಧರ್ಮ ಪ್ರಚಾರಕಾರ್ಯ ಕೈಗೊಳ್ಳದೇ ಚರ್ಚುಗಳ ರಚನೆ ಕಾರ್ಯ ಕೈಗೊಂಡರು. ಚರ್ಚುಗಳು ಕೇವಲ ಧಾರ್ಮಿಕ ಕಟ್ಟಗಳಾಗಿರದೆ, ಅವು ಸಂಸ್ಕೃತಿಯನ್ನು ಪ್ರತಿನಿಧಿಸುವುವು. ಅಲ್ಲದೇ ಭಕ್ತರ ಹಾಗೂ ದೇವರ ಮಧ್ಯೆ ಭಕ್ತಿಯ ಪಿಸುಮಾತುಗಳನ್ನು ರವಾನಿಸುವ ಕೇಂದ್ರಗಳಾಗಿವೆ.

ಪ್ರಮುಖ ಚರ್ಚುಗಳ ರಚನೆ ಮತ್ತು ವಿನ್ಯಾಸ

ಹೆಬಿಕ್ ಮೊಮೊರಿಯಲ್ ಚರ್ಚು

ಸ್ಥಳ : ಧಾರವಾಡ **ತಾಲೂಕು : ಧಾರವಾಡ**

ಪಂಥ : ಪ್ರೊಟೆಸ್ಟೆಂಟ್ **ಕಾಲಮಾನ : ೧೮೪೫**

ಶೈಲಿ : ಯೂರೋಪಿಯನ್ ಶೈಲಿ **ಸ್ಥಿತಿ : ಉತ್ತಮ**

ಧಾರವಾಡ ನಗರದಲ್ಲಿ ಹೆಬಿಕ್ ಮೊಮೋರಿಯಲ್ ಚರ್ಚು ಇದೆ. ಈ ಚರ್ಚಿನ ಕಟ್ಟಡವು ಇತ್ತೀಚಿಗೆ ೧೭೫ ವರ್ಷಗಳನ್ನು ಪೂರೈಸಿದ ಹಳೆಯ ಚರ್ಚು ಇದಾಗಿದೆ. ಪ್ರಸ್ತುತವಾಗಿ ಈ ಚರ್ಚು ಚಾಲನೆಯಿದ್ದು, ಗಟ್ಟಿ ಮುಟ್ಟಾದ ಕಟ್ಟಡವಾಗಿದೆ. ಧಾರವಾಡಕ್ಕೆ ಬಾಸಿಲ್ ಮಿಶನರಿಯಾಗಿ ಹೆಬಿಕ್‌ರು ಪ್ರಥಮವಾಗಿ ಕಾರ್ಯನಿರ್ವಹಿಸಿದರು. ಕ್ರೈಸ್ತ ಭಕ್ತರ ಸಂಖ್ಯೆಯು ಹೆಚ್ಚಾಗ ತೊಡಗಿದ್ದರಿಂದ ಚರ್ಚು ಕಟ್ಟಡದ ರಚನೆಯು ಅನಿವಾರ್ಯವಾಯಿತು. ಹೀಗೆ ೧೮೪೪ರಲ್ಲಿ ಕಟ್ಟಡದ ರಚನೆಯು ಪ್ರಾರಂಭವಾಯಿತು. ೧೮೪೫ ಡಿಸೆಂಬರ್ ೧೪ರಂದು ಈ ಕಟ್ಟಡದ ರಚನೆಯು ಪೂರ್ಣಗೊಂಡಿತು.

ಹೆಬಿಕ್ ಚರ್ಚು ವಿಶಾಲವಾದ ತಲವಿನ್ಯಾಸದ ಮೇಲೆ ರಚನೆಯಾದ ಕಟ್ಟಡ ಇದಾಗಿದೆ. ಚರ್ಚಿನ ತಳಪಾಯವು ಸುವ್ಯವಸ್ಥಿತವಾಗಿರುವುದರಿಂದ ಕಟ್ಟಡವು ಭದ್ರವಾಗಿ ರಚನೆಯಾಗಿದೆ. ಹೆಬಿಕ್ ಚರ್ಚಿನ ಒಳಗೆ ಪ್ರವೇಶಿಸುತ್ತಿದ್ದಂತೆ ಸಭಾಂಗಣವಿದೆ. ಸಭಾಂಗಣವು ಹೆಚ್ಚು ಸ್ಥಳವವನ್ನು ಹೊಂದಿದ್ದು, ಇಲ್ಲಿ

ಭಕ್ತರು ಪ್ರಾರ್ಥನೆಗೆ ಕುಳಿತುಕೊಳ್ಳಲು ಪೀಠೋಪಕರಣಗಳಿಂದ ರಚನೆಯಾದ ಆಸನಗಳು ಇವೆ. ಭಕ್ತರು ಪ್ರಾರ್ಥನೆಯನ್ನು ಮಾಡಲು ವಿಶಾಲವಾದ ಸಭಾಂಗಣ ಇದೆ. ಮುಂದೆ ಮಧ್ಯಂಕಣದ ಭಾಗವು ಇದೆ. ಇದರ ಪ್ರಮುಖ ಸ್ಥಳವೆಂದರೆ ಗರ್ಭಾಂಗಣ. ಗರ್ಭಾಂಗಣವು ಚರ್ಚಿನ ಪವಿತ್ರ ಸ್ಥಳವಾಗಿರುತ್ತದೆ. ಚರ್ಚಿನಲ್ಲಿ ಧರ್ಮೋಪದೇಶ ಮಾಡುವ ಫಾದರ್ ಬೋಧನೆ ಮಾಡಲು ಪವಿತ್ರವಾದ ಸ್ಥಳ ಗರ್ಭಾಂಕರಣದಲ್ಲಿ ಇದೆ.

ಹೆಬಿಕ್ ಚರ್ಚು ಪ್ರೊಟೆಸ್ಟೆಂಟ್ ಪಂಥದ್ದಾಗಿರುವುದರಿಂದ ಇವರು ಮೂರ್ತಿ ಪೂಜೆಯ ಆರಾಧಕರಾಗಿರುವುದಿಲ್ಲ. ಆದ್ದರಿಂದ ಚರ್ಚಿನಲ್ಲಿ ಮೂರ್ತಿ ಕಂಡುಬರುವುದಿಲ್ಲ. ಗರ್ಭಂಗಣವು ಆಧುನಿಕ ಅಲಂಕರಣಗಳಿಂದ ಶೋಭಿಸುವುದನ್ನು ಕಾಣಬಹುದು.

ಚರ್ಚಿನ ಇಕ್ಕೆಲಗಳ ಗೋಡೆಗಳು ಕಮಾನಿನಾಕಾರದಲ್ಲಿ ಒಂದುಗೋಡುವುದನ್ನು ಕಾಣಬಹುದು. ಇದು "ಯುರೋಪಿಯನ್ ಶೈಲಿಯನ್ನು ಹೊಂದಿದ್ದು, ೨೬ ಅಡಿ ಉದ್ದ ೪೨ ಅಡಿ ಅಗಲ ಮುಂಭಾಗದಲ್ಲಿ ೨೪ ಅಡಿ ಎತ್ತರದ ಗೋಪುರವನ್ನು ಹೊಂದಿರುವುದು ಕಂಡುಬರುತ್ತದೆ."[2] ಚರ್ಚಿನ ಎತ್ತರದ ಮೇಲ್ಚಾವಣಿ ಮೇಲೆ ಗೋಪರವಿದ್ದು, ಕ್ರೈಸ್ತರ ಪವಿತ್ರ ಲಾಂಛನವಾದ ಶಿಲುಬೆಯ ಗೋಪುರದ ಮೇಲೆ ಇರುವುದು ಕಂಡುಬರುತ್ತದೆ. ಹಾಗೂ ಈ ಚರ್ಚು ದೇವಾಲಯದ ಗಂಟೆಯನ್ನು ಹೊಂದಿದೆ.

ನಿತ್ಯ ಸಹಾಯ ಮಾತೆಯ ದೇವಾಲಯ

ಸ್ಥಳ : ಕಲ್ಯಾಣನಗರ, ಧಾರವಾಡ **ತಾಲೂಕು :** ಧಾರವಾಡ

ಪಂಥ : ಪ್ರೊಟಸ್ಟೆಂಟ್ **ಕಾಲಮಾನ :** ಫೆಬ್ರುವರಿ ೧, ೧೯೯೮

ಶೈಲಿ : ಆಧುನಿಕ ಶೈಲಿ **ಸ್ಥಿತಿ :** ಉತ್ತಮ

ಧಾರವಾಡದ ಉಪನಗರವಾದ ಕಲ್ಯಾಣನಗರದಲ್ಲಿ ನಿತ್ಯ ಸಹಾಯ ಮಾತೆಯ ದೇವಾಲಯವಿದೆ. ಇದು ಪ್ರೊಟೆಸ್ಟೆಂಟ್ ಪಂಥದ ದೇವಾಲಯವಾಗಿದೆ. ಚರ್ಚಿನ ಕಟ್ಟಡವು ೧೨ ವರ್ಷಗಳಷ್ಟು ಹಿಂದೆ ರಚನೆಯಾಗಿದೆ. ಇದು ಇತ್ತೀಚಿಗೆ ರಚನೆಯಾಗಿರುವುದರಿಂದ ಆಧುನಿಕ ಶೈಲಿಯನ್ನು ಕಟ್ಟಡದ ರಚನೆಯಲ್ಲಿ ಅಳವಡಿಸಿಕೊಂಡಿದ್ದಾರೆ.

ಚರ್ಚಿನ ಕಟ್ಟಡವು ಚೌಚ್ಚಾಕಾರದ ತಲವಿನ್ಯಾಸದ ಮೇಲೆ ಕಟ್ಟಡ ರಚನೆಯಾಗಿದೆ. ಚರ್ಚು ಪ್ರವೇಶಿಸಲು ಚಿಕ್ಕದಾದ ಮೆಟ್ಟಿಲುಗಳಿವೆ. ಪ್ರವೇಶ ದ್ವಾರವು ಕಟ್ಟಿಗೆಯಿಂದ ರಚನೆಯಾಗಿದ್ದು, ಗಾತ್ರದಲ್ಲಿ ವಿಸ್ತರವಾಗಿದೆ. ಒಳಗೆ ಪ್ರವೇಶಿಸಿದಂತೆ ವಿಶಾಲವಾದ ಸಭಾಂಗಣವಿದೆ. ಸಭಾಂಗಣದ ನೆಲವು ಆಧುನಿಕ ಟೈಲ್ಸ್‌ಗಳನ್ನು ಬಳಸಿರುವುದು ಕಂಡುಬರುತ್ತದೆ. ಸಭಾಂಗಣದಲ್ಲಿ ಪೀಠೋಪಕರಣಗಳಿಂದ ರಚಿತವಾದ ಆಸನಗಳಿವೆ. ಪ್ರಾರ್ಥನೆಗೆ ಭಾಗವಹಿಸಲು ಪ್ರತ್ಯೇಕವಾದ ಆಸನಗಳಿವೆ.

ಸಭಾಂಗಣದ ನಂತರ ಗರ್ಭಾಂಗಣವು ಪವಿತ್ರವಾಗಿದ್ದು, ಹೆಚ್ಚು ಸ್ಥಳವನ್ನು ಹೊಂದಿದೆ. ಇಲ್ಲಿ ಧರ್ಮೋಪದೇಶ ಮಾಡುವ ಚರ್ಚಿನ ಮುಖ್ಯ ಪಾದ್ರಿಯು ಅಲ್ಲಿ ಧರ್ಮೋಪದೇಶ ಮಾಡುವನು. ಇಲ್ಲಿ ಮೂರ್ತಿಗಳು ಕಂಡುಬರುವುದಿಲ್ಲ. ಆದರೆ ಕ್ರೈಸ್ತರ ಪವಿತ್ರ ಲಾಂಛನ ಶಿಲುಬೆ ಇದೆ. ಗಭಾಂಗಣದಲ್ಲಿ ಆಧುನಿಕ ಆಲಂಕರಿಗಳಿಂದ ಶೋಭಿಸುತ್ತದೆ.

ದೇವಾಲಯದ ಹೊರಗೋಡೆಯು ಸಂಪೂರ್ಣವಾಗಿ ಸಿಮೆಂಟು ಹಾಗೂ ಕಂಬದ ರಚನೆಯಾಗಿದೆ. ದೇವಾಲಯದ ಮೇಲೆ ಗೋಪುರವಿದೆ. ಹಾಗೂ ಕ್ರೈಸ್ತರ ಪವಿತ್ರ ಲಾಂಛನ ಶಿಲುಬೆಯು ದೇವಾಲಯದ ತುತ್ತತುದಿಯಲ್ಲಿದೆ. ಭಾನುವಾರ, ಬುಧವಾರ ಕ್ರೈಸ್ತರ ಭಕ್ತಾದಿಗಳು ಇಲ್ಲಿ ಪ್ರಾರ್ಥನೆ ಸಲ್ಲಿಸುವರು. ಯೇಸುವಿನ ಉಪದೇಶಗಳು ಗೋಡೆಯ ಮೇಲೆ ಬರೆದಿರುವುದು ಕಾಣಬಹುದು.

ಹೋಪ ಪ್ರಾರ್ಥನಾ ಮಂದಿರ

ಸ್ಥಳ : ಕಲ್ಯಾಣನಗರ, ಧಾರವಾಡ	ತಾಲೂಕು : ಧಾರವಾಡ
ಪಂಥ : ಪ್ರೊಟಸ್ಟೆಂಟ್	ಕಾಲಮಾನ : ಫೆಬ್ರವರಿ ೧, ೧೯೯೮
ಶೈಲಿ : ಆಧುನಿಕ ಶೈಲಿ	ಸ್ಥಿತಿ : ಉತ್ತಮ

ಧಾರವಾಡದ ಉಪನಗರದವಾದ ಕಲ್ಯಾಣನಗರದಲ್ಲಿ ಹೋಪ ಪ್ರಾರ್ಥನಾ ಮಂದಿರವಿದೆ. ಇದು ಸಂಪೂರ್ಣ ಆಧುನಿಕ ಕಟ್ಟಡವಾಗಿದೆ. ಇದರ ರಚನೆಯಾಗಿ ಕೇವಲ ೧೦ ವರ್ಷಗಳನ್ನು ಪೂರೈಸಿದೆ. ಇದು ಪ್ರೊಟೆಸ್ಟೆಂಟ್ ಪಂಥದ ಪ್ರಾರ್ಥನಾ ಮಂದಿರವಾಗಿದೆ. ಇಲ್ಲಿ ಪ್ರಾರ್ಥನೆಗೆ ಮಾತ್ರ ಅವಕಾಶವಿದೆ.

ಇದು ಆಧುನಿಕ ಕಾಲದ ಕಟ್ಟಡ ಆಗಿರುವುದರಿಂದ ಸಿಮೆಂಟ್ ಹಾಗೂ ಇಟ್ಟಿಕೆಗಳ ಬಳಕೆಯಿಂದ ಗೃಹಶೈಲಿಯ ಕಟ್ಟಡ ನಿರ್ಮಿಸಿದ್ದಾರೆ. ಕಟ್ಟಡವು ನವೀನ ಮಾದರಿ ಕಟ್ಟಡ ಆಗಿರುವುದರಿಂದ ಬಾಗಿಲು, ಜಾಲಾಂಧರಗಳು ಎಲ್ಲವೂ ಆಧುನಿಕ ಮಾದರಿಯಿಂದ ಕೂಡಿವೆ. ಈ ಪ್ರಾರ್ಥನಾ ಮಂದಿರವು ಮಹಿಳೆಯರಿಗೆ ಸುವಾರ್ತೆಗಳನ್ನು ಬೋಧಿಸುತ್ತದೆ. ಪ್ರತಿ ಶನಿವಾರ ಕ್ರೈಸ್ತ ಮಹಿಳೆಯರಿಗೆ ಬೈಬಲನ ಉಪದೇಶ ಮಾಡುತ್ತಾರೆ.

ವಿದ್ಯಾನಿಕೇತನ ಗುರುಮಂದಿರ

ಸ್ಥಳ : ಕಲ್ಯಾಣನಗರ, ಧಾರವಾಡ	ತಾಲೂಕು : ಧಾರವಾಡ
ಪಂಥ : ಪ್ರೊಟಸ್ಟೆಂಟ್	ಕಾಲಮಾನ : ಆಧುನಿಕ
ಶೈಲಿ : ಗೃಹಶೈಲಿ	ಸ್ಥಿತಿ : ಉತ್ತಮ

ಇದು ಒಂದು ಗುರುಮಂದಿರವಾಗಿದೆ. ಇದು ಚರ್ಚಿನಲ್ಲಿ ಬೋಧನೆ ಮಾಡುವ ಪಾದರ್‌ಗಳನ್ನು ತರಬೇತಿ ಮಾಡುವ ಕೇಂದ್ರವಾಗಿದೆ. ಪಾದ್ರಿಯಾಗುವ ಅರ್ಹತೆಯನ್ನು ಪಡೆದವರು ಈ ಗುರುಮಂದಿರದಲ್ಲಿ ಶಿಕ್ಷಣ ಪಡೆಯುವರು. ಇದು ಎರಡು ಅಂತಸ್ತಿನ ಆಧುನಿಕ ಕಟ್ಟಡವನ್ನು ಹೊಂದಿದೆ.

ಹೊರೇಬ ಪ್ರಾರ್ಥನಾ ಮಂದಿರ

ಸ್ಥಳ : ಶ್ರೀರಾಮನಗರ, ಧಾರವಾಡ   ತಾಲೂಕು : ಧಾರವಾಡ

ಪಂಥ : ಪ್ರೊಟೆಸ್ಟೆಂಟ್   ಕಾಲಮಾನ : ಸುಮಾರು ೧೯೮೦

ಶೈಲಿ : ಗೃಹಶೈಲಿ   ಸ್ಥಿತಿ : ಮಧ್ಯಮ

ಧಾರವಾಡದ ಉಪನಗರವಾದ ಶ್ರೀರಾಮನಗರದಲ್ಲಿ ಹೊರೇಬ ಪ್ರಾರ್ಥನಾ ಮಂದಿರವಿದೆ. ಇದರ ಮೂಲ ಆಂಧ್ರಪ್ರದೇಶವಾಗಿದೆ. ಧಾರವಾಡ ಬಸ್‌ನಿಲ್ದಾಣದಿಂದ ಸುಮಾರು ೬ ಕಿ.ಮೀ.ಅಂತರದಲ್ಲಿದ್ದು, ಇದು ಪ್ರಾರ್ಥನಾ ಮಂದಿರ ಆಗಿರುವುದರಿಂದ ಪ್ರಾರ್ಥನೆಗೆ ಹೆಚ್ಚು ಆದ್ಯತೆ ನೀಡುತ್ತಾರೆ. ಇದರ ಕಟ್ಟಡದ ರಚನೆಯು ಸುಮಾರು ೨೦ ವರ್ಷಗಳನ್ನು ಪೂರೈಸಿದ ಕಟ್ಟಡ ಇದಾಗಿದೆ. ಇದು ಗೃಹಶೈಲಿಯಿಂದ ನಿರ್ಮಾಣವಾಗಿದೆ.

ಈ ಚರ್ಚಿನ ಸುತ್ತಲೂ ಇರುವ ಪ್ರಾಕಾರ ಗೋಡೆಯು ಸಿಮೆಂಟ್ ಹಾಗೂ ಇಟ್ಟಿಗೆಗಳಿಂದ ನಿರ್ಮಾಣವಾಗಿದೆ. ಈ ಪ್ರಾರ್ಥನಾ ಮಂದಿರವು ಒಳಗೆ ಪ್ರವೇಶಿಸುತ್ತಿದ್ದಂತೆ ಚಿಕ್ಕದಾದ ಸಭಾಂಗಣವಿದೆ. ಸಭಾಂಗಣದ ತಲವು ಕಲ್ಲಿನಿಂದ ರಚನೆಯಾಗಿದೆ. ಇಲ್ಲಿ ಪ್ರಾರ್ಥನೆಗೆ ಕುಳಿತುಕೊಳ್ಳಲು ಪೀಠೋಪಕರಣಗಳಿಂದ ರಚನೆಯಾದ ಆಸನಗಳು ಇಲ್ಲ. ಸಭಾಂಗಣದ ಮುಂದೆ ಚಿಕ್ಕದಾದ ಗರ್ಭಾಂಗಣ ಇದೆ. ಇಲ್ಲಿ ಗರ್ಭಾಂಗಣದಲ್ಲಿ ಯಾವುದೇ ಮೂರ್ತಿಗಳಿಲ್ಲ. ಆದರೆ ಧರ್ಮೋಪದೇಶ ಹಾಗೂ ಸುವಾರ್ತೆಯನ್ನು ಬೋಧಿಸುವ ಫಾದರ್ ಅವರಿಗೆ ಪೀಠೋಪಕರಣ ಮಾಡಿದ ಚಿಕ್ಕದಾದ ಆಸನವಿದೆ.

ಚರ್ಚಿನ ಒಳಗಿನ ಗೋಡೆಗಳ ಮೇಲೆ ಯೇಸುವಿನ ಉಪದೇಶದ ವಾಕ್ಯಗಳನ್ನು ಕಾಣಬಹುದು. ಸ್ಥಳೀಯವಾಗಿ ಚರ್ಚಿನ ಪಾದ್ರಿಯಿಂದ ಮಾಹಿತಿಯನ್ನು ಪರಿಗಣಿಸಲಾಗಿದೆ. ಕಟ್ಟಡವು ೨೦ ವರ್ಷಗಳಷ್ಟು ಹಳೆಯದು ಎಂದು ತಿಳಿದುಬರುವುದು. ಚರ್ಚಿನ ಮೇಲ್ಛಾವಣಿ ಶಿಲುಬೆ ಲಾಂಛನ ಹೊಂದಿದೆ.

ಆಲ್ ಸೈಂಟ್ಸ್ ಚರ್ಚ

ಸ್ಥಳ : ಹಳಿಯಾಳ ರಸ್ತೆ ಧಾರವಾಡ   ತಾಲೂಕು : ಧಾರವಾಡ

ಪಂಥ : ಪ್ರೊಟೆಸ್ಟೆಂಟ್   ಕಾಲಮಾನ : ೧೮೮೮

ಶೈಲಿ : ಯೂರೋಪಿಯನ್ ಶೈಲಿ   ಸ್ಥಿತಿ : ಉತ್ತಮ

ಆಲ್ ಸೈಂಟ್ಸ್ ಚರ್ಚು ಎಂದು ನಾಮಾಂಕಿತವಾದ ಇದು ಪ್ರೊಟೆಸ್ಟೆಂಟ್ ಚರ್ಚು ಆಗಿದೆ. ಇದು ಧಾರವಾಡ ನಗರದ ಹಳಿಯಾಳ ರಸ್ತೆಯಲ್ಲಿದೆ ಈ ಚರ್ಚು ಯೂರೋಪಿಯನ್ ಶೈಲಿಯಲ್ಲಿ ನಿರ್ಮಾಣವಾದಂತಹ ಚರ್ಚ್ ಆಗಿದೆ. ಈ ಚರ್ಚ ರಚನೆಯಾಗಿ ೧೨೨ ವರ್ಷಗಳನ್ನು ಪೂರೈಸಿದೆ. ಇದು ಬ್ರಿಟಿಷ್‌ರ ಕಾಲದಲ್ಲಿ ನಿರ್ಮಾಣವಾಯಿತು. ಈ ಚರ್ಚು ಸ್ಥಾಪನೆಯ ಮುಖ್ಯ ಉದ್ದೇಶ ಬ್ರಿಟಿಷ್ ಅಧಿಕಾರಿಗಳ ಪ್ರಾರ್ಥನೆಗೆ ಅವಶ್ಯವಾದ ಸಂದರ್ಭದಲ್ಲಿ ಚರ್ಚಿನ ರಚನೆಯಾಯಿತು. ಇಲ್ಲಿ ಬ್ರಿಟಿಷ್ ಅಧಿಕಾರಿಗಳು ಪ್ರಾರ್ಥನೆಗೆ ಬಂದು ಹೋಗುತ್ತಿದ್ದರು ಎಂದು ಚರ್ಚಿನ ಪಾದ್ರಿಯರಾದ ಕೆ.ಡೆರಿಕ್ ಕ್ರಿಸ್ಟೋಫರ ಅವರ ಹೇಳಿಕೆಯಿಂದ ತಿಳಿದುಬರುತ್ತದೆ.

ಆಲ್ ಸೈಂಟ್ಸ್ ಚರ್ಚನ್ನು ಸುಟ್ಟ ಇಟ್ಟಿಗೆಗಳಿಂದ ಕಟ್ಟಲಾಗಿದೆ. "ಹೊರಗೆ ಗಾರೆ ಹಾಕಿಲ್ಲ, ನೆಲಕ್ಕೆ ಸೀಮೆಂಟ್ ಹಾಕಿದೆ, ಪೂಜಾ ವೇದಿಕೆಯು ಜೈನಾ ಚಪ್ಪಡಿಗಳಿಂದ ನಿರ್ಮಿತವಾಗಿದೆ."[೬] ಛಾವಣಿಯು ಮರದ ಹಲಗೆಯ ಮೇಲೆ ನಿರಿಗೆಗಳಿಂದ ಕೂಡಿ ಹಾಳೆಯನ್ನು ಹೊಂದಿಸಿದ್ದಾಗಿದೆ. ಈ ಚರ್ಚಿನ ಗೋಡೆಯು ಸಂಪೂರ್ಣ ಸುಟ್ಟ ಇಟ್ಟಿಗೆಗಳಿಂದ ಪೂರ್ಣವಾಗಿ ಆವೃತ್ತವಾಗಿರುವುದು ಕಂಡುಬರುತ್ತದೆ. ಚರ್ಚಿನ ಪ್ರವೇಶ ದ್ವಾರದ ಬಳಿ ನಾಲ್ಕು ಚಿಕ್ಕ ಬೋಧಿಗೆಗಳಿಂದ ಕೂಡಿದ ಕೊರಿಯಂಥಿನ ಮಾದರಿಯ ಮಂಟಪವಿದೆ. ಅದೇ ಮಾದರಿಯಲ್ಲಿ ಚರ್ಚಿನ ಆಕಾರವಿದೆ. ಚರ್ಚಿನ ಎಡಗಡೆ ಭಾಗದಲ್ಲಿ ಇಂಥಹದೆ ಇನ್ನೊಂದು ಕೊರಿಯಂಥಿನ ಮಂಟಪವಿದೆ. ಚರ್ಚಿನ ಮೇಲ್ಛಾವಣಿಯು ಜೈನಾ ಮಾದರಿಯನ್ನು ಹೊಂದಿದೆ. ಅದು ಮರದ ಹಲಗೆಯನ್ನು ಕಬ್ಬಿಣದ ಹಾಳೆಯನ್ನು ಹೊದಿಸಿದ್ದಾಗಿದೆ.

ಚರ್ಚಿನ ಮೇಲ್ಛಾವಣಿಯ ಮೇಲೆ ಶಿಲುಬೆಯ ಚಿತ್ರವಿದೆ. ಮೇಲ್ಛಾವಣಿಯ ಎರಡು ಭಾಗದಲ್ಲಿ ಇಳಿಚಾಪಗಿದೆ. ಒಟ್ಟಾರೆಯಾಗಿ ಚರ್ಚಿನ ಚಿಕ್ಕಮಂಟಪವು ಇಳಿಜಾಪಾಗಿರುವುದು ಕಂಡುಬರುತ್ತದೆ. ಬ್ರಿಟಿಷರ ಕಾಲದಲ್ಲಿ ರಚನೆಯಾಗಿರುವ ಕಟ್ಟಡ ಇದಾಗಿರುವುದರಿಂದ ಗಟ್ಟಿಮುಟ್ಟಾಗಿದೆ.

ಚರ್ಚಿನ ಒಳಗೆ ಪ್ರವೇಶಿಸುತ್ತಿದ್ದಂತೆ ಒಂದು ವಿಶಾಲವಾದ ಸಭಾಂಗಣವಿದೆ. ಕ್ರೈಸ್ತ ಭಕ್ತರು ಪ್ರಾರ್ಥನೆಗೆ ಕುಳಿತುಕೊಳ್ಳಲು ಪೀಠೋಪಕರಣಗಳಿಂದ ಅಲಂಕೃತವಾದ ಆಸನದ ವ್ಯವಸ್ಥೆ ಇದೆ. ಗರ್ಭಾಂಗಣವು ಹೊಂದಿದೆ. ಇಲ್ಲಿ ಪಾದ್ರಿಯ ಬೋಧನೆ ಮಾಡಲು ಪಿಠೋಪಕರಣಗಳಿಂದ ಅಲಂಕೃತವಾದ ಮಂಟಪದ ವ್ಯವಸ್ಥೆ ಇದೆ. ಗರ್ಭಾಗಣದಲ್ಲಿ ಶಿಲುಬೆಯ ಚಿತ್ರ ಮಾತ್ರ ಕಂಡುಬರುತ್ತದೆ. ಏಕೆಂದರೆ ಇದು ಪ್ರೊಟೆಸ್ಟೆಂಟ್ ಚರ್ಚು ಇಲ್ಲಿ ಮೂರ್ತಿಗಳು ಕಂಡುಬರುವುದಿಲ್ಲ.

ಚರ್ಚಿನ ಆವರಣ ಫಾಧರ್ ನಿವಾಸವಿದೆ. ಇದರಿಂದ ಚರ್ಚಿಗೆ ಬಂದ ಭಕ್ತರಿಗೆ ಭೇಟಿ ಮಾಡಲು ಸಹಾಯಕವಾಗುತ್ತದೆ. ಪ್ರಸ್ತುತವಾಗಿ ಪಾದರ ಹೇಳಿಕೆಯಂತೆ ಭಾನುವಾರ ೮ ಗಂಟೆಗೆ ಪ್ರಾರ್ಥನೆಯನ್ನು ಮಾಡುವರು. ವಿಶೇಷ ದಿನಗಳಲ್ಲಿ ಉಳಿದ ಚರ್ಚುಗಳಂತೆ ಈ ಚರ್ಚ್‌ನಲ್ಲಿ ಕ್ರೈಸ್ತರ ಸಾಮೂಹಿಕ ಪ್ರಾರ್ಥನೆ ಹಾಗೂ ಸುವಾರ್ತೆಯ ಬೋಧನೆಯನ್ನು ಮಾಡುವರು.

ಚರ್ಚಿನ ಒಳಗಡೆ ವಿಸ್ತಾರವಾದ ಸಭಾಂಗಣವಿದೆ. ಪ್ರತಿಯೊಂದು ಚರ್ಚಿನಲ್ಲಿ ಇರುವಂತೆ ನಿರ್ಮಾಣಗೊಂಡಿದ್ದು, ಗರ್ಭಾಂಗಣವು ಇದೆ. ಇದು ಪ್ರೊಟೆಸ್ಟೆಂಟ್ ಚರ್ಚು ಆಗಿರುವುದರಿಂದ ಮೂರ್ತಿಗಳು ಇಲ್ಲ. ಚರ್ಚಿನ ಒಳಗೆ ನೆಲವು ಸೀಮೆಂಟ್ ನಿಂದ ರಚನೆಯಾಗಿದೆ. ಪ್ರಾರ್ಥನೆಗಾಗಿ ಕುಳಿತುಕೊಳ್ಳಲು ಪೀಠೋಪಕರಣಗಳಿಂದ ರಚನೆಯಾದ ಆಸನಗಳನ್ನು ಹೊಂದಿದೆ. ಒಂದು ಶತಮಾನವನ್ನು ಕಳೆದರೂ ಇನ್ನು ಗಟ್ಟಿಮುಟ್ಟಾದ ರಚನೆಯನ್ನು ಹೊಂದಿದೆ.

ಹೋಲಿಕ್ರಾಸ್ ಚರ್ಚ್ (ಕ್ಯಾಥೋಲಿಕ)

ಸ್ಥಳ : ಜುಬ್ಲಿ ಸರ್ಕಲ್ ತಾಲೂಕು : ಧಾರವಾಡ

ಪಂಥ : ಕ್ಯಾಥೋಲಿಕ್ ಕಾಲಮಾನ :

ಶೈಲಿ : ಯೂರೋಪಿಯನ್ ಶೈಲಿ ಸ್ಥಿತಿ : ಉತ್ತಮ

ಧಾರವಾಡ ಜಿಲ್ಲೆಯ ಧಾರವಾಡ ಶಹರದಲ್ಲಿ ಈ ಕ್ಯಾಥೋಲಿಕ್ ಚರ್ಚು ಇದ್ದು, ಒಂದು ಆಧುನಿಕ ಮಾದರಿಯ ಕಟ್ಟಡದ ರಚನೆಯಾಗಿದೆ. ಈ ಚರ್ಚಿನ ರಚನೆಯು ಹೆಚ್ಚಾಗಿ ಕಲ್ಲಿನ ಬಳಕೆ ಹಾಗೂ ಸಿಮೆಂಟಿನ ರಚನೆಯಿಂದ ಆಗಿದೆ. ಸಾಮಾನ್ಯವಾಗಿ ೧೮ನೇ ಶತಮಾನದ ಕೊನೆಯಲ್ಲಿ ಹಾಗೂ ೧೯ನೇ ಶತಮಾನದಲ್ಲಿ ರಚನೆಯಾದ ಕಟ್ಟಡಗಳು ವಸಾಹತುಶಾಹಿಯಿಂದ ಪ್ರಭಾವಕ್ಕೊಳಪಟ್ಟು ಕಟ್ಟಡದ ರಚನೆಗಳಾಗಿವೆ. ಬೆಂಗಳೂರಿನಲ್ಲಿ ವಸಾಹತುಶಾಹಿ ಅಥವಾ ಬ್ರಿಟಿಷರ ಕಾಲದ ಇಂತಹ ನೂರಾರು ಕಟ್ಟಡದ ಚರ್ಚಿನ ರಚನೆಗಳು ಕಂಡುಬರುತ್ತವೆ.

ಈ ಚರ್ಚು ರಚನೆಯಾಗಿ ಸುಮಾರು ಅರ್ಧ ಶತಮಾನವನ್ನು ಪೂರೈಸಿದೆ. ಇದರ ರಚನೆಯಲ್ಲಿ ಕೆಲವು ವ್ಯತ್ಯಾಸಗಳಿವೆ. ಚರ್ಚಿನ ದ್ವಾರ ಬಾಗಿಲು ಕಟ್ಟಿಗೆಯಿಂದ ರಚನೆಯಾಗದೆ. ಮುಂಭಾಗದ ಪ್ರವೇಶದ್ವಾರದ ಗೋಡೆಯು ಸಂಪೂರ್ಣವಾಗಿ ಕಲ್ಲಿನಿಂದ ರಚನೆಯಾಗಿರುವುದು ಕಂಡುಬರುತ್ತದೆ. ಪ್ರವೇಶ ದ್ವಾರದ ಗೋಡೆಯ ಮೇಲೆ ಜಾಲಾಂಧರಗಳಿದ್ದು, ಇವು ಗ್ಲಾಸಿನಿಂದ ರಚನೆಯಾಗಿವೆ. ಜಾಲಾಂಧರಗಳಾಗಿವೆ. ಈ ಚರ್ಚು ಎತ್ತರವಾಗಿದೆ ಹಾಗೂ ಅಗಲವಾಗಿಯೇ ಇರುವುದು ಕಂಡುಬರುತ್ತದೆ. ವಿಶಾಲವಾದ ಚೌಕಾಕಾರದ ತಳಪಾಯದ ಮೇಲೆ ಈ ಚರ್ಚಿನ ಕಟ್ಟಡವು ರಚನೆಯಾಗಿರುವುದು ಕಾಣಬುಹುದು. ಚರ್ಚಿನ ಮೇಲ್ಛಾವಣಿಯು ಸಂಪೂರ್ಣವಾಗಿ ಸೀಮೆಂಟಿನಿಂದ ರಚನೆಯಾಗಿರುವುದು ಹಾಗೂ ಚರ್ಚಿನ ಮೇಛ್ಛಾವಣಿಯ ಮೇಲೆ ನಾಲ್ಕು ಚಿಕ್ಕ ಚಿಕ್ಕ ಕಂಬಗಳಿಂದ ವೃತ್ತಾಕಾರದ ರಚನೆಯ ಗೋಪುರವಿದೆ. ಆ ಗೋಪುರದ ತುತ್ತ ತುದಿಯಲ್ಲಿ ಕ್ರೈಸ್ತರ ಪವಿತ್ರ ಲಾಂಛನವಾದ ಶಿಲುಬೆಯಿದೆ. ಚರ್ಚಿನ ಹೊರಗೋಡೆಗೆ ಅಲ್ಲಲ್ಲಿ ದೊಡ್ಡದಾದ ಜಾಲಾಂಧ್ರುರಗಳಿವೆ.

[illegible]

ಚರ್ಚಿನ ಒಳಗೆ ವಿಶಾಲವಾದ ಸಭಾಂಗಣವಿದೆ. ಪ್ರಮುಖ ಸ್ಥಳದಲ್ಲಿ ಪಾದ್ರಿಯ ಬೋಧಿಸಲು ಕೂಡಲು ಆಸನವನ್ನು ಹೊಂದಿದೆ. ಹಾಗೂ ಇದು ಕ್ಯಾಥೋಲಿಕ್ ಚರ್ಚು ಆಗಿರುವುದರಿಂದ ಇಲ್ಲಿ ಯೇಸು ಹಾಗೂ ಅವನ ತಾಯಿ ಮೇರಿಯಮ್ಮಳ ಮೂರ್ತಿಗಳು ಇರುವುದು ಕಂಡುಬರುತ್ತದೆ. ಚರ್ಚಿನ ಸಭಾಂಗಣದಲ್ಲಿ ಕಟ್ಟಿಗೆಯಿಂದ ರಚನೆಯಾದ ಆಸನಗಳು ಎರಡು ಬದಿಯಲ್ಲಿ ಜೋಡಿಸಲಾಗಿದೆ. ಇಲ್ಲಿ ಕ್ರೈಸ್ತರು ಹಾಗೂ ಕ್ರೈಸ್ತರೇತರ ಪ್ರಾರ್ಥನೆಗೆ ಅವಕಾಶವಿದೆ. ಈ ಚರ್ಚಿನ ಸುತ್ತ ಇರುವ ಪ್ರಾಕಾರಗೋಡೆ ಕಲ್ಲು ಹಾಗೂ ಸಿಮೆಂಟಿನಿಂದ ರಚನೆಯಾಗಿದ್ದು, ಚರ್ಚಿನ ಒಳಗೆ ಇರುವ ಗೋಡೆಯು ಆಧುನಿಕ ಮಾದರಿಯಲ್ಲಿ ರಚನೆಯಾಗಿದೆ.

ಚರ್ಚಿನ ಆವರಣದಲ್ಲಿಯೇ ಪಾದ್ರಿಯ ನಿವಾಸ ಹಾಗೂ ಆಡಳಿತ ಕಚೇರಿಯಿದೆ. ಇದು ಚರ್ಚಿನ ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯವನ್ನು ಮಾಡುತ್ತದೆ. ಅಲ್ಲದೆ ಅದೇ ರೀತಿ ಚರ್ಚಿನ ಎದುರಿಗೆ ಮೇರಿಯ ಮೂರ್ತಿ ಪ್ರತಿಷ್ಠಾಪಿಸಿದ್ದಾರೆ. ಮೇರಿಯಮ್ಮನ ಮೂರ್ತಿಯಿಂದ ಚರ್ಚಿನ ಸೌಂದರ್ಯ ಇನ್ನು ಆಕರ್ಷಕವಾಗಿ ಕಾಣುತ್ತದೆ. ಚರ್ಚಿನ ಹತ್ತಿರವೇ ಸೆಂಟ್ ಜೋಸೆಫ್ ಪ್ರಾಥಮಿಕ ಶಾಲೆ, ಪ್ರೌಢಶಾಲೆ ಹಾಗೂ ಕಾಲೇಜು ಕೂಡ ಇದ್ದು, ವಿದ್ಯಾರ್ಥಿಗಳಿಗೆ ಪ್ರಾರ್ಥನೆ ಸಲ್ಲಿಸಲು ತುಂಬಾ ಸಹಾಯಕ ಎಂದು ಹೇಳಬಹುದು.

ಪ್ರತಿ ಭಾನುವಾರ ಕ್ಯಾಥೋಲಿಕ ಚರ್ಚುಗಳಲ್ಲಿ ಭಕ್ತರು ಪ್ರಾರ್ಥನೆ ಹಾಗೂ ಮೂರ್ತಿಪೂಜೆ ಸಲ್ಲಿಸುವುದು ಸಂಪ್ರದಾಯ. ಏಕೆಂದರೆ ಇವರು ಮೂರ್ತಿಪೂಜೆ ಆರಾಧಕರು. ಚರ್ಚಿನಲ್ಲಿ ಯೇಸುವಿನ ಸುವಾರ್ತೆಯ ಬೋಧನೆ ಹಾಗೂ ಬೈಬಲ್‌ನ ಪ್ರಮುಖ ವಿಷಯಗಳನ್ನು ಕುರಿತು ಚರ್ಚೆ ಅಲ್ಲದೆ ವಿಶೇಷ ದಿನಗಳಲ್ಲಿ ವಿಶೇಷ ಬೋಧನೆ ಹಾಗೂ ಪ್ರಾರ್ಥನೆಯನ್ನು ಮಾಡುವರು.

ಧಾರವಾಡ ಶಹರದಲ್ಲಿರುವ ಪ್ರಮುಖ ಕ್ಯಾಥೋಲಿಕ ಚರ್ಚುಗಳಲ್ಲಿ ಇದು ಒಂದಾಗಿದೆ. ಇದು ಧಾರವಾಡ ಶಹರ ಮಧ್ಯದಲ್ಲಿ ಇರುವುದರಿಂದ ಕ್ರಿಸ್‌ಮಸ್ ಹಬ್ಬ ಹಾಗೂ ಪ್ರಮುಖ ಸಂತರ ಹುಟ್ಟಿದ ಹಬ್ಬಗಳನ್ನು ಇಲ್ಲಿ ಆಚರಿಸುತ್ತಾರೆ. ಕ್ರಿಸ್ ಮಸ್ ಹಬ್ಬದಂದು ಎಲ್ಲ ಪ್ರಮುಖ ಕ್ರೈಸ್ತ ಬಂಧುಬಾಂಧವರು ಹಾರೈಸುವುದರೊಂದಿಗೆ ಒಬ್ಬರಿಗೊಬ್ಬರು ಪ್ರಾರ್ಥಿಸುವರು. ಹೊಸವರುಷದ ಆಚರಣೆಯನ್ನು ಅತ್ಯಂತ ವಿಜ್ರಂಭಣೆಯಿಂದ ಆಚರಿಸುತ್ತಾರೆ.

ಚರ್ಚಿನ ಒಳಗೆ ಗೋಡೆಯ ಎರಡು ಮಗ್ಗಲುಗಳಲ್ಲಿ ಆಧುನಿಕ ದೀಪಾಲಂಕಾರ ಒಳಗೊಂಡಿರು ವುದನ್ನು ಕಾಣಬಹುದು. ಒಟ್ಟಾರೆಯಾಗಿ ಇದು ಆಧುನಿಕ ಮಾದರಿಯ ಚರ್ಚು ಆಗಿದೆ.

ಮುಲ್ಲರ ಮೆಮೋರಿಯಲ್ ಚರ್ಚು ಸಿ.ಎಸ್.ಆಯ್

ಸ್ಥಳ : ಉಣಕಲ್ ತಾಲೂಕು : ಧಾರವಾಡ

ಪಂಥ : ಪ್ರೊಟಸ್ಟೆಂಟ್ ಕಾಲಮಾನ : ಆಧುನಿಕ

ಶೈಲಿ : ಆಂಗ್ಲೋಯುರೋಪಿಯನ್ ಸ್ಥಿತಿ : ಉತ್ತಮ

ಹುಬ್ಬಳ್ಳಿ ತಾಲೂಕಿನ ಉಣಕಲ್ ಎಂಬ ಗ್ರಾಮದಲ್ಲಿ ಈ ಮುಲ್ಲರ ಮೆಮೋರಿಯಲ್ ಚರ್ಚು ಇದೆ. ಇದು ಒಂದು ಪ್ರೊಟಸ್ಟೆಂಟ್ ಚರ್ಚು ಆಗಿದ್ದು, ಆಂಗ್ಲೋ ಯುರೋಪಿಯನ್ ಶೈಲಿಯಲ್ಲಿದೆ. ಆದರೆ ಇದರ ರಚನೆಯು ಇತ್ತೀಚಿನದಾಗಿದ್ದು, ತ್ರಿಕೋನ ಆಕೃತಿಯ ಮಾದರಿಯಿಂದ ಕೂಡಿದೆ. ಇದನ್ನು ಪ್ರೊಟಸ್ಟೆಂಟ್ ಮಿಷನರಿಯಾದ ಮುಲ್ಲರವರ ಸೇವೆಗೈದ ಸವಿನೆನಪಿಗಾಗಿ ನಿರ್ಮಿಸಿದ್ದಾರೆ. ಈ ಚರ್ಚಿನ ಎರಡು ಬದಿಯ ಗೋಡೆಯನ್ನು ಗಮನಿಸಿದಾಗ ಅವುಗಳು ಆಧುನಿಕ ಕಾಲದ ಕಟ್ಟಡವಾಗಿರುವುದು ಕಂಡುಬರುತ್ತದೆ.

ಮುಲ್ಲರ ಮೆಮೋರಿಯಲ್ ಚರ್ಚಿನ ಪ್ರವೇಶದ್ವಾರವು ಮೋಹಕವಾಗಿದ್ದು, ಪ್ರವೇಶದ್ವಾರದ ಮೇಲಿರುವ ಗೋಡೆಯು ಹಲವಾರು ಸಣ್ಣ ಸಣ್ಣ ಜಾಲಾಂಧರಗಳಿಂದ ಕೂಡಿದೆ. ಚರ್ಚಿನ ಒಳಗೋಡೆಯು ಸಿಮೆಂಟು ಹಾಗೂ ಇಟ್ಟಿಗೆಗಳಿಂದ ರಚನೆಯಾಗಿದ್ದು, ಚರ್ಚಿನ ಒಳಗೆ ಪ್ರವೇಶಿಸುತ್ತಿದ್ದಂತೆ ದೊಡ್ಡದಾದ ಸಭಾಂಗಣ ಕಾಣುವುದು. ಚರ್ಚಿನ ಒಳಗೆ ಸಿಮೆಂಟು ಹಾಗೂ ಕಲ್ಲಿನಿಂದ ಕೂಡಿದ ನೆಲವನ್ನು ಮಾಡಲಾಗಿದೆ. ಕ್ರೈಸ್ತಭಕ್ತರಿಗೆ ಕುಳಿತುಕೊಳ್ಳಲು ಆಸನದ ವ್ಯವಸ್ಥೆ ಇದೆ. ಸಭಾಂಗಣದ ಮುಂದೆ ಗರ್ಭಾಂಗಣವಿದ್ದು, ಪ್ರೊಟಸ್ಟೆಂಟ್ ಚರ್ಚು ಆಗಿರುವುದರಿಂದ ಇಲ್ಲಿ ಮೂರ್ತಿಗಳು ಕಂಡುಬರುವುದಿಲ್ಲ. ಇಲ್ಲಿ ಪ್ರತಿ ಭಾನುವಾರದಂದು ಸಾಮೂಹಿಕ ಪ್ರಾರ್ಥನೆ ನಡೆಯುತ್ತದೆ. ಚರ್ಚಿನ ಕಟ್ಟಡದೊಂದಿಗೆ ಚರ್ಚಿನ ಆಡಳಿತ ನಡೆಸಲು ಬೇಕಾಗುವ ಕಛೇರಿಯೂ ಇದೆ.

ಚರ್ಚಿನ ಆವರಣದಲ್ಲಿ ಒಂದು ದೊಡ್ಡದಾದ ಶಿಲುಬೆಯನ್ನು ಒಂದು ಚಿಕ್ಕವೃತ್ತದಲ್ಲಿ ನಿಲ್ಲಿಸಿದ್ದಾರೆ. ಚರ್ಚಿನ ಪಕ್ಕದಲ್ಲಿ ನಾಲ್ಕು ಪ್ರತ್ಯೇಕವಾದ ಹಾಗೂ ಎತ್ತರ ಕಂಬಗಳ ಮಧ್ಯೆ ಚರ್ಚಿನ ಗಂಟೆ ಅಳವಡಿಸಲಾಗಿದೆ. ಇದು ಪ್ರಾರ್ಥನೆಯ ಸಮಯವನ್ನು ಸೂಚಿಸುತ್ತದೆ. ಹಾಗೂ ಗಂಟೆಯ ಮೇಲೆಯೇ ಇನ್ನೊಂದು ಶಿಲುಬೆ ಇರುವುದನ್ನು ಕಾಣುತ್ತೇವೆ.

ಸಿ.ಎಸ್.ಆಯ್ ಚರ್ಚೆ

ಸ್ಥಳ : ಹೊಸೂರು ಕ್ರಾಸ್ ತಾಲೂಕು : ಧಾರವಾಡ

ಪಂಥ : ಪ್ರೊಟೆಸ್ಟೆಂಟ್ ಕಾಲಮಾನ : ಆಧುನಿಕ

ಶೈಲಿ : ಯುರೋಪಿಯನ್ ಶೈಲಿ ಸ್ಥಿತಿ : ಉತ್ತಮ

ಹುಬ್ಬಳ್ಳಿ ತಾಲೂಕಿನ ಹೊಸೂರ ಕ್ರಾಸ್ ಬಳಿ ಈ ಚರ್ಚು ಇದೆ. ಇದು ಆಧುನಿಕ ಚರ್ಚಾಗಿದ್ದು, ಇದರ ರಚನೆಯು ಸಂಪೂರ್ಣವಾಗಿ ಸಿಮೆಂಟ್ ಹಾಗೂ ಇಟ್ಟಿಗೆಗಳಿಂದ ಕೂಡಿದೆ. ಇದರ ಪ್ರವೇಶದ್ವಾರವು ಆಧುನಿಕ ಕಟ್ಟಡಗಳಲ್ಲಿರುವ ಕಟ್ಟಿಗೆ ಬಾಗಿಲನ್ನು ಹೊಂದಿದ್ದು, ಪ್ರವೇಶದ್ವಾರದ ಪಕ್ಕದಲ್ಲಿ ಎರಡು ಕಿಟಕಿಗಳನ್ನು ನವೀನ ಮಾದರಿಯ ಗಾಜಿನಿಂದ ಹಾಗೂ ಕಬ್ಬಿಣ ಸರಳುಗಳಿಂದ ರಚನೆಯಾಗಿದೆ. ಪ್ರವೇಶದ್ವಾರದ ಮೇಲ್ಭಾಗದಲ್ಲಿ ನಾಲ್ಕು ಸಣ್ಣಕಂಬಗಳಿದ್ದು, ಅದರ ಮೇಲೆ ಶಿಖರ ಮಾದರಿಯ ರಚನೆಯಿದೆ. ಹಾಗೂ ಆ ಶಿಖರದ ಮೇಲೆ ಶಿಲುಬೆಯನ್ನು ಅಳವಡಿಸಿದ್ದಾರೆ.

ಸಾಮಾನ್ಯವಾಗಿ ಎಲ್ಲ ಚರ್ಚುಗಳಲ್ಲಿರುವಂತೆ ಈ ಚರ್ಚಿನ ಒಳಗೆ ಸಭಾಂಗಣ ಹಾಗೂ ಗರ್ಭಾಂಗಣವಿದ್ದು, ಅಲ್ಲಿ ಪಾದ್ರಿಯು ಬೋಧನೆಯನ್ನು ಮಾಡಲು ಕುಳಿತುಕೊಳ್ಳುವ ಆಸನದ ವ್ಯವಸ್ಥೆ ಇದೆ. ಇದು ೧೯ನೆಯ ಶತಮಾನದ ಇತ್ತೀಚಿಗೆ ರಚನೆಯಾಗಿರುವ ಚರ್ಚಾಗಿದ್ದು, ಆಧುನಿಕ ಮಾದರಿಯ ಉಪಕರಣಗಳನ್ನು ಒಳಗೊಂಡಿದೆ. ಇಲ್ಲಿಯೂ ಕೂಡ ಯಾವ ಮೂರ್ತಿಯೂ ಇಲ್ಲ. ಭಾನುವಾರ ಹಾಗೂ ವಿಶೇಷ ದಿನಗಳಲ್ಲಿ ಕಾರ್ಯಕ್ರಮ ನಡೆಸಲಾಗುವುದು. ಕ್ರೈಸ್ತರು ಹಾಗೂ ಕ್ರೈಸ್ತರೇತರರು ಪ್ರಾರ್ಥನೆಯಲ್ಲಿ ಪಾಲ್ಗೊಳ್ಳುವರು.

ಚರ್ಚಿನ ಮಾದರಿಯು ಯೂರೋಪಿಯ ಶೈಲಿಯದ್ದಾಗಿದೆ. ಚರ್ಚಿನ ಒಳಗೆ ಆಧುನಿಕ ಅಲಂಕಾರಿಕ ವಸ್ತುಗಳು ಶೋಭಿಸುವುದನ್ನು ಕಾಣಬಹುದು. ಈ ಚರ್ಚು ಪ್ರಾರಂಭಿಕ ಚರ್ಚುಗಳಿಗಿಂತ ನಂತರದ ಕಾಲದಲ್ಲಿ ರಚನೆಯಾದ ಚರ್ಚುಗಳು ಹೇಗೆ ಭಿನ್ನ ಎಂಬುದನ್ನು ತಿಳಿಸುತ್ತದೆ.

ಮೇಯರ ಮೆಮೋರಿಯಲ್ ಚರ್ಚು

ಸ್ಥಳ : ಕಾರವಾರ ರಸ್ತೆ, ಹುಬ್ಬಳ್ಳಿ — ತಾಲೂಕು : ಧಾರವಾಡ

ಪಂಥ : ಪ್ರೊಟೆಸ್ಟೆಂಟ್ — ಕಾಲಮಾನ : ೧೯೪೦

ಶೈಲಿ : ಜರ್ಮನ್ ಬಾಸೆಲ್ ಮಿಶನ್ — ಸ್ಥಿತಿ : ಉತ್ತಮ

ಇದು ಒಂದು ಪ್ರಮುಖವಾದ ಚರ್ಚು. ಇದರ ಸ್ಥಾಪನೆಯಾಗಿ ಸುಮಾರು ೧೬೦ ವರ್ಷಗಳು ಗತಿಸಿವೆ. ಪ್ರೊಟಸ್ಟೆಂಟ್‌ರ ಈ ಚರ್ಚು ನೋಡಲು ಅತ್ಯಂತ ರೋಮಾಂಚನಕಾರಿಯಾಗಿದೆ. ಇದರ ಕಟ್ಟಡವು ಜರ್ಮನ ಶೈಲಿಯಲ್ಲಿದ್ದು, ಪ್ರಸ್ತುತದಲ್ಲಿಯೂ ಚಾಲನೆಯಲ್ಲಿದೆ. ಇಲ್ಲಿ ನೂರಾರು ಕ್ರೈಸ್ತರು ಇಂದಿಗೂ ಪ್ರಾರ್ಥನೆಯನ್ನು ಸಲ್ಲಿಸಲು ಬರುತ್ತಾರೆ. ಈ ಚರ್ಚು ಆಧುನಿಕ ಕಟ್ಟಡಗಳನ್ನು ನಾಚಿಸುವಂತಿದ್ದು, ಅತ್ಯಂತ ಅಂದವಾಗಿ ಹಾಗೂ ವಾಸ್ತುರಚನೆಯೂ ಅತ್ಯಂತ ಸುಂದರವಾಗಿ ಮೂಡಿಬಂದಿದೆ ಎಂದು ಹೇಳಬಹುದು. ಚರ್ಚಿನ ಒಳಗಡೆ ಮುಖ್ಯವಾಗಿ ಪಾದ್ರಿ ಬೋಧನೆ ನೀಡುವ ಸ್ಥಳವು ವ್ಯವಸ್ಥಿತವಾಗಿದ್ದು,

ಜೊತೆಗೆ ಚರ್ಚಿನ ಒಳಗಡೆಯಲ್ಲಿ ಒಂದು ಭಾಗದಲ್ಲಿ ಪುರುಷರು ಮತ್ತೊಂದು ಭಾಗದಲ್ಲಿ ಮಹಿಳೆಯರು ಕೂಡಲು ಸ್ಥಳಾವಕಾಶವುಂಟು. ಪ್ರತಿ ರವಿವಾರ ಮುಂಜಾನೆ ೯-೩೦ ಗಂಟೆಗೆ ಯೇಸುವಿನ ಕುರಿತಾದ ಉಪದೇಶಗಳನ್ನು ಮಾಡುವರು. ಹಾಗೂ ವಿಶೇಷ ದಿನಗಳಲ್ಲಿ ಪ್ರಾರ್ಥನೆ ಹಾಗೂ ಉಪದೇಶಗಳನ್ನು ಮಾಡುವರು.

ಮೈಯರ ಮೆಮೋರಿಯಲ್ ಚರ್ಚನ ಕಟ್ಟಡದ ಗೋಡೆಗಳು ಆಧುನೀಕರಣಗೊಂಡಿರುವುದು ಕಂಡುಬರುತ್ತದೆ. ದ್ವಾರಬಾಗಿಲಿನ ಮೇಲೆ ಕ್ರೈಸ್ತರ ಲಾಂಛನವಾದ ಶಿಲುಬೆಯು ಇರುವುದು. ಒಳಗಡೆ ಉತ್ತಮ ಸಭಾಂಗಣವಿದ್ದು, ಆಧುನಿಕ ಸುಧಾರಿತ ಉಪಕರಣಗಳಿಂದ ಚರ್ಚು ಅಲಂಕೃತಗೊಂಡಿರುವುದು ಕಂಡುಬರುತ್ತದೆ. ಚರ್ಚಿನ ಗೋಡೆಗಳ ಮೇಲೆ ಅಲ್ಲಲ್ಲಿ ಜಾಲಂಧರಗಳಿದ್ದು, ಇವು ನವೀನ ಮಾದರಿಯವಾಗಿವೆ.

ಚರ್ಚಿನ ಮೇಲ್ಛಾವಣಿಯು ಕಟ್ಟಿಗೆಯ ತೊಲೆಗಳಿಂದ ಭದ್ರವಾಗಿದ ಅದರ ಮೇಲೆ ಮಂಗಳೂರು ಹಂಚನ್ನು ಮೇಲ್ಛಾವಣಿಗೆ ಬಳಸಿ ಕಟ್ಟಲಾಗಿದೆ. ಇದರ ವಾಸ್ತುಶೈಲಿಯನ್ನು ಗಮನಿಸಿದಾಗ ಜರ್ಮನಿ ಶೈಲಿಯಿರುವುದರಿಂದ ಜರ್ಮನಲ್ಲಿರುವ ಇತರೆ ಚರ್ಚುನನ್ನು ಹೋಲುವಂತೆ ಈ ಚರ್ಚನ್ನು ನಿರ್ಮಿಸಿದರೆಂಬುದು ಸ್ಪಷ್ಟವಾಗಿ ಗೋಚರಿಸುತ್ತದೆ. ಚರ್ಚಿನ ರಚನೆಯಲ್ಲಿ ಅನುಕೂಲಕ್ಕೆ ತಕ್ಕಂತೆ ಕಟ್ಟಿಗೆಯ ಬಳಕೆಯನ್ನು ಮಾಡಿಕೊಂಡಿರುವುದು ಕಾಣಬಹುದು. ಇದು ಪ್ರೊಟೆಸ್ಟೆಂಟ್‌ರ ಚರ್ಚು ಆಗಿರುವುದರಿಂದ ಇಲ್ಲಿ ಮೂರ್ತಿಗಳು ಕಂಡುಬರುವುದಿಲ್ಲ. ಈ ಚರ್ಚಿನ ಆವರಣದಲ್ಲಿ ವಿಶಾಲವಾದ ಹೊರಂಗಣವಿದ್ದು, ಇದರಿಂದ ನೂರಾರು ಕ್ರೈಸ್ತ ಭಕ್ತರು ಇಲ್ಲಿ ಪ್ರಾರ್ಥಿಸಲು ಸಹಾಯಕವಾಗುವಂತೆ ರಚನೆ ಮಾಡಿದ್ದಾರೆ. ಇದೊಂದು ಮಾದರಿ ಚರ್ಚು ಆಗಿದೆ ಎಂಬುದು ತಿಳಿದುಬರುತ್ತದೆ.

ಈ ಚರ್ಚು ಹುಬ್ಬಳ್ಳಿಯಿಂದ ಕಾರವಾರ ಹೋಗುವ ರಸ್ತೆಯಲ್ಲಿ ಇರುವುದು. ಹುಬ್ಬಳ್ಳಿಯ ಪ್ರೊಟಸ್ಟೆಂಟರ ಚರ್ಚುಗಳಲ್ಲಿ ಒಂದು ಪ್ರಮುಖವಾದ ಚರ್ಚು ಇದಾಗಿದೆ. ಈ ಚರ್ಚು ಕ್ರೈಸ್ತರು ಹಾಗೂ ಕ್ರೈಸ್ತರೇತರ ಧರ್ಮದವರು ಪ್ರಾರ್ಥನೆ ಮಾಡಲು ದೇವಭಕ್ತಿಯನ್ನು ಮೆರೆಯಲು ಪ್ರಮುಖವಾದ ಪ್ರಾರ್ಥನಾ ಸ್ಥಳ ಇದಾಗಿದೆ.

೨. ಹೆಬಿಕ್ ಮೆಮೋರಿಯಲ್ ಹಾಲ್

ಸ್ಥಳ : ಕಾರವಾರ ರಸ್ತೆ, ಹುಬ್ಬಳ್ಳಿ	ತಾಲೂಕು : ಹುಬ್ಬಳ್ಳಿ
ಪಂಥ : ಪ್ರೊಟೆಸ್ಟೆಂಟ್	ಕಾಲಮಾನ : ೧೯೬೨
ಶೈಲಿ : ಯೂರೋಪಿಯನ್ ಶೈಲಿ	ಸ್ಥಿತಿ : ಉತ್ತಮ

ಇದು ಪ್ರೊಟೆಸ್ಟೆಂಟ್ ಪಂಥದ ಒಂದು ಮೆಮೋರಿಯಲ್ ಹಾಲ್. ಮೊದಲು ಇಲ್ಲಿ ಪ್ರಾರ್ಥನೆಗಳು ಹಾಗೂ ಕ್ರೈಸ್ತರ ಉಪದೇಶಗಳು ಹಾಗೂ ಮನರಂಜನೆಯ ಕಾರ್ಯಕ್ರಮ ನಡೆಯುತ್ತಿದ್ದವು. ಆದರೆ ಇತ್ತೀಚಿಗೆ ಯಾವ ಕಾರ್ಯಕ್ರಮಗಳು ನಡೆಯದೆ ನಿಂತುಹೋಗಿದೆ.

ಇದು ಮೈಯರ್ ಮೆಮೋರಿಯಲ್ ಚರ್ಚಿನ ಆವೃತ್ತದಲ್ಲಿ ಇದೆ. ಇದು ನೋಡಲು ಆಧುನಿಕ ಗೃಹಶೈಲಿಯಲ್ಲಿದ್ದು, ಕಟ್ಟಡ ರಚನೆಗೆ ಸಿಮೆಂಟು ಹಾಗೂ ಕಲ್ಲನ್ನು ಬಳಸಿರುವುದು ಕಂಡುಬರುತ್ತದೆ. ಈಗಲೂ ಈ ಕಟ್ಟಡ ಸುವ್ಯವಸ್ಥೆಯಲ್ಲಿದೆ. ಆದರೆ ಇತ್ತೀಚಿಗೆ ಇದರ ಬಳಕೆಯಾಗುತ್ತಿಲ್ಲ. ಇದು ಪ್ರೊಟೆಸ್ಟೆಂಟ್ ಮಿಷನರಿಯರ ಹೆಬಿಕರ ಜ್ಞಾಪಕಾರ್ಥವಾಗಿ ನಿರ್ಮಿಸಿದ ಕಟ್ಟಡವಾಗಿದೆ.

ಈ ಕಟ್ಟಡದ ಮೇಲೆಯೂ ಶಿಲುಬೆಯ ಚಿನ್ಹೆಯನ್ನು ಕಾಣಬಹುದು. ಇದು ೧೮೬೨ರ ಸಮಯದಲ್ಲಿನ ಪ್ರಮುಖ ಕಟ್ಟಡ ಆಗಿತ್ತೆಂಬುದು ತಿಳಿದುಬರುತ್ತದೆ. ಕಟ್ಟಡದ ರಚನೆಯ ಸ್ವಲ್ಪ ಭಾಗ ನಿರ್ಮಿಸುವಲ್ಲಿ ಅಲ್ಲಲ್ಲಿ ಮಂಗಳೂರಿನ ಹಂಚನ್ನು ಬಳಸಿದ್ದಾರೆ. ಪ್ರವೇಶದ್ವಾರವು ಆಧುನಿಕ ಕಟ್ಟಡದ ಆಕಾರದಲ್ಲಿದ್ದು, ಬಾಗಿಲನ್ನು ಕಟ್ಟಿಗೆಯಿಂದ ನಿರ್ಮಾಣ ಮಾಡಲಾಗಿದೆ.

ಸ್ವರ್ಗಾರೋಹಣ ದೇವಾಲಯ (ಚರ್ಚು)

ಸ್ಥಳ : ದೇಶಪಾಂಡೆನಗರ, ಹುಬ್ಬಳ್ಳಿ **ತಾಲೂಕು : ಹುಬ್ಬಳ್ಳಿ**

ಪಂಥ : ಪ್ರೊಟೆಸ್ಟೆಂಟ್ **ಕಾಲಮಾನ : ೧೮೮೬**

ಶೈಲಿ : ಯೂರೋಪಿಯನ್ ಶೈಲಿ **ಸ್ಥಿತಿ : ಕನಿಷ್ಠ**

ಹುಬ್ಬಳ್ಳಿ ತಾಲೂಕಿನ ಹುಬ್ಬಳ್ಳಿಯ ದೇಶಪಾಂಡೆ ನಗರದಲ್ಲಿ ಸ್ವರ್ಗಾರೋಹಣ(ಅಶೆನಶನ್) ದೇವಾಲಯವಿದೆ. ಸ್ವರ್ಗರೋಹಣ ದೇವಾಲಯವು ೧೦೫ ಸಂವತ್ಸರಗಳನ್ನು ಧಾಟಿ ಮುನ್ನಡೆದಿದೆ. ಆರಂಭದಲ್ಲಿ ಬ್ರಿಟಿಷ ಸರ್ಕಾರದ ಸೇವೆಯಲ್ಲಿ ನಿರತರಾಗಿದ್ದು ಬ್ರಿಟಿಷ್ ಪ್ರಜೆಗಳಿಗಾಗಿ ಮತ್ತು ಅವರ ಕುಟುಂಬಗಳು ಆರಾಧನೆ ಮಾಡುವುದಕ್ಕಾಗಿ ಪ್ರಾರಂಭಗೊಂಡ ಈ ದೇವಾಲಯವು ಈಗ ಸಂಪೂರ್ಣವಾಗಿ ದೇಶೀಯ ಸದಸ್ಯರನ್ನು ಒಳಗೊಂಡಿದ್ದು, ಸುಮಾರು ೧೨೫ ಕ್ರೈಸ್ತ ಕುಟುಂಬಗಳೂ ಇಲ್ಲಿ ಸದಸ್ಯತ್ವವನ್ನು ಹೊಂದಿರುತ್ತಾರೆ.

೧೮೮೬ರಷ್ಟು ಹಿಂದೆಯೇ ಇಲ್ಲಿ ವಾಸವಾಗಿದ್ದ ಕ್ರೈಸ್ತರ ಪರಿಪಾಲನೆಗಾಗಿ ಮನೆ ಮನಗಳಲ್ಲಿ ಆರಾಧನೆಗಳು ನಡೆಸಲ್ಪಡುತ್ತಿದ್ದವು. ೧೯೦೫ರಲ್ಲಿ ಈಗಿರುವ ದೇವಾಲಯದ ಅಡಿಗಲ್ಲು ಮುಂಬೈಯಲ್ಲಿ ಅಂಗ್ಲಿಕನ ಸಭೆಗಳ ಅಂದಿನ ಬಿಷಫರಾದ ರೈಟ್ ರೆವರೆಂಡ್ ಎ ರುತವೆನ್ ರವರಿಂದ ಹಾಕಲ್ಪಟ್ಟು ನಿರ್ಮಾಣಗೊಂಡಿತು. ಯೇಸುಸ್ವಾಮಿಯವರು ಈ ಲೋಕದಲ್ಲಿ ಜೀವಿಸಿ ಲೋಕದ ಮನುಜರ ಪಾಪ ನಿವಾರಣೆಗಾಗಿ ಶಿಲುಬೆಯ ಮೇಲೆ ಪಾರಾರ್ಥ ಮರಣ ಹೊಂದಿ ತೃತೀಯ ದಿನದಲ್ಲಿ ಮೃತ್ಯುಂಜಯವಾಗಿ

[illegible]

[illegible]

[illegible]

[illegible]

ಎದ್ದು ಬಂದು ತದನಂತರ ಸ್ವರ್ಗಾರೋಹಣರಾಗಿ ತೆರಳಿದ್ದನ್ನು ಸ್ಮರಿಸುವುದಕ್ಕಾಗಿ ಈ ದೇವಾಲಯಕ್ಕ 'ಸ್ವರ್ಗಾರೋಹಣ ದೇವಾಲಯ' ಎಂದು ನಾಮಕರಣ ಮಾಡಲಾಗಿರುತ್ತದೆ.

ಇಂಗ್ಲೆಂಡ್ ದೇಶದಿಂದ ಬಂದ ಬ್ರಿಟೀಷ್ ಮಿಷನರಿಗಳು ಆಂಗ್ಲಿಕನ ಸಭಾತತ್ವಗಳನ್ನು ಸಂಪ್ರದಾಯಗಳನ್ನು, ಆರಾಧನಾ ಕ್ರಮಗಳನ್ನು ಈ ಸಭೆಯ ಜೀವಿತದಲ್ಲಿ ಬಳಕೆಗೆ ತಂದರು. ಈ ಸಂಪ್ರದಾಯದ ಆಚರಣೆಗಳು ಇಂದಿಗೂ ಈ ಸಭೆಯಲ್ಲಿ ಜರುಗಿಸಲ್ಪಡುತ್ತಿದ್ದರೂ ಆಡಳಿತಾತ್ಮಕವಾಗಿಯೂ ಕ್ರೈಸ್ತ ಸಭೆಗಳ ಒಕ್ಕೂಟವಾಗಿ ಸ್ಥಾಪಿಸಲ್ಪಟ್ಟ 'ದಕ್ಷಿಣ ಭಾರತ ಸಭೆ'ಯಲ್ಲಿ ಐಕ್ಯಗೊಳಿಸಲ್ಪಟ್ಟಿತು. ಇಂದು ಈ ಸಭೆಯು ದಕ್ಷಿಣ ಭಾರತ ಸಭೆಯ ಉಪಭಾಗವಾಗಿರುವ ಕರ್ನಾಟಕ ಉತ್ತರ ಸಭಾ ಪ್ರಾಂತ್ಯದ ಸಭೆಗಳಲ್ಲಿ ಒಂದಾಗಿರುತ್ತದೆ.

ಸ್ವರ್ಗರೋಹಣ ದೇವಾಲಯ ೧೮ನೇ ಶತಮಾನದ ಕೊನೆಯ ಅವಧಿಯಲ್ಲಿ ರಚನೆಯಾಯಿತು. ಇದು ಯೂರೋಪಿಯನ್ ಶೈಲಿಯಲ್ಲಿ ರಚನೆಯಾದಂತಹ ಕಟ್ಟಡವಾಗಿದೆ. ಈ ಚರ್ಚಿನ ರಚನೆಯು ಹೆಚ್ಚಿನ ಕಲ್ಲಿನ ಬಳಕೆ ಹೆಚ್ಚಾಗಿರುವುದು ಕಂಡುಬರುತ್ತದೆ. ಕಲ್ಲುಗಳ ಮಧ್ಯದಲ್ಲಿ ಸಿಮೆಂಟ್ ಬಳಕೆ ಮಾಡಿರುವುದು ಕಂಡುಬರುತ್ತದೆ. ಚರ್ಚಿನ ತಳಪಾಯವು ಗಟ್ಟಿಮುಟ್ಟಾದ ವ್ಯವಸ್ಥೆಯಿಂದ ಕೂಡಿರುವುದರಿಂದ ಒಂದು ಶತಮಾನವನ್ನು ಪೂರೈಸಿದರು. ಇದುವರೆಗೆ ತನ್ನ ಯಥಾಸ್ಥಿತಿಯನ್ನು ಕಾಪಾಡಿಕೊಂಡು ಬಂದಿದೆ.

ಈ ಚರ್ಚು ವಿಶಾಲವಾದ ಪ್ರದೇಶದ ಮೇಲೆ ರಚನೆಯಾದ ಕಟ್ಟಡವಾಗಿದೆ. ಪ್ರವೇಶದ್ವಾರದ ಬಳಿಯ ಪಕ್ಕದಲ್ಲಿ ಕಿಟಕಿ(ಜಾಲಾಂದರ)ಗಳಿವೆ. ಇವು ಕಟ್ಟಿಗೆ ಹಾಗೂ ಕಬ್ಬಿಣದ ಬಳಕೆಯನ್ನು ಮಾಡಿರುವುದು ಕಂಡುಬರುತ್ತದೆ. ಚರ್ಚಿನ ಒಳಗೆ ಪ್ರವೇಶಿಸುತ್ತಿದ್ದಂತೆ ಒಳಗೆ ಸಭಾಂಗಣ. ಈ ಸಭಾಂಗಣದಲ್ಲಿ ಪ್ರಾರ್ಥನೆಗೆ ಕುಳಿತುಕೊಳ್ಳಲು ಪಿಠೋಪಕರಣಗಳ ವ್ಯವಸ್ಥೆ ಇದೆ.

ಗರ್ಭಾಂಗಣ ಇದೆ ಇಲ್ಲಿ ಶಿಲುಬೆ ಇದೆ. ಹಾಗೂ ಗರ್ಭಂಗಣದ ಹತ್ತಿರ ಮುಖ್ಯ ಪಾದ್ರಿಯು ಬೋಧನೆಯನ್ನು ಮಾಡುತ್ತಾನೆ. ವಿಶೇಷವಾದ ದಿನಗಳಲ್ಲಿ ಪ್ರಾರ್ಥನೆ ಹಾಗೂ ಬೋಧನೆಗಳು ನಡೆಯುತ್ತವೆ.

ಚರ್ಚಿನ ಮೇಲ್ಛಾವಣಿಯು ಮಂಗಳೂರಿನ ಹಂಚಿನಿಂದ ಕಟ್ಟಿಗೆಯಿಂದ ರಚನೆಯಾಗಿದೆ. ಮೇಲ್ಛಾವಣಿಯ ಕೊನೆಯಲ್ಲಿ ಚಿಕ್ಕ ಗೋಪುರವಿದೆ. ಆ ಗೋಪುರದ ಮೇಲೆ ಶಿಲುಬೆಯಿರುವುದನ್ನು ಗಮನಿಸಬಹುದು.

ಸಂತ ಜೋಸೆಫ್‌ರ ಕ್ಯಾಥೋಲಿಕ್ ದೇವಾಲಯ

ಸ್ಥಳ : ಕೇಶ್ವಾಪುರ, ಹುಬ್ಬಳ್ಳಿ	ತಾಲೂಕು : ಹುಬ್ಬಳ್ಳಿ
ಪಂಥ : ಕ್ಯಾಥೋಲಿಕ್	ಕಾಲಮಾನ : ೧೮೮೦
ಶೈಲಿ : ಯೂರೋಪಿಯನ್ ಶೈಲಿ	ಸ್ಥಿತಿ : ಕನಿಷ್ಠ

[illegible]

ಹುಬ್ಬಳ್ಳಿ ಉಪನಗರವಾದ ಕೇಶ್ವಾಪುರದಲ್ಲಿ ಸಂತ ಜೋಸೆಫರ ಕ್ಯಾಥೋಲಿಕ ಚರ್ಚು ಇದೆ. ಇದು ಒಂದು ಕ್ಯಾಥೋಲಿಕ ಚರ್ಚ ಆಗಿದೆ. ಇದರ ಶೈಲಿ ಯೂರೋಪಿಯನ್ ಶೈಲಿ ಎಂದು ತಿಳಿದುಬರುತ್ತದೆ. ಈ ಚರ್ಚಿನ ಆವರಣವು ವಿಶಾಲವಾಗಿದ್ದು, ಆವರಣದಲ್ಲಿಯೇ ಶಾಲೆಗಳಿವೆ.

ಚರ್ಚಿನ ಮುಖ್ಯದ್ವಾರದ ಗೋಡೆಯನ್ನು ನೋಡಿದಾಗ ಐದು ಜಾಲಾಂಧರಗಳು ಕಾಣುತ್ತವೆ. ಜಾಲಾಂದರಗಳ ರಚನೆಗಳು ತ್ರಿಕೋನ ಮಾದರಿಯಿಂದ ಕೂಡಿವೆ. ಮುಖ್ಯ ದ್ವಾರದ ಗೋಡೆಗೆ ಆಧಾರವಾಗಿ ಎರಡು ಎತ್ತರವಾದ ಆಧಾರಸ್ಥಂಬಗಳನ್ನು ಒಳಗೊಂಡಿರುವುದು ಕಾಣುತ್ತದೆ. ಕಟ್ಟಡವು ೧೮ನೇ ಶತಮಾನದ ಕೊನೆಯಲ್ಲಿ ೧೯ನೇ ಶತಮಾನದ ಆರಂಭದ ವೇಳೆಯಲ್ಲಿ ರಚನೆಯಾಗಿರುವುದನ್ನು ಕಾಣುವುದರಿಂದ ಇದು ಕೂಡ ನವೀನ ಮಾದರಿಯ ಕಟ್ಟಡಗಳಲ್ಲಿ ಒಂದಾಗಿರುವಂತೆ ಕಂಡುಬರುತ್ತದೆ.

ಚರ್ಚಿನ ಮೇಲ್ಛಾವಣಿಯ ಮೇಲೆ ತುತ್ತ ತುದಿಯಲ್ಲಿ ಚಿಕ್ಕ ಗೋಪುರವಿದ್ದು, ಅದರ ಮೇಲೆ ಶಿಲುಬೆಯ ಚಿನ್ಹೆಯಿರುವುದು ಕಂಡುಬರುತ್ತದೆ. ಚರ್ಚಿನ ಹೊರಗಡೆ ವಿಶಾಲವಾದ ಆವರಣವಿದ್ದು ಇದು ಪ್ರಾರ್ಥನೆಗೆ ಬರುವ ಭಕ್ತರ ಸಂಖ್ಯೆ ಹೆಚ್ಚಾದಾಗ ನಿಲ್ಲುವಂತೆ ಆವರಣವಿದೆ. ಚರ್ಚಿನ ಆವರಣದಲ್ಲಿ ಕಂಡುಬರುತ್ತದೆ. ಮೇರಿ ಮಾತೆಯ ಮೇಲೀರುವುದು ಕಂಡುಬರುತ್ತದೆ. ಚರ್ಚಿನ ಕೆಲಸ ಕಾರ್ಯಗಳಿಗೆ ಅನುಕೂಲವಾಗುವಂತೆ ಫಾದರ್ ವಾಸಸ್ಥಾನ ಹಾಗೂ ಕಛೇರಿಯ ಅದೇ ಆವರಣದಲ್ಲಿ ಇದೆ. ಚರ್ಚಿನ ಒಳಗಡೆ ಪ್ರವೇಶಿಸಲು ಸಣ್ಣ ಸಣ್ಣ ಮೆಟ್ಟಿಲುಗಳು ಇರುವುದನ್ನು ಕಾಣುತ್ತೇವೆ. ಮುಖ್ಯದ್ವಾರದ ಒಳಗಡೆ ಪ್ರವೇಶಿಸುತ್ತಿದ್ದಂತೆ ಮುಖ್ಯವಾಗಿ ೨ ಬಾಗಿಲುಗಳನ್ನು ಹೊಂದಿದೆ. ಒಂದು ಭಾಗದಲ್ಲಿ ಮಹಿಳೆಯರು ಇನ್ನೊಂದು ಭಾಗದಲ್ಲಿ ಪುರುಷರು ಪ್ರಾರ್ಥನೆ ಸಲ್ಲಿಸಲು ಅನುಕೂಲವಾಗುವಂತೆ ನಿರ್ಮಿಸಿದ್ದಾರೆ. ಪ್ರಾರ್ಥನೆಗೆ ಕೂಡುವಲ್ಲಿ ಕಟ್ಟಿಗೆಯಿಂದ ರಚನೆಯಾದ ಆಸನಗಳು ಇರುವುದು ಕಂಡುಬರುತ್ತದೆ. ಆಧುನಿಕ ಸಲಕರಣೆಗಳನ್ನು ಒಳಗೊಂಡಂತಹ ಚರ್ಚು ಸುಂದರವಾಗಿ ನಿರ್ಮಾಣವಾಗಿದೆ.

ವಿಶೇಷವಾಗಿ ಪ್ರತಿವಾರದಲ್ಲಿ ಮುಂಜಾನೆ ೬-೩೦ ರಿಂದ ೭-೩೦ ಹಾಗೂ ಭಾನುವಾರ ಹಾಗೂ ಇತರ ವಿಶೇಷ ಕ್ರಿಸ್ ಮಸ್ ಇತರೆ ಹಬ್ಬಗಳಲ್ಲಿ ಪ್ರಾರ್ಥನೆಗಳು ಮನರಂಜನೆಯ ಕಾರ್ಯಕ್ರಮಗಳು ನಡೆಯುತ್ತಿವೆ. ಇದೊಂದು ಆಧುನಿಕ ಕಾಲದ ಚರ್ಚು 'ಆಗಿದೆ. ಕಟ್ಟಡದ ರಚನೆಯು ಅತ್ಯಂತ ಸುಂದರವಾಗಿ ಹಾಗೂ ಸುವ್ಯವಸ್ಥಿತವಾಗಿ ರಚನೆಯಾಗಿದೆ.

೫. ಬಾಲ ಯೇಸು ದೇವಾಲಯ

ಸ್ಥಳ : ಶಾಂತಿನಗರ, ಹುಬ್ಬಳ್ಳಿ	ತಾಲೂಕು : ಹುಬ್ಬಳ್ಳಿ
ಪಂಥ : ಕ್ಯಾಥೋಲಿಕ್	ಕಾಲಮಾನ : ೧೯೮೯
ಶೈಲಿ : ಆಧುನಿಕ ಶೈಲಿ	ಸ್ಥಿತಿ : ಉತ್ತಮ

ಧಾರವಾಡ ಜಿಲ್ಲೆಯ ಹುಬ್ಬಳ್ಳಿಯ ತಾಲೂಕಿನ ಹುಬ್ಬಳ್ಳಿಯ ಉಪನಗರದ ಶಾಂತಿನಗರ ಎಂಬ ಉಪನಗರದಲ್ಲಿ ಈ ಬಾಲಯೇಸು ದೇವಾಲಯ ರಚನೆಯಾಗಿವೆ. ಇದು ೧೯ನೇ ಶತಮಾನದ ಹಾಗೂ ಇತ್ತೀಚಿಗಷ್ಟೇ ರಚನೆಯಾದ ಚರ್ಚಿನ ಕಟ್ಟಡವಾಗಿದೆ. ಆಯಾ ಪ್ರದೇಶದ, ಆಯಾ ಕಾಲದ, ಕಟ್ಟಡಗಳ ರಚನೆಯಲ್ಲಿ ವ್ಯತ್ಯಾಸವಾಗಿರುವುದನ್ನು ನಾವು ಕಾಣುತ್ತೇವೆ. ಅದರಂತೆ ಆಧುನಿಕ ಕಾಲದಲ್ಲಿ ರಚನೆಯಾದ ಕಟ್ಟಡವು ಆಧುನಿಕವಾಗಿ ರಚನೆಯನ್ನು ಒಳಗೊಂಡಿರುವುದನ್ನು ನಾವು ಕಾಣುತ್ತೇವೆ.

ಬಾಲಯೇಸು ದೇವಾಲಯವು ರಸ್ತೆಯ ಬದಿಯಲ್ಲಿ ಹೊಂದಿಕೊಂಡಂತೆ ರಚನೆಯಾಗಿದೆ. ಇದು ಸಿಮೆಂಟ್ ಹಾಗೂ ಕಲ್ಲಿನಿಂದ ರಚನೆಯಾಗಿದೆ. ದೇವಾಲಯದ ಮುಖ್ಯದ್ವಾರದ ಮೇಲೆ ಸಿಲುಬೆಯ ಚಿನ್ಹೆಯನ್ನು ಹೊಂದಿರುವುದು ಕಂಡುಬರುತ್ತದೆ. ಪ್ರವೇಶದ್ವಾರದ ಬಾಗಿಲುಗಳು ಆಧುನಿಕ ಮಾದರಿಯ ಕಟ್ಟಿಗೆಯಿಂದ ರಚನೆಯಾಗಿರುವುದನ್ನು ನಾವು ಕಾಣುತ್ತೇವೆ.

ಚರ್ಚಿನ ಒಳಗೋಡೆಯು ಅತ್ಯಂತ ಸುವ್ಯವಸ್ಥಿತವಾದ ಕಟ್ಟಡದ ರಚನೆಯನ್ನು ಒಳಗೊಂಡಿದೆ. ಹಾಗೂ ಒಳಗೋಡೆಗೆ ಹೆಚ್ಚು ಜಾಲಾಂದರಗಳನ್ನು ಒಳಗೊಂಡಿರುವುದನ್ನು ನಾವು ಕಾಣುತ್ತೇವೆ. ಜಾಲಾಂಧರಗಳ ಮಾದರಿಯ ನೂಲಿನ ಮಾದರಿಗಳಿಂದ ರಚನೆಯಾಗಿವೆ. ಚರ್ಚಿನ ಒಳಗಡೆ ಪ್ರಾರ್ಥಿಸಲು ಸಭಾಂಗಣವಿದೆ. ಚರ್ಚಿಗೆ ಬರುವ ಕ್ರೈಸ್ತರ ಭಕ್ತಾದಿಗಳಿಗೆ ಕೂಡಲು ಕಟ್ಟಿಗೆ ಹಾಗೂ ಕಬ್ಬಿಣದ ರಚನೆಯಿಂದ ಮಾಡಿದ ಆಸನಗಳನ್ನು ಒಳಗೊಂಡಿದೆ. ಪುರುಷರಿಗೆ ಪ್ರತ್ಯೇಕ ಹಾಗೂ ಮಹಿಳೆಯರಿಗೆ ಪ್ರತ್ಯೇಕವಾದ ಆಸನಗಳನ್ನೊಳಗೊಂಡಿದೆ.

ಚರ್ಚಿನಲ್ಲಿ ಪ್ರಾರಂಭದಲ್ಲಿ ಯೇಸುವಿನ ಸುವಾರ್ತೆಯನ್ನು ಆಂಗ್ಲಭಾಷೆಯಲ್ಲಿ ಬೋಧಿಸುತ್ತಿದ್ದರು. ಹಾಗೂ ಯೇಸುವಿನ ಸುವಾರ್ತೆಯನ್ನು ಕನ್ನಡ ಭಾಷೆಯಲ್ಲಿ ಬೋಧಿಸುವರು. ಕಾರಣ ಕ್ರೈಸ್ತರು ಹಾಗೂ ಕ್ರೈಸ್ತೇತರ ಧರ್ಮದವರು ಪ್ರಾರ್ಥನೆಯಲ್ಲಿ ಪಾಲ್ಗೊಳ್ಳುವುದರಿಂದ ಸುವಾರ್ತೆಯನ್ನು ಕನ್ನಡದಲ್ಲಿ ಬೋಧಿಸುವರು. ಚರ್ಚಿನ ಹೊರಭಾಗವು ವಿಶಾಲವಾದ ಆವರಣ ಹೊಂದಿದ್ದು, ವಿಶೇಷವಾದ ಮನರಂಜನೆಯ ಕಾರ್ಯಕ್ರಮ ನಡೆಯಲು ಒಂದು ವೇದಿಕೆಯನ್ನು ಕೂಡ ಹೊಂದಿದೆ. ಶಿಸ್ತಿನಿಂದ ಕಾರ್ಯಕ್ರಮಗಳನ್ನು ನಡೆಸುವರು.

೬. ಸೆಂಟ್ ಎಂಡ್ರಿವ್ಯೂಸ್ ಚರ್ಚ್

ಸ್ಥಳ : ಗದಗ ರಸ್ತೆ, ಹುಬ್ಬಳ್ಳಿ	ತಾಲೂಕು : ಹುಬ್ಬಳ್ಳಿ
ಪಂಥ : ಕ್ಯಾಥೋಲಿಕ್	ಕಾಲಮಾನ : ೧೮೯೭
ಶೈಲಿ : ಯೂರೋಪಿಯನ್ ಶೈಲಿ	ಸ್ಥಿತಿ : ಮಧ್ಯಮ

[illegible]

[illegible]

[illegible]

[illegible]

[illegible]

ಸಂತ ಎಂಡ್ರಿವ್ಯೂಸ ಚರ್ಚು ಸುಮಾರು ಒಂದು ಶತಮಾನವನ್ನು ಪೂರೈಸಿದ ಒಂದು ಪ್ರಮುಖ ಚರ್ಚು ಇದಾಗಿದೆ. ಇದರ ಸ್ಥಾಪನೆಯು ೧೯೪೭ರಲ್ಲಿ ಆಯಿತು. ಇದು ಗದಗ ರೋಡ್ ಹುಬ್ಬಳ್ಳಿಯಲ್ಲಿದೆ. ಇದು ಯೂರೋಪಿಯನ್ ಶೈಲಿಯ ಮತ್ತೊಂದು ಚರ್ಚ ಇದಾಗಿದೆ. ಇದು ಕ್ಯಾಥೋಲಿಕರ ಒಂದು ಚರ್ಚು ಆಗಿದೆ.

ಈ ಚರ್ಚಿನ ಮುಖ್ಯದ್ವಾರವು ಆಧುನಿಕ ಶೈಲಿಯ ಬಾಗಿಲನ್ನು ಹೊಂದಿದೆ. ಮುಂಭಾಗದ ಮೇಲ್ಛಾವಣಿಯು ಹಂಚಿನಿಂದ ಹಾಗೂ ಕಟ್ಟಿಗೆಯಿಂದ ನಿರ್ಮಿಸಲಾಗಿದೆ. ಹಾಗೂ ಚರ್ಚಿನ ಸಂಪೂರ್ಣವಾದ ಗೋಡೆಯು ಕಲ್ಲಿನಿಂದ ಹಾಗೂ ಗಚ್ಚಿನಿಂದ ರಚನೆಯಾಗಿರುವುದನ್ನು ಕಾಣುತ್ತೇವೆ. ಚರ್ಚಿನ ತಳಪಾಯವು ಕಲ್ಲಿನಿಂದ ರಚನೆಯಾಗಿರುವುದು ಕಂಡುಬರುತ್ತದೆ. ಇದು ನೂರು ವರ್ಷಗಳನ್ನು ಪೂರೈಸಿದರು ಅಂತ ಗಟ್ಟಿಮುಟ್ಟಾದ ಕಟ್ಟಡ ಇದಾಗಿದೆ. ಕ್ರೈಸ್ತರು ಒಂದೆಡೆ ಭಕ್ತರನ್ನು ಸಂಧಿಸುವ ಸಾಮೂಹಿಕ ಪ್ರಾರ್ಥನೆ ಹಾಗೂ ಸುವಾರ್ತೆಯ ಬೋಧನೆಗೆ ಚರ್ಚುಗಳ ಬಳಕೆಯು ಪ್ರಾಮುಖ್ಯತೆಯನ್ನು ಪಡೆದವು.

ಚರ್ಚಿನ ಆವರಣವು ವಿಶಾಲವಾಗಿದೆ. ಚರ್ಚಿನ ಆವರಣದಲ್ಲಿಯೇ ಚರ್ಚಿನ ಕಚೇರಿಯು ಇರುವುದನ್ನು ಕಾಣಬಹುದು. ಚರ್ಚಿನ ಗೋಡೆಯು ಆಧುನಿಕ ಜಾಲಂದರ(ಕಿಡಿಕಿ)ಗಳಣ್ನು ಒಳಗೊಂಡಿದೆ. ಗೋಡೆಯುದ್ದಕ್ಕೂ ಜಾಲಾಂದ್ರಗಳ ಬಳಕೆಯು ಹೆಚ್ಚಾಗಿ ಹೊಂದಿದೆ. ಚರ್ಚಿನ ದ್ವಾರವು ಆಧುನಿಕ ಶೈಲಿಯಲ್ಲಿ ಕಬ್ಬಿಣದ ಸಲಾಕೆಗಳನ್ನು ಬಳಸಿ ರಚನೆ ಮಾಡಿದ್ದಾರೆ. ಚರ್ಚಿನ ಒಳಾಂಗಣವು ಇತರೆ ಚರ್ಚಿಗೆ ಹೋಲಿಸಿದರೆ ಸ್ವಲ್ಪ ಕಿರಿದಾಗಿದೆ. ಆದರೆ ಸುವ್ಯವಸ್ಥಿತವಾದ ಕಟ್ಟಡ ರಚನೆಯನ್ನು ಒಳಗೊಂಡಿದೆ. ಬ್ರಿಟಿಷರ ಕಾಲದಲ್ಲಿ ಆಧುನಿಕ ಕಾಲದ ಕಟ್ಟಡಗಳ ರಚನೆಗಳು ಪ್ರಾರಂಭವಾದವು. ಅವುಗಳು ಯೋಜನಾ ಬದ್ಧವಾಗಿ ರಚನೆಯನ್ನು ಒಳಗೊಂಡ ಕಟ್ಟಡಗಳೇ ಆಗಿವೆ. ಚರ್ಚು, ಸಭಾಂಗಣ ಹಾಗೂ ಗರ್ಭಾಂಗಣವನ್ನು ಹೊಂದಿದೆ.

ಆಧುನಿಕ ಶೈಲಿಯ ಚರ್ಚುಗಳು ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನಲ್ಲಿ ಇಂತಹ ನೂರಾರು ಚರ್ಚುಗಳನ್ನು ಕಾಣಬಹುದು. ಅಂತಹ ಆಧುನಿಕ ಮಾದರಿಯ ಕಟ್ಟಡ ಧಾರವಾಡ ಜಿಲ್ಲೆಯ ಕ್ರೈಸ್ತರ ಚರ್ಚುಗಳ ಕಟ್ಟಡಗಳಲ್ಲಿ ಕಾಣಬಹುದು. ಚರ್ಚುಗಳ ರಚನೆಯ ಮಾದರಿಯನ್ನು ಗಮನಿಸಿದಾಗ ಅವುಗಳ ರಚನೆಯು ಆಯಾ ಪ್ರದೇಶದ ಜನರ ಅಥವಾ ಸಾಂಸ್ಕೃತಿಕ ಆಧಾರದ ಮೇಲೆ ರಚನೆಯಲ್ಲಿ ಮಾರ್ಪಾಡುಗಳಾಗಿರುವುದು ಕಂಡುಬರುತ್ತದೆ. ರವಿವಾರ ಹಾಗೂ ಇತರೆ ವಿಶೇಷ ದಿನಗಳಲ್ಲಿ ಯೇಸುವಿನ ಸುವಾರ್ತೆಯನ್ನು ಬೇಧಿಸುವುದು ಹಾಗೂ ಮನರಂಜನೆಯ ಕಾರ್ಯಕ್ರಮ ನಡೆಸುವಲ್ಲಿ ಬಳಕೆಯಾಗುತ್ತದೆ.

[illegible]

[illegible]

[illegible]

[illegible]

[illegible]

೭. ಸೆಂಟ್ ಜಾನ್ಸ್ ಲೂಥರನ್ ಚರ್ಚ್

ಸ್ಥಳ : ಗದಗ ರಸ್ತೆ, ಹುಬ್ಬಳ್ಳಿ **ತಾಲೂಕು :** ಹುಬ್ಬಳ್ಳಿ

ಪಂಥ : ಕ್ಯಾಥೋಲಿಕ್ **ಕಾಲಮಾನ :** ೧೯೮೧

ಶೈಲಿ : ಯೂರೋಪಿಯನ್ ಶೈಲಿ **ಸ್ಥಿತಿ :** ಉತ್ತಮ

ಧಾರವಾಡದಿಂದ ಹುಬ್ಬಳ್ಳಿಯು ೨೦ ಕಿ.ಮೀ. ಅಂತರದ ದೂರದಲ್ಲಿರುವ ಹುಬ್ಬಳ್ಳಿ ತಾಲೂಕಿನಲ್ಲಿ ಕ್ರೈಸ್ತರ ಆಧುನಿಕ ಮಾದರಿಯ ಚರ್ಚುಗಳು ಬಹಳ ಕಂಡುಬರುತ್ತವೆ. ಇಂತಹ ಪ್ರಮುಖ ಚರ್ಚುಗಳಲ್ಲಿ ಸಂತ ಲೂಥರನ ಚರ್ಚು ಕೂಡ ಒಂದು. ಪ್ರತಿಯೊಂದು ಚರ್ಚುಗಳು ರಚನೆಯಲ್ಲಿ, ಮಾದರಿಯಲ್ಲಿ, ವಿಭಿನ್ನವಾಗಿ ರಚನೆಯಾಗಿರುವುದು ಕಂಡುಬರುತ್ತದೆ. ಕಾರಣ ಮೊದಲು ರಚನೆಯಾಗಿರುವ ಕಟ್ಟಡಗಳು ಮತ್ತು ನಂತರದ ಅವಧಿಯಲ್ಲಿ ರಚನೆಯಾದ ಕಟ್ಟಡಗಳು ವ್ಯತ್ಯಾಸ ಹೊಂದಿರುವುದನ್ನು ಕಾಣುತ್ತೇವೆ. ಅದು ಮೊದಲಿನ ಸ್ವರೂಪ ಹೊಂದಿರುವ ರಚನೆಯಲ್ಲಿ, ಗಾತ್ರದಲ್ಲಿ, ಆಕಾರದಲ್ಲಿ, ತಲವಿನ್ಯಾಸದ ರಚನೆಯಲ್ಲಿ ಹಾಗೂ ಮೇಲಿನ ಗೋಪುರದ ಆಕಾರದಲ್ಲಿ ವ್ಯತ್ಯಾಸವನ್ನು ಕಾಣಬಹುದು.

ಈ ಸಂತ ಜಾನ್ಸ್ ಲೂಥರನ ಚರ್ಚು ಇದು ಹುಬ್ಬಳ್ಳಿಯಿಂದ ಗದಗ ಹೋಗುವ ಮಾರ್ಗದಲ್ಲಿದೆ. ಇದು ಈ ಮೊದಲಿನ ಚರ್ಚುಗಳಿಗಿಂತ ರಚನೆಯಲ್ಲಿ ತುಂಬಾ ಆಕರ್ಷಕವಾಗಿ ಕಂಡುಬರುತ್ತದೆ. ಇದರ ಸ್ಥಾಪನೆಯು ೧೯೮೧ರಲ್ಲಿ ರಚನೆಯಾದುದು ಅಂದರೆ ಇದು ಆಧುನಿಕ ಶೈಲಿ ಕಟ್ಟಡವಾಗಿದೆ. ಇಲ್ಲಿ ವಿಶಾಲವಾದ ಪ್ರಾಂಗಣವಿದ್ದು, ಉಳಿದ ಚರ್ಚುಗಳು ಒಂದು ಅಥವಾ ಎರಡು ಶಿಲುಬೆಗಳನ್ನು ಹೊಂದಿದ್ದರೆ ಈ ಚರ್ಚು ನಾಲ್ಕು ಶಿಲುಬೆಯನ್ನು ಹೊಂದಿದೆ. ನಾಲ್ಕು ವಿಶೇಷ ಗೋಪುರವನ್ನು ಹೊಂದಿದ ಚರ್ಚು ಇದಾಗಿದೆ ಎಂದು ತಿಳಿದುಬರುತ್ತದೆ.

ಮೊದಲಿನ ಹಂತದಲ್ಲಿ ಚರ್ಚುಗಳನ್ನು ರಚನೆಯಾದ ಸಂದರ್ಭದಲ್ಲಿ ಯೇಸುವಿನ ತಂದೆ, ತಾಯಿ ಹಾಗೂ ಯೇಸುವಿನ ಹೆಸರುಗಳನ್ನು ಚರ್ಚುಗಳಿಗೆ ಇಡುತ್ತಿದ್ದರು. ನಂತರ ಮಾರ್ಪಡಾಗಿ ಯೇಸುವಿನ ಹನ್ನೆರಡು ಜನ ಶಿಷ್ಯಂದಿರ ಹೆಸರನ್ನು ನೇಮಕ ಮಾಡಿದರು. ತದನಂತರದಲ್ಲಿ ಕ್ರೈಸ್ತಧರ್ಮ ಪ್ರಚಾರದ ಕಾರ್ಯದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಮಿಷನರಿಗಳ ಹೆಸರನ್ನು ಇಡುವ ಆಚರಣೆಗೆ ತಂದರು. ಇದೇ ಸ್ವರೂಪವಾಗಿ ಈ ಚರ್ಚಿಗೆ ಸಂತಜಾನ್ ಲೂಥರನ ಹೆಸರನ್ನು ಇಡಲಾಗಿದೆ. ಇದು ಒಂದು ಅದ್ಭುತವಾದ ರಚನೆಯಿಂದ ಕೂಡಿದ ಚರ್ಚು ಇದಾಗಿದೆ. ನೋಡಲು ಭೂಮಿಯ ಮೇಲಿನ ಸ್ವರ್ಗ ಎಂಬಂತೆ ಅತ್ಯಾಕರ್ಷಕವಾದ ರಚನೆಯಿಂದ ಕೂಡಿದ ಚರ್ಚ ಇದಾಗಿದೆ.

ಈ ಚರ್ಚಿನ ಮುಖ್ಯ ದ್ವಾರವು ಆಧುನಿಕ ರೀತಿಯ ಕಟ್ಟಿಗೆಯಿಂದ ರಚನೆಯಾಗಿದೆ. ದ್ವಾರಬಾಗಿಲಿನ ಪಕ್ಕದ ಎರಡು ಬದಿಯಲ್ಲಿಯ ನವೀನ ಮಾದರಿಯ ಎರಡು ಜಾಲಾಂದರಗಳಿದೆ. ದ್ವಾರದ ಮುಂದೆ

ಮಂಟಪದ ಮಾದರಿಯಿಂದ ಕೂಡಿದೆ. ಚರ್ಚಿನ ಒಳಗೆ ಸಭಾಂಗಣವಿದೆ. ಮುಂದೆ ಗರ್ಭಾಂಗಣ ಇದ್ದು, ಗರ್ಭಾಂಗಣವು ಈ ಚರ್ಚಿನಲ್ಲಿ ಸುಂದರವಾಗಿ ಮೂಡಿಬಂದಿದೆ.

ಸಂತ್ ಪೀಟರ್ಸ್ ಚರ್ಚ್

ಸ್ಥಳ : ವಿದ್ಯಾರಣ್ಯನಗರ ಗದಗ ರಸ್ತೆ **ತಾಲೂಕು :** ಹುಬ್ಬಳ್ಳಿ

ಪಂಥ : ಕ್ಯಾಥೋಲಿಕ್ **ಕಾಲಮಾನ :** ೧೯೬೫

ಶೈಲಿ : ಯೂರೋಪಿಯನ್ ಶೈಲಿ **ಸ್ಥಿತಿ :** ಉತ್ತಮ

ಹುಬ್ಬಳ್ಳಿಯಿಂದ ಗದಗಗೆ ಹೋಗುವ ಮಾರ್ಗದಲ್ಲಿ ಈ ಚರ್ಚಿನ ರಚನೆಯಾಗಿದೆ. ಇದು ಒಂದು ಆಧುನಿಕ ಕಾಲದ ಅಂದರೆ ೧೯ನೇ ಶತಮಾನದಲ್ಲಿ ರಚನೆಯಾದ ಒಂದು ಚರ್ಚಾಗಿದೆ. ಈ ಚರ್ಚು ವಿಶಾಲವಾದ ಪ್ರದೇಶದಲ್ಲಿ ರಚನೆಯಾದ ಒಂದು ಪ್ರಮುಖ ಕಟ್ಟಡ ಆಗಿದೆ. ಆಧುನಿಕ ಕಾಲದಲ್ಲಿ ೧೯೬೫ರಲ್ಲಿ ರಚನೆಯಾಗಿದ್ದರಿಂದ ಇದು ಹೆಚ್ಚಾಗಿ ಸಿಮೆಂಟ್ ಹಾಗೂ ಕಲ್ಲಿನ ಬಳಕೆಯನ್ನು ಕಾಣುತ್ತೇವೆ. ಚರ್ಚು ಈಗ ತೆಲುಗು ಮೂಲದ ಕ್ರೈಸ್ತರು ಈಗ ಇಲ್ಲಿ ವಾಸವಾಗಿದ್ದಾರೆ. ಅಲ್ಲಿನ ಚರ್ಚಿನ ಆವರಣದಲ್ಲಿ ಒಂದು ಶಾಲೆಯು ಇದೆ. ಜೊತೆಗೆ ಅದೇ ಆವರಣದಲ್ಲಿ ವಿದ್ಯಾರ್ಥಿಗಳ ವಸತಿ ನಿಲಯವು ಕೂಡ ಇದೆ.

ಇಂತಹ ಪ್ರದೇಶದಲ್ಲಿ ಕ್ರೈಸ್ತರ ಭಕ್ತಾದಿಗಳಿಗೆ ಪ್ರಾರ್ಥನೆ ಸಲ್ಲಿಸಲು ಹಾಗೂ ಯೇಸುವಿನ ಉಪದೇಶ ನೀಡಲು ಸಂತ ಪೀಟರ್ಸನ ಚರ್ಚ ರಚನೆಯಾಗಿದೆ. ಇದು ವಿಶಾಲವಾದ ತಳಪಾಯದ ಮೇಲೆ ಈ ಆಧುನಿಕ ಶೈಲಿಯ ಸಂತ ಪೀಟರ್ಸ್‌ನ ಚರ್ಚಿನ ರಚನೆಯಾಗಿದೆ. ಚರ್ಚಿನ ಹೊರರಚನೆಯು ಅತ್ಯಾಕರ್ಷಕವಾಗಿ ಮೂಡಿ ಬಂದಿದೆ. ಚರ್ಚಿನ ತುತ್ತ ತುದಿಯಲ್ಲಿ ಗೋಪುರವಿದ್ದು, ಅಲ್ಲಿ ಮೂರು ಶಿಲುಬೆಗಳನ್ನು ಹೊಂದಿದೆ.

ಮುಖ್ಯ ದ್ವಾರವು ಈಗಿನ ಆಧುನಿಕ ಮಾದರಿಯ ಕಟ್ಟಿಗೆಯಿಂದ ಕೂಡಿದ ಬಾಗಿಲನ್ನು ಹೊಂದಿದೆ. ಚರ್ಚಿನ ಮುಂಭಾಗವು ಸುತ್ತಲೂ ೪ ಮುಖ್ಯ ಕಂಬಗಳಿಂದ ಆಧಾರವಾಗಿ ರಚನೆಯಾಗಿದೆ. ಈ ಆಧಾರ ಕಂಬಗಳು ಬಾಹ್ಯ ನೋಟಕ್ಕೆ ವೃತ್ತಾಕಾರವಾಗಿ ಸುತ್ತುವರೆದು ತುತ್ತ ತುದಿಯಲ್ಲಿ ಚೂಪಾಗಿ ರಚನೆಯಾಗಿದೆ. ಕಂಬಗಳು ಕೂಡ ಮುಖ್ಯವಾಗಿ ಸಿಮೆಂಟಿನಿಂದ ರಚನೆಯಾಗಿರುವುದು ಕಂಡುಬರುತ್ತದೆ. ಕಟ್ಟದ ಮದ್ಯದ ಮದ್ಯದಲ್ಲಿ ತ್ರಿಕೋನಾಕಾರದ ಜಾಲಾಂಧರ ಮಾದರಿ ಮಾಡಿದ್ದಾರೆ.

ಚರ್ಚಿನ ಒಳಭಾಗವು ವಿಶಾಲವಾದ ಸಭಾಂಗಣವನ್ನು ಒಳಗೊಂಡಿದೆ. ಮುಖ್ಯ ಫಾದರ್ ಗೆ ಸುವಾರ್ತೆಯ ಬೋಧಿಸಲು ಆಸನ ಹಾಗೂ ಉತ್ತಮವಾದ ಡಯಸನ್ನು ಒಳಗೊಂಡಿರುತ್ತದೆ. ಚರ್ಚನ ಒಳಗೆ ಎರಡು ಪ್ರತ್ಯೇಕವಾದ ಆಸನಗಳನ್ನು ಒಳಗೊಂಡಿದೆ. ಅಲ್ಲಿ ಪ್ರತೇಕವಾಗಿ ಪುರುಷರು ಹಾಗೂ

ಸ್ತ್ರೀಯರು ಪ್ರಾರ್ಥಿಸಲು ಅನುಕೂಲವಾಗುವ ರೀತಿಯಲ್ಲಿ ನಿರ್ಮಿಸಿದ್ದಾರೆ. ಚರ್ಚಿನ ಗೋಡೆಯ ಒಳಗೂ ಹಾಗೂ ಹೊರಗೂ ನುಣುಪಾಗಿ ಸಿಮೆಂಟಿನಿಂದ ನಿರ್ಮಿಸಿದ್ದಾರೆ. ಆದರೆ ಚರ್ಚಿನ ಸಂಪೂರ್ಣವಾದ ರಚನೆ ವಿಭಿನ್ನವಾಗಿ ಕಾಣುತ್ತದೆ.

ಭಾನುವಾರ ಹಾಗೂ ಇತರೆ ದಿನಗಳಲ್ಲಿ ವಿಶೇಷ ಕಾರ್ಯಕ್ರಮಗಳಲ್ಲಿ ಮೂಡಿಬರುವುದನ್ನು ಕಾಣುತ್ತೇವೆ. ಚರ್ಚಿನ ಅವರಣದಲ್ಲಿ ಶಾಲೆ ಹಾಗೂ ವಸತಿ ನಿಲಯ ಇರುವುದರಿಂದ ವಿದ್ಯಾರ್ಥಿಗಳಿಗೆ ಶಿಸ್ತಿನ ಶಿಕ್ಷಣದ ಜೊತೆಗೆ ಪ್ರಾರ್ಥನೆ ಸಲ್ಲಿಸಲು ಅನುಕೂಲವಾಗುತ್ತದೆ.

ದಿ ಹೋಲಿನೆಮ್ ಕ್ಯಾಥಡ್ರಲ್

ಸ್ಥಳ : ಘುಂಟಿಕೇರಿ, ಕ್ರಿಶ್ಚಿಯನ್ ಕಾಲನಿ **ತಾಲೂಕು :** ಹುಬ್ಬಳ್ಳಿ

ಪಂಥ : ಪ್ರೊಟೆಸ್ಟೆಂಟ್ **ಕಾಲಮಾನ :** ೧೯೨೮

ಶೈಲಿ : ಯೂರೋಪಿಯನ್ ಶೈಲಿ **ಸ್ಥಿತಿ :** ಉತ್ತಮ

ಧಾರವಾಡ ಜಿಲ್ಲೆಯ ಹುಬ್ಬಳ್ಳಿಯ ಉಪನಗರವಾದ ಘುಂಟಿಕೇರಿಯಲ್ಲಿ "ದಿ ಹೊಲಿನೇಮ ಕ್ಯಾಥಡ್ರಲ್ " ಎಂಬ ಚರ್ಚ ಇದೆ. ಇದರ ಸ್ಥಾಪನೆಯು ೧೯೨೮ರಲ್ಲಿ ಅಂದರೆ ೧೯ನೇ ಶತಮಾನದಲ್ಲಿ ರಚನೆಯಾದ ಒಂದು ಪ್ರಮುಖ ಹಾಗೂ ಆಧುನಿಕ ಕನ್ನಡ ಇದಾಗಿದೆ. ಇದರ ರಚನೆಯೂ ಸಂಪೂರ್ಣವಾಗಿ ಹೆಚ್ಚು ಕಲ್ಲಿನ ಬಳಕೆಯಿಂದ ರಚನೆಯಾಗಿದೆ. ಇದರ ರಚನೆಯು ವಿಶಾಲವಾದ ಆವರಣ ಹೊಂದಿತ ಪ್ರದೇಶವಾಗಿದೆ. ಚರ್ಚ್ ನಾಲ್ಕು ದಿಕ್ಕುಗಳಿಂದ ಎತ್ತರವಾದ ಕಲ್ಲಿನ ಕಂಬಗಳೊಂದಿಗೆ ರಚನೆಯಾಗಿದೆ.. ಕಟ್ಟಡದ ರಚನೆಯು ಇಂಡೋ ಇಸ್ಲಾಮಿಕ್ ಶೈಲಿಯಲ್ಲಿ ಬರುವಂತೆ ಮೀನಾರಗಳಂತೆ ಆಕೃತಿ ಹೊಂದಿದೆ.

ಚರ್ಚಿನ ಮುಂಭಾಗದಲ್ಲಿ ಪ್ರವೇಶದ್ವಾರದ ಸುತ್ತಲೂ ಕಟ್ಟಲಾದ ಕಲ್ಲಿನ ಬಳಕೆಯು ಉತ್ತಮವಾಗಿ ಮೂಡಿಬಂದಿದೆ. ಪ್ರವೇಶ ದ್ವಾರದ ಬಾಗಿಲನ್ನು ಹೊರತುಪಡಿಸಿ, ಉಳಿದ ಭಾಗವನ್ನು ಕಲ್ಲಿನಿಂದ ರಚಿಸಲಾಗಿದೆ. ಅಲ್ಲಲ್ಲಿ ಕಲ್ಲಿನೊಂದಿಗೆ ಗಚ್ಚನ್ನು ಬಳಸಿರುವುದು ಕಂಡುಬಂದಿದೆ. ಇದು ಬ್ರಿಟಿಷರ ಅವಧಿಯಲ್ಲಿ ರಚನೆಯಾದ ಆಡಳಿತ ಕಟ್ಟಡಗಳಂತೆ ರಚನೆಯಾಗಿರುವುದರಿಂದ ಬ್ರಿಟಿಷರ ಕಟ್ಟಡದ ಶಿಸ್ತುಬದ್ಧತೆಯು ಕಾಣಿಸುತ್ತದೆ. ಪ್ರವೇಶದ್ವಾರದ ಸುತ್ತಲಿನ ಸುತ್ತ ಬಳಸಿದ ಕಲ್ಲು ಮೃದುವಾಗಿ ಕಂಡುಬರುವುದು. ಇತರೆ ಹೊರಗಡೆಯ ಬಿರುಸಾದ ಕಲ್ಲಿನ ರಚನೆ ಒಳಗೊಂಡಿರುವುದು ಕಂಡುಬರುವುದು.

ಚರ್ಚಿನ ಹೊರಗಡೆಯ ಸುತ್ತಲೂ ಅಲ್ಲಲ್ಲಿ ಜಾಲಾಂದರಗಳು ಇರುವುದು ಕಂಡುಬರುತ್ತದೆ. ಆದರೆ ಈ ಚರ್ಚಿನ ಜಲಾಂದರಗಳು ಇತರೆ ಚರ್ಚುಗಳ ಜಲಾಂದರಗಳಿಗಿಂತ ಅತ್ಯಂತ ಚಿಕ್ಕ ಚಿಕ್ಕ ಜಲಾಂಧರಗಳಾಗಿವೆ. ಚರ್ಚಿನ ನಾಲ್ಕು ಭಾಗಗಳ ಸುತ್ತುವರೆದು ಒಂದೇ ಮಾದರಿಯ ಕಲ್ಲುಗಳನ್ನು

[illegible]

ಬಳಿಸಿರುವುದು ಕಂಡುಬರುತ್ತದೆ. ಚರ್ಚಿನ ಮೇಲ್ಛಾವಣಿ ಕೂಡ ಕಲ್ಲು ಹಾಗೂ ಸ್ವಲ್ಪ ಸೀಮೆಂಟ್ ಬಳಕೆ ಮಾಡಿರುವುದು ಕಂಡುಬರುತ್ತದೆ. ಚರ್ಚಿನ ತುತ್ತತುದಿಯಲ್ಲಿ ಶಿಲುಬೆಯ ಲಾಂಛನ ಇರುವುದು ಕಂಡುಬರುವುದು.

ಈ ಚರ್ಚಿನ ರಚನೆಯಾಗಿ ಸುಮಾರು ೮ ದಶಕಗಳನ್ನು ಪೂರೈಸಿದೆ. ಇದರ ರಚನೆಯು ಅತ್ಯಂತ ಸುಭದ್ರವಾಗಿ ಕಟ್ಟಡ ರಚನೆಯ ತಳಪಾಯ ಗಟ್ಟಿಯಾಗಿ ಕಲ್ಲಿನಿಂದ ರಚನೆಯಾಗಿರುವ ಈ ಚರ್ಚು ಹೆಚ್ಚು ಕಾಲ ಅಸ್ತಿತ್ವದಲ್ಲಿ ಉಳಿಯುವುದು. ಚರ್ಚಿನ ಒಳಭಾಗವು ಕೂಡ ಉತ್ತಮ ರಚನೆಯಿಂದ ಕೂಡಿದೆ. ಉಳಿದ ಚರ್ಚುಗಳಂತೆ ಈ ಚರ್ಚನಲ್ಲಿ ಕ್ರೈಸ್ತರ ಭಕ್ತಾದಿಗಳಿಗೆ ಪ್ರಾರ್ಥನೆ ಸಲ್ಲಿಸಲು ಆಸನಗಳನ್ನು ರಚನೆ ಮಾಡಿದ್ದಾರೆ.

ಈ ಚರ್ಚಿನ ಮೇಲ್ಛಾವಣಿಯ ಭಾಗದ ಎರಡು ಬದಿಯಲ್ಲಿ ಇಳಿಜಾರಿನಲ್ಲಿ ಮುಂಚಾಚಿರುವುದು ಕಂಡುಬರುವುದು. ಈ ಚರ್ಚಿನ ಭಾಗದಲ್ಲಿ ಒಂದು ವೇದಿಕೆಯೂ ಇದೆ. ಇಲ್ಲಿ ಅವರ ಮನರಂಜನೆಯ ಕಾರ್ಯಕ್ರಮಗಳು ನಡೆಯಬಹುದು.

ಕ್ರಿಸ್ ಮಸ್ ಹಾಗೂ ಉಳಿದ ವಿಷಯಗಳಲ್ಲಿ ಕ್ರೈಸ್ತರು ಸಾಮೂಹಿಕ ಪ್ರಾರ್ಥನೆ ಹಾಗೂ ಕ್ರಿಸ್ತನ ಸುವಾರ್ತೆಯನ್ನು ಬೋಧಿಸುವ ಕಾರ್ಯಕ್ರಮಗಳು ಜರುಗುವುವು.

ಜಪಮಾಲೆ ಮಾತೆಯ ದೇವಾಲಯ

ಸ್ಥಳ : ತುಮರಿಕೊಪ್ಪ   ತಾಲೂಕು : ಕಲಘಟಗಿ

ಪಂಥ : ಕ್ಯಾಥೋಲಿಕ್   ಕಾಲಮಾನ : ೧೯೮೭

ಶೈಲಿ : ಯೂರೋಪಿಯನ್ ಶೈಲಿ   ಸ್ಥಿತಿ : ಕನಿಷ್ಠ

ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ತುಮರಿಕೊಪ್ಪ ಎಂಬ ಗ್ರಾಮದಲ್ಲಿ ಜಪಮಾಲೆ ಮಾತೆಯ ದೇವಾಲಯವಿದೆ. ಇದು ಒಂದು ಕ್ಯಾಥೊಲಿಕ್ ಚರ್ಚ ಆಗಿದೆ. ಸುಮಾರು ಕಘಟಗಿಯಿಂದ ೫ ಕಿ.ಮೀ.ಅಂತರದಲ್ಲಿ ಈ ಚರ್ಚು ರಚನೆಯಾಗಿದೆ.

ಈ ಚರ್ಚಿನ ರಚನೆಯಾದ ಸುಮಾರು ಎರಡು ದಶಕಗಳು ಕಳೆದಿವೆ. ವಿಶಾಲವಾದ ಪ್ರದೇಶದಲ್ಲಿ ಈ ಚರ್ಚಿನ ರಚನೆಯಾಗಿದೆ. ಪ್ರವೇಶದ್ವಾರವು ಆಧುನಿಕ ಶೈಲಿಯಿಂದ ರಚನೆಯಾಗಿದೆ. ಪ್ರವೇಶದ್ವಾರದ ಪಕ್ಕದಲ್ಲಿ ಗೋಡೆಯ ಒಳಗೆ ಗ್ಲಾಸಿನಿಂದ ರಚನೆಯಾದ ಪೆಟ್ಟಿಗೆಯಲ್ಲಿ ಯೇಸುವಿನ ತಾಯಿ ಮೇರಿ ಹಾಗೂ ಯೇಸುವಿನ ಮೂರ್ತಿಯಿದೆ. ಇದು ಕ್ಯಾಥೊಲಿಕ್ ಚರ್ಚು ಆಗಿರುವುದರಿಂದ ಈ ಚರ್ಚಿನಲ್ಲಿ ಮೂರ್ತಿಗಳಿವೆ. ಹಾಗೂ ಇನ್ನೊಂದು ಭಾಗದಲ್ಲಿ ಯೇಸುವಿನ ತಂದೆ ಜೋಸೆಫ್ ಹಾಗೂ ಯೇಸುವಿನ

ಮೂರ್ತಿಗಳಿರುವುದು ಕಂಡುಬರುತ್ತದೆ.

ಚರ್ಚಿನ ಕಟ್ಟಡವು ವಿಶಾಲವಾದ ತಳಪಾಯದ ಮೇಲೆ ರಚನೆಗೊಂಡಿದೆ. ಚರ್ಚಿನ ಮೇಲ್ಛಾವಣಿಯ ಭಾಗ ಮುಂಚಾಚಿದೆ. ಕಟ್ಟಡವನ್ನು ಸಿಮೆಂಟ್ ಹಾಗೂ ಕಲ್ಲಿನ ಬಳಕೆಯನ್ನು ಮಾಡಿ ರಚನೆ ಮಾಡಿದ್ದಾರೆ. ಮೇಲ್ಛಾವಣಿಯ ಭಾಗವು ಪೂರ್ಣವಾಗಿ ಸಿಮೆಂಟ್ ನಿಂದ ರಚನೆಯಾಗಿದೆ. ಮೇಲ್ಛಾವಣಿಯ ತುತ್ತತುದಿಗೆ ಶಿಲುಬೆಯನ್ನು ಹೊಂದಿದೆ.

ಚರ್ಚಿನ ಒಳಪ್ರವೇಶವಾದ ಕೂಡಲೇ ಒಂದು ದೊಡ್ಡ ಸಭಾಂಗಣ ಹೊಂದಿದೆ. ಹಾಗೂ ಮುಖ್ಯಪಾದ್ರಿಯವರು ಸುವಾರ್ತೆಯನ್ನು ಬೋಧಿಸುವ ಆಸನವನ್ನು ಹೊಂದಿದೆ ಅದು ಎತ್ತರವಾದ ಕಟ್ಟೆಯನ್ನು ಹೊಂದಿರುತ್ತದೆ. ಕೆಳಗೆ ಇರುವ ಸಭಾಮಂಟಪದಲ್ಲಿ ಕ್ರೈಸ್ತ ಭಕ್ತರು ಪ್ರಾರ್ಥನೆಯನ್ನು ಮಾಡಲು ಪ್ರತ್ಯೇಕವಾದ ಆಸನಗಳು ಇರುವುದು ಕಂಡುಬರುತ್ತದೆ. ಮುಖ್ಯ ಪಾದ್ರಿಯು ಬೋಧಿಸುವ ಸ್ಥಳವು ವಿಶೇಷವಾದ ದೀಪಾಲಂಕರದಿಂದ ಅಲಂಕೃತಗೊಂಡಿದೆ. ಆಧುನಿಕ ದೀಪಾಲಂಕಾರಗಳಿಂದ ಕೂಡಿದೆ.

ಟ್ರಿನಿಟಿ ಪೆಲೋಸಿಪ್ ಚರ್ಚು

ಸ್ಥಳ : ಕಲಘಟಗಿ	**ತಾಲೂಕು : ಕಲಘಟಗಿ**
ಪಂಥ : ಪ್ರೊಟೆಸ್ಟೆಂಟ್	**ಕಾಲಮಾನ : ೧೯೮೬**
ಶೈಲಿ : ಗೃಹಶೈಲಿ	**ಸ್ಥಿತಿ : ಕನಿಷ್ಠ**

ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಕಲಘಟಗಿ ಶಹರದಲ್ಲಿ ಟ್ರಿನಿಟಿ ಪೆಲೋನೆಪ್ ಚರ್ಚ ಇದೆ. ಇದು ಪ್ರೊಟೆಸ್ಟೆಂಟ್ ಚರ್ಚಾಗಿದೆ. ಇದು ಆಧುನಿಕ ಕಾಲದ ರಚನೆಯಿಂದ ಚರ್ಚು ಆಗಿದೆ. ಇದು ಈಗ ಎರಡು ದಶಕವನ್ನು ಪೂರೈಸಿದ ಇತ್ತೀಚಿನ ಚರ್ಚ ಆಗಿದೆ.

ಚರ್ಚಿನ ರಚನೆಯು ಆಧುನಿಕವಾಗಿದ್ದರಿಂದ ಇದು ಸಿಮೆಂಟ್ ಹಾಗೂ ಕಲ್ಲಿನ ಬಳಕೆಯಿಂದ ರಚಿಸಿದ್ದಾಗಿದೆ. ಹೊರಗಡೆ ಸಾಮಾನ್ಯವಾದ ಪ್ರವೇಶದ್ವಾರವನ್ನು ಹೊಂದಿದ್ದು, ಕಟ್ಟಿಗೆಯಿಂದ ರಚನೆಯಾದ ಭಾಗವನ್ನು ಹೊಂದಿದೆ. ಈ ಚರ್ಚಿನ ರಚನೆಯು ಆಧುನಿಕ ಗೃಹಶೈಲಿಯನ್ನು ಹೊಂದಿದೆ.

ಚರ್ಚಿನ ಒಳಗೆ ಸಭಾಂಗಣವನ್ನು ಹೊಂದಿದೆ. ಅದು ಕಲ್ಲಿನಿಂದ ರಚನೆಯಾಗಿದೆ. ಪಾದ್ರಿಗೆ ವಿಶೇಷವಾದ ಆಸನವನ್ನು ಹೊಂದಿದೆ. ಕ್ರೈಸ್ತರ ಭಕ್ತರಿಗೆ ಆಸನದ ವ್ಯವಸ್ಥೆ ಸಭಾಮಂಟಪದಲ್ಲಿ ನೆಲದ ಮೇಲೆ ಕೂಡುವಂತೆ ಇದೆ. ಚರ್ಚಿನ ಒಳಗೆ ಯಾವುದೇ ಮೂರ್ತಿಗಳು ಕಂಡುಬರುವುದಿಲ್ಲ. ಕಾರಣ ಇದು ಪ್ರೊಟಸ್ಟೆಂಟರ ಚರ್ಚು ಆಗಿದೆ. ಚರ್ಚಿನ ಪಾದ್ರಿಯು ಅದೇ ಆವರಣದಲ್ಲಿ ವಾಸವಾಗಿರುವುದು ತಿಳಿದುಬರುತ್ತದೆ. ಇದರಿಂದಾಗಿ ಪ್ರಾರ್ಥನೆ ಹಾಗೂ ಸುವಾರ್ತೆಯನ್ನು ಬೋಧಿಸಲು ಅನುಕೂಲವಾಗುತ್ತದೆ.

ಟ್ರಿನಿಟಿ ಚರ್ಚ ಆಧುನಿಕ ಬಗೆಯಾದ ಚರ್ಚನ ರಚನೆಯಾಗಿರುವುದರಿಂದ ಇಲ್ಲಿ ವಿಶೇಷವಾದ ರಚನೆ ಏನು ಕಂಡುಬರುವುದಿಲ್ಲ. ಪ್ರತಿವಾರ ಚರ್ಚಿನಲ್ಲಿ ಪ್ರಾರ್ಥನೆ ನಡೆಯುತ್ತದೆ. ವಿಶೇಷವಾದ ದಿನಗಳಲ್ಲಿ ಸುವಾರ್ತೆಯ ಬೋಧನೆ ಹಾಗೂ ಮನರಂಜನೆ ಕಾರ್ಯಕ್ರಮಗಳು ನಡೆಯುತ್ತವೆ. ಗೃಹಶೈಲಿಯಾದ ಕಟ್ಟಿಟವಾಗಿರುವುದರಿಂದ ಜಾಲಾಂಧರಗಳು ನವೀನ ಮಾದರಿಯ ಕಬ್ಬಿಣದ ಸಲಾಖೆ ಹಾಗೂ ಗ್ಲಾಸಿನ ಜೋಡನೆ ಹೊಂದಿರುವುದು ಕಂಡುಬರುತ್ತದೆ.

ಟ್ರಿನಿಟಿ ಚರ್ಚು ಒಳಗೆ ಗೋಡೆಯು ಸಿಮೆಂಟಿನಿಂದ ರಚನೆಯಾಗಿರುವುದು ಕಂಡುಬರುತ್ತದೆ. ಹಾಗೂ ಚರ್ಚಿ ಒಳಗೆ ಸುತ್ತಲೂ ವಿವಿಧ ಬಗೆಯ ಬಟ್ಟೆಗಳಿಂದ ಅಲಂಕರಣ ಮಾಡಿರುವುದು ಕಂಡುಬರುತ್ತದೆ. ಒಟ್ಟಾರೆ ಚರ್ಚಿನ ರಚನೆ ಆಧುನಿಕವಾಗಿದ್ದು ಗೃಹಶೈಲಿಯನ್ನು ಹೊಂದಿದೆ. ಅತ್ಯಂತ ಕಡಿಮೆ ಪ್ರದೇಶದಲ್ಲಿ ಕಡಿಮೆ ಸಭಾಂಗಣವನ್ನು ಹೊಂದಿದೆ.

ಯೇಸುನಾಥನ ಚರ್ಚ

ಸ್ಥಳ : ಕಲಘುಟಗಿ **ತಾಲೂಕು :** ಕಲಘುಟಗಿ

ಪಂಥ : ಪ್ರೊಟೆಸ್ಟೆಂಟ್ **ಕಾಲಮಾನ :** ೧೯೬೨

ಶೈಲಿ : ಗೃಹಶೈಲಿ **ಸ್ಥಿತಿ :** ಕನಿಷ್ಠ

ಯೇಸುನಾಥ ಚರ್ಚುಕೂಡ ಕಲಘುಟಗಿ ತಾಲೂಕು ಕಲಘುಟಗಿ ನಗರದಲ್ಲಿ ಇದೆ. ಇದು ಸುಮಾರು ೨೦ ವರ್ಷಗಳ ಕಾಲಾವಧಿಯ ಚರ್ಚ ಆಗಿದೆ. ಇದು ಕೂಡ ಆಧುನಿಕ ಕಾಲದಲ್ಲಿ ನಿರ್ಮಿತವಾದ ಚರ್ಚ ಆಗಿದೆ.

ಈ ಚರ್ಚಿನ ಗೋಡೆಯು ಸ್ವಲ್ಪ ಸೀಮೆಂಟ್ ಹಾಗೂ ಕಲ್ಲುಗಳಿಂದ ನಿರ್ಮಿತವಾಗಿದೆ. ಗೋಡೆಯ ಮೇಲೆ ಶಿಲುಬೆಯ ಚಿನ್ಹೆಯಿರುವುದು ಕಂಡುಬರುತ್ತದೆ. ಗಾತ್ರದಲ್ಲಿ ಚಿಕ್ಕದಾಗಿ ಇದೆ. ಮೇಲ್ಛಾವಣಿಯು ಕಟ್ಟಿಗೆ ಹಾಗೂ ಮಂಗಳೂರು ಹಂಚಿನ ಜೋಡನೆಯಿಂದ ಕೂಡಿದೆ.

ಚರ್ಚಿನ ಒಳಗೆ ಚಿಕ್ಕದಾದ ಸಭಾಮಂಟಪವಿದೆ. ಪಾದ್ರಿ ಬೋಧನೆಗೆ ಆಸನದ ವ್ಯವಸ್ಥೆಯಿಂದ ಉಳಿದಂತೆ ಭಕ್ತಾದಿಗಳಿಗೆ ನೆಲದ ಮೇಲೆ ಕೂಡುವಂತೆ ಚಿಕ್ಕದಾದ ಸಭಾಂಗಣ ಹೊಂದಿದೆ. ಪ್ರಾರ್ಥನೆ ಹಾಗೂ ಬೋಧನೆಗಳು ನಡೆಯುತ್ತವೆ. ವಿಶೇಷವಾದ ಕ್ರಿಸ್ ಮಸ್ ಹಬ್ಬ ಆಚರಣೆಯನ್ನು ಮಾಡುವುದು.

[illegible]

[illegible]

[illegible]

[illegible]

[illegible]

ಅಡಿಟಿಪ್ಪಣಿಗಳು

೧. ಶೇಷಗಿರಿರಾವ್ ಎಲ್.ಎಸ್., **ಬೆಂಗಳೂರು ದರ್ಶನ, ಸಂಪುಟ** ೧, ಪು.೪೩೩

೨. ಅದೇ, ಪು.೪೩೩

೩. ರಾಮಚಂದ್ರಪ್ಪ ಬರಗೂರು, **ಕರ್ನಾಟಕ ಸಂಗಾತಿ,** ೨೦೦೨, ಪು.೪೧೮

೪. ಎಚ್ಚೆಸ್ಕೆ, **ಅವಲೋಕನ,** ೧೯೮೫, ಪು.೧೨೪

೫. ಅದೇ, ಪು.೧೨೪

೬. ರಾಮಚಂದ್ರಪ್ಪ ಬರಗೂರು, **ಪೂರ್ವೋಕ್ತ,** ೨೦೦೨, ಪು.

೭. ಕಟಗೇರಿ ನ.ಹ., **ಗತಕಾಲದ ಧಾರವಾಡ,** ೨೦೦೮, ಪು.೧೩

ಅಧ್ಯಾಯ ೬

ಸಮಾರೋಪ

೬

ಸಮಾರೋಪ

ಸಂಶೋಧಕನು ಸಂಶೋಧನೆಯನ್ನು ಕೈಗೊಂಡಾಗ ಆ ವಿಷಯಕ್ಕೆ ಸಂಬಂಧಪಟ್ಟಂತೆ ಆಕರ ಗ್ರಂಥಗಳನ್ನು ಸಂಗ್ರಹಿಸಿಕೊಳ್ಳಬೇಕು. ಆ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಇದುವರೆಗೂ ನಡೆದಿರುವ ಅಧ್ಯಯನಗಳ ಸಮೀಕ್ಷೆಯನ್ನು ಮಾಡಬೇಕು. ಆಗ ಸಂಶೋಧಕನಿಗೆ ಸಂಗ್ರಹಿಸಿದ ಮಾಹಿತಿಗಳನ್ನು ವಿಭಿನ್ನ ನೆಲೆಗಳಿಂದ ಅಧ್ಯಯನ ಮಾಡಿದಾಗ ಸೂಕ್ತ ನಿರ್ಧಾರಕ್ಕೆ ಬರಲು ಸಾಧ್ಯವಾಗುತ್ತದೆ. ಸಂಶೋಧಕರು ಆಧಾರಗಳನ್ನು ವಿವಿಧ ರೂಪದಲ್ಲಿ ವಿಶ್ಲೇಷಣೆ ಮಾಡಿಕೊಂಡಾಗ ಕಾಲಗರ್ಭದಲ್ಲಿ ಹುದುಗಿ ಹೋಗಿರುವ ವಿಚಾರಗಳು ಹೊರಗೆ ಬರುತ್ತವೆ. ಅಂತಹ ವಿಚಾರಗಳು ಇಂದಿನ ಸಮಾಜಕ್ಕೆ ಎಷ್ಟು ಮೌಲ್ಯವುಳ್ಳವು ಎಂಬುದು ತಿಳಿದುಬರುತ್ತವೆ. ಅಂತಹ ವಿಚಾರಗಳಿಂದ ನಾವು ಸಮಾಜಕ್ಕೆ ಅಥವಾ ಸಂಸ್ಕೃತಿಗೆ ಕೊಡುಗೆಯನ್ನು ನೀಡಿದಂತಾಗುತ್ತದೆ. ಸಂಶೋಧಕನು ಇಂತಹ ಉದ್ದೇಶ ಮತ್ತು ಅಭಿಪ್ರಾಯಗಳನ್ನು ಸಂಶೋಧನಾ ಕಾರ್ಯದಲ್ಲಿ ತೊಡಗಿಸಿಕೊಂಡಾಗ ಮಾತ್ರ ಸಂಶೋಧನೆಯು ಯಶಸ್ವಿಯಾಗುವುದು. ಜೊತೆಗೆ ಉತ್ತಮ ಸಂಶೋಧನಾ ಪ್ರಬಂಧವಾಗಿ ಬೆಳಕಿಗೆ ಬರುತ್ತದೆ. ಮತ್ತು ಅಂತಹ ಉತ್ತಮ ಪ್ರಬಂಧವು ಸಮಾಜಕ್ಕೆ ಕೊಡುಗೆಯಾಗುವುದು.

ಧಾರವಾಡ ಎಂಬ ಹೆಸರು ಕ್ರಿ.ಶ.೧೧೧೭ರ ಕನ್ನಡ ಶಾಸನದಲ್ಲಿ ಉಲ್ಲೇಖವಿರುವುದನ್ನು ಕಾಣುತ್ತೇವೆ. ಬ್ರಿಟೀಷರ ಕಾಲದಲ್ಲಿ 'ಧಾರವಾರ್' ಎಂದು ಸಂಬೋಧಿಸಲ್ಪಟ್ಟು ನಂತರ ೩೧-೧-೧೯೭೭ರ ಕರ್ನಾಟಕದ ಬಹುತೇಕ ಜಿಲ್ಲೆಗಳಂತೆ 'ಧಾರವಾಡ' ಎಂದು ಪ್ರಸಿದ್ಧವಾಯಿತು. ಇಂತಹ ಧಾರವಾಡ ಜಿಲ್ಲೆಯು ಉತ್ತರ ಕರ್ನಾಟಕದ ಸಾಂಸ್ಕೃತಿಕ ನಗರ ಎಂದೇ ಈಗ ಪ್ರಸಿದ್ಧವಾಗಿದೆ. ಧಾರವಾಡವು ವಿವಿಧತೆಯಲ್ಲಿ ಏಕತೆ ಎಂಬಂತೆ ಹಲವಾರು ಪ್ರಮುಖ ಧರ್ಮಗಳ ತಾಣವಾಗಿದೆ. ಹಿಂದೂ, ಮುಸ್ಲಿಂ, ಜೈನ, ಬೌದ್ಧ, ಕ್ರೈಸ್ತಧರ್ಮ ಎಲ್ಲ ಧರ್ಮಗಳಿಗೆ ಆಶ್ರಯ ನೀಡಿದ ಸ್ಥಳವಾಗಿದೆ.

ಧಾರವಾಡಕ್ಕೆ ಜರ್ಮನಿಯ ಬಾಸೆಲ್ ಮಿಶನ್‌ನಿಂದ ಪ್ರೊಟೆಸ್ಟೆಂಟು ಮಿಶನರಿಗಳ ಆಗಮನದಿಂದಾಗಿ ಕ್ರೈಸ್ತರ ಆಗಮನವಾಯಿತು. ೧೮ನೇ ಶತಮಾನದಲ್ಲಿ ಕ್ರೈಸ್ತರ ಆಗಮನವಾಯಿತು. ಆರಂಭದಲ್ಲಿ ಬಾಸೆಲ್

ಮಿಷನ್ ಜರ್ಮನಿಯಿಂದ ಬಂದ ಮಿಶನರಿ ಎಂದರೆ ಸ್ಯಾಮಯಲ್ ಹೆಬಿಕ್ ಅವರೊಂದಿಗೆ ಸಹಾಯಕರಾದ ಲೆಹ್ನರ ಮತ್ತು ಗ್ರೈಯ್ನರ ೧೮೩೮ರಲ್ಲಿ ಆಗಮಿಸಿದರು.

ಹೆಬಿಕರ ಆಗಮನದಿಂದ ಧಾರವಾಡವು ಕ್ರೈಸ್ತ ಮಿಶನರಿಗಳ ಕೇಂದ್ರವಾಯಿತು. ಧಾರವಾಡದಲ್ಲಿ ಕ್ರೈಸ್ತ ಮಿಶನರಿಗಳ ಕಾರ್ಯಚಟುವಟಿಕೆಗಳೇ ಪ್ರಾರಂಭವಾದವು. ಕ್ರೈಸ್ತ ಧರ್ಮಪ್ರಚಾರದ ಕಾರ್ಯಗಳು ಧಾರವಾಡ ನಗರಕ್ಕೆ ಮಾತ್ರ ಸೀಮಿತವಾಗದೇ ಧಾರವಾಡ ಜಿಲ್ಲೆಯಾದ್ಯಂತ ಪ್ರಸಾರವಾಯಿತು. ಪ್ರಮುಖವಾಗಿ ಕ್ರೈಸ್ತರ ಪವಿತ್ರ ಪ್ರಾರ್ಥನಾ ಮಂದಿರಗಳಾದ ಚರ್ಚುಗಳು ರಚನೆಯಾದವು. ಚರ್ಚುಗಳು ರಚನಾ ವಿನ್ಯಾಸದಲ್ಲಿ ವ್ಯತ್ಯಾಸಗಳು ಉಂಟಾಗುವುದನ್ನು ಗಮನಿಸಬಹುದು.

ಸ್ಯಾಮುಯಲ್ ಹೆಬಿಕರಿಂದ ಪ್ರಾರಂಭವಾದ ಮಿಶನರಿಗಳು ಮುಂದೆ ಬಾಸೆಲ್ ಮಿಶನ್‌ನಿಂದ ಮೋಗ್ಲಿಂಗ, ಕಿಟೆಲ್, ಲೆಹ್ನರ, ಲೆಯರ, ವೈಗಲ್, ಮುಲ್ಲರ, ಝೀಗ್ಲರ ಹೀಗೆ ಪ್ರಮುಖ ಹಲವಾರು ಮಿಶನರಿಗಳು ಧಾರವಾಡ ಜಿಲ್ಲೆಯಲ್ಲಿ ಶಿಕ್ಷಣ, ಮುದ್ರಣ, ಸಾಹಿತ್ಯ ವೃತ್ತಿ ತರಬೇತಿ ಕೇಂದ್ರಗಳಲ್ಲಿ ಚರ್ಚುಗಳನ್ನು ನಿರ್ಮಿಸಿದರು. ಇವು ಮಿಶನರಿಗಳ ಸಾಧನೆಗಳಾಗಿವೆ. ಸ್ಯಾಮುಯಲ್ ಹೆಬಿಕರು ಅಂದಿನ ಸಂದರ್ಭದಲ್ಲಿ ಧಾರವಾಡ ನಗರಕ್ಕೆ ಭೇಟಿ ನೀಡಿ ಇಲ್ಲಿ ಉಳಿದಿದ್ದಾರೆ. ಧಾರವಾಡವು ಇಂದು ಕ್ರೈಸ್ತರ ಕೇಂದ್ರ ಅಥವಾ ಚರ್ಚುಗಳ ಪ್ರದೇಶ ಎಂಬ ಅಧ್ಯಾಯವೇ ಸೃಷ್ಟಿಯಾಗುತ್ತಿರಲಿಲ್ಲ ಎಂದರೆ ತಪ್ಪಾಗಲಿಕ್ಕಿಲ್ಲ.

ಧಾರವಾಡ ಕ್ರೈಸ್ತರ ಚಟುವಟಿಕೆಯ ಕೇಂದ್ರವಾಯಿತು. ಜೊತೆಗೆ ಚರ್ಚುಗಳ ರಚನೆಯು ಪ್ರಾರಂಭವಾದವು. ಆದರೆ ಚರ್ಚುಗಳ ರಚನೆಯಲ್ಲಿ ವ್ಯತ್ಯಾಸವಿರುವುದು ಕಂಡುಬರುತ್ತದೆ. ೧೮ನೇ ಶತಮಾನದಲ್ಲಿ ರಚನೆಯಾದ ಚರ್ಚುಗಳು ಹಾಗೂ ೧೯ನೇ ಶತಮಾನದಲ್ಲಿ ರಚನೆಯಾದ ಚರ್ಚುಗಳ ಕಟ್ಟಡದ ರಚನೆಯಲ್ಲಿ ನಾವಿನ್ಯತೆ ಕಂಡುಬರುವುದು. ಬ್ರಿಟಿಷರ ಕಾಲದಲ್ಲಿ ಕಟ್ಟಿದ ಕಟ್ಟಡಗಳು ನೀಲನಕ್ಷೆ, ಕಲ್ಲಿನ ಬಳಕೆ ಹಾಗೂ ರಚನೆಯು ಸಹ ಬದಲಾವಣೆಗೆ ಕಂಡುಬರುತ್ತದೆ.

ಕ್ರೈಸ್ತ ಮಿಶನರಿಗಳು ಧಾರವಾಡ ಜಿಲ್ಲೆಗೆ ಆಗಮಿಸಿದ್ದರಿಂದ ಧಾರವಾಡವು ಕ್ರೈಸ್ತರ ಚಟುವಟಿಕೆಯಿಂದ ಅಭಿವೃದ್ಧಿಯಲ್ಲಿ ಮುನ್ನಡೆ ಸಾಧಿಸಿರುವುದು ಕಂಡುಬರುತ್ತದೆ. ಧಾರವಾಡದಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ೧೮೩೦ರಲ್ಲಿ ಎಲಿಯಟ್ ಎಂಬ ಇಂಗ್ಲೀಷ್ ಅಧಿಕಾರಿಯು ಕನ್ನಡ ಶಾಲೆಯನ್ನು ಪ್ರಾರಂಭಿಸಿದನು. ಹುಬ್ಬಳ್ಳಿಯಲ್ಲಿ ಕ್ರಿ.ಶ.೧೮೩೩ರಲ್ಲಿ ಕನ್ನಡ ಶಾಲೆಯು ಆರಂಭವಾಯಿತು. ಧಾರವಾಡ ಅನೇಕರು ಮಿಶನರಿಗಳಲ್ಲಿ ಹೆಬಿಕ್, ಮೋಗ್ಲಿಂಗ್, ಸುಪ್ಪರ, ಬಹಳ ಶ್ರಮದಿಂದ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿದರು.

ಹುಬ್ಬಳ್ಳಿಯ ವಿಭಾಗದಲ್ಲಿ ಪ್ರಾರಂಭದಲ್ಲಿ ಬಾಲಕಿಯರಿಗಾಗಿ ಶಾಲೆಗಳು ಇರಲಿಲ್ಲ. ಸುಪ್ಪರ ಅವರು ಮೊದಲ ಬಾರಿಗೆ ಬಾಲಕಿಯರಿಗಾಗಿ ಶಾಲೆಯನ್ನು ಹಳೇ ಹುಬ್ಬಳ್ಳಿಯಲ್ಲಿ ತೆರೆದರು. ಅದೇ

ತಿಂಗಳ ಆಗಸ್ಟ್‌ನಲ್ಲಿ ಇನ್ನೊಂದು ಶಾಲೆಯನ್ನು ತೆರೆದರು. ಮಿಶನರಿಗಳು ತಮ್ಮ ಕಾರ್ಯಚಟುವಟಿಕೆಗಳೊಂದಿಗೆ ಕನ್ನಡ ಶಾಲೆಗಳನ್ನು ಪ್ರೋತ್ಸಾಹಿಸಿರುವುದನ್ನು ಮರೆಯುವಂತಿಲ್ಲ. ಅಂದು ಪ್ರಾರಂಭಿಸಿದ ವಿದ್ಯಾಸಂಸ್ಥೆಗಳು ಇಂದು ಮಹಾವಿದ್ಯಾಲಯ, ಹಾಗೂ ಪದವಿಪೂರ್ವ ಶಿಕ್ಷಣದ ಮಟ್ಟಿಗೆ ಬೆಳವಣಿಗೆಯನ್ನು ಕಂಡಿವೆ.

ಮಿಶನರಿಗಳು ಕರ್ನಾಟಕದಾದ್ಯಂತ ಕ್ರೈಸ್ತಧರ್ಮದ ಪ್ರಚಾರ ಕಾರ್ಯ ಕೈಗೊಂಡರು. ಜೊತೆಗೆ ಮುದ್ರಣಯಂತ್ರದ ಬಳಕೆಯನ್ನು ಸರಿಯಾಗಿ ಬಳಸಿಕೊಂಡು ಧರ್ಮಪ್ರಚಾರದ ಕಾರ್ಯಕೈಗೊಂಡರು. ಇದರಿಂದ ಸುವಾರ್ತೆಯನ್ನು ಹಾಗೂ ಬೈಬಲ್‌ನ ಪ್ರಮುಖ ಅಂಶಗಳನ್ನು ಪುಸ್ತಕ ಹಾಗೂ ಭಿತ್ತಿ ಪತ್ರದ ಮೂಲಕ ಮುದ್ರಿಸಿ ಪ್ರಚಾರ ಮಾಡಿದರು.

ಧಾರವಾಡ ಜಿಲ್ಲೆಯಲ್ಲಿ ಅಂದಿನ ದಿನಗಳಲ್ಲಿ ಪ್ರಾರಂಭಿಸಿದ ಸವಣೂರ ಪ್ರೆಸ್, ಜ್ಞಾನಬೋಧಕ ಪ್ರೆಸ್, ಕಾರ್ಯನಿರ್ವಹಿಸಿದವು. ೧೮೬೦-೬೭ ಅವಧಿಯಲ್ಲಿ ಧಾರವಾಡದೊಳಗೆ ಸನ್ಮಾರ್ಗದರ್ಶಕ, ಜ್ಞಾನಸಾಗರ, ಜ್ಞಾನವರ್ಧಕ ಎಂಬ ಮೂರು ಪ್ರೆಸ್‌ಗಳು ಚಾಲನೆಗೆ ಬಂದವು. ಇಂತಹ ಪ್ರೆಸ್‌ಗಳು ಕಾಲಾಂತರಗಳಲ್ಲಿ ನಿಂತುಹೋದವು. ಆದರೆ ಅವುಗಳ ಪ್ರೋತ್ಸಾಹದಿಂದ ಇಂದಿನ ಪ್ರೆಸ್‌ಗಳಿಗೆ ಸ್ಫೂರ್ತಿಯ ನೆಲೆಯಾದವು.

ಸಾಹಿತ್ಯವು ಬೆಳವಣಿಗೆಯಾಯಿತು. ಮಿಶನರಿಗಳು ಕನ್ನಡ ಸಾಹಿತ್ಯಕ್ಕೆ ನೀಡಿದ ಕೊಡುಗೆಯು ಅಮೋಘವಾಗಿದೆ. ಹೊಸಗನ್ನಡ ಸಾಹಿತ್ಯದ ಆರಂಭವನ್ನು ಕುರಿತು ಶ್ರೀನಿವಾಸ ಹಾವನೂರರು ಹೊಸಗನ್ನಡ ಅರುಣೋದಯದ ಕಾಲ ಎಂದು ಕರೆದರು. ಧಾರವಾಡದಲ್ಲಿ ಮಿಶನರಿಗಳು ಪ್ರಮುಖವಾದ ಕೃತಿಗಳನ್ನು ರಚಿಸಿದರು. ಹರ್ಮನ್ ಮೋಗ್ಲಿಂಗರು, ಕಿಟಲ್‌ರು, ಝೀಗ್ಲರು ಮುಖ್ಯವಾದ ಕೃತಿಗಳನ್ನು ರಚಿಸುವುದರ ಮೂಲಕ ತಮ್ಮದೇ ಆದ ಕೊಡುಗೆಯನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ.

ಕೈಗಾರಿಕೆ ಮತ್ತು ವೃತ್ತಿತರಬೇತಿ ಕೇಂದ್ರಗಳನ್ನು ಸ್ಥಾಪಿಸುವುದರ ಮೂಲಕ ಜನರಿಗೆ ಉದ್ಯೋಗ ನೀಡಿದರು. ಸ್ವಾವಲಂಬಿ ಜೀವನಕ್ಕೆ ಮಾರ್ಗ ತೋರಿಸಿದರು. ಕಡಿಮೆ ಬಂಡವಾಳದಿಂದ ಮಾಡುವ ಉದ್ಯೋಗ ಮಾಡುವ ತರಬೇತಿ ನೀಡಿದರು. ವೈದ್ಯಕೀಯ ರಂಗದಲ್ಲಿ ನೂರಾರು ರೋಗಿಗಳಿಗೆ ಆಸ್ಪತ್ರೆಗಳು ಜೀವ ನೀಡಿದವು. ಧಾರವಾಡದಲ್ಲಿ ಲೂರ್ಥ ಮಾತೆಯ ಆಸ್ಪತ್ರೆಯು ಒಂದು ಮಾದರಿಯ ಕ್ರೈಸ್ತ ಆಸ್ಪತ್ರೆಯಾಗಿ ಕಾರ್ಯನಿರ್ವಹಿಸುತ್ತವೆ. ಇದು ಜರ್ಮನಿ ಆಸ್ಪತ್ರೆ ಎಂಬ ಹೆಸರಿನಿಂದ ಇಂದು ಪ್ರಸಿದ್ಧತೆ ಪಡೆದಿದೆ.

ಮತಾಂತರವು ಮಿಶನರಿಗಳ ಮುಖ್ಯ ಉದ್ದೇಶವಾಗಿತ್ತು. ಆದರೆ ಯಾವುದೇ ಬಲವಂತದಿಂದ ಮತಾಂತರಗಳು ನಡೆಯಲಿಲ್ಲ. ಕ್ರೈಸ್ತ ಧರ್ಮದಲ್ಲಿಯ ತತ್ವಗಳನ್ನು ಅರಿತು ಹಲವು ಜಾತಿಗಳು

[illegible]

[illegible]

[illegible]

[illegible]

[illegible]

[illegible]

ಮತಾಂತರವನ್ನು ಹೊಂದಿದವು. ಬ್ರಾಹ್ಮಣರು, ಲಿಂಗಾಯಿತರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ಹಾಗು ಇತರೆ ಜಾತಿಗಳು ಸಮಾಜದಲ್ಲಿ ಮತಾಂತರ ಹೊಂದಿರುವುದು ಕಂಡುಬರುತ್ತದೆ.

ಪ್ರಸ್ತುತ ಅಧ್ಯಯನವು 'ಧಾರವಾಡ ಜಿಲ್ಲೆಯ ಚರ್ಚುಗಳು : ಸಾಂಸ್ಕೃತಿಕ ಅಧ್ಯಯನ' ಎಂಬ ಶೀರ್ಷಿಕೆಯ ಅಡಿಯಲ್ಲಿ ಅಧ್ಯಯನ ಮಾಡಿದಾಗ ಧಾರವಾಡ ಜಿಲ್ಲೆಯಲ್ಲಿ ಸುಮಾರು ೨೨ಕ್ಕೂ ಅಧಿಕ ಚರ್ಚುಗಳು ಕಂಡುಬರುತ್ತದೆ. ಇದರಲ್ಲಿ ಪ್ರೊಟಸ್ಟೆಂಟರ ಚರ್ಚುಗಳು ಅಧಿಕವಾಗಿ ಕಂಡುಬರುತ್ತವೆ. ೧೬ನೇ ಶತಮಾನದಲ್ಲಿ ಕ್ಯಾಥೋಲಿಕ್‌ರು ಧಾರವಾಡವನ್ನು ಪ್ರವೇಶಿಸಿದರು. ಅವರು ಧರ್ಮಪ್ರಚಾರ ಕಾರ್ಯದಲ್ಲಿ ಚರ್ಚುಗಳ ಹೆಚ್ಚು ಸ್ಥಾಪಿಸಲಿಲ್ಲ. ಆದರೆ ೧೮ನೇ ಶತಮಾನದಲ್ಲಿ ಆಗಮಿಸಿದ ಪ್ರೊಟಸ್ಟೆಂಟ್ ಬಾಸೆಲ್ ಮಿಷನದ ಮಿಶನರಿಗಳು ಧರ್ಮಪ್ರಚಾರ ಕಾರ್ಯದೊಂದಿಗೆ ಹೆಚ್ಚು ಚರ್ಚುಗಳನ್ನು ಸ್ಥಾಪಿಸಿದರು.

ಅಧ್ಯಯನದ ಫಲಿತಗಳು

"ಧಾರವಾಡ ಜಿಲ್ಲೆಯ ಚರ್ಚುಗಳು : ಸಾಂಸ್ಕೃತಿಕ ಅಧ್ಯಯನ" ಎಂಬ ವಿಷಯವನ್ನು ಪ್ರಬಂಧಕ್ಕೆ ಆಯ್ಕೆ ಮಾಡಿ, ಅದರ ಅಧ್ಯಯನದಲ್ಲಿ ತೊಡಗಿದಾಗ ಕೆಲವು ಫಲಿತಗಳನ್ನು ಕಂಡುಕೊಳ್ಳಲಾಯಿತು. ಧಾರವಾಡ ಜಿಲ್ಲೆಯು ೧೮೩೫ರಲ್ಲಿ ಕ್ರೈಸ್ತರ ಅಧಿಕೃತ ಠಾಣೆಯಾಯಿತು. ಅದಕ್ಕೂ ಪೂರ್ವದಲ್ಲಿ ಆಗಮಿಸಿದ ಕ್ಯಾಥೋಲಿಕ್ ಕ್ರೈಸ್ತರು ಧರ್ಮಪ್ರಚಾರ ಕಾರ್ಯದಲ್ಲಿ, ಚರ್ಚುಗಳ ಕಟ್ಟಡ ರಚನೆಗೆ ಆದ್ಯತೆ ಕಡಿಮೆ ನೀಡಿದ್ದರು. ಧಾರವಾಡವು ಎಲ್ಲ ಧರ್ಮಗಳ ಜನರಿಂದ ಕೂಡಿದ ಪ್ರದೇಶವಾಯಿತು. ಪ್ರತಿಯೊಂದು ಧರ್ಮದವರ ಧಾರ್ಮಿಕ ಆಚರಣೆಗಳ ಕಟ್ಟಡಗಳಂತೆ ಕ್ರೈಸ್ತರ ಚರ್ಚುಗಳು ಎಂಬ ಆರಾಧನಾ ಕಟ್ಟಡಗಳು ಬೆಳೆದುಬಂದವು. ಆದರೆ ಪಾಶ್ಚಿಮಾತ್ಯರ ಕಾಲದಲ್ಲಿ ವಿದೇಶದಲ್ಲಿ ರಚನೆಯಾದ ಚರ್ಚುಗಳಿಗೂ ನಂತರ ಕರ್ನಾಟಕದ ಧಾರವಾಡದಲ್ಲಿ ರಚನೆಯಾದ ಚರ್ಚುಗಳ ಕಟ್ಟಡದಲ್ಲಿ ಭಿನ್ನತೆಯು ಕಂಡುಬರುತ್ತದೆ. ಈ ಅಧ್ಯಯನದಿಂದ ಚರ್ಚುಗಳ ರಚನೆಗಳು ಆಯಾ ಸ್ಥಳೀಯ ಸಂಪ್ರದಾಯ ಆಚರಣೆಗಳನ್ನು ಚರ್ಚುಗಳು ಪ್ರತಿನಿಧಿಸುವುದರಿಂದ ಅವುಗಳು ರಚನೆಯಲ್ಲಿ ಭಿನ್ನಾವಾದವು ಎಂಬುದು ತಿಳಿದುಬರುತ್ತದೆ.

ಚರ್ಚುಗಳು ಕ್ರಿ.ಶ.೪ನೇ ಶತಮಾನದಲ್ಲಿ ರೋಮ್‌ನಗರದಲ್ಲಿ ಕಟ್ಟಡ ಪ್ರಾರಂಭವಾಗಿರಬಹುದು ಎಂದು ತಿಳಿಯುವುದು. ರೋಮದಲ್ಲಿ ನ್ಯಾಯ ಸದನದಂತೆ ಪ್ರಾರಂಭದಲ್ಲಿ ಚರ್ಚಿನ ಕಟ್ಟಡಗಳ ರಚನೆಯು ಪ್ರಾರಂಭವಾದವು ಎಂದು ತಿಳಿದುಬರುವುದು. ಧಾರವಾಡದಲ್ಲಿ ಹೆಚ್ಚಾಗಿ ಯೂರೋಪಿಯನ್ ಶೈಲಿಯ ಚರ್ಚುಗಳು ಕಂಡುಬರುತ್ತವೆ. ಪ್ರೊಟಸ್ಟೆಂಟರ ಚರ್ಚುಗಳು ಅಧಿಕವಾಗಿ ಕಂಡುಬರುತ್ತವೆ. ಧಾರವಾಡ ಜಿಲ್ಲೆಯ ಐದು ತಾಲೂಕುಗಳಲ್ಲಿ ಪ್ರಮುಖವಾಗಿ ೩ ತಾಲೂಕುಗಳಲ್ಲಿ ಚರ್ಚುಗಳು ಹೆಚ್ಚಾಗಿ ಕಂಡುಬರುತ್ತವೆ. ಅವುಗಳಿಂದ ಧಾರವಾಡ, ಹುಬ್ಬಳ್ಳಿ, ಕಲಘಟಗಿ ತಾಲೂಕುಗಳಲ್ಲಿ ಕಂಡುಬರುತ್ತದೆ.

ಚರ್ಚುಗಳು ಕೇವಲ ಧಾರ್ಮಿಕ ಕಟ್ಟಡಗಳು ಮಾತ್ರವಲ್ಲದೇ, ಅವು ಭಕ್ತರ ಭಾವನೆಯನ್ನು ಪ್ರತಿಬಿಂಬಿಸುತ್ತವೆ. ನೋಡಲು ಸುಂದರವಾಗಿ ಅವು ಕ್ರೈಸ್ತರ ಭಕ್ತರು ದೇವನೊಂದಿಗೆ ಮಾತನಾಡುವುದನ್ನು ಸಂಪರ್ಕಿಸುವ ಕೇಂದ್ರಗಳಾಗಿವೆ. ಚರ್ಚುಗಳು ಸಾಮೂಹಿಕ ಪ್ರಾರ್ಥನೆಯೊಂದಿಗೆ ಯೇಸುವಿನ ಪ್ರಮುಖ ತತ್ವಗಳ ತಿರುಳನ್ನು ತಿಳಿಸುತ್ತವೆ. ಎಲ್ಲಾ ಧರ್ಮಗಳ ಸಾರ ಒಂದೇ ಎಂಬುದನ್ನು ಬಿಂಬಿಸುವ ಆಗರವಾಗಿವೆ ಎಂಬುದನ್ನು ಕಂಡುಕೊಳ್ಳಲಾಯಿತು.

ಕ್ರೈಸ್ತಮಿಶನರಿಗಳು ಧರ್ಮಪ್ರಚಾರದ ಕಾರ್ಯದ ಮೂಲಕ ಧಾರವಾಡವನ್ನು ಪ್ರವೇಶಿಸಿದರು. ಜೊತೆಗೆ ಮತಾಂತರ ಕಾರ್ಯವನ್ನು ಯಶಸ್ವಿಯಾಗಿ ಮಾಡಿದರು. ಮಿಶನರಿಗಳಿಂದ ಧಾರವಾಡ ಜಿಲ್ಲೆಯಲ್ಲಿ ಶಿಕ್ಷಣ, ಮುದ್ರಣ, ಸಾಹಿತ್ಯ, ಕೈಗಾರಿಕೆ ಮತ್ತು ವೃತ್ತಿ ತರಬೇತಿ ಕೇಂದ್ರಗಳು, ಹೀಗೆ ಸೇವಾ ಕಾರ್ಯಗಳಿಂದ ಧಾರವಾಡಕ್ಕೆ ಪಾಶ್ಚಿಮಾತ್ಯ ವಿಚಾರಗಳು ಹರಡಿಬಂದವು. ಧಾರವಾಡವು ಬೆಳವಣಿಗೆಯಲ್ಲಿ ಕ್ರೈಸ್ತ ಮಿಶನರಿಗಳ ಪಾತ್ರ ಹಾಗೂ ಅವರ ಕಟ್ಟಡಗಳಾದ ಚರ್ಚುಗಳ ಮಹತ್ವದ ಪಾತ್ರವನ್ನು ವಹಿಸಿದವು. ಎಂಬುದು ಕಂಡುಬಂತು.

'ಧಾರವಾಡ ಜಿಲ್ಲೆಯ ಚರ್ಚುಗಳು ಸಾಂಸ್ಕೃತಿಕ ಅಧ್ಯಯನ' ಎಂಬ ಅಧ್ಯಯನವು ಪೂರೈಸುವಾಗ ಸಾಧ್ಯವಾದ ಎಲ್ಲ ಮಾಹಿತಿಗಳನ್ನು ಅನುಸರಿಸಿ ಲೇಖನ, ಪತ್ರಿಕೆಗಳು, ಪುಸ್ತಕ ಹಾಗೂ ಪ್ರಬಂಧಗಳನ್ನು ಆಧರಿಸಿ ಈ ಅಧ್ಯಯನದ ಚರಿತ್ರೆಯನ್ನು ಕಟ್ಟಿಕೊಟ್ಟಿದ್ದೇನೆ. ಸಂಶೋಧನೆ ಎಂಬುದು ನಿಂತ ನೀರಲ್ಲ ಅದು ಚಲನಾಶೀಲವಾಗಿರುವಂತಹದ್ದು. ಆದ್ದರಿಂದ ನನ್ನ ಸಂಪ್ರಬಂಧವು ಮುಂದೆ ಸಂಶೋಧನೆ ಕೈಗೊಳ್ಳುವವರಿಗೆ ಇದು ಕಿರುಮಾಹಿತಿಯ ಆಕರವಾಗಿ ಉಪಯೋಗವಾಗುವಂತದ್ದಾಗಿದೆ.

ಅನುಬಂಧಗಳು

೧. ಆಕರ ಗ್ರಂಥಗಳು

೨. ನಕ್ಷೆಗಳು

೩. ಛಾಯಾಚಿತ್ರಗಳು

ಗ್ರಂಥಋಣ

ಕನ್ನಡ ಆಕರ ಗ್ರಂಥಗಳು

೧. ಎಡ್ವಿನ್ ಡಿಸೋಜಾ, ಕ್ರೈಸ್ತ ತತ್ವದರ್ಶನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೫

೨. ಎಡ್ವಿನ್ ನೋರೊ, ಕನ್ನಡ ಧಾರ್ಮಿಕ ಸಾಹಿತ್ಯಕ್ಕೆ ಕ್ರೈಸ್ತ ಮಿಷನರಿಗಳ ಕೊಡುಗೆ, ಭಾಗ್ಯವಾನ ಪ್ರಕಾಶನ, ಮೈಸೂರು, ೧೯೯೬

೩. ಕಟಗೇರಿ ನ.ಹ., ಗತಕಾಲದ ಧಾರವಾಡ, ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳಿ, ಧಾರವಾಡ, ೨೦೦೭-೦೮

೪. ಕಲಬುರ್ಗಿ ಎಂ.ಎಂ., ಧಾರವಾಡ ತಾಲೂಕಿನ ಶಾಸನಗಳು, ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬

೫. ಕೃಷ್ಣಕುಮಾರ ಟಿ.ಪಿ., ೧೯ನೇ ಶತಕದಲ್ಲಿ ಕನ್ನಡ ಸಾಹಿತ್ಯಕ್ಕಾಗಿ ಕ್ರೈಸ್ತರ ಕೊಡುಗೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೬

೬. ಗೌಡರ್ ಪಿ.ಎಸ್., ಕನ್ನಡ ಕ್ರೈಸ್ತ ಗೀತೆಗಳ ಅಧ್ಯಯನ, ವಿಶಾಲ ಪ್ರಿಂಟ್ಸ್, ಗದಗ, ೧೯೯೭

೭. ಜೋಗುಳ ಜೆ.ಎಂ., ಕರ್ನಾಟಕದಲ್ಲಿ ಬಾಸೆಲ್ ಮಿಶನ್, ಸಭಾ ಪಾಲನಾ ಸಮಿತಿ, ಹೆಬಿಕ್ ಸ್ಮಾರಕ ಸಭೆ, ಧಾರವಾಡ, ೧೯೮೬-೮೭

೮. ಡಿಸೋಜಾ ಎನ್., ಏಸುಕ್ರಿಸ್ತ, ಸ್ವಪ್ನ ಬುಕ್‌ಹೌಸ್, ಬೆಂಗಳೂರು, ೨೦೦೭

೯. ಡ್ಯೂರಾಂಟ್ ವಿಲ್(ಸಂ), ನಮ್ಮ ಪ್ರಾಚ್ಯಪರಂಪರೆ, ಸಾಹಿತ್ಯ ಅಕಾಡೆಮಿ ಬೆಂಗಳೂರು, ೨೦೦೭

೧೦. ತಂಬಂಡ ವಿಜಯ ಪೂಣಚ್ಚ, ಚರಿತ್ರೆ ವಿಶ್ವಕೋಶ ೪, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೧೧. ತಲ್ವಾಡಿ ಬಿ.ಎಸ್., ಕರ್ನಾಟಕದಲ್ಲಿ ಕ್ರೈಸ್ತರು, ಕ್ರೈಸ್ತ ಜಾನಪದ ಕೇಂದ್ರ, ಬೆಂಗಳೂರು, ೧೯೯೮

೧೨. ತಾರಾಚಂದ, ಭಾರತದಲ್ಲಿ ಸ್ವತಂತ್ರ ಚಳುವಳಿ ಸಂಪುಟ ೨, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೨

೧೩. ತಿಪ್ಪೇರುದ್ರಸ್ವಾಮಿ ಹೆಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು, ೧೯೭೪

೧೪. ದಳವಾಯಿ ರಾಜಪ್ಪ, ಕನ್ನಡ ಸಾಹಿತ್ಯಕೋಶ, ದಳವಾಯಿ ಪ್ರಕಾಶನ, ಬೆಂಗಳೂರು, ೨೦೦೮

೧೫. ಧಾರವಾಡಕರ ರಾ.ಯ., ಹೊಸಗನ್ನಡ ಸಾಹಿತ್ಯದ ಉದಯ ಕಾಲ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೫.

೧೬. ದಿವಾಕರ ಆರ್.ಆರ್., ಕರ್ನಾಟಕದ ಪರಂಪರೆ ಸಂ-೨, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬

೧೭. ನಂದಿಮಠ ಎಸ್.ಸಿ. ಕನ್ನಡ ನಾಡಿನ ಚರಿತ್ರೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೫೭

೧೮. ನರಹರಿ ವಿ., ಕ್ರೈಸ್ತಮತ ವಿಶೇಷ ವಿಚಾರ, ತಳುಕಿನ ವೆಂಕಣಯ್ಯ ಸ್ಮಾರಕ ಗ್ರಂಥಮಾಲೆ ಮೈಸೂರು, ೨೦೦೨.

೧೯. ನಾಗರಾಜ ಎಂ.ಜಿ.(ಸಂ), ಇತಿಹಾಸ ದರ್ಶನ ಸಂಪುಟ-೧೭, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೨೦೦೨

೨೦. ನಾಗೇಗೌಡ ಎಚ್.ಎಲ್.(ಸಂ), ಪ್ರವಾಸಿಕಂಡ ಇಂಡಿಯಾ, ಸಂ.೨, ಮೈಸೂರು, ೧೯೭೧

೨೧. ನಾಯಕ ಹಾ.ಮಾ., ಕನ್ನಡ ಸಾಹಿತ್ಯ ಚರಿತ್ರೆ, ಸಂಪುಟ-೧, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು, ಮೈಸೂರು ವಿಶ್ವವಿದ್ಯಾಲಯ, ೧೯೭೪

೨೨. ನಾಯಕ ಹಾ.ಮಾ., ಕನ್ನಡ ವಿಶ್ವಕೋಶ, ಸಂಪುಟ-೫, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೨

೨೩. ಮಹದೇವ ಬಣಕರ, ಆಂಗ್ಲರ ಆಡಳಿತದಲ್ಲಿ ಕನ್ನಡ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೬

೨೪. ಮುಗುಳಿ ರಂ.ಶ್ರೀ., ಕನ್ನಡ ಸಾಹಿತ್ಯ ಚರಿತ್ರೆ, ಗೀತಾ ಬುಕ್ ಹೌಸ್, ಮೈಸೂರು, ೨೦೦೫

೨೫. ಮುತ್ತಣ್ಣ ಐ.ಮಾ., ೧೯ನೇ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ, ಉಷಾ ಪ್ರೆಸ್ ಮೈಸೂರು, ೧೯೬೬

೨೬. ಮೋಹನಕೃಷ್ಣ ರೈ ಕೆ.(ಸಂ), ದಕ್ಷಿಣ ಭಾರತದ ಚರಿತ್ರೆ ಆಯ್ದ ವಿಷಯಗಳು, ದೂರಶಿಕ್ಷಣ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೬

೨೭. ಮ್ಯಾಥ್ಯೊ ಕೆ.ಎಂ., ರೆ.ಎಫ್.ಕಿಟೆಲ್ : ಒಂದು ಸಮಗ್ರ ಅಧ್ಯಯನ, ಅಖಿಲ ಗ್ರಾಫಿಕ್ಸ್ ಜಯನಗರ, ಧಾರವಾಡ, ೧೯೯೪

೨೮. ವಸಂತಕುಮಾರ ತಲ್ವಾಡಿ, ಕರ್ನಾಟಕದಲ್ಲಿ ಚರ್ಚ್‌ಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೯. ಶೇಷಗಿರಿರಾವ್ ಎಲ್.ಎಸ್., ಹೊಸಗನ್ನಡ ಸಾಹಿತ್ಯ ಚರಿತ್ರೆ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೧೯೯೯

೩೦. ಶೇಷಗಿರಿರಾವ್ ಎಲ್.ಎಸ್.(ಸಂ), ಬೆಂಗಳೂರ ದರ್ಶನ, ಸಂಪುಟ-೧, ಉದಯಬಾನು ಕಲಾಸಂಘ, ಬೆಂಗಳೂರು

೩೧. ಶೇಷ ನವರತ್ನ, ಜಾಗತಿಕ ಧರ್ಮಗಳು, ಸಮಾಜ ಪುಸ್ತಕಾಲಯ, ಧಾರವಾಡ, ೧೯೯೮(ದ್ವಿಪ್ರತಿ)

೩೨. ಷಡಕ್ಷರಯ್ಯ ರು.ಮ., ಧಾರವಾಡ ಜಿಲ್ಲೆಯ ಐತಿಹಾಸಿಕ ಸ್ಮಾರಕಗಳು ಮತ್ತು ಶಿಲ್ಪಗಳು, ಸರಸ್ವತಿ ಆಫ್‌ಸೆಟ್ ಪ್ರಿಂಟರ್ಸ್, ಧಾರವಾಡ, ೨೦೦೭

೩೩. ಷೇಕ್ ಅಲಿ ಬಿ., ಕರ್ನಾಟಕ ಚರಿತ್ರೆ ಸಂಪುಟ ೬, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೭

೩೪. ಸದಾನಂದ ಕನವಳ್ಳಿ ಮತ್ತು ವೀರಣ್ಣ ರಾಜೂರ(ಸಂ), ಮಹಾಮಾರ್ಗ, ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಮಠ, ಗದಗ, ೧೯೯೮

೩೫. ಸೂರ್ಯನಾಥ ಯು.ಕಾಮತ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಧಾರವಾಡ ಜಿಲ್ಲೆ, ಜಲ ಮಂಡಳಿ ಕಟ್ಟಡ, ಕಾವೇರಿ ಭವನ, ಬೆಂಗಳೂರು, ೧೯೯೫

೩೬. ಸೂರ್ಯನಾಥ ಯು.ಕಾಮತ್, ಕರ್ನಾಟಕ ಸಂಕ್ಷಿಪ್ತ ಇತಿಹಾಸ, ಬೆಂಗಳೂರು, ೧೯೭೩

೩೭. ಹಾವನೂರು ಶ್ರೀನಿವಾಸ, ಹೂಸಗನ್ನಡದ ಅರುಣೋದಯ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೦

೩೮. ಹಿರಿಯಣ್ಣ ಅಂಬಳಿಕೆ(ಸಂ), ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ೨೦೦೯

ಪ್ರಬಂಧಗಳು

೧. ಉಷಾರಾಣಿ ಎಂ.ವಿ., **ಡಾ.ಹರ್ಮನ್ ಮೋಗ್ಲಿಂಗ್ ಸಂಕಲಿಸಿದ ದಾಸರ ಪದಗಳು : ಒಂದು ಅಧ್ಯಯನ,** ಎಂ.ಫಿಲ್.ಪ್ರಬಂಧ(ಅಪ್ರಕಟಿತ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

೨. ಕುಮಾರ ಕಲಕುರಿ ಪ್ರಸನ್(ಸಂ), **ಧರ್ಮಶಿಕ್ಷಣ ಸಂಪುಟ ೭,** ಕನ್ನಡ ಪಾಕ್ಷಿಕ ಪತ್ರಿಕೆ, ೨೦೧೦

೩. ಕುಮಾರ ಲೋಹಿತ್, **ಬಳ್ಳಾರಿ ಜಿಲ್ಲೆಯ ಕ್ರೈಸ್ತ ಮಿಷನರಿಗಳು : ಚಾರಿತ್ರಿಕ ಅಧ್ಯಯನ,** ಎಂ.ಫಿಲ್. ಪ್ರಬಂಧ(ಅಪ್ರಕಟಿತ), ಹಂಪಿ, ೨೦೦೮

೪. ಥಾಮಸ್ ಚಿನ್ನಪ್ಪ, **ಕರ್ನಾಟಕದ ಕನ್ನಡ ಮತ್ತು ಕ್ರೈಸ್ತ ಬುಡಕಟ್ಟುಗಳ ಸಂಸ್ಕೃತಿ ಅಧ್ಯಯನ,** ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯


೫. ಫಾದರ್ ಜೆ.ಪ್ರಕಾಶ ಫ್ರಾನ್ಸಿಸ್, **ಯೇಸುಕ್ರಿಸ್ತ ಮತ್ತು ಬಸವಣ್ಣನವರ ಬೋಧನೆಗಳಲ್ಲಿನ ಧಾರ್ಮಿಕ ಸಂವಾದ,** ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

೬. ಮಂಗಲ ಎಂ.ಗೌಡ, **ಅಮ್ಮಿನಬಾವಿ ಪರಿಸರದ ಸಾಂಸ್ಕೃತಿಕ ಅಧ್ಯಯನ,** ಎಂ.ಫಿಲ್ . ಪ್ರಬಂಧ(ಅಪ್ರಕಟಿತ), ಹಂಪಿ, ೨೦೦೯


ಇಂಗ್ಲೀಷ್ ಆಕರಗ್ರಂಥಗಳು

1. Buchanan Francis, **A Journey from Madras through the Countries of Mysore,** Canara and Malabar, Vol.3, 1988
2. Chopre P.N.(Ed), **The Gazetter of India, Hisory and Culture,** Vol.2, Publication Division, Ministry of I & B New Delhi, 1990
3. Diwakar R.R.(Ed), **Karnataka Through the Ages,** Bangalore, 1968
4. Firth C.B., **An Introduction of Indian Church History,** Madras, 1961
5. Maclean C.D., **Madras Presidency Vo-I & II,** Asian Educational services, Madras, 1989
6. MoJumdar R.C., **British Paramauntcy and Indian Renaissance Part I & II,** Bharathiya Vidya Bhavan, Bombay, 1965
7. Nage Gowda H.L., **Pravasi Kanda India Vol.2,** Mysore, 1971
8. Nilakanta Sastri K.A., **History of south India,** Oxford Univesity Press, Madras, 1975

ಧಾರವಾಡ ಜಿಲ್ಲೆ ನಕ್ಷೆ



ಧಾರವಾಡ ಜಿಲ್ಲೆಯ ತಾಲ್ಲೂಕುಗಳ ನಕ್ಷೆ



ಛಾಯಾಚಿತ್ರಗಳು



ಹೆಬಿಕ್ ಮೆಮೋರಿಯಲ್ ಚರ್ಚ, ಧಾರವಾಡ.



ನಿತ್ಯ ಸಹಾಯ ಮಾತೆಯ ದೇವಾಲಯ, ಧಾರವಾಡ.



ಹೊರೇಬ್ ಪ್ರಾರ್ಥನಾ ಮಂದಿರ, ಧಾರವಾಡ.



ಆಲ್ ಸೈಂಟ್ಸ್ ಚರ್ಚ ಹಳಿಯಾಳ ರೋಡ, ಧಾರವಾಡ.



ಹೋಲಿ ಕ್ರಾಸ್ ಚರ್ಚ, ಧಾರವಾಡ.



ಮುಲ್ಲರ ಮೆಮೋರಿಯಲ್ ಚರ್ಚ ಸಿ ಎಸ್ ಆಯ್, ಹುಬ್ಬಳ್ಳಿ.



ಸಿ ಎಸ್ ಆಯ್ ಚರ್ಚ ಹೊಸುರ ಕ್ರಾಸ್ , ಹುಬ್ಬಳ್ಳಿ.



ಮೇಯರ್ ಮೆಮೋರಿಯಲ್ ಚರ್ಚ, ಹುಬ್ಬಳ್ಳಿ.



ಹೆಬಿಕ್ ಮೆಮೋರಿಯಲ್ ಹಾಲ್, ಹುಬ್ಬಳ್ಳಿ.



ಸ್ವರ್ಗಾರೋಹಣ ದೇವಾಲಯ, ಹುಬ್ಬಳ್ಳಿ.



ಸಂತ ಜೋಸೆಫರ ಕ್ಯಾಥೋಲಿಕ ದೇವಾಲಯ, ಹುಬ್ಬಳ್ಳಿ.



ಬಾಲ ಯೇಸು ದೇವಾಲಯ ಕೇಶ್ವಾಪುರ, ಹುಬ್ಬಳ್ಳಿ.



ಸಂತ ಎಂಡ್ರಿವ್ಯೂಸ ಚರ್ಚ, ಹುಬ್ಬಳ್ಳಿ.



ಸಂತ ಜಾನ್ಸ್ ಲೂಥರನ ಚರ್ಚ, ಹುಬ್ಬಳ್ಳಿ.



ಸಂತ ಪೀಠರ್ಸ ಚರ್ಚ ಸಿ ಎಸ್ ಆಯ್, ಹುಬ್ಬಳ್ಳಿ.



ಜಪ ಮಾತೆಯ ದೇವಾಲಯ, ತುಮರಿಕೊಪ್ಪ.